₹ 6 @vishwavaninews epaper.vishwavani.news vishwavani.news ಬೆಂಗಳೂರು | ಹುಬ್ಬಳ್ಳಿ | ಮಂಗಳೂರು | ದಾವಣಗೆರೆ | ಕಲಬುರಗಿ | ಬೆಳಗಾವಿ ಶುಕ್ರವಾರ 13.06.2025 ಸಂಪುಟ: 10 ಸಂಚಿಕೆ: 150 ಪುಟಗಳು: 12 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವವಾಣಿ

ವಿಶ್ವಾಸವೇ ವಿಶ್ವ

ಮೃತಪಟ್ಟವರು

ಭಾರತೀಯರು 169

ಬ್ರಿಟಿಷ್ ಪ್ರಜೆಗಳು 53

ಕೆನಡಾ 1

ಪೋರ್ಚುಗೀಸ್ 7

ವಿಮಾನ ಸಿಬ್ಬಂದಿ 10

ಪೈಲಟ್ 2

ಮಾಜಿ ಸಿಎಂ ಬಲಿ

ಅಪಘಾತಕ್ಕೀಡಾದ ಏರ್ ಇಂಡಿಯಾ ವಿಮಾನದಲ್ಲಿ ಪ್ರಯಾಣಿಸುತ್ತಿದ್ದ ಗುಜರಾತ್ ಮಾಜಿ ಮುಖ್ಯಮಂತ್ರಿ ವಿಜಯ್ ರೂಪಾನಿ ನಿಧನರಾಗಿದ್ದಾರೆ. ರೂಪಾನಿ ಅವರು ಅಪಘಾತಕ್ಕೀಡಾದ ಏರ್ ಇಂಡಿಯಾ ವಿಮಾನದಲ್ಲಿ 12ನೇ ಪ್ರಯಾಣಿಕರಾಗಿ ಟಿಕೆಟ್ ಕಾದಿರಿಸಿದ್ದರು. ಬಿಜೆಪಿ ಮುಖಂಡ ವಿಜಯ್ ರೂಪಾನಿ ಆಗಸ್ಟ್ 2016ರಿಂದ ಸೆಪ್ಟೆಂಬರ್ 2021 ರವರೆಗೆ ಗುಜರಾತ್‌ನ 16ನೇ ಮುಖ್ಯಮಂತ್ರಿಯಾಗಿ ಸೇವೆ ಸಲ್ಲಿಸಿದ್ದರು.

ಸಹಾಯವಾಣಿ

ದೆಹಲಿ: 011- 24610843, ಮೊಬೈಲ್: 9650391859

ಅಹಮದಾಬಾದ್: 079-23251900, ಮೊಬೈಲ್: 9978405304

ಹಾಟ್‌ಲೈನ್ : 1800 5691 444

ಏರ್ ಇಂಡಿಯಾ ವಿಮಾನ ಪತನ 244 ಮಂದಿ ದುರ್ಮರಣ

ಸಾವಿನ ಯಾನ

ಅಹಮದಾಬಾದ್ ಬಳಿ ದುರ್ಘಟನೆ ಲಂಡನ್‌ಗೆ ಹೊರಟಿದ್ದ ವಿಮಾನ

ಗುಜರಾತ್ ಮಾಜಿ ಸಿಎಂ ಮೃತ್ಯು 3 ವೈದ್ಯವಿದ್ಯಾರ್ಥಿಗಳು ಸಾವು

ಅಹಮದಾಬಾದ್‌ನಿಂದ ಲಂಡನ್ ಗ್ಯಾಟ್ವಿಕ್ ನಗರಕ್ಕೆ ಮಧ್ಯಾಹ್ನ 3.39ಕ್ಕೆ ಹೊರಟ ವಿಮಾನ

ವಿಮಾನ ನಿಲ್ದಾಣದಿಂದ ಹೊರಟ ಐದೇ ನಿಮಿಷಗಳೊಳಗೆ ಪತನಗೊಂಡ ಏರ್‌ಇಂಡಿಯಾ

ಟಾಟಾ ಸಂಸ್ಥೆಯ ಏರ್‌ಇಂಡಿಯಾ 171 ಬೋಯಿಂಗ್ 787-8 ಡ್ರೀಮ್‌ಲೈನರ್ ವಿಮಾನ

ವಿಮಾನ ನಿಲ್ದಾಣದಿಂದ ಕೆಲವೇ ಮೈಲು ದೂರದ ಫೋರೆನ್ಸಿಕ್ ಕ್ರಾಸ್ ರಸ್ತೆಯ ಬಳಿ ಪತನ

ಮೇಘಿನಿ ನಗರದ ಬಿಜೆ ಮೆಡಿಕಲ್ ಕಾಲೇಜು ಹಾಸ್ಟೆಲ್ ಮೆಸ್ ಮೇಲೆ ಬಿದ್ದ ನತದೃಷ್ಟ ವಿಮಾನ

232 ಪ್ರಯಾಣಿಕರು, 10 ಸಿಬ್ಬಂದಿ ಸೇರಿ 242 ಪ್ರಯಾಣಿಕರ ಪೈಕಿ 241 ಮಂದಿ ದುರ್ಮರಣ

ಬಿಜೆ ಮೆಡಿಕಲ್ ಕಾಲೇಜಿನ ಕನಿಷ್ಠ ಮೂವರು ವಿದ್ಯಾರ್ಥಿಗಳು ಬಲಿ, 40 ಮಂದಿಗೆ ಗಾಯ

ಟೇಕಾಫ್ ಆದ ಮರುಕ್ಷಣವೇ ಮೇ ಡೇ ತುರ್ತು ಸಂದೇಶ ರವಾನಿಸಿದ್ದ ಪೈಲಟ್ ಸುಮಿತ್

ಅಹಮದಾಬಾದ್‌ನಲ್ಲಿನ ಏರ್ ಇಂಡಿಯ ವಿಮಾನ ದುರಂತ ಆಘಾತ ಉಂಟು ಮಾಡಿದೆ. ಹೃದಯದಾಳದಲ್ಲಿ ಭಾರೀ ನೋವು ಉಂಟಾಗಿದೆ. ದುರಂತದಲ್ಲಿ ಜೀವ ಕಳೆದುಕೊಂಡವರ ಕುಟುಂಬವರ್ಗದವರಿಗೆ ಹೃದಯಪೂರ್ವಕ ಸಂತಾಪಗಳು. ಸಂತ್ರಸ್ತ ಕುಟುಂಬಗಳಿಗೆ ದುಃಖ ಭರಿಸುವ ಶಕ್ತಿಯನ್ನು ಭಗವಂತ ನೀಡಲಿ ಎಂದು ಪ್ರಾರ್ಥಿಸುವೆ.

ನಿರ್ಮಲಾ ಸೀತಾರಾಮನ್ ಕೇಂದ್ರ ವಿತ್ತ ಸಚಿವೆ

ಅಹಮದಾಬಾದ್ ವಿಮಾನ ದುರಂತದ ಸುದ್ದಿ ಕೇಳಿ ತೀವ್ರ ಆಘಾತಕ್ಕೆ ಒಳಗಾಗಿರುವೆ. ಮನಸ್ಸಿಗೆ ಭಾರೀ ನೋವಾಗಿದೆ. ಸಂತ್ರಸ್ತ ಕುಟುಂಬಗಳ ದುಃಖದಲ್ಲಿ ನಾನೂ ಭಾಗಿಯಾಗುವೆ. ಗಾಯಗೊಂಡವರು ಶೀಘ್ರ ಗುಣಮುಖರಾಗಲಿ ಎಂದು ಪ್ರಾರ್ಥಿಸುವೆ. ಓಂ ಶಾಂತಿ.

ಪಿಯೂಶ್ ಗೋಯಲ್ ಕೇಂದ್ರ ಸಚಿವ

ಲಂಡನ್‌ಗೆ ಬರುತ್ತಿದ್ದ ಏರ್ ಇಂಡಿಯ ವಿಮಾನ ಭಾರತದ ಅಹಮದಾಬಾದ್ ನಗರದಲ್ಲಿ ಟೇಕಾಫ್ ಆದ ಬೆನ್ನಲ್ಲೇ ದುರಂತಕ್ಕೀಡಾಗಿದೆ. ವಿಮಾನದಲ್ಲಿ ಬ್ರಿಟನ್ ನಾಗರಿಕರೂ ಇದ್ದರು. ಪ್ರಯಾಣಿಕರೆಲ್ಲರೂ ಸಾವಿಗೀಡಾದ ಸುದ್ದಿ ಕೇಳಿ ಬಹಳ ನೋವಾಗಿದೆ. ದುರಂತದಲ್ಲಿ ಪ್ರಾಣಕಳೆದುಕೊಂಡ ಪ್ರಯಾಣಿಕರೆಲ್ಲರ ಕುಟುಂಬದವರ ದುಃಖದಲ್ಲಿ ನಾನೂ ಭಾಗಿ.

ಕೇಯ್‌ರ್ ಸ್ಟಾರ್‌ಮರ್ ಬ್ರಿಟನ್ ಪ್ರಧಾನಿ

ಭಾರತದ ನಗರ ಅಹಮದಾಬಾದ್‌ನಲ್ಲಿ ವಿಮಾನ ದುರಂತವಾಗಿರುವುದು ಬಹಳ ನೋವುಂಟು ಮಾಡಿದೆ. ಭಾರತ ಮತ್ತು ಬ್ರಿಟಿಷ್ ಪ್ರಜೆಗಳೂ ಸಾವಿಗೀಡಾಗಿದ್ದಾರೆ. ಮೃತರ ಕುಟುಂಬವರ್ಗದವರಿಗೆ ನನ್ನ ಸಂತಾಪಗಳು.

ಡೇವಿಡ್ ಲ್ಯಾಮಿ ಬ್ರಿಟನ್ ವಿದೇಶಾಂಗ ಸಚಿವ



ಆಘಾತಕಾರಿ ಸುದ್ದಿ. ಭಾರತದಲ್ಲಿ 242 ಜನರಿದ್ದ ಪ್ರಯಾಣಿಕರ ವಿಮಾನ ಪತನವಾಗಿ ಭಾರೀ ದುರಂತವೇ ಸಂಭವಿಸಿದೆ. ಈ ಘೋರ ದುರಂತದ ಸಂದರ್ಭದಲ್ಲಿ ಪ್ರಧಾನಿ ಮೋದಿ, ಭಾರತದ ಜನರಿಗೆ ನನ್ನ ಸಂತಾಪಗಳು. ಭಾರತ, ಬ್ರಿಟನ್, ಕೆನಡಾ, ಪೋರ್ಚುಗಲ್‌ನಲ್ಲಿನ ಸಂತ್ರಸ್ತ ಕುಟುಂಬದವರು, ಬಂಧು-ಮಿತ್ರರ ದುಃಖದಲ್ಲಿ ನಾನೂ ಭಾಗಿಯಾಗುವೆ.

ವೊಲೊದಿಮಿರ್ ಝೆಲೆನ್‌ಸ್ಕಿ ಉಕ್ರೇನ್ ಪ್ರಧಾನಿ

ಅಹ್ಮದಾಬಾದ್‌ನಿಂದ ಲಂಡನ್‌ಗೆ ತೆರಳುತ್ತಿದ್ದ ಏರ್ ಇಂಡಿಯಾ ವಿಮಾನ ಅಪಘಾತಕ್ಕೀಡಾಗಿರುವುದು ತೀವ್ರ ಆಘಾತವಾಗಿದೆ. ಮೃತರ ಆತ್ಮಕ್ಕೆ ಶಾಂತಿ ಸಿಗಲಿ ಹಾಗೂ ಗಾಯಾಳುಗಳು ಶೀಘ್ರ ಗುಣಮುಖರಾಗಲಿ ಎಂದು ದೇವರಲ್ಲಿ ಪಾರ್ಥಿಸುತ್ತೇನೆ.

ಎಚ್.ಡಿ. ದೇವೇಗೌಡ, ಮಾಜಿ ಪ್ರಧಾನಿ



ಏರ್ ಇಂಡಿಯಾ ವಿಮಾನವು ತಾಂತ್ರಿಕ ದೋಷದಿಂದ ಪತನಗೊಂಡು, ಸಾವು ನೋವುಗಳಾಗಿರುವ ಸುದ್ದಿ ತಿಳಿದು ಮನಸ್ಸಿಗೆ ನೋವಾಗಿದೆ. ಸುಮಾರು 200ಕ್ಕೂ ಅಧಿಕ ಪ್ರಯಾಣಿಕರಿದ್ದ ವಿಮಾನ ಪತನಗೊಂಡಿರುವುದು ಅತ್ಯಂತ ದುರ್ದೈವದ ಸಂಗತಿ. ಸಾವಿಗೀಡಾಗಿರುವ ಪ್ರಯಾಣಿಕರ ಕುಟುಂಬಗಳಿಗೆ ಭಗವಂತ ನೋವು ಸಹಿಸುವ ಶಕ್ತಿಯನ್ನು ನೀಡಲಿ.

ಲಕ್ಷ್ಮೀ ಹೆಬ್ಬಾಳ್ಕರ್, ಸಚಿವೆ

ವಿಮಾನ ದುರಂತವು ನನಗೆ ಆಘಾತ, ಉಂಟು ಮಾಡಿದೆ. ಹೃದಯವಿದ್ರಾವಕವಾದ ಈ ದುರ್ಘಟನೆಯಲ್ಲಿ ಅಸುನೀಗಿದ ಪ್ರಯಾಣಿಕರ ಕುಟುಂಬಗಳಿಗೆ ನನ್ನ ದುಃಖತಪ್ತ ಸಂತಾಪಗಳು. ದೇವರ ದಯೆಯಿಂದ ಪ್ರಾಣಾಪಾಯದಿಂದ ಪಾರಾಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವವರು ಶೀಘ್ರ ಗುಣಮುಖರಾಗಲಿ ಎಂದು ಪ್ರಾರ್ಥಿಸುತ್ತೇನೆ.

ಎಚ್.ಡಿ. ಕುಮಾರಸ್ವಾಮಿ, ಕೇಂದ್ರ ಸಚಿವ

ಲಂಡನ್‌ಗೆ ಪ್ರಯಾಣಿಸುತ್ತಿದ್ದ ಬಿಜೆಪಿ ಹಿರಿಯ ನಾಯಕ

ಮಾಜಿ ಸಿಎಂ ರುಪಾನಿ ದುರ್ಮರಣ

ಅಹ್ಮದಾಬಾದ್: ಗುಜರಾತ್ ರಾಜ್ಯದ ಮಾಜಿ ಮುಖ್ಯ ಮಂತ್ರಿ, ಬಿಜೆಪಿ ಹಿರಿಯ ನಾಯಕ ವಿಜಯ್ ರುಪಾನಿ (68) ಗುರುವಾರ ಮಧ್ಯಾಹ್ನ ವಿಮಾನ ಅಪಘಾತದಲ್ಲಿ ದುರಂತ ಸಾವಿಗೀಡಾಗಿದ್ದಾರೆ.

ಅಹ್ಮದಾಬಾದ್‌ನಲ್ಲಿನ ಸರದಾರ್ ವಲ್ಲಭಭಾಯ್ ಪಟೇಲ್ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಟೇಕಾಫ್ ಆದ ಏರ್ ಇಂಡಿಯ ವಿಮಾನ ಎಐ 171, ನಂತರದ ಕೆಲವೇ ನಿಮಿಷಗಳಲ್ಲಿ ನಾಗರಿಕ ಪ್ರದೇಶದಲ್ಲಿನ ಮೆಡಿಕಲ್ ಕಾಲೇಜಿನ ಹಾಸ್ಟೆಲ್ ಕಟ್ಟಡದ ಮೇಲೆ ಪತನವಾಗಿದೆ. ಆ ವಿಮಾನದಲ್ಲಿಯೇ ಲಂಡನ್‌ಗೆ ಪ್ರಯಾಣಿಸುತ್ತಿದ್ದ ವಿಜಯ್ ರುಪಾನಿ, ಉಳಿದ 229 ಪ್ರಯಾಣಿಕರ ಜತೆಗೇ ದುರ್ಮರಣಕ್ಕೀಡಾದರು.

ವಿಡಿಯೊದಲ್ಲಿ ಮಾಜಿ ಸಿಎಂ: ಅಪಘಾತಕ್ಕೀಡಾದ ಏರ್ ಇಂಡಿಯ ವಿಮಾನ ಎಐ 171ರಲ್ಲಿ ವಿಜಯ್ ರುಪಾನಿ ಹೆಸರು ಪ್ರಯಾಣಿಕರ ಪಟ್ಟಿಯಲ್ಲಿ ಹನ್ನೆರಡನೆಯದಾಗಿದೆ. ವಿಮಾನದಲ್ಲಿ ಪ್ರಯಾಣಿಕರ ಮಧ್ಯೆ ವಿಜಯ್ ರುಪಾನಿ ಕುಳಿತಿರುವ ಕ್ಷಣದ ವಿಡಿಯೊ, ಫೋಟೊಗಳು ಜಾಲತಾಣದಲ್ಲಿ ಹರಿದಾಡುತ್ತಿವೆ. ವಿಜಯ್ ರುಪಾನಿ ಅವರ ಆಸನಕ್ಕಿಂತ 2 ಸಾಲು ಮುಂದಿನ ಆಸನದಲ್ಲಿ ಕುಳಿತಿದ್ದ ಮಹಿಳೆಯೊಬ್ಬರು ತೆಗೆದಿರುವ ಸೆಲ್ಫಿ ಫೋಟೊ ಮತ್ತು ವಿಡಿಯೊದಲ್ಲಿ ವಿಜಯ್ ರುಪಾನಿ ಅವರೂ ಕಾಣಬರುತ್ತಿದ್ದಾರೆ. ಬೋಯಿಂಗ್ 787 ಡ್ರೀಮ್‌ಲೈನರ್ ನಿರ್ವಹಣೆಯ, ಕ್ಯಾಪ್ಟನ್ ಸುಮಿತ್ ಸಭರ್ವಾಲ್ ಚಲಾಯಿಸುತ್ತಿದ್ದ ಏರ್ ಇಂಡಿಯದ ಎಐ 171 ವಿಮಾನ ಗುರುವಾರ ಮಧ್ಯಾಹ್ನ 1.38ಕ್ಕೆ ಅಹಮದಾಬಾದ್‌ನಿಂದ ಹೊರಟ 5 ನಿಮಿಷಗಳಲ್ಲೇ ಮೇಘನಿ ನಗರದ ವಸತಿ ಪ್ರದೇಶದ ಮೇಲೆ ಪತನವಾಗಿ ಮೆಡಿಕಲ್ ಹಾಸ್ಟೆಲ್ ಕಟ್ಟಡಕ್ಕೆ ಅಪ್ಪಳಿಸಿ ಸ್ಫೋಟ ಗೊಂಡು ಉರಿದು ಭಸ್ಮವಾಗಿದೆ. ಕ್ಲೈವ್ ಕುಂದರ್ ವಿಮಾನದ ಸಹ- ಪೈಲಟ್ ಆಗಿದ್ದರು. ಇವರಿಬ್ಬರು ಪೈಲಟ್‌ಗಳೂ ಪರಿಚಾರಕರೂ ಸೇರಿದಂತೆ ಒಟ್ಟು 10 ಸಿಬ್ಬಂದಿವರ್ಗದವರು ಮತ್ತು 230 ವಯಸ್ಕ ಪ್ರಯಾಣಿಕರು, 2 ಶಿಶುಗಳು ಸೇರಿದಂತೆ ಒಟ್ಟು 242 ಮಂದಿ ವಿಮಾನದಲ್ಲಿದ್ದರು. ಪ್ರಯಾಣಿಕರಲ್ಲಿ 169 ಭಾರತೀಯ ಪ್ರಜೆಗಳು, 53 ಬ್ರಿಟಿಷ್ ನಾಗರಿಕರು, ಒಬ್ಬ ಕೆನಡಾ ಪ್ರಜೆ ಮತ್ತು ಏಳು ಪೋರ್ಚುಗೀಸ್ ಪ್ರಜೆಗಳು ಇದ್ದರು.

ದುರಂತಕ್ಕೀಡಾದ ವಿಮಾನದಲ್ಲಿ ವಿಜಯ್ ರುಪಾನಿ

ವಿಜಯ್ ರೂಪಾನಿ

ಬರ್ಮಾದ ರಂಗೂನ್‌ನಲ್ಲಿ(ಈಗಿನ ಮ್ಯಾನ್ಮಾರ್‌ನ ಯಾಂಗೋನ್) ರಾಮ್ನಿಕಲಾಲ್ ರುಪಾನಿ ಮತ್ತು ಮಾಯಾಬೆನ್ ರುಪಾನಿ ದಂಪತಿಯ ಕಿರಿಯ(7ನೇ) ಪುತ್ರನಾಗಿ 1956ರ ಆಗಸ್ಟ್ 2ರಂದು ವಿಜಯ್ ರೂಪಾನಿ ಜನಿಸಿದರು. ಬರ್ಮಾದಲ್ಲಿ ರಾಜಕೀಯ ಅಸ್ಥಿರತೆ ಉಂಟಾಗಿ ಜನಜೀವನ ಅಸ್ತವ್ಯಸ್ತಗೊಂಡಿದ್ದರಿಂದ ಕಳವಳಗೊಂಡ ರುಪಾನಿ ಕುಟುಂಬ ರಂಗೂನ್‌ನಿಂದ ರಾಜ್‌ಕೋಟ್‌ಗೆ 1960ರಲ್ಲಿ ಸ್ಥಳಾಂತರಗೊಂಡಿತು. ಗುಜರಾತ್ ರಾಜ್ಯದಲ್ಲಿನ ಬಿಜೆಪಿ ಸರಕಾರದಲ್ಲಿ 2 ಬಾರಿ ಮುಖ್ಯಮಂತ್ರಿಯಾಗಿದ್ದರು. ಭಾರತೀಯ ಜನತಾ ಪಕ್ಷದ (ಬಿಜೆಪಿ) ಪ್ರಮುಖ ನಾಯಕರಲ್ಲೊಬ್ಬರಾದ ರುಪಾನಿ 2016ರ ಆಗಸ್ಟ್‌ನಿಂದ 2021ರ ಸೆಪ್ಟೆಂಬರ್‌ವರೆಗೆ ಮುಖ್ಯಮಂತ್ರಿಯಾಗಿ ಸೇವೆ ಸಲ್ಲಿಸಿದರು.

ವೈದ್ಯ ದಂಪತಿಯ ಕುಟುಂಬವೇ ಬಲಿ

ಅಹಮದಾಬಾದ್: ಏರ್ ಇಂಡಿಯ ವಿಮಾನ ಎಐ-171 ಪತನದಲ್ಲಿ ವೈದ್ಯ ದಂಪತಿಯ ಇಡೀ ಕುಟುಂಬವೇ ನಾಶವಾಗಿದೆ. ಬನ್‌ಸ್ವಾರ ಮೂಲದ ವೈದ್ಯ ದಂಪತಿಗಳಾದ ಡಾ. ಕೋನಿ ವ್ಯಾಸ್, ಪತಿ ಡಾ. ಪ್ರದೀಪ್ ಜೋಷಿ ಹಾಗೂ ದಂಪತಿಯ ಮೂವರು ಪುಟ್ಟ ಮಕ್ಕಳನ್ನೂ ಏರ್ ಇಂಡಿಯ ವಿಮಾನದ ಅಪಘಾತ ಬಲಿ ತೆಗೆದುಕೊಂಡಿದೆ. ಇವರು ಉದಯಪುರದಲ್ಲಿ ತಮ್ಮ ಕೆಲಸವನ್ನು ಬಿಟ್ಟು ಲಂಡನ್‌ನಲ್ಲಿ ವೃತ್ತಿ ಜೀವನ ಆರಂಭಿಸಲು ಹೊರಟಿದ್ದರು.ತಂದೆ ತಾಯಿ ಜತೆಗೇ ಲಂಡನ್‌ಗೆ ಪ್ರಯಾಣಿಸುತ್ತಿದ್ದ ಕಂದಮ್ಮಗಳಾದ ಪ್ರದ್ಯುತ್, ಮಿರಾಯ ಮತ್ತು ನಕುಲ್ ದುರಂತ ಅಂತ್ಯ ಕಂಡಿದ್ದಾರೆ ಎಂದು ವರದಿಯಾಗಿದೆ. ಡಾ.ಪ್ರದೀಪ್ ಜೋಷಿ ಮತ್ತು ಡಾ. ಕೋನಿ ವ್ಯಾಸ್ ಲಂಡನ್‌ನಲ್ಲಿ ವೈದ್ಯ ಸೇವಾ ಕ್ಷೇತ್ರದಲ್ಲಿದ್ದಾರೆ.

ಕೇರಳದ ಶುಶ್ರೂಷಕಿ ದುರಂತ ಸಾವು

ತಿರುವನಂತಪುರ: ಅಹಮದಾಬಾದ್ ಏರ್ ಇಂಡಿಯ ವಿಮಾನ ದುರಂತದಲ್ಲಿ ಕೇರಳದ ಶುಶ್ರೂಶಕಿಯೊಬ್ಬರು ಸಾವಿಗೀಡಾಗಿದ್ದಾರೆ.

ಪಟ್ಟಣಂತಿಟ್ಟ ಜಿಲ್ಲೆಯ ಪುಲ್ಲಾಡ್ ನಿವಾಸಿ ರಂಜಿತಾ ಗೋಪಕುಮಾರ್ ನಾಯರ್(40), ಲಂಡನ್‌ನ ಆಸ್ಪತ್ರೆಯೊಂದರಲ್ಲಿ ಶುಶ್ರೂಷಕಿ ಆಗಿದ್ದಾರೆ. ರಜೆಯ ಮೇಲೆಗೆ ಪುಲ್ಲಾಡ್‌ಗೆ ಬಂದಿದ್ದ ರಂಜಿತಾ, ರಜೆ ಅವಧಿ ಮುಗಿದಿದ್ದರಿಂದ ಏರ್ ಇಂಡಿಯ ವಿಮಾನದಲ್ಲಿ ಲಂಡನ್‌ಗೆ ವಾಪಸಾಗುತ್ತಿದ್ದರು. ಆದರೆ, ಅವರು ವಿಮಾನ ಅವಘಡದಲ್ಲಿ ದುರಂತ ಅಂತ್ಯಕಂಡಿದ್ದಾರೆ. ರಂಜಿತಾ ಪುಲ್ಲಾಡ್‌ನಲ್ಲಿ ಹೊಸ ಮನೆಯನ್ನೂ ನಿರ್ಮಿಸುತ್ತಿದ್ದರು. ನಿರ್ಮಾಣ ಕಾಮಗಾರಿ ಅಂತಿಮ ಹಂತದಲ್ಲಿತ್ತು. ಸ್ವಂತ ಮನೆ ಮಾಡಿಕೊಳ್ಳಬೇಕೆಂಬ ಅವರ ಕನಸು ಈಡೇರುವ ಮುನ್ನವೇ ಅವರು ವಿಧಿವಶರಾದರು.

ಕಿಟಕಿಯಿಂದ ಜಿಗಿದು ಪವಾಡ ರೀತಿಯಲ್ಲಿ ಬದುಕಿದ ಪ್ರಯಾಣಿಕ!

ಅಹಮದಾಬಾದ್: ಗುಜರಾತ್‌ನ ಅಹಮದಾಬಾದ್ ವಿಮಾನ ನಿಲ್ದಾಣದ ಬಳಿ ಟೇಕಾಫ್ ಆದ 5 ನಿಮಿಷಗಳಲ್ಲೇ ಜನವಸತಿ ಪ್ರದೇಶದಲ್ಲಿನ ವೈದ್ಯಕೀಯ ಕಾಲೇಜು ಹಾಸ್ಟೆಲ್ ಮೇಲೆ ಪತನವಾದ ಏರ್ ಇಂಡಿಯ ವಿಮಾನ ಎಐ-171 ವಿಮಾನದಲ್ಲಿದ್ದ 12 ಸಿಬ್ಬಂದಿ ಮತ್ತು 230 ಪ್ರಯಾಣಿಕರಲ್ಲಿ 204 ಮೃತದೇಹಗಳನ್ನು ಗುರುವಾರ ಸಂಜೆ ವೇಳೆ ಪತ್ತೆ ಮಾಡಲಾಗಿದೆ ಎಂದು ಅಹಮದಾಬಾದ್ ಪೊಲೀಸ್ ಆಯುಕ್ತ ಜಿ.ಎಸ್.ಮಲಿಕ್ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

38 ಮಂದಿ ಗಾಯಗೊಂಡಿದ್ದು, ಅವರನ್ನು ವಿವಿಧ ಆಸ್ಪತ್ರೆಗಳಿಗೆ ಕರೆದೊಯ್ದು ದಾಖಲಿಸಲಾಗಿದೆ. ಗಾಯಾಳುಗಳು ಪ್ರಯಾಣಿಕರೆ ಅಥವಾ ಹಾಸ್ಟೆಲ್ ವಿದ್ಯಾರ್ಥಿಗಳೇ ಎಂಬುದು ಇನ್ನಷ್ಟೇ ತಿಳಿಯಬೇಕಿದೆ. ಒಬ್ಬ ಪುರುಷ ಪ್ರಯಾಣಿಕ ಪವಾಡ ಸದೃಶ ರೀತಿ ಬದುಕಿ ಬಂದಿದ್ದಾರೆ. ಅವರು ವಿಮಾನದ ಎಮರ್ಜೆನ್ಸಿ ವಿಂಡೊ(ತುರ್ತು ನಿರ್ಗಮನ ಕಿಟಕಿ) ಗಾಜು ಒಡೆದು ಹೊರಕ್ಕೆ ಜಿಗಿದು ಜೀವ ಉಳಿಸಿಕೊಂಡಿರುವುದಾಗಿ ಹೇಳಿದ್ದಾರೆ. ವಿಮಾನದಲ್ಲಿ ಸಾಮಾನ್ಯ ವರ್ಗದ 11ಎ ಸೀಟ್‌ನಲ್ಲಿದ್ದ ರಮೇಶ್ ಎಂಬವರೇ ಬದುಕಿ ಬಂದಿರುವವರು ಎಂದು ಗುರುತಿಸಲಾಗಿದೆ.

ಲಂಡನ್ ಸಂಸತ್ತಿಗೆ ಸಚಿವ ಲ್ಯಾಮಿ ಮಾಹಿತಿ

ಲಂಡನ್: ಭಾರತದ ಅಹಮದಾಬಾದ್ ನಗರದಿಂದ ಲಂಡನ್‌ಗೆ ಹೊರಟಿದ್ದ ಏರ್ ಇಂಡಿಯ ವಿಮಾನ ಪತನವಾಗಿದ್ದು, 50ಕ್ಕೂ ಅಧಿಕ ಬ್ರಿಟನ್ ಪ್ರಜೆಗಳು ಸಾವಿಗೀಡಾಗಿದ್ದಾರೆ. ಲಂಡನ್ ಸೇರಿದಂತೆ ಗ್ರೇಟ್ ಬ್ರಿಟನ್‌ನಲ್ಲಿನ ಸಂತ್ರಸ್ತ ಕುಟುಂಬಗಳ ಜತೆ ನಮ್ಮ ಸರಕಾರ ಸಂಪರ್ಕದಲ್ಲಿದೆ. ಅವರಿಗೆ ಈ ತುರ್ತು ಸಂದರ್ಭದಲ್ಲಿ ಅಗತ್ಯವಿರುವ ಎಲ್ಲಾ ನೆರವನ್ನೂ ನೀಡಲಾಗುವುದು ಎಂದು ಬ್ರಿಟನ್ ವಿದೇಶಾಂಗ ಸಚಿವ ಡೇವಿಡ್ ಲ್ಯಾಮಿ ಬ್ರಿಟನ್ ಸಂಸತ್ತಿಗೆ ಗುರುವಾರ ತಿಳಿಸಿದರು.

ಸಂದರ್ಭದ ತುರ್ತು ಅರಿತಿರುವ ನಮ್ಮ ಸರಕಾರ ಲಂಡನ್‌ನಲ್ಲಷ್ಟೇ ಅಲ್ಲದೇ, ಭಾರತದ ರಾಜಧಾನಿ ದೆಹಲಿಯಲ್ಲಿಯೂ ಎರಡು ವಿಶೇಷ ತಂಡಗಳನ್ನು ತುರ್ತು ಕಾರ್ಯಾಚರಣೆಗೆ ನೇಮಕಗೊಳಿಸಿದೆ. ದೆಹಲಿಯಲ್ಲಿನ ರಾಯಭಾರ ಕಚೇರಿಯಲ್ಲಿನ ಅಧಿಕಾರಿಗಳು, ಸಿಬ್ಬಂದಿಗಳನ್ನು ಒಳಗೊಂಡ ವಿಶೇಷ ಕಾರ್ಯಾಚರಣೆ ತಂಡ ಅಹಮದಾಬಾದ್‌ನಲ್ಲಿನ ಪರಿಸ್ಥಿತಿಯನ್ನು ಅವಲೋಕಿಸಲಿದೆ ಎಂದು ಲ್ಯಾಮಿ ಸಂಸತ್ತಿಗೆ ಮಾಹಿತಿ ನೀಡಿದ್ದಾರೆ.

ವೈದ್ಯರ ಹಾಸ್ಟೆಲ್

ವೈದ್ಯರ ಮೆಸ್

ಪರಿಹಾರ ಕಾರ್ಯಾಚಾರಣೆ

ಮೃತರ ಗುರುತು ಪತ್ತೆಗೆ ಡಿಎನ್‌ಎ ಪರೀಕ್ಷೆಗೆ ಕ್ರಮ

ಅಹಮದಾಬಾದ್: ಏರ್ ಇಂಡಿಯ ವಿಮಾನ ಎಐ-171 ಅಹಮದಾಬಾದ್ ನಗರದಲ್ಲಿ ಗುರುವಾರ ಪತನವಾಗಿ ವಿಮಾನದ ಸಿಬ್ಬಂದಿ ಮತ್ತು ಪ್ರಯಾಣಿಕರು ಸೇರಿ ಒಟ್ಟು 241, ವಿಮಾನ ಅಪ್ಪಳಿಸಿದ ವೈದ್ಯಕೀಯ ಕಾಲೇಜು ಹಾಸ್ಟೆಲ್ ಕಟ್ಟಡದಲ್ಲಿದ್ದ 5 ವೈದ್ಯ ವಿದ್ಯಾರ್ಥಿಗಳು ಸಾವಿಗೀಡಾಗಿದ್ದಾರೆ. ಬಹಳಷ್ಟು ಮಂದಿಯ ದೇಹಗಳು ಸುಟ್ಟು ಹೋಗಿರುವುದರಿಂದ ಮುಖ ಚಹರೆ ಗುರುತಿಸಲು ಅಸಾಧ್ಯವಾಗಿದೆ. ಹಾಗಾಗಿ ಮೃತದೇಹಗಳನ್ನು ಗುರುತಿಸುವುದಕ್ಕೆ 'ಡಿಎನ್‌ಎ' ಪರೀಕ್ಷೆ ನಡೆಸಲು ನಿರ್ಧರಿಸಲಾಗಿದೆ ಎಂದು ಗುಜರಾತ್‌ನ ಆರೋಗ್ಯ ಇಲಾಖೆಯ ಹಿರಿಯ ಅಧಿಕಾರಿಯೊಬ್ಬರು ಗುರುವಾರ ಸಂಜೆ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ಮೃತರ ಕುಟುಂಬದವರಿಂದ ಡಿಎನ್‌ಎ ಮಾದರಿ ಸಂಗ್ರಹಿಸಿ ಮೃತದೇಹಗಳ ಡಿಎನ್‌ಎ ಜತೆ ಹೋಲಿಸಿ ಮೃತರ ಗುರುತು ಪತ್ತೆ ಮಾಡಬೇಕಿದೆ. ಅದಕ್ಕಾಗಿ ಸಂತ್ರಸ್ತ ಕುಟುಂಬಗಳ ಸದಸ್ಯರ ಡಿಎನ್‌ಎ ಸಂಗ್ರಹಕ್ಕೆ ಅಹಮದಾಬಾದ್‌ನ ಸಿವಿಲ್ ಆಸ್ಪತ್ರೆಯಲ್ಲಿ ವ್ಯವಸ್ಥೆ ಮಾಡಲಾಗಿದೆ. ಮೃತಪಟ್ಟವರ ಸಮೀಪದ ಸಂಬಂಧಿಕರು ಡಿಎನ್‌ಎ ಮಾದರಿ ನೀಡಬೇಕು ಎಂದು ಮನವಿ ಮಾಡಲಾಗಿದೆ ಎಂದು ರಾಜ್ಯ ಆರೋಗ್ಯ ಇಲಾಖೆ ಕಾರ್ಯದರ್ಶಿ ಧನಂಜಯ್ ದ್ವಿವೇದಿ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ಪತಿ ಬಳಿ ಹೊರಟಿದ್ದ ನವ ವಿವಾಹಿತೆ ಸಾವು

ಅಹಮದಾಬಾದ್: ನಗರದ ಬಳಿ ಗುರುವಾರ ದುರಂತ ಅಂತ್ಯ ಕಂಡ ಏರ್ ಇಂಡಿಯ ವಿಮಾನ ಎಐ-171ರಲ್ಲಿ ಪ್ರಯಾಣಿಸುತ್ತಿದ್ದ 12 ಸಿಬ್ಬಂದಿ ಮತ್ತು 230 ಜನರಲ್ಲಿ ನವ ವಿವಾಹತೆಯೊಬ್ಬರೂ ಸಜೀವ ದಹನವಾಗಿದ್ದಾರೆ. 5 ತಿಂಗಳ ಹಿಂದೆ ಯಷ್ಟೇ (ಜನವರಿ) ವಿವಾಹವಾಗಿದ್ದ ರಾಜಸ್ಥಾನದ ಬಲೋತಾರಾ ಜಿಲ್ಲೆಯ ಅರಬಾ ಪಟ್ಟಣದ ಖುಷ್ಬೂ ರಾಜಪುರೋಹಿತ್, ಲಂಡನ್‌ನಲ್ಲಿದ್ದ ಪತಿಯನ್ನು ಸೇರಿಕೊಳ್ಳಲು ಏರ್ ಇಂಡಿಯ ವಿಮಾನದಲ್ಲಿ ಹೊರಟಿದ್ದರು. ಆದರೆ, ಅವರ ದಾಂಪತ್ಯ ಜೀವನ ಅಲ್ಪಾವಧಿಯಲ್ಲೇ ಕೊನೆಗೊಂಡಿದೆ.

ಇದೇ ವಿಮಾನದಲ್ಲಿ ರಾಜಸ್ಥಾನದ 11 ಜನರು ಪ್ರಯಾಣಿಸುತ್ತಿದ್ದರು. ಅವರಲ್ಲಿ ಇಬ್ಬರು ಲಂಡನ್ ಹೋಟೆಲ್‌ನಲ್ಲಿ ಷೆಫ್ ಕೆಲಸಕ್ಕೆಂದು ತೆರಳುತ್ತಿದ್ದರೆ. 9 ಮಂದಿ ಮಾರ್ಬಲ್ ವ್ಯಾಪಾರಿಯ ಕುಟುಂಬ ಸದಸ್ಯರು ಎಂದು ತಿಳಿದುಬಂದಿದೆ. 11 ಜನರೂ ಪತನವಾದ ವಿಮಾನದಲ್ಲೇ ದುರಂತ ಅಂತ್ಯ ಕಂಡಿದ್ದಾರೆ.

ನಿಯಂತ್ರಣ ಕೊಠಡಿ ಆರಂಭ

ದೆಹಲಿ: ಗುಜರಾತ್‌ನ ಅಹಮದಾಬಾದ್‌ನಲ್ಲಿ ಏರ್ ಇಂಡಿಯ ವಿಮಾನ ದುರಂತ ಹಿನ್ನೆಲೆಯಲ್ಲಿ ಏರ್‌ಪೋರ್ಟ್ ಅಥಾರಿಟಿ ಆಫ್ ಇಂಡಿಯ (ಎಎಐ) ವತಿಯಿಂದ 'ಆಪರೇಷನಲ್ ಕಂಟ್ರೋಲ್ ರೂಮ್' ಕಾರ್ಯಾರಂಭ ಮಾಡಿದೆ. ಅಹಮದಾಬಾದ್ ವಿಮಾನ ನಿಲ್ದಾಣದಲ್ಲಿ ಅಗತ್ಯ ತುರ್ತು ಕ್ರಮಗಳನ್ನು ಕೈಗೊಳ್ಳುವುದಕ್ಕೆ ಈ ನಿಯಂತ್ರಣ ಕೊಠಡಿ ನೆರವಾಗಲಿದೆ. ವಿವಿಧ ಇಲಾಖೆಗಳ ನಡುವೆ ಸಮನ್ವಯ ಸಾಧಿಸುವುದಕ್ಕೂ ನಿಯಂತ್ರಣ ಕೊಠಡಿ ಶ್ರಮಿಸಲಿದೆ.

ಪ್ರಯಾಣಿಕರ ಕುಟುಂಬವರ್ಗದವರಿಗೆ ಮಾಹಿತಿ ನೀಡುವುದಕ್ಕೆ, ಸೂಕ್ತ ರೀತಿ ನೆರವಾಗುವುದಕ್ಕೆ ದೆಹಲಿ ಮತ್ತು ಅಹಮದಾಬಾದ್‌ನಲ್ಲಿ ಸಹಾಯವಾಣಿ ಆರಂಭಿಸಲಾಗಿದೆ. ದೆಹಲಿ ಕಂಟ್ರೋಲ್ ರೂಂ ಸಂಖ್ಯೆ: 011 - 24610843 ಮತ್ತು ಮೊಬೈಲ್ ಸಂಖ್ಯೆ: 9650391859 ಹಾಗೂ ಅಹಮದಾಬಾದ್ ಸಂಪರ್ಕ ಸಂಖ್ಯೆ 079-23251900 ಮತ್ತು ಮೊಬೈಲ್ ಸಂಖ್ಯೆ 9978405304 ಎಂದು ಡಿಜಿಸಿಎ ಪ್ರಕಟಣೆ ಹೊರಡಿಸಿದೆ.

ದುರಂತ ಸ್ಥಳಕ್ಕೆ ಅಮಿತ್ ಶಾ ಭೇಟಿ

ಅಹಮದಾಬಾದ್: ಗುಜರಾತ್‌ನ ಅಹಮದಾಬಾದ್‌ನಲ್ಲಿ ಗುರುವಾರ ಮಧ್ಯಾಹ್ನ ಏರ್ ಇಂಡಿಯ ವಿಮಾನ ಪತನವಾದ ಸ್ಥಳಕ್ಕೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಸ್ಥಳದಲ್ಲಿದ್ದ ಹಿರಿಯ ಅಧಿಕಾರಿಗಳಿಂದ ಘಟನೆಯ ಬಗ್ಗೆ ಮಾಹಿತಿ ಪಡೆದುಕೊಂಡರು. ಸಚಿವ ಅಮಿತ್ ಶಾ ಗುಜರಾತ್ ಮುಖ್ಯಮಂತ್ರಿ ಭೂಪೇಂದ್ರ ಪಟೇಲ್, ರಾಜ್ಯ ಗೃಹ ಸಚಿವ ಹರ್ಷ ಸಂಘವಿ ಮತ್ತು ಡಿಜಿಪಿ ಅವರೊಂದಿಗೆ ಮಾತನಾಡಿದರು. ನಾಗರಿಕ ವಿಮಾನಯಾನ ಸಚಿವ ರಾಮ್ ಮೋಹನ್ ನಾಯ್ಡು ಕಿಂಜರಾಪು, ಮುರಳೀಧರ ಮೊಹೋಲ್ ಕೂಡ ಶಾ ಜತೆಗಿದ್ದರು.



ಭೂಮಿ ರಕ್ಷಿಸಿದ ಟ್ರಾಫಿಕ್ ಜಾಮ್!

ಅಹಮದಾಬಾದ್: ಏರ್ ಇಂಡಿಯ ವಿಮಾನ ಎಐ-171ರಲ್ಲಿ ಲಂಡನ್‌ಗೆ ಪ್ರಯಾಣಿಸಬೇಕಿದ್ದ ಅಹಮದಾಬಾದ್ ನಗರದ ನಿವಾಸಿ ಭೂಮಿ ಚೌಹಾಣ್ ವಿಮಾನ ನಿಲ್ದಾಣಕ್ಕೆ ಕಡೆ ಕ್ಷಣದಲ್ಲಿ ಹೊರಟಿದ್ದು, ವಾಹನ ಸಂಚಾರ ದಟ್ಟಣೆಯಲ್ಲಿ ಸಿಲುಕಿಕೊಂಡಿದ್ದರಿಂದ ವಿಮಾನ ಕೆಲವೇ ಕ್ಷಣಗಳ ಅಂತರದಲ್ಲಿ ತಪ್ಪಿ ಹೋಗಿದೆ. ಅಹಮದಾಬಾದ್ ಟ್ರಾಫಿಕ್ ಜಾಮ್‌ಗೆ ಹಿಡಿಶಾಪ ಹಾಕಿದ್ದರು. ಆ ಬಳಿಕ 5 ನಿಮಿಷಗಳಲ್ಲೇ ವಿಮಾನ ಪತನವಾದ ಸುದ್ದಿ ಬಂದಿದ್ದರಿಂದ ನೆಮ್ಮದಿಯ ನಿಟ್ಟುಸಿರುಬಿಟ್ಟರು. ತಾನು ವಿಮಾನ ತಪ್ಪಿಸಿಕೊಳ್ಳಲು ಕಾರಣವಾದ ಟ್ರಾಫಿಕ್ ಜಾಮ್‌ಗೆ ಧನ್ಯವಾದ ಹೇಳಿದರು. 'ವಿಮಾನ ಪತನವಾದ ಸುದ್ದಿ ಕೇಳಿ ಆಘಾತಕ್ಕೊಳಗಾದೆ. ಭಯ ದಿಂದ ಕೈಕಾಲು ನಡುಗಲಾರಂಭಿಸಿದವು. 10 ನಿಮಿಷ ತಡವಾಗಿದ್ದರಿಂದ ವಿಮಾನ ತಪ್ಪಿಸಿಕೊಂಡೆ. ನನ್ನನ್ನು ಉಳಿಸಿದ ದೇವರಾದ ಗಣಪತಿಗೆ ಕೃತಜ್ಞತೆ ಸಲ್ಲಿಸುವೆ'.

ಸಹಪೈಲಟ್ ಕ್ಲೈವ್ ಕರ್ನಾಟಕದವರು

ಅಹಮದಾಬಾದ್: ಗುಜರಾತ್‌ನ ಅಹಮದಾಬಾದ್‌ನಲ್ಲಿ ಅಪಘಾತಕ್ಕೀಡಾದ ಏರ್ ಇಂಡಿಯ ವಿಮಾನ ಎಐ-171 ಚಾಲನೆ ಮಾಡುತ್ತಿದ್ದ ಪೈಲಟ್ ಕ್ಯಾಪ್ಟನ್ ಸುಮಿತ್ ಸಬರ್ವಾಲ್ ಆಗಿದ್ದರೆ, ಅವರ ಜತೆ ಕೋ ಪೈಲಟ್ ಆಗಿದ್ದವರು ಕರ್ನಾಟಕದ ಕರಾವಳಿ ಮೂಲದ ಕ್ಲೈವ್ ಕುಂದರ್. ಸಬರ್ವಾಲ್ ಅವರಿಗೆ ವಿಮಾನ ಚಾಲನೆಯಲ್ಲಿ 8200 ಗಂಟೆಗಳಿಗೂ ಹೆಚ್ಚು ಕಾಲದ ಹಾರಾಟದ ಅನುಭವವಿದ್ದರೆ, ಕುಂದರ್ ಅವರಿಗೆ 1100 ಗಂಟೆಗಳ ಹಾರಾಟದ ಅನುಭವವಿತ್ತು. ಸಬರ್ವಾಲ್ ದೀರ್ಘಾವಧಿ ಕ್ಯಾಪ್ಟನ್ ಎನಿಸಿಕೊಂಡಿದ್ದರು.



ವಿಮಾನ ದುರಂತದ ಬಗ್ಗೆ ಕೇಳಿ ಆಘಾತಕ್ಕೆ ಒಳಗಾಗಿದ್ದೇನೆ. ಮೃತಪಟ್ಟವರ ಕುಟುಂಬದವರಿಗೆ ಸಾಂತ್ವನ ಹೇಳಲು ಬಯಸುತ್ತೇನೆ. ಕರ್ನಾಟಕದ ಸರಕಾರದ ಹಾಗೂ ಕಾಂಗ್ರೆಸ್ ಪಕ್ಷದ ಸಹಾನುಭೂತಿ ಹಾಗೂ ಪ್ರಾರ್ಥನೆ ಇರುತ್ತದೆ. ದೇಶದಲ್ಲಿ ವಿಮಾನಯಾನ ಕ್ಷೇತ್ರ ಅಭಿವೃದ್ಧಿ ಕಾಣುತ್ತಿತ್ತು, ಹಾಗಾಗಿ ಈ ದುರಂತ ನಡೆಯಬಾರದಿತ್ತು.

ಡಿ.ಕೆ. ಶಿವಕುಮಾರ್, ಉಪಮುಖ್ಯಮಂತ್ರಿ

ವಿಮಾನ ದುರಂತಕ್ಕೆ ಈಡಾಗಿರುವ ಸುದ್ದಿ ಕೇಳಿ ಅತ್ಯಂತ ಆಘಾತವಾಗಿದೆ. ಈ ಅವಘಡದಲ್ಲಿ ನೂರಾರು ಜನರು ಜೀವ ಕಳೆದುಕೊಂಡಿರುವುದು ಅತ್ಯಂತ ದುಖದ ಸಂಗತಿ. ಪ್ರಾಣ ಕಳೆದುಕೊಂಡವರ ಆತ್ಮಕ್ಕೆ ದೇವರು ಚಿರಶಾಂತಿ ನೀಡಲಿ, ಮೃತರ ಕುಟುಂಬಸ್ಥರಿಗೆ ಅವರ ಅಗಲಿಕೆಯ ದು:ಖವನ್ನು ಭರಿಸುವ ಶಕ್ತಿಯನ್ನು ಭಗವಂತ ಕರುಣಿಸಲಿ ಎಂದು ಪ್ರಾರ್ಥಿಸುತ್ತೇನೆ.

ಬಸವರಾಜ ಬೊಮ್ಮಾಯಿ, ಮಾಜಿ ಮುಖ್ಯಮಂತ್ರಿ

ವಿಮಾನದ ಸಿಬ್ಬಂದಿ ಸೇರಿದಂತೆ 200ಕ್ಕೂ ಅಧಿಕ ಪ್ರಯಾಣಿಕರು ಮೃತಪಟ್ಟಿದ್ದು ದುಃಖ ತಂದಿದೆ, ಅನೇಕ ವಿದ್ಯಾರ್ಥಿಗಳು ಕೂಡ ಬಲಿಯಾಗಿರುವುದು ತೀವ್ರ ನೋವುಂಟುಮಾಡಿದೆ. ಭವಿಷ್ಯದಲ್ಲಿ ಇಂತಹ ದುರಂತಗಳು ಮರುಕಳಿಸದಿರಲಿ. ಮೃತರ ಆತ್ಮಕ್ಕೆ ಶಾಂತಿ ಸಿಗಲಿ, ತಮ್ಮವರನ್ನು ಕಳೆದುಕೊಂಡ ವೇದನೆಯಲ್ಲಿರುವ ಅವರ ಕುಟುಂಬದವರಿಗೆ ದುಃಖ ಭರಿಸುವ ಶಕ್ತಿ ಸಿಗಲಿ.

ಪ್ರಿಯಾಂಕ್ ಖರ್ಗೆ, ಸಚಿವ

ಏರ್ ಇಂಡಿಯಾ ವಿಮಾನ ಅಹ್ಮದಾಬಾದ್ ನಗರದಲ್ಲಿ ಅಪಘಾತಕ್ಕೀಡಾದ ಸುದ್ದಿ ತಿಳಿದು ಆಘಾತವಾಗಿದ್ದು, ಇದು ಅತ್ಯಂತ ದುರದೃಷ್ಟಕರ. 242 ಪ್ರಯಾಣಿಕರು ಪ್ರಯಾಣಿಸುತ್ತಿದ್ದ ವಿಮಾನ ದುರಂತದಲ್ಲಿ ಮೃತಪಟ್ಟವರಿಗೆ ನನ್ನ ದುಃಖತಪ್ತ ಸಂತಾಪಗಳು. ಅವರ ಕುಟುಂಬಗಳ ಸದಸ್ಯರಿಗೆ ದುಃಖ ಭರಿಸುವ ಶಕ್ತಿಯನ್ನು ಭಗವಂತ ಕರುಣಿಸಲಿ, ಅವರ ನೋವಿನಲ್ಲಿ ಭಾಗಿಯಾಗಿದ್ದೇನೆ.

ಜಮೀರ್ ಅಹ್ಮದ್, ಸಚಿವ

ವಿಮಾನ ಪತನ ದುರ್ಘಟನೆಯು ಅತ್ಯಂತ ಆಘಾತಕಾರಿ ವಿಚಾರ. ಈ ಹೃದಯವಿದ್ರಾವಕ ಘಟನೆಯಲ್ಲಿ ಮೃತಪಟ್ಟ ಭಾರತೀಯ ನಾಗರಿಕರು, ವೈಮಾನಿಕ ಸಿಬ್ಬಂದಿಗಳ ಮತ್ತು ವಿದೇಶೀಯರ ಕುಟುಂಬಕ್ಕೆ ನನ್ನ ತೀವ್ರ ಸಂತಾಪ ಗಳು. ಮೃತರಿಗೆ ಸದ್ಗತಿ ಲಭಿಸಲಿ, ಅವರ ಸಂಬಂಧಿ ಗಳಿಗೆ ದೇವರು ಈ ದುಃಖವನ್ನು ತಡೆದುಕೊಳ್ಳುವ ಶಕ್ತಿ ನೀಡ ಲಿ. ಹಾಗೆಯೇ ಗಾಯಾಳುಗಳು ಬೇಗನೆ ಚೇತರಿಸಿಕೊಳ್ಳಲಿ.

ಬಿ.ವೈ. ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ

ವಿಶ್ವವಾಣಿ
ವಿಶ್ವಾಸವೇ ವಿಶ್ವ

ಏರ್ ಇಂಡಿಯಾ 171 ಪತನ

ಸೊಂಪಾದ ಪುಟಗಳು

ಜಿಮ್ಮಿ ಕಾರ್ಟರ್ ಮತ್ತು ಇನ್ನೊಂದೆರಡು ಮರಣಶಯ್ಯೆಯ ಕಥೆಗಳು

ಶಿಶಿರಕಾಲ
ಶಿಶಿರ್ ಹೆಗಡೆ 6

ಬೆಲ್ಲ ಬೆರೆಸಿದ ಸಾಂಬಾರು ಗೊತ್ತೇ ನಿಮಗೆ?

ಶತಾಂಕಣ
ಶಶಿಧರ ಹಾಲಾಡಿ 7

ದಾರಿದೀಪೋಕ್ತಿ

ನೀವು ನಿಮ್ಮ ಜೀವನದಲ್ಲಿ ಮಾಡಬಹುದಾದ ಅತಿ ಕೆಟ್ಟ ನಿರ್ಧಾರವೆಂದರೆ, ಏನನ್ನೂ ಮಾಡದಿರುವುದು. ನೀವು ಏನಾದರೂ ಮಾಡಿ ವಿಫಲರಾದರೂ ಚಿಂತೆ ಇಲ್ಲ, ಆದರೆ ಏನನ್ನೂ ಮಾಡದೇ ಸುಮ್ಮನೆ ಇರುವುದು ಒಳ್ಳೆಯ ಕ್ರಮವಲ್ಲ. ಸೋಲು ಕಲಿಸುವ ಪಾಠವನ್ನು ಗೆಲುವೂ ಕಲಿಸುವುದಿಲ್ಲ.

ವಕ್ರತುಂಡೋಕ್ತಿ

ನಿಮ್ಮನ್ನು ಯಾರಾದರೂ ಇಷ್ಟಪಡದಿದ್ದರೆ ತಲೆ ಕೆಡಿಸಿಕೊಳ್ಳಬಾರದು. ಎಲ್ಲರಿಗೂ ಒಳ್ಳೆಯ ಅಭಿರುಚಿ ಇರುವುದಿಲ್ಲ.

ದುರಂತ ಕಥನ

ಅಹಮದಾಬಾದ್‌ನಲ್ಲಿರುವ ತಮ್ಮ ಅಜ್ಜಿ ಮನೆಗೆ ಬಂದು ಜನ್ಮದಿನ ಆಚರಿಸಿ ಮರಳಿ ಲಂಡನ್‌ಗೆ ಹೊರಟಿದ್ದ ಅಕ್ಕ - ತಂಗಿಯರು ಮರಳಿ ಬಾರದ ಲೋಕಕ್ಕೆ ತೆರಳಿದ್ದಾರೆ

ಡಿಎನ್‌ಎ ಬಳಿಕ ನಿಖರ ಸಂಖ್ಯೆ

ಅಪಘಾತದಲ್ಲಿ ಸಾಕಷ್ಟು ಜನರು ಮತಪಟ್ಟಿದ್ದಾರೆ. ಆ ಬಗ್ಗೆ ನಿಖರ ಸಂಖ್ಯೆ ಹೇಳಲು ಈಗ ಸಾಧ್ಯವಿಲ್ಲ. ಡಿಎನ್‌ಎ ಪರೀಕ್ಷೆಯ ಬಳಿಕವೇ ನಿಖರವಾದ ಸಾವಿನ ಸಂಖ್ಯೆ ತಿಳಿಯಲಿದೆ ಎಂದು ಗೃಹಸಚಿವ ಅಮಿತ್ ಷಾ ಹೇಳಿದ್ದಾರೆ.

Dr Shivam 'da'
@angryoldman27

ಬದುಕು ಎನ್ನುವುದು ಎಷ್ಟೊಂದು ಅನಿಶ್ಚಿತ. ರಜೆಯಲ್ಲಿ ಪ್ರವಾಸಕ್ಕೆ ತೆರಳಿದರೆ ಭಯೋತ್ಪಾದಕರಿಗೆ ಬಲಿಯಾಗಬೇಕಾಗುತ್ತದೆ. ಟ್ರೋಫಿಯ ವಿಜಯೋತ್ಸವಕ್ಕೆ ತೆರಳಿದರೆ ಕಾಲ್ತುಳಿತಕ್ಕೆ ಗುರಿಯಾಗಬೇಕು. ಆದರೆ ವೃತ್ತಿ ಅಥವಾ ಪ್ರವಾಸ ಸಂಬಂಧ ಪ್ರಯಾಣಿಸಿದರೆ ವಿಮಾನ ದುರಂತ ಎದುರಾಗಿದೆ. ಹಾಸ್ಟೆಲ್‌ನಲ್ಲಿ ಓದಲು ಹೋದರೆ ವಿಮಾನ ಅಪ್ಪಳಿಸುತ್ತದೆ.

ಅಹಮದಾಬಾದ್‌ನ ಬಿಜೆ ವೈದ್ಯಕೀಯ ಆಸ್ಪತ್ರೆ ಹಾಸ್ಟೆಲ್ ಕಟ್ಟಡದ ಮೇಲೆ ಪತನಗೊಂಡ ಬಳಿದ ನೆಲಕ್ಕೆ ಉರುಳಿ ಬಿದ್ದ ಏರ್ ಇಂಡಿಯಾ ವಿಮಾನದ ರೆಕ್ಕೆ.

ಸ್ಥಳದಲ್ಲಿ ಎನ್‌ಡಿಆರ್‌ಎಫ್ ತಂಡದಿಂದ ಪರಿಹಾರ ಕಾರ್ಯಾಚರಣೆ.

ಮೆಡಿಕಲ್ ಕಾಲೇಜು ಹಾಸ್ಟೆಲ್ ಸಮುಚ್ಚಯದ ಮೇಲೆ ವಿಮಾನ ಪತನ

ಕರಾಳ ಗುರುವಾರ: 244 ಸಾವು

ಅಹಮದಾಬಾದ್: ಏರ್ ಇಂಡಿಯಾ ವಿಮಾನ ದುರಂತ ಘಟನೆಯಲ್ಲಿ ಓರ್ವ ಪ್ರಯಾಣಿಕ ನನ್ನು ಬಿಟ್ಟು ಯಾರೂ ಉಳಿದಿಲ್ಲ ಎಂದು ಪೊಲೀಸ್ ಮೂಲಗಳು ಮಾಹಿತಿ ನೀಡಿದ್ದು, ವಿಮಾನ ಪ್ರಯಾಣಿಕರು, ಸಿಬ್ಬಂದಿಗಳಲ್ಲದೆ ಮೂವರು ವೈದ್ಯಕೀಯ ವಿದ್ಯಾರ್ಥಿಗಳು ಕೂಡ ಮೃತಪಟ್ಟಿದ್ದಾರೆ. ವಸತಿ ಪ್ರದೇಶದ ಮೇಲೆ ವಿಮಾನ ಪತನವಾದ ಕಾರಣ ಸಾವಿನ ಸಂಖ್ಯೆ ಹೆಚ್ಚುವ ಸಾಧ್ಯತೆ ಇದೆ .

ದಿಲ್ಲಿಯಿಂದ ಬಂದ ಏರ್ ಇಂಡಿಯಾ ವಿಮಾನ-171 ಅಹಮದಾಬಾದ್‌ನ ಸರ್ದಾರ್ ವಲ್ಲಭಬಾಯ್ ವಿಮಾನ ನಿಲ್ದಾಣದಿಂದ ಲಂಡನ್‌ಗೆ ಪಯಣಿಸಲು ಟೇಕ್ ಆಫ್ ಐದೇ ನಿಮಿಷದಲ್ಲಿ ಪತನಗೊಂಡಿದೆ. ಏರ್‌ಪೋರ್ಟ್ ಸಮೀಪದ ಮೇಘಿನಿ ನಗರದಲ್ಲಿ ಘಟನೆ ಸಂಭವಿಸಿದ್ದು ಬೋಯಿಂಗ್ 787-8 ಡ್ರೀಮ್‌ಲೈನರ್ ವಿಮಾನವು 230 ಪ್ರಯಾಣಿಕರು ಮತ್ತು 12 ಸಿಬ್ಬಂದಿ ಸೇರಿದಂತೆ 242 ಜನರೊಂದಿಗೆ ಲಂಡನ್‌ಗೆ ತೆರಳುತ್ತಿತ್ತು. ವಿಮಾನವು ನಗರದ ವಿಮಾನ ನಿಲ್ದಾಣದಿಂದ ಸ್ವಲ್ಪ ದೂರದಲ್ಲಿರುವ ಫೋರೆನ್ಸಿಕ್ ಕ್ರಾಸ್ ರಸ್ತೆಯ ಬಳಿ ಬಿಜೆ ಮೆಡಿಕಲ್ ಕಾಲೇಜು ಹಾಸ್ಟೆಲ್ ಸಮುಚ್ಚಯಯದ ಮೇಲೆ ಬಿದ್ದಿದೆ.

ಈ ದುರಂತದಲ್ಲಿ ಒಟ್ಟು 244 ಮಂದಿ ಸಾವಿಗೀಡಾಗಿದ್ದು, ಈ ಪೈಕಿ 229 ವಿಮಾನ ಪ್ರಯಾಣಿಕರು, 10 ಮಂದಿ ವಿಮಾನ ಸಿಬ್ಬಂದಿ, ಇಬ್ಬರು ಪೈಲಟ್ (ಮುಖ್ಯ ಪೈಲಟ್ ಸುಮಿತ್ ಸಬರ್ವಾಲ್ ಮತ್ತು ಕೋ ಪೈಲಟ್ ಕ್ಲೈವ್ ಕುಂದರ್) ಹಾಗೂ ಮೂವರು ವಿದ್ಯಾರ್ಥಿಗಳು ಸೇರಿದ್ದಾರೆ. 45ಕ್ಕೂ ಹೆಚ್ಚು ವಿದ್ಯಾರ್ಥಿಗಳು ಗಾಯಗೊಂಡಿದ್ದಾರೆ.ವಿಮಾನದಲ್ಲಿದ್ದ 242 ಜನರಲ್ಲಿ 169 ಭಾರತೀಯ ಪ್ರಜೆಗಳು, 53 ಬ್ರಿಟಿಷ್ ಪ್ರಜೆಗಳು, 1 ಕೆನಡಾ ಪ್ರಜೆ ಮತ್ತು 7 ಪೋರ್ಚುಗೀಸ್ ಪ್ರಜೆಗಳು ಇದ್ದರು. ಪತನದ ಸಂದರ್ಭದಲ್ಲಿ ವಿಮಾನ ಕೇವಲ 825 ಅಡಿ ಎತ್ತರದಲ್ಲಿತ್ತು ಎನ್ನಲಾಗಿದೆ.

ಮೇ ಡೇ ಸಂದೇಶ ರವಾನೆ

ಅಹಮದಾಬಾದ್ ವಿಮಾನ ನಿಲ್ದಾಣ ದಿಂದ ಟೇಕ್ ಆಫ್ ಆದ ಕೇವಲ ಐದು ನಿಮಿಷಗಳಲ್ಲಿ ವಿಮಾನ ಪತನಗೊಂಡಿದೆ. ಇದಕ್ಕೆ ಕೆಲವೇ ಕ್ಷಣಗಳ ಮುನ್ನ ಪೈಲಟ್ ಸುಮಿತ್ ಸಬರ್‌ವಾಲ್ ಅತ್ಯಂತ ಅಪಾಯಕಾರಿ ಸ್ಥಿತಿಯನ್ನು ತಿಳಿಸುವ ಮೇ ಡೇ ಸಂದೇಶ ರವಾನಿಸಿದ್ದರು. ಆದರೆ ವಿಮಾನ ನಿಲ್ದಾಣದ ಭದ್ರತಾ ಸಿಬ್ಬಂದಿ ಪ್ರತಿಕ್ರಿಯಿಸುವಷ್ಟರಲ್ಲಿ ಅವರು ಮೌನಕ್ಕೆ ಜಾರಿದ್ದರು. ಬಹುಶಃ ಇದೇ ಸಂದರ್ಭದಲ್ಲೇ ವಿಮಾನ ಪತನ ವಾಗಿರಬಹುದು ಎಂದು ಹೇಳಲಾಗಿದೆ. ಸಾಮಾನ್ಯವಾಗಿ ಪತನ ಖಚಿತ ಎಂದು ತಿಳಿದಾಗ ಪೈಲಟ್ ಇಂಜಿನ್ ಆಫ್ ಮಾಡುತ್ತಾರೆ. ಆದರೆ ಇಂಜಿನ್ ಆಫ್ ಆಗಿರಲಿಲ್ಲ. ಟಾಟಾ ಸಂಸ್ಥೆ ಏರ್ ಇಂಡಿಯಾವನ್ನು ಖರೀದಿಸಿದ ಬಳಿಕ ನಡೆದ ಅತಿ ದೊಡ್ಡ ದುರ್ಘಟನೆ ಇದಾಗಿದೆ.



ವಿದ್ಯಾರ್ಥಿಗಳ ಪಾಲಿಗೆ ಮೃತ್ಯುವಾದ ವಿಮಾನ

ತಾಂತ್ರಿಕ ತೊಂದರೆಗೊಳಗಾದ ನತದೃಷ್ಟ ಏರ್ ಇಂಡಿಯಾ ವಿಮಾನ ಅಹಮದಾಬಾದಿನಿಂದ ಅಣತಿ ದೂರದ ಮೇಘಿನಿ ನಗರದ ಬಿಜೆ ವೈದ್ಯಕೀಯ ಕಾಲೇಜಿನ ಹಾಸ್ಟೆಲ್ ಮೇಲೆ ಬಿದ್ದಿದೆ. ಈ ವೇಳೆ ಹಾಸ್ಟೆಲ್ ಮೆಸ್‌ನಲ್ಲಿ ಊಟ ಮಾಡುತ್ತಿದ್ದ ಮೂರು ವೈದ್ಯಕೀಯ ವಿದ್ಯಾರ್ಥಿಗಳು ಮೃತಪಟ್ಟಿದ್ದಾರೆ. 40ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ. ಮೃತರಲ್ಲಿ ನಾಲ್ವರು ಪದವಿ ಮತ್ತು ಓರ್ವ ಸ್ನಾತಕೋತ್ತರ ವೈದ್ಯಕೀಯ ವಿದ್ಯಾರ್ಥಿ ಎಂದು ತಿಳಿದುಬಂದಿದೆ.

ಅನುಭವಿ ಪೈಲಟ್‌ಗಳು

ನತದೃಷ್ಟ ವಿಮಾನವನ್ನು 8,200 ಗಂಟೆಗಳ ಹಾರಾಟದ ಅನುಭವ ಹೊಂದಿರುವ ಕ್ಯಾಪ್ಟನ್ ಸುಮಿತ್ ಸಭರ್ವಾಲ್ ಅವರು ಮುನ್ನಡೆಸುತ್ತಿದ್ದರು. ಅವರಿಗೆ 1,300 ಗಂಟೆಗಳ ಹಾರಾಟದ ಅನುಭವ ಹೊಂದಿರುವ ಮಂಗಳೂರು ಮೂಲದ ಮುಂಬೈವಾಸಿ ಕ್ಲೈವ್ ಕುಂದರ್ ಸಹ ಪೈಲಟ್ ಆಗಿ ಸಹಕರಿಸುತ್ತಿದ್ದರು. ಇವರೊಂದಿಗೆ 10 ಮಂದಿ ವಿಮಾನ ಪರಿಚಾರಕರಿದ್ದರು.

ಬದುಕುಳಿದ ಓರ್ವ ಲಕ್ಕಿ ಪ್ಯಾಸೆಂಜರ್

ಸಂಪೂರ್ಣವಾಗಿ ಸುಟ್ಟು ಕರಕಲಾದ ಏರ್ ಇಂಡಿಯಾ ದುರ್ಘಟನೆಯಲ್ಲಿ ಪವಾಡ ಎಂಬಂತೆ ಒಬ್ಬ ಪ್ರಯಾಣಿಕ ಬದುಕುಳಿದಿದ್ದಾರೆ. ಲಂಡನ್ ನಿವಾಸಿ ರಮೇಶ್ ವಿಶ್ವಾಸ್ ಕುಮಾರ್ ವಿಮಾನದ ಎಮರ್ಜನ್ಸಿ ಬಾಗಿಲಿನಿಂದ ಹಾರಿ ಬದುಕುಳಿದಿದ್ದಾರೆ.ಅವರು 11ಎ ಸೀಟಿನಲ್ಲಿ ಕುಳಿತಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

Sarah Adams
@TPASarah

ಉಗ್ರರ ಕೈವಾಡ?

ವಿಮಾನ ದುರಂತಕ್ಕೆ ತಾಂತ್ರಿಕ ತೊಂದರೆ ಎನ್ನಲಾಗಿದ್ದರೂ 2 ದಿನಗಳ ಮೊದಲು ಎಕ್ಸ್ ಪೋಸ್ಟ್‌ನಲ್ಲಿ 'ಭಾರತದ ಮೇಲೆ ದಾಳಿ ನಡೆಸಲು ಅಫ್ಘಾನಿಸ್ತಾನದಲ್ಲಿ ಸಂಚು ರೂಪಿಸಲಾಗಿದೆ, ಸಿದ್ಧರಾಗಿ' ಎಂದು ಪೋಸ್ಟ್ ಮಾಡಿರುವುದು ಶಂಕೆಗೆ ಕಾರಣವಾಗಿದೆ.

ಪ್ರಧಾನಿ ಸಂತಾಪ

ದುರಂತಕ್ಕೆ ತೀವ್ರ ಸಂತಾಪ ಸೂಚಿಸಿರುವ ಪ್ರಧಾನಿ ನರೇಂದ್ರ ಮೋದಿ ಅವರು, ''ಅಹಮದಾಬಾದ್‌ನಲ್ಲಿ ಸಂಭವಿಸಿದ ವಿಮಾನ ದುರಂತ ನಮ್ಮನ್ನು ದಿಗ್ಭ್ರಮೆಗೊಳಿಸಿದೆ. ಇದು ಪದಗಳಿಗೆ ಮೀರಿದ ಹೃದಯವಿದ್ರಾವಕ ಘಟನೆ. ಸಂತ್ರಸ್ತರಿಗೆ ಅಗತ್ಯ ನೆರವು ಒದಗಿಸುವ ಬಗ್ಗೆ ಸಚಿವರು ಮತ್ತು ಅಧಿಕಾರಿಗಳೊಂದಿಗೆ ನಿರಂತರ ಸಂಪರ್ಕದಲ್ಲಿದ್ದೇನೆ. ಎಂದು ಎಕ್ಸ್ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ. ಘಟನೆಯ ಬೆನ್ನಿಗೇ ಗೃಹ ಸಚಿವ ಅಮಿತ್ ಶಾ ಮತ್ತು ನಾಗರಿಕ ವಿಮಾನಯಾನ ಸಚಿವ ರಾಮ್ ಮೋಹನ್ ನಾಯ್ಡು ಅವರೊಂದಿಗೆ ಮಾತನಾಡಿದ ಪ್ರಧಾನಿ, ತಕ್ಷಣವೇ ಅಹಮದಾಬಾದ್‌ಗೆ ಧಾವಿಸಿ ಸಾಧ್ಯವಿರುವ ಎಲ್ಲ ಸಹಾಯವನ್ನು ಖಚಿತಪಡಿಸಿಕೊಳ್ಳುವಂತೆ ಸೂಚಿಸಿದರು

₹ 1 ಕೋಟಿ ಪರಿಹಾರ

ಏರ್ ಇಂಡಿಯಾ ವಿಮಾನ ದುರಂತದಲ್ಲಿ ಮಡಿದವರಿಗೆ ಟಾಟಾ ಸಂಸ್ಥೆ 1 ಕೋಟಿ ರು. ಪರಿಹಾರ ಘೋಷಿಸಿದೆ. ಈ ಕುರಿತು ಹೇಳಿಕೆ ಬಿಡುಗಡೆ ಮಾಡಿರುವ ಟಾಟಾ ಗ್ರೂಪ್, ಗಾಯಗೊಂಡವರ ವೈದ್ಯಕೀಯ ವೆಚ್ಚಗಳನ್ನು ಭರಿಸಲಾಗುವುದು.

ಅವರಿಗೆ ಅಗತ್ಯವಿರುವ ಎಲ್ಲಾ ಆರೈಕೆ ಸಿಗುವಂತೆ ನೋಡಿಕೊಳ್ಳಲಾಗುವುದು. ವಿಮಾನ ಪತನವಾದ ಬಿಜೆ ಮೆಡಿಕಲ್ ಹಾಸ್ಟೆಲ್‌ನ ನಿರ್ಮಾಣಕ್ಕೂ ನಾವು ಸಹಾಯ ಮಾಡಲಿದ್ದೇವೆ ಎಂದು ಟಾಟಾ ಸನ್ಸ್ ಅಧ್ಯಕ್ಷ ಎನ್. ಚಂದ್ರಶೇಖರನ್ ತಿಳಿಸಿದ್ದಾರೆ.



225ಕ್ಕೂ ಅಧಿಕ ಪ್ರಯಾಣಿಕರಿದ್ದ ಏರ್ ಇಂಡಿಯಾ ವಿಮಾನ ಗುಜರಾತ್‌ನ ಅಹಮದಾಬಾದ್‌ನಲ್ಲಿ ಅಪಘಾತಕ್ಕೀಡಾದ ಸುದ್ದಿ ತಿಳಿದು ಆಘಾತವಾಗಿದೆ. ಇದು ಅತ್ಯಂತ ದುರದೃಷ್ಟಕರ ಮತ್ತು ನೋವಿನ ಗಳಿಗೆ. ಮೃತಪಟ್ಟವರ ಆತ್ಮಕ್ಕೆ ಶಾಂತಿ ಕೋರುತ್ತ, ಮೃತರ ಅಗಲಿಕೆಯ ನೋವನ್ನು ಭರಿಸುವ ಶಕ್ತಿಯನ್ನು ಕುಟುಂಬಸ್ಥರಿಗೆ ನೀಡಲಿ ಎಂದು ಪ್ರಾರ್ಥಿಸುತ್ತೇನೆ.

-**ಸಿದ್ದರಾಮಯ್ಯ**, ಮುಖ್ಯಮಂತ್ರಿ

ತನಿಖೆಗೆ ಆದೇಶ

ಬೋಯಿಂಗ್ 787-8 ಡ್ರೀಮ್ ಲೈನರ್ ವಿಮಾನ ಅತ್ಯಾಧುನಿಕ ತಂತ್ರಜ್ಞಾನವನ್ನು ಹೊಂದಿದ್ದು, ಇದು ತಾಂತ್ರಿಕ ತೊಂದರೆಯಿಂದ ಪತನಗೊಂಡಿರುವುದು ಅಚ್ಚರಿಗೆ ಕಾರಣವಾಗಿದೆ. ಪತನಗೊಂಡ ಏರ್ ಇಂಡಿಯಾ ವಿಮಾನ ಎಐ-171 ಕುರಿತು ವಿಮಾನ ಅಪಘಾತ ತನಿಖಾ ಸಂಸ್ಥೆ (ಎಎಐಬಿ) ತನಿಖೆ ಆರಂಭಿಸಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಕೇಂದ್ರ ಸರ್ಕಾರವು ಘಟನೆಯ ಬಗ್ಗೆ ತನಿಖೆ ನಡೆಸಲು ಆದೇಶಿಸಿದೆ. ಪತನದ ಬೆನ್ನಿಗೇ ಷೇರು ಮಾರುಕಟ್ಟೆಯಲ್ಲಿ ಟಾಟಾ ಬೋಯಿಂಗ್ ಷೇರುಗಳು ಇಳಿಮುಖ ಕಂಡಿವೆ.

ಎಸ್. ಎಲ್. ಭೈರಪ್ಪ ಪ್ರತಿಷ್ಠಾನ (ರಿ)
ರಾಜರಾಜೇಶ್ವರಿ ನಗರ, ಬೆಂಗಳೂರು-560098

ಪ್ರತಿಷ್ಠಾನದ ಉದ್ಘಾಟನಾ ಸಮಾರಂಭ

ದಿನಾಂಕ: 14 ಜೂನ್ 2025
ಶನಿವಾರ ಸಂಜೆ ಐದು ಗಂಟೆಗೆ

ಸ್ಥಳ:
ಬಿ.ಎಂ.ಎಸ್. ಇಂಜಿನಿಯರಿಂಗ್ ಕಾಲೇಜ್ ಸಭಾಂಗಣ
ಬಸವನಗುಡಿ ರಸ್ತೆ, ಬೆಂಗಳೂರು: 560019

ಸಹೃದಯರಿಗೆ ಸ್ವಾಗತ
(ಅಧ್ಯಕ್ಷರು ಮತ್ತು ಟ್ರಸ್ಟಿಗಳು)

ಮರುಸಮೀಕ್ಷೆಗೆ ಸಂಪುಟ ಅಸ್ತು

ಬೆಂಗಳೂರು: ಕಾಂಗ್ರೆಸ್ ಹೈಕಮಾಂಡ್ ಸೂಚನೆಯ ಬೆನ್ನಲ್ಲೇ, ಕರ್ನಾಟಕದಲ್ಲಿ ಜಾತಿಗಣತಿಯನ್ನು ಮರುಸಮೀಕ್ಷೆ ನಡೆಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಘೋಷಿಸಿದ್ದರು. ಇದರ ಬೆನ್ನಲ್ಲೇ ಗುರುವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ 'ಸರ್ವಾನುಮತ'ದೊಂದಿಗೆ ಮರುಸಮೀಕ್ಷೆಗೆ ಅನುಮೋದನೆ ನೀಡಲಾಗಿದೆ.

ಮರುಸಮೀಕ್ಷೆಗೆ ಸಂಬಂಧಿಸಿದಂತೆ ಹಲವು ಸಮುದಾಯಗಳು ಸ್ವಾಗತಿಸಿದ್ದರೂ, ಪ್ರತಿಪಕ್ಷಗಳು ಮತ್ತೊಮ್ಮೆ ದುಂದುವೆಚ್ಚ ಎನ್ನುವ ಆರೋಪವನ್ನು ಮಾಡಿತ್ತು.

ಈ ಎಲ್ಲದರ ನಡುವೆ ಗುರುವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ, ಹಿಂದುಳಿದ ವರ್ಗಗಳ ಸಾಮಾಜಿಕ, ಶೈಕ್ಷಣಿಕ ಮರು ಸಮೀಕ್ಷೆಗೆ ಸಚಿವ ಸಂಪುಟ ತೀರ್ಮಾನಿಸಿದ್ದು, 90 ದಿನದಲ್ಲಿ ವರದಿಯನ್ನು ಸಲ್ಲಿಕೆ ಮಾಡಲು ಸೂಚನೆ ನೀಡಲಾಗಿದೆ. ಸಚಿವ ಸಂಪುಟ ಸಭೆಯ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, 2015ರ ಏ.11ರಿಂದ ಮೇ 30ರವರೆಗೂ ನಡೆದಿದ್ದ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಗೆ ಹತ್ತು ವರ್ಷ ಪೂರ್ಣಗೊಂಡಿದೆ.

ಹಿಂದುಳಿದ ವರ್ಗಗಳ ಆಯೋಗದ ಅಧಿನಿಯಮದ ಪ್ರಕಾರ, ಸಮೀಕ್ಷೆ ನಡೆದು 10 ವರ್ಷದ ನಂತರ ಪರಿಷ್ಕರಣೆಗೆ ಅವಕಾಶವಿದೆ. ಹೀಗಾಗಿ ಆಯೋಗದ ಸಲಹೆ ಪಡೆದು ಮರು ಸಮೀಕ್ಷೆ ನಡೆಸಲಾಗುವುದು. ಕರ್ನಾಟಕ ಹಿಂದುಳಿದ ವರ್ಗಗಳ ಶಾಶ್ವತ ಆಯೋಗಕ್ಕೆ ಈ ಹಿಂದೆ ಅಡ್ವೋಕೇಟ್ ಜನರಲ್ ಆಗಿದ್ದ ಮಧುಸೂದನ್ ನಾಯಕ್ ಅವರನ್ನು ಅಧ್ಯಕ್ಷರನ್ನಾಗಿ ನೇಮಿಸಲಾಗಿದೆ. ಸದಸ್ಯರನ್ನು 2-3 ದಿನಗಳಲ್ಲಿ ನೇಮಿಸಲಾಗುವುದು ಎಂದು ಹೇಳಿದರು.

ರೂಪಾ, ಸಿಂಧೂರಿ ವರ್ಗ

ಬೆಂಗಳೂರು: ಇತ್ತೀಚೆಗಷ್ಟೇ ಎಡಿಜಿಪಿಯಾಗಿ ಬಡ್ತಿ ಪಡೆದಿದ್ದ ರೂಪಾ ಡಿ. ಮೌದ್ಗಿಲ್ ಅವರನ್ನು ಬೆಂಗಳೂರು ಮೆಟ್ರೋಪಾಲಿಟನ್ ಟಾಸ್ಕ್ ಫೋರ್ಸ್ ಎಡಿಜಿಪಿಯಾಗಿ ವರ್ಗಾಗೊಳಿಸಿ ರಾಜ್ಯ ಸರಕಾರ ಆದೇಶ ಹೊರಡಿಸಿದೆ. ಇದೇ ರೀತಿ ರೋಹಿಣಿ ಸಿಂಧೂರಿ ಅವರನ್ನು ಕೃಷಿ ಇಲಾಖೆಯ ಕಾರ್ಯದರ್ಶಿ ಹುದ್ದೆಯಿಂದ ಕಾರ್ಮಿಕ ಇಲಾಖೆಯ ಕಾರ್ಯದರ್ಶಿ ಹುದ್ದೆಗೆ ವರ್ಗಾವಣೆ ಮಾಡಲಾಗಿದೆ. ಸೀಮಂತ್‌ಕುಮಾರ್ ಸಿಂಗ್ ಅವರನ್ನು ಬೆಂಗಳೂರು ನಗರ ಪೊಲೀಸ್ ಆಯುಕ್ತರನ್ನಾಗಿ ವರ್ಗಾವಣೆಗೊಳಿಸಿದ ಬಳಿಕ ಖಾಲಿಯಾಗಿದ್ದ ಬಿಎಂಟಿಎಫ್ ಎಡಿಜಿಪಿ ಸ್ಥಾನಕ್ಕೆ ರೂಪಾ ಅವರನ್ನು ವರ್ಗಾಯಿಸಲಾಗಿದೆ. ಇದರೊಂದಿಗೆ ರೇಷ್ಮೆ ಮಾರುಕಟ್ಟೆ ನಿಗಮ ನಿಯಮಿತದ ವ್ಯವಸ್ಥಾಪಕ ನಿರ್ದೇಶಕಿ ಹುದ್ದೆಯನ್ನು ಹೆಚ್ಚುವರಿಯಾಗಿ ನೀಡಲಾಗಿದೆ.

ಸಮಾಚಾರ ಸಣ್ಣದಲ್ಲ

ಇಡಿಗೆ ಕಾಂಗ್ರೆಸಿಗರೇ ಟಾರ್ಗೆಟ್

ಬೆಂಗಳೂರು: ಕಾಂಗ್ರೆಸ್ ನಾಯಕರನ್ನು ಗುರಿಯಾಗಿಸಿಕೊಂಡು ದಾಳಿ ನಡೆಸುವ ಜಾರಿ ನಿರ್ದೇಶನಾಲಯಕ್ಕೆ ಸಾಂವಿಧಾನಿಕ ಪಾವಿತ್ರ್ಯತೆ ಇರಲು ಸಾಧ್ಯವಿಲ್ಲ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಆರೋಪಿಸಿದ್ದಾರೆ. ತಮ್ಮ ಸಾಮಾಜಿಕ ಜಾಲತಾಣದಲ್ಲಿ ಈ ಬಗ್ಗೆ ಪ್ರತಿಕ್ರಿಯಿಸಿರುವ ಅವರು, ಕರ್ನಾಟಕದಲ್ಲಿ ಕಾಂಗ್ರೆಸ್ ನಾಯಕರನ್ನು ಗುರಿಯಾಗಿಸಿಕೊಂಡು ಜಾರಿ ನಿರ್ದೇಶನಾಲಯ ಮತ್ತೆ ದಾಳಿ ನಡೆಸಿದೆ. ಜಾರಿ ನಿರ್ದೇಶನಾಲಯದ ವೈಶಿಷ್ಟ್ಯವೇನೆಂದರೆ ಅದು ದಾಳಿ ಮಾಡುವುದು ಬಿಜೆಪಿಯೇತರ ನಾಯಕರ ಮೇಲೆ ಮಾತ್ರ. ಇಲ್ಲಿಯವರೆಗೂ ಇ.ಡಿ ಬಿಜೆಪಿ ನಾಯಕರ ತಂಟೆಗೆ ಹೋಗಿಲ್ಲ. ಹೋಗುವುದು ಇಲ್ಲ. ಇದೊಂದು ವಿಸ್ಮಯ ಎಂದು ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಕಾಂಗ್ರೆಸ್ ನಾಯಕರನ್ನೇ ಗುರಿಯಾಗಿಸಿಕೊಂಡು ದಾಳಿ ನಡೆಸುವ ಜಾರಿ ನಿರ್ದೇಶನಾಲಯ ತನ್ನ ಹೆಸರನ್ನು ಕಾಂಗ್ರೆಸ್ ವಿರೋಧಿ ನಿರ್ದೇಶನಾಲಯ ಎಂದು ಬದಲಾಯಿಸಿಕೊಳ್ಳುವುದು ಸೂಕ್ತ. ಯಾಕೆಂದರೆ ಜಾರಿ ನಿರ್ದೇಶನಾಲಯದ ಪ್ರೈಮ್ ಟಾರ್ಗೆಟ್ ಕಾಂಗ್ರೆಸ್ ನಾಯಕರೆ ಹೊರತು ಬಿಜೆಪಿಯವರಲ್ಲ. ಇತ್ತೀಚೆಗಷ್ಟೆ ತಮಿಳು ನಾಡಿನ ಟಿಎಎಸ್‌ಎಂಎಸಿ ಹಗರಣದಲ್ಲಿ ಇ.ಡಿ. ನಡೆ ಯನ್ನು ಸುಪ್ರಿಂ ಕೋರ್ಟ್ ಕಟು ಮಾತುಗಳಲ್ಲಿ ಟೀಕಿಸಿದೆ. ಇ.ಡಿ. ಎಲ್ಲಾ ಮಿತಿಗಳನ್ನು ಮೀರುತ್ತಿದೆ ಎಂದು ಸುಪ್ರಿಂ ಎಚ್ಚರಿಕೆ ನೀಡಿದೆ. ಆದರೂ ಇ.ಡಿ. ಅಧಿಕಾರಿಗಳು ಬಿಜೆಪಿ ಕಾರ್ಯಕರ್ತರಂತೆ ವರ್ತಿಸುತ್ತಿದ್ದಾರೆ.

ವಿರಾಮ
ಪ್ರತಿ ಭಾನುವಾರ

ಕೆಎಸ್‌ಸಿಎ ನಿರ್ವಹಿಸಿದ ಕಾಮಗಾರಿಗಳ 15 ಕೋಟಿ ಮೊತ್ತ ಬಾಕಿ | ಬಿಲ್ ಕೇಳಿದರೆ ಕೆಎಸ್‌ಸಿಎ ಪದಾಧಿಕಾರಿಗಳ ದರ್ಪ?

ಗುತ್ತಿಗೆದಾರರಿಗೆ ಹಣ ಪಾವತಿಸದ ಕೆಎಸ್‌ಸಿಎ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಶೌಚಗೃಹ, ಕ್ರಿಕೆಟ್ ಅಕಾಡೆಮಿ ನಿರ್ಮಾಣ ಮತ್ತು ಮೈದಾನಗಳ ಮೇಲ್ದರ್ಜೆ ನವೀಕರಣ ಸೇರಿ ಹಲವು ಕಾಮಗಾರಿಗಳನ್ನು ನಿರ್ವಹಿಸಿದ್ದ ಗುತ್ತಿಗೆದಾರರಿಗೆ, ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ(ಕೆಎಸ್‌ಸಿಎ) ಹಲವು ವರ್ಷಗಳಿಂದ ಹಣ ಪಾವತಿಸದಿರುವ ವಿಚಾರ ಬೆಳಕಿಗೆ ಬಂದಿದೆ.

ಚಿನ್ನಸ್ವಾಮಿ ಸ್ಟೇಡಿಯಂ ಗೇಟ್ ಬಳಿ ಆರ್‌ಸಿಬಿ ತಂಡದ ವಿಜಯೋತ್ಸವದ ವೇಳೆ ಉಂಟಾದ ಕಾಲ್ತುಳಿತ ಘಟನೆ ಬಳಿಕ ಬಾಕಿ ಉಳಿಸಿಕೊಂಡಿದ್ದ ಜಾಹೀರಾತು ತೆರಿಗೆ ಮೊತ್ತ ಪಾವತಿಸುವಂತೆ ಕೆಎಸ್‌ಸಿಎಗೆ, ಬಿಬಿಎಂಪಿ ನೋಟಿಸ್ ನೀಡಿತ್ತು. ಇದೀಗ, ನವೀಕರಣ ಸೇರಿ ವಿವಿಧ ಕಾಮಗಾರಿಗಳನ್ನು ನಿರ್ವಹಿಸಿದ್ದ ಗುತ್ತಿಗೆದಾರರ ಕೋಟ್ಯಂತರ ರು.ಬಿಲ್‌ಗಳನ್ನು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ ಬಾಕಿ ಉಳಿಸಿಕೊಂಡಿದೆ. 25 ಗುತ್ತಿಗೆ ಸಂಸ್ಥೆಗಳಿಂದ ಅಂದಾಜು 15 ಕೋಟಿ ರು. ಮೊತ್ತದ ಬಿಲ್‌ಗಳು ಬಾಕಿ ಉಳಿದಿದೆ. ಇದನ್ನು ಪಾವತಿಸುವಂತೆ ಸಾಕಷ್ಟು ಬಾರಿ ಗುತ್ತಿಗೆದಾರರು ಮನವಿ ಮಾಡಿಕೊಂಡಿದ್ದರೂ ಕೆಎಸ್‌ಸಿಎ ಆಡಳಿತ ಮಂಡಳಿಯ ಪದಾಧಿಕಾರಿಗಳು ದರ್ಪದಿಂದ ವರ್ತಿಸಿರುವ ಬಗ್ಗೆ ಗಂಭೀರ ಆರೋಪಗಳಿವೆ.

ಚಿನ್ನಸ್ವಾಮಿ ಮೈದಾನ ಸೇರಿ ರಾಜ್ಯದ ವಿವಿಧ ಜಿಲ್ಲೆಗಳ ಮೈದಾನಗಳನ್ನು ಕೆಎಸ್‌ಸಿಎ ನಿರ್ವಹಣೆ ಮಾಡುತ್ತಿದೆ. ಪ್ರತಿ ವರ್ಷ ನವೀಕರಣ, ಕ್ರಿಕೆಟ್ ಅಕಾಡೆಮಿ ನಿರ್ಮಾಣ, ಮೈದಾನಗಳ ಮೇಲ್ದರ್ಜೆ ಸೇರಿ ವಿವಿಧ ಕಾಮಗಾರಿಗಳನ್ನು ನಿರ್ವಹಿಸಲು ಟೆಂಡರ್ ಮೂಲಕ ಗುತ್ತಿಗೆದಾರರಿಗೆ ಗುತ್ತಿಗೆ ನೀಡುತ್ತಿದೆ. ಇದಕ್ಕಾಗಿ ಪ್ರತಿ ವರ್ಷ ಹತ್ತಾರು ಕೋಟಿ ರು. ಖರ್ಚು ಮಾಡುತ್ತಿದೆ. ಆದರೆ, ಕೆಎಸ್‌ಸಿಎ ಕ್ರೀಡಾ ಕೇಂದ್ರ, ಬೆಂಗಳೂರಿನ ಆಲೂರು ಕ್ರಿಕೆಟ್ ಮೈದಾನದಲ್ಲಿ ಮಹಿಳಾ ಮತ್ತು ಪುರುಷರ ಶೌಚಗೃಹ ನಿರ್ಮಾಣ, ಈಜುಕೊಳ ನವೀಕರಣ, ತುಮಕೂರು ಕ್ರಿಕೆಟ್ ಮೈದಾನದ ಕಾಂಪೌಂಡ್ ಗೋಡೆ ನಿರ್ಮಾಣ ಮತ್ತು ಗೇಟ್ ಅಳವಡಿಕೆ, ದಾವಣಗೆರೆ ಕ್ರಿಕೆಟ್ ಮೈದಾನದಲ್ಲಿ ಗ್ರೌಂಡ್ ಪಿಚ್‌ಗಳ ರಚನೆ, ಕ್ಯಾಮೆರಾ ಗ್ಯಾಂಟ್ರಿ, ಕ್ರಾಂಕೀಟ್ ಮೆಟ್ಟಿಲು ನಿರ್ಮಾಣ, ಪೆವಿಲಿಯನ್ ಕಟ್ಟಡಕ್ಕೆ ವಿದ್ಯುತ್ ಸಂಪರ್ಕ ಸೇರಿ ವಿವಿಧ ಸಿವಿಲ್ ಕಾಮಗಾರಿಗಳನ್ನು ಮಾಡಿರುವ ಗುತ್ತಿಗೆದಾರರಿಗೆ, ಹಲವು ವರ್ಷಗಳಿಂದ ಹಣ ಪಾವತಿಯಾಗಿಲ್ಲ. ಬಿಲ್‌ಗಳನ್ನು ಕ್ಲಿಯರ್ ಮಾಡುವುದಕ್ಕೆ ಶೇ.20 ಕಮಿಷನ್ ನೀಡುವಂತೆ ಕೆಲ ಪದಾಧಿಕಾರಿಗಳಿಗೆ ಬೇಡಿಕೆ ಇಟ್ಟಿರುವ ಬಗ್ಗೆಯೂ ಗಂಭೀರ ಆರೋಪಗಳಿವೆ.

ಪತ್ರಕ್ಕೆ ಸ್ಪಂದಿಸದ ಕೆಎಸ್‌ಸಿಎ

ಆಲೂರಿನ ಕೆಎಸ್‌ಸಿಎ ಕ್ರಿಕೆಟ್ ಅಕಾಡೆಮಿ, ಆಲೂರು ಕ್ರಿಕೆಟ್ ಮೈದಾನದಲ್ಲಿ ಸಿವಿಲ್ ವರ್ಕ್ ಸೇರಿ ವಿವಿಧ ಕಾಮಗಾರಿ ನಿರ್ವಹಿಸಲಾಗಿದ್ದು, ಬಾಕಿ ಉಳಿದಿರುವ 1.80 ಕೋಟಿ ರೂ. ಬಿಲ್‌ಗಳಿಗೆ ಹಣ ಬಿಡುಗಡೆ ಮಾಡಬೇಕೆಂದು ಕೋರಿ ಫಿಡೆಲಿಟಸ್ ಕಾರ್ಪ್ ಪ್ರಾಪರ್ಟಿ ಸರ್ವೀಸ್ ಪೆ.ಲಿ., 2024ರ ಮಾ.27ರಂದು ಕೆಎಸ್‌ಸಿಎ ಕಾರ್ಯದರ್ಶಿಗೆ ಪತ್ರ ಬರೆದಿತ್ತು. ಕಾಮಗಾರಿ ನಿರ್ವಹಿಸಿರುವುದು, ಪಾವತಿಸಬೇಕಾದ ಮೊತ್ತ, ಟೆಂಡರ್ ಕೊಟ್ಟಿರುವ ವಿವರ ಸೇರಿ ಇತ್ಯಾದಿ ಮಾಹಿತಿ ಪತ್ರದಲ್ಲಿ ಉಲ್ಲೇಖಿಸಲಾಗಿತ್ತು. 15 ತಿಂಗಳು ಕಳೆದರೂ ಬಾಕಿ ಬಿಲ್‌ಗಳಿಗೆ ಕೆಎಸ್‌ಸಿಎ ಹಣ ಬಿಡುಗಡೆ ಮಾಡಿಲ್ಲ. ಇದೇರೀತಿ, ಹಲವು ಗುತ್ತಿಗೆದಾರರರಿಗೂ ಹಣ ಪಾವತಿಸಿದ ನಿರ್ದೇಶನಗಳಿವೆ.

ಕೆಎಸ್‌ಸಿಎ ಕೃಪೆ, ಕಾಳಸಂತೆಯಲ್ಲಿ ಟಿಕೆಟ್?

ರಾಷ್ಟ್ರೀಯ,ಅಂತಾರಾಷ್ಟ್ರೀಯ ಮಟ್ಟದ ಕ್ರಿಕೆಟ್ ಪಂದ್ಯಗಳ ಆಯೋಜನೆ, ಇಂಡಿಯನ್ ಪ್ರಿಮೀಯರ್ ಲೀಗ್(ಐಪಿಎಲ್) ಟೂರ್ನಿಮೆಂಟ್‌ಗಳಿಂದ ಕೆಎಸ್‌ಸಿಎಗೆ, ಪ್ರತಿ ವರ್ಷ ನೂರಾರು ಕೋಟಿ ಆದಾಯ ಬರುತ್ತದೆ. ಕೆಎಸ್‌ಸಿಎ ಆಡಳಿತ ಮಂಡಳಿ ಪದಾಧಿಕಾರಿಗಳು ಅಧಿಕಾರ ದುರ್ಬಳಕೆ ಮಾಡಿಕೊಂಡು ದರ್ಬಾರ್ ನಡೆಸುತ್ತಿರುವ ಬಗ್ಗೆ ಸಾರ್ವಜನಿಕ ವಲಯದಲ್ಲಿ ಚರ್ಚೆಯಾಗುತ್ತಿದೆ. ಕುಟುಂಬದ ಸದಸ್ಯರಿಗೆ ಸೇರಿ ಬೇಕಾದವರಿಗೆ ಟಿಕೆಟ್ ಕೊಡಿಸುವುದು, ಪಂದ್ಯ ಆರಂಭಕ್ಕೂ 2 ದಿನ ಮುಂಚೆ ಟಿಕೆಟ್ ಕೌಂಟರ್‌ನಲ್ಲಿ ಪ್ರೇಕ್ಷಕರಿಗೆ ಟಿಕೆಟ್ ದೊರೆಯದಂತೆ ಮಾಡುವುದು ಮತ್ತು ಪಂದ್ಯ ಆರಂಭಕ್ಕೆ ಕೆಲ ಗಂಟೆ ಬಾಕಿ ಇರುವಾಗ ಕಾಳಸಂತೆಯಲ್ಲಿ ದುಪ್ಪಟ್ಟು ದರಕ್ಕೆ ಟಿಕೆಟ್ ಮಾಡುವುದಕ್ಕೆ ಪ್ರೋತ್ಸಾಹ ನೀಡಿರುವ ಬಗ್ಗೆಯೂ ದೂರುಗಳಿವೆ. ಇದಕ್ಕೆ ಕೆಎಸ್‌ಸಿಎಯ ಕೆಲ ಪದಾಧಿಕಾರಿಗಳೇ ಕುಮ್ಮಕ್ಕು ನೀಡಿದ್ದಾರೆ. ಕೆಎಸ್‌ಸಿಎ ನಡೆಸುವ ಟೂರ್ನಿಮೆಂಟ್ ಸೇರಿ ಇತರೆ ಮಾಹಿತಿಗಳನ್ನು ನೀಡುವಂತೆ ಮಾಧ್ಯಮದವರು ಕೇಳಿದ್ದರೂ ಧಿಮಾಕಿನಿಂದ ವರ್ತಿಸಿರುವ ನಿರ್ದೇಶನಗಳು ಸಾಕಷ್ಟಿವೆ.

ವಿಜಯನಗರದ ಸೆಂಟ್ ಫ್ಲವರ್ಸ್ ಸಮೂಹ ಶಿಕ್ಷಣ ಸಂಸ್ಥೆಯಲ್ಲಿ ನೂತನವಾಗಿ ದಾಖಲಾದ ಮಕ್ಕಳಿಗೆ ಅಕ್ಷರಭ್ಯಾಸ ಆಚರಣೆ ನಡೆಯಿತು. ಶಾಲಾ ಅಧ್ಯಕ್ಷ ಡಾ.ಜಿ.ಆರ್.ಕೃಷ್ಣಪ್ಪ, ವ್ಯವಸ್ಥಾಪಕ ನಿರ್ದೇಶಕ ದರ್ಶನ್ ಕೃಷ್ಣ, ಪ್ರಾಂಶುಪಾಲರಾದ ಸೌಮ್ಯ.ಜಿ , ವಿನುತ.ಪಿ ಹಾಗೂ ಶಿಕ್ಷಕರು, ಪೋಷಕರು ಉಪಸ್ಥಿತರಿದ್ದರು.

ಸಹಾಯಕ ಪ್ರಾಧ್ಯಾಪಕರೊಬ್ಬರ ವಿರುದ್ಧ ಲೈಂಗಿಕ ಕಿರುಕುಳದ ಆರೋಪ

ಕಿರುಕುಳ ಕೇಸ್ ರದ್ಧತಿಗೆ ಹೈ ನಕಾರ

ಬೆಂಗಳೂರು: ತನ್ನ ಮಗಳ 9ನೇ ವರ್ಷದ ಜನ್ಮ ದಿನಾಚರಣೆಗೆ ಆಹ್ವಾನಿಸಿದ್ದ ಎಂಟು ಮಂದಿ ಅಪ್ರಾಪ್ತ ಬಾಲಕಿಯರಿಗೆ 'ಭಯಾನಕ ಮನೆ' ಆಟದ ವೇಳೆ ಲೈಂಗಿಕ ಕಿರುಕುಳ ನೀಡಿದ ಆರೋಪದಲ್ಲಿ ಪ್ರತಿಷ್ಠಿತ ಸಂಸ್ಥೆಯೊಂದರ ಸಹಾಯಕ ಪ್ರಾಧ್ಯಾಪಕರೊಬ್ಬರ ವಿರುದ್ಧ ದಾಖಲಾಗಿದ್ದ ಪೋಕ್ಸೋ ಪ್ರಕರಣ ಮತ್ತು ಅದಕ್ಕೆ ಸಂಬಂಧಿಸಿದ ನ್ಯಾಯಿಕ ಪ್ರಕ್ರಿಯೆ ರದ್ದುಗೊಳಿಸಲು ಹೈಕೋರ್ಟ್ ನಿರಾಕರಿಸಿದೆ.

ಇದೇ ವೇಳೆ, ಅರ್ಜಿಗೆ ಸಂಬಂಧಿಸಿದಂತೆ, ಮುಂದಿನ ಮೂರು ತಿಂಗಳಲ್ಲಿ ಪ್ರಕರಣದ ವಿಚಾರಣೆ ಪೂರ್ಣಗೊಳಿಸಲು ವಿಶೇಷ ನ್ಯಾಯಾಲಯಕ್ಕೆ ಹೈಕೋರ್ಟ್ ನಿರ್ದೇಶನ ನೀಡಿ ಆದೇಶಿಸಿದೆ. ಪ್ರತಿಷ್ಠಿತ ಸಂಸ್ಥೆಯ ಸಹ ಪ್ರಾಧ್ಯಾಪಕ ತನ್ನ ವಿರುದ್ಧದ ಪ್ರಕರಣ ಮತ್ತು ವಿಚಾರಣಾ ನ್ಯಾಯಾಲಯದಲ್ಲಿ ನಡೆಯುತ್ತಿದ್ದ ವಿಚಾರಣಾ ಪ್ರಕ್ರಿಯೆ ರದ್ದು ಕೋರಿ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ನ್ಯಾಯಪೀಠ ಈ ಆದೇಶ ನೀಡಿದೆ.

ಅಲ್ಲದೆ, ಸಂತ್ರಸ್ತ ಮಕ್ಕಳ ಹೇಳಿಕೆ ದಾಖಲಿಸುವ ವಿಧಾನವು ಅವರು ಮಾಡಿರುವ ಆರೋಪವನ್ನು ಕ್ಷೀಣಿಸುವಂತೆ ಮಾಡುವುದಿಲ್ಲ. ಸಂತ್ರಸ್ತರ ಹೇಳಿಕೆಗಳನ್ನು ಆಡಿಯೋ-ವಿಡಿಯೋ ಮಾಡಿಲ್ಲ ಎಂಬ ಅರ್ಜಿದಾರರ ವಾದವನ್ನು ತಳ್ಳಿಹಾಕಿದೆ.

ಏನಿದು ಪ್ರಕರಣ?

ಸಹಾಯಕ ಪ್ರಾಧ್ಯಾಪಕ ತನ್ನ ಮಗಳ 9ನೇ ವರ್ಷದ ಜನ್ಮ ದಿನಾಚರಣೆಗೆ ಅವಳ ಸ್ನೇಹಿತರು ಹಾಗೂ ನೆರೆಯ ಮನೆಗಳ ಮಕ್ಕಳನ್ನು ಅಹ್ವಾನಿಸಿದ್ದರು. ಈ ವೇಳೆ ಕತ್ತಲೆ ಕೋಣೆಯಲ್ಲಿ 'ಭಯಾನಕ ಮನೆ' ಎಂಬ ಆಟವಾಡುತ್ತಿದ್ದ ವೇಳೆ ಒಂದು ಮಗು ಇನ್ನೊಂದು ಮಗುವಿನ ಕಣ್ಣಿಗೆ ಚುಚ್ಚಿದೆ ಎಂದು ಮಕ್ಕಳು ಆರೋಪಿಸಿದರು. ಈ ವೇಳೆ ಕತ್ತಲೆ ಕೋಣೆಗೆ ಬಂದ ಆರೋಪಿ, ಮಕ್ಕಳೊಂದಿಗೆ ಅನುಚಿತವಾಗಿ ವರ್ತಿಸಿ, ಲೈಂಗಿಕ ಕಿರುಕುಳ ನೀಡಿದ್ದಾರೆ ಎಂದು ಆರೋಪಿಸಲಾಗಿತ್ತು.

ಸಂಭ್ರಮಾಚರಣೆ ದಾಖಲೆ ಸಿಎಸ್ ವಶದಲ್ಲಿಡಲು ಹೈ ಸೂಚನೆ | ಜೂ.17ಕ್ಕೆ ವಿಚಾರಣೆ ಮುಂದೂಡಿಕೆ

ಕಾಲ್ತುಳಿತ ಕೇಸ್ ಆರೋಪಿಗಳಿಗೆ ಜಾಮೀನು

ವಿಶ್ವವಾಣಿ ಸುದ್ದಿಮನೆ ಬೆಂಗಳೂರು



ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ಐಪಿಎಲ್‌ನಲ್ಲಿ ಗೆಲುವು ಸಾಧಿಸಿದ ಹಿನ್ನೆಲೆಯಲ್ಲಿ ಹಮ್ಮಿಕೊಂಡಿದ್ದ ವಿಜಯೋತ್ಸವ ಸಂದರ್ಭದಲ್ಲಿ ಕಾಲ್ತುಳಿತದಿಂದ 11 ಮಂದಿ ಸಾವನ್ನಪ್ಪಿರುವ ಪ್ರಕರಣ ಕುರಿತ ನಡೆಸಿರುವ ಎಲ್ಲ ರೀತಿಯ ಸಂವಹನದ ದಾಖಲೆಗಳನ್ನು ಮುಖ್ಯ ಕಾರ್ಯದರ್ಶಿಗಳ ವಶದಲ್ಲಿಡುವಂತೆ ಹೈಕೋರ್ಟ್ ಸೂಚನೆ ನೀಡಿದೆ.

ಘಟನೆಗೆ ಸಂಬಂಧಿಸಿದಂತೆ ಮಾಧ್ಯಮಗಳ ವರದಿ ಆಧರಿಸಿ ದಾಖಲಿಸಿಕೊಂಡಿದ್ದ ಸ್ವಯಂ ಪ್ರೇರಿತ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ ವಿಚಾರಣೆ ನಡೆಸಿದ ಹಂಗಾಮಿ ಮುಖ್ಯ ನ್ಯಾಯಮೂರ್ತಿ ವಿ.ಕಾಮೇಶ್ವರ ರಾವ್ ಮತ್ತು ನ್ಯಾಯಮೂರ್ತಿ ಸಿ.ಎಂ ಜೋಶಿ ಅವರಿದ್ದ ವಿಭಾಗೀಯ ಪೀಠ ವಿಚಾರಣೆ ನಡೆಸಿತು. ವಿಚಾರಣೆ ಸಂದರ್ಭದಲ್ಲಿ ಸರಕಾರದ ಪರ ಹಾಜರಿದ್ದ ಅಡ್ವೊಕೇಟ್ ಜನರಲ್ ಶಶಿಕಿರಣ್ ಶೆಟ್ಟಿ, ಘಟನೆಗೆ ಸಂಬಂಧಿಸಿದಂತೆ ಈವರೆಗೂ ನಡೆದ ತನಿಖೆಗೆ ಸಂಬಂಧಿಸಿದ ವಸ್ತುಸ್ಥಿತಿ ವರದಿ ಮತ್ತು ಕೈಗೊಂಡ ಕ್ರಮಕ್ಕೆ ಸಂಬಂಧಿಸಿದಂತೆ ಮುಚ್ಚಿದ ಲಕೋಟೆಯಲ್ಲಿ ಪೀಠಕ್ಕೆ ಸಲ್ಲಿಸಿದರು.

ವರದಿ ಪರಿಶೀಲಿಸಿ ಅಗತ್ಯ ಇದ್ದಲ್ಲಿ ಹೆಚ್ಚಿನ ವಿಚಾರಣೆ ನಡೆಸಬಹುದು:ಅರ್ಜಿ ಸಂಬಂಧ ಹೈಕೋರ್ಟ್ ಈ ಹಿಂದೆ 9 ಪ್ರಶ್ನೆ ಕೇಳಿ ಉತ್ತರಿಸುವಂತೆ ಸೂಚನೆ ನೀಡಿತ್ತು. ಅದಕ್ಕೆ ಸಂಬಂಧಿಸಿದಂತೆ ಸರಕಾರ ಮುಚ್ಚಿದ ಲಕೋಟೆಯಲ್ಲಿ ವಿವರಣೆ ನೀಡಿದೆ. ವರದಿ ಪರಿಶೀಲಿಸಿ ಅಗತ್ಯವಿದ್ದಲ್ಲಿ ಹೆಚ್ಚಿನ ವಿಚಾರಣೆ ನಡೆಸಬಹುದು ಎಂದು ಅಡ್ವೋಕೇಟ್ ಜನರಲ್ ಪೀಠಕ್ಕೆ ತಿಳಿಸಿದರು. ಘಟನೆ ಸಂಬಂಧ ಸರಕಾರ ಮ್ಯಾಜಿಸ್ಟ್ರಿಯಲ್ ತನಿಖೆಗೆ ವಹಿಸಿದೆ. ಮತ್ತೊಂದೆಡೆ ನ್ಯಾಯಾಂಗ ತನಿಖೆಗೂ ಕೋರಿದೆ. ಈ ಎರಡೂ ತನಿಖೆಗಳಲ್ಲಿ ಬೇರೆ ಬೇರೆ ರೀತಿಯ ಅಭಿಪ್ರಾಯ ಬಂದರೆ ಯಾವ ಕ್ರಮಕ್ಕೆ ಮುಂದಾಗುತ್ತೀರಿ ಎಂದು ಅಡ್ವೋಕೇಟ್ ಜನರಲ್ ಅವರನ್ನು ಪ್ರಶ್ನಿಸಿದ ಪೀಠ, ಇದಕ್ಕೆ ಸೂಕ್ತ ರೀತಿಯಲ್ಲಿ ಪ್ರತಿಕ್ರಿಯಿಸಬೇಕಾಗುತ್ತದೆ ಎಂದು ಪೀಠ ಎಚ್ಚರಿಕೆ ನೀಡಿತು.

ಈ ರೀತಿಯ ಕಾರ್ಯಕ್ರಮಗಳ ಆಯೋಜನೆಗೆ ಎಸ್‌ಒಪಿ ರೂಪಿಸಲು ಕ್ರಮ ಕೈಗೊಳ್ಳಲಾಗಿದೆ ಎಂದು ಶಶಿಕಿರಣ್ ಶೆಟ್ಟಿ ಇದೇ ವೇಳೆ ಪೀಠಕ್ಕೆ ಭರವಸೆ ನೀಡಿದರು. ವಿಚಾರಣೆ ವೇಳೆ ಮಧ್ಯಪ್ರವೇಶಿಸಿದ ವಕೀಲರೊಬ್ಬರು, ಮೃತರ ಸಂಬಂಧಿಕರಿಗೆ ಪರಿಹಾರ ಮೊತ್ತ ಹೆಚ್ಚಳ ಮಾಡಬೇಕು ಎಂದು ನ್ಯಾಯಪೀಠಕ್ಕೆ ಅರ್ಜಿ ಸಲ್ಲಿಸಿದರು. ಅದಕ್ಕೆ ಉತ್ತರಿಸಿ ಅಡ್ವೋಕೇಟ್ ಜನರಲ್, ಈಗಾಗಲೇ ಮೃತರರ ಕುಟುಂಬಗಳಿಗೆ 25 ಲಕ್ಷ ರು. ಪರಿಹಾರ ನೀಡಿರುವುದಾಗಿ ತಿಳಿಸಿದರು.

ವಿಚಾರಣೆ ಜೂನ್ 17ಕ್ಕೆ ಮುಂದೂಡಿಕೆ:ಪೊಲೀಸ್ ಅಧಿಕಾರಿಗಳನ್ನು ಯಾವುದೇ ರೀತಿ ವಿಚಾರಣೆ ಮಾಡದೆ ಏಕಾಏಕಿ ಸೇವೆಯಿಂದ ಅಮಾನತುಗೊಳಿಸಿರುವ ಕ್ರಮ ಪ್ರಶ್ನಿಸಿ ಅರ್ಜಿ ಸಲ್ಲಿಸಲು ಅವಕಾಶ ನೀಡಬೇಕು ಎಂದು ಮತ್ತೊಬ್ಬ ವಕೀಲರು ಮನವಿ ಮಾಡಿದರು. ಇದಕ್ಕೆ ಪೀಠ, ಅರ್ಜಿದಾರರಿಗೆ ಪೊಲೀಸ್ ಅಧಿಕಾರಿಗಳನ್ನು ಅಮಾನತು ಮಾಡಿರುವುದರಿಂದ ನಿಮ್ಮ ಹಿತಾಸಕ್ತಿ ಏನು ಎಂದು ಪ್ರಶ್ನಿಸಿ ಅರ್ಜಿ ಪರಿಗಣಿಸಲಿಲ್ಲ. ವಾದ ಆಲಿಸಿದ ಪೀಠ, ಮುಂದಿನ ವಿಚಾರಣೆ ಜೂನ್ 17ಕ್ಕೆ ಮುಂದೂಡಿತು. ಐಪಿಎಲ್‌ನಲ್ಲಿ 18 ವರ್ಷಗಳ ಬಳಿಕ ಆರ್‌ಸಿಬಿ ವಿಜಯ ಸಾಧಿಸಿದ ಹಿನ್ನೆಲೆಯಲ್ಲಿ ವಿಧಾನಸೌಧ ಮತ್ತು ಕಂಠೀರವ ಕ್ರೀಡಾಂಗಣದ ಮುಂದೆ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಲಕ್ಷಾಂತರ ಜನ ಭಾಗಿಯಾಗಿದ್ದರು. ಈ ವೇಳೆ ಚಿನ್ನಸ್ವಾಮಿ ಕ್ರೀಡಾಂಗಣದ ಆರು ಮತ್ತು ಏಳನೇ ದ್ವಾರದಲ್ಲಿ ಉಂಟಾದ ನೂಕಾಟ ಹಾಗೂ ಕಾಲ್ತುಳಿತದಿಂದಾಗಿ 11 ಮಂದಿ ಸಾವನ್ನಪ್ಪಿದ್ದರು. ಈ ಕುರಿತು ಮಾಧ್ಯಮಗಳ ವರದಿಯನ್ನು ಪರಿಗಣಿಸಿದ್ದ ನ್ಯಾಯಪೀಠ, ಸ್ವಯಂಪ್ರೇರಿತವಾಗಿ ಅರ್ಜಿ ದಾಖಲಿಸಿಕೊಂಡು ವಿಚಾರಣೆ ನಡೆಸುತ್ತಿದೆ.

ಷರತ್ತುಬದ್ಧ ಜಾಮೀನು ಮಂಜೂರು

ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ವಿಜಯೋತ್ಸವ ಸಂದರ್ಭದಲ್ಲಿ ಎಂ. ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಸಂಭವಿಸಿದ ಕಾಲ್ತುಳಿತ ಘಟನೆಗೆ ಸಂಬಂಧಿಸಿದಂತೆ ಸಿಸಿಬಿ ಪೊಲೀಸರಿಂದ ಬಂಧನಕ್ಕೊಳಗಾಗಿದ್ದ ಆರ್‌ಸಿಬಿ ಮಾರ್ಕೆಟಿಂಗ್ ಮುಖ್ಯಸ್ಥ ನಿಖಿಲ್ ಸೋಸಲೆ ಹಾಗು ಇತರರಿಗೆ ಹೈಕೋರ್ಟ್ ಷರತ್ತುಬದ್ಧ ಜಾಮೀನು ಮಂಜೂರು ಮಾಡಿತು. ನಿಖಿಲ್ ಸೋಸಲೆ, ಡಿಎನ್‌ಎ ಎಂಟರ್ಟೈನ್ಮೆಂಟ್ ನೆಟ್‌ವರ್ಕ್ ಪ್ರೈವೇಟ್ ಲಿಮಿಟೆಡ್‌ನ ಮುಖ್ಯಸ್ಥ ಸುನೀಲ್ ಮ್ಯಾಥ್ಯೂ, ಕಿರಣ್ ಮತ್ತು ಶಮಂತ್ ಮಾವಿನಕೆರೆ ಅವರು ಸಲ್ಲಿಸಿರುವ ಮಧ್ಯಂತರ ಅರ್ಜಿಗಳ ವಿಚಾರಣೆ ನಡೆಸಿ, ಆದೇಶ ಕಾಯ್ದಿರಿಸಿದ್ದ ನ್ಯಾಯಮೂರ್ತಿ ಎಸ್.ಆರ್. ಕೃಷ್ಣಕುಮಾರ್ ಅವರಿದ್ದ ನ್ಯಾಯಪೀಠ ಆದೇಶ ನೀಡಿತು. ಎಲ್ಲ ಅರ್ಜಿದಾರರು ತನಿಖೆಗೆ ಸಹಕರಿಸಬೇಕು. ಪಾಸ್‌ಪೋರ್ಟ್ ಅನ್ನು ತನಿಖಾಧಿಕಾರಿಗಳ ವಶಕ್ಕೆ ನೀಡಬೇಕು ಎಂದು ಕೋರ್ಟ್ ಷರತ್ತು ವಿಧಿಸಿದೆ.

ಯಾರ‍್ಯಾರಿಗೆ ಜಾಮೀನು?

- **ಆರ್‌ಸಿಬಿ ಮಾರ್ಕೆಟಿಂಗ್ ಮುಖ್ಯಸ್ಥ ನಿಖಿಲ್ ಸೋಸಲೆ, ಇತರರಿಗೆ**
- **ಡಿಎನ್‌ಎ ಪ್ರೈವೇಟ್ ಲಿಮಿಟೆಡ್‌ನ ಮುಖ್ಯಸ್ಥ ಸುನೀಲ್ ಮ್ಯಾಥ್ಯೂ**

ಕೋರ್ಟ್ ಷರತ್ತೇನು?

- **ಎಲ್ಲ ಅರ್ಜಿದಾರರು ತನಿಖೆಗೆ ಸಹಕರಿಸಬೇಕು**
- **ತನಿಖಾಧಿಕಾರಿಗಳ ವಶಕ್ಕೆ ಪಾಸ್‌ಪೋರ್ಟ್ ನೀಡಬೇಕು**

SJS

ಎಸ್.ಜೆ.ಎಸ್. ಎಂಟರ್‌ಪ್ರೈಸಸ್ ಲಿಮಿಟೆಡ್

ನೋಂದಣಿಯು ಮತ್ತು ಕಾರ್ಪೊರೇಟ್ ಕಚೇರಿ: Sy No 28/P16 ಆಗ್ರಾ ಗ್ರಾಮ ಮತ್ತು Sy No 85/P6 ಬಿ.ಎಮ್. ಕಾವಲ್ ಗ್ರಾಮ, ಕೆಂಗೇರಿ ಹೋಬಳಿ, ಬೆಂಗಳೂರು 560 082, ಕರ್ನಾಟಕ, ಭಾರತ
ಜಾಲತಾಣ: www.sjsindia.com | **ಇ-ಮೇಲ್:** compliance@sjsindia.com
ದೂರವಾಣಿ: +91 80 6194 0777 | **CIN:** L51909KA2005PLC036601

20ನೇ ವಾರ್ಷಿಕ ಸರ್ವಸದಸ್ಯರ ಸಭೆ ವಿಡಿಯೋ ಕಾನ್ಸರೆನ್ಸ್ ಮೂಲಕ ನಡೆಸುವ ಬಗ್ಗೆ, ದಾಖಲಾತಿಯ ದಿನಾಂಕ, ಅಂತಿಮ ಲಾಭಾಂಶದ ಮಾಹಿತಿ ಸೂಚನೆ

ಎಸ್.ಜೆ.ಎಸ್. ಎಂಟರ್‌ಪ್ರೈಸಸ್ ಲಿಮಿಟೆಡ್ ("ಕಂಪನಿ) ಯ 20ನೇ ವಾರ್ಷಿಕ ಸರ್ವಸದಸ್ಯರ ಸಭೆಯನ್ನು ('ಎಜಿಎಮ್') **ಬುಧವಾರ, ಜುಲೈ 16, 2025** ಭಾರತೀಯ ಕಾಲಮಾನ ಸಂಜೆ 3:30ಕ್ಕೆ ಸರಿಯಾಗಿ ವಿಡಿಯೋ ಕಾನ್ಸರೆನ್ಸ್/ಇತರೆ ದೃಶ್ಯಶಾವ್ಯ ಮಾಧ್ಯಮದ ('ವಿಸಿ). ಮೂಲಕ ನಡೆಸಲಾಗುವುದು. ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ ('ಎಮ್‌ಸಿಎ) ಹೊರಡಿಸಿರುವ ಸಾಮಾನ್ಯ ಸುತ್ತೋಲೆ ಸಂಖ್ಯೆ 09/2024, ದಿನಾಂಕ ಸೆಪ್ಟೆಂಬರ್ 19, 2024 ಅನ್ವಯ ಸೆಕ್ಯುರಿಟೀಸ್ ಮತ್ತು ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ ('ಸೆಬಿ') ಹೊರಡಿಸಿರುವ ಸುತ್ತೋಲೆ ಸಂಖ್ಯೆ SEBI/HO/CFD/CFD-PoD-2/P/CIR/2024/133 ದಿನಾಂಕ ಅಕ್ಟೋಬರ್ 3, 2024, (ಇನ್ನು ಮುಂದೆ ಸಂಗ್ರಾಹ್ಯವಾಗಿ "ಸುತ್ತೋಲೆಗಳು" ಎಂದು ಸೂಚಿಸಲಾಗುವುದು), ಅನ್ವಯ ವಾರ್ಷಿಕ ಸರ್ವಸದಸ್ಯರ ಸಭೆಯನ್ನು ವಿಸಿ ಮೂಲಕ, ಒಂದು ಸ್ಥಳದಲ್ಲಿ ಸದಸ್ಯರು ಭೌತಿಕ ಉಪಸ್ಥಿತಿಯಿಲ್ಲದೆ ನಡೆಸಲು ಅನುವುಮಾಡಿಕೊಡುತ್ತವೆ. ಕಂಪನಿಗಳ ಕಾಯ್ದೆ, 2013 ರ ಸೆಕ್ಷನ್ 102 ಅಡಿ ವಿವರಣಾತ್ಮಕ ಹೇಳಿಕೆಯೊಂದಿಗೆ ಎಜಿಎಂ ನ ಸೂಚನೆ ಮತ್ತು ವಾರ್ಷಿಕ ವರದಿ 2024-25 ಅನ್ನು ಕಂಪನಿಯ ಸದಸ್ಯರಿಗೆ ಎಲೆಕ್ಟ್ರಾನಿಕ್ ಮೀನ್ಸ್ ಮೂಲಕ ಕಳುಹಿಸಲಾಗುತ್ತದೆ, ಇವರ ಇ-ಮೇಲ್ ವಿಳಾಸಗಳು ಕಂಪನಿ/ ನೋಂದಾಯಕರ ಮತ್ತು ಪಾಲ್ ಹಂಚಿಕೆ ಏಜೆಂಟ್ ('RTA')/ ಠೇವಣಿ ಭಾಗವಹಿಸುವವರು ('**ಡಿಪಿಎಸ್**'). ('DPs') ಇಲ್ಲಿ ನೋಂದಾಯಿಸಲಾಗಿದೆ.

ಕಂಪನಿ ಅಥವಾ ಡಿಪಾಸಿಟರಿಗಳೊಂದಿಗೆ ತಮ್ಮ ಇಮೇಲ್ ವಿಳಾಸವನ್ನು ನೋಂದಾಯಿಸದ ಸದಸ್ಯರಿಗೆ 2024-25ನೇ ಆರ್ಥಿಕ ವರ್ಷದ ಸಮಗ್ರ ವಾರ್ಷಿಕ ವರದಿಯನ್ನು ಪ್ರವೇಶಿಸಲು ವೆಬ್ ಲಿಂಕ್ ಒದಗಿಸುವ ಪತ್ರವನ್ನು ಕಳುಹಿಸಲಾಗುವುದು.

ವೆಬ್‌ಸೈಟ್‌ನಲ್ಲಿ ಪ್ರಸಾರ:

ಕಂಪನಿಯ ವಾರ್ಷಿಕ ವರದಿ 2024-25ರ ಎಲೆಕ್ಟ್ರಾನಿಕ್ ಪ್ರತಿ, ನೋಟಿಸ್ ಮತ್ತು ಎಜಿಎಂನ ವಿವರಣಾತ್ಮಕ ಹೇಳಿಕೆಯನ್ನು ಕಂಪನಿಯ ವೆಬ್‌ಸೈಟ್ www.sjsindia.com ಷೇರು ವಿನಿಮಯ ಕೇಂದ್ರಗಳ ವೆಬ್‌ಸೈಟ್‌ಗಳಲ್ಲಿ ಲಭ್ಯವಿರುತ್ತದೆ. BSE ಲಿಮಿಟೆಡ್ www.bseindia.com ಮತ್ತು www.nseindia.com ನಲ್ಲಿ ಇಂಡಿಯಾ ಲಿಮಿಟೆಡ್‌ನ ನ್ಯಾಷನಲ್ ಸ್ಟಾಕ್ ಎಕ್ಸ್ಚೇಂಜ್ ಮತ್ತು https://instavote.linkintime.co.in ನಲ್ಲಿ MUFG ಇಂಟೈಮ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ('MIIPL') ವೆಬ್‌ಸೈಟ್‌ಗಳಲ್ಲಿ ಲಭ್ಯವಿರುತ್ತದೆ.

ಇ-ಮೇಲ್ ವಿಳಾಸದ ನೋಂದಣಿ ವಿಧಾನ:

ಡಿಮ್ಯಾಟ್ ಷೇರುದಾರರು	ಡಿಪಿ ಸೂಚಿಸಿದ ಕಾರ್ಯವಿಧಾನವನ್ನು ಅನುಸರಿಸುವ ಮೂಲಕ ಷೇರುದಾರರು ತಮ್ಮ ಇ-ಮೇಲ್ ವಿಳಾಸವನ್ನು ಆಯಾ ಡಿಪಿಯೊಂದಿಗೆ ಡಿಮ್ಯಾಟ್ ಹೋಲ್ಡಿಂಗ್ಗಳಿಗೆ ಸಂಬಂಧಿಸಿದಂತೆ ನೋಂದಾಯಿಸಲು ಕೋರಲಾಗಿದೆ.
ಭೌತಿಕ ಷೇರುದಾರರು	ಹೆಸರು, ಫೋಲಿಯೊ ಸಂಖ್ಯೆ, ಸ್ವಯಂ-ಗುರುತಿಸಿದ ಪ್ಯಾನ್‌ನ ಸ್ಕ್ಯಾನ್ ನಕಲು, ಸದಸ್ಯರ ಹೆಸರು ಇರುವ ರದ್ದುಗೊಂಡ ಚೆಕ್ ಪುಟ ಮತ್ತು ಭೌತಿಕ ಷೇರು ಪ್ರಮಾಣಪತ್ರದ ನಕಲನ್ನು MIIPL ಗೆ enotices@in.in.mpms.mufg.com ನಲ್ಲಿ ಉಲ್ಲೇಖಿಸುವ ವಿನಂತಿಯ ಪತ್ರದೊಂದಿಗೆ ಇ-ಮೇಲ್ ಬರೆಯಿರಿ.

ಮತ ಚಲಾಯಿಸುವ ವಿಧಾನ:

ತಮ್ಮ ಇಮೇಲ್ ವಿಳಾಸವನ್ನು ನೋಂದಾಯಿಸದ ಷೇರುದಾರರಿಗೆ ಸರ್ವಸದಸ್ಯರ ಸಭೆಯ ಸೂಚನೆಯಲ್ಲಿ ತಿಳಿಸಿರುವಂತೆ ಹೇಳಲಾಗುವ ವ್ಯಾಪಾರ ವಹಿವಾಟುಗಳನ್ನು ನಿರ್ವಹಿಸುವ ಕುರಿತಾಗಿ ವಿದ್ಯುನ್ಮಾನ ಮತದಾನ ವ್ಯವಸ್ಥೆಯ ಮೂಲಕ ಸದರಿ ಇ-ವೋಟಿಂಗ್ ಮಾಡಲು ಅವಕಾಶವಿರುತ್ತದೆ. ಕಂಪನಿಯ ಷೇರುಗಳನ್ನು ಡಿಮೆಟಿರಿಯಲೈಸ್ಡ್ ಮತ್ತು ಭೌತಿಕ ರೂಪದಲ್ಲಿ ಹೊಂದಿರುವ ಷೇರುದಾರರಿಗೆ ಮತ ಚಲಾಯಿಸುವ ವಿಧಾನವನ್ನೂ ಸಹ ಸರ್ವಸದಸ್ಯರ ಸಭೆಯ ಸೂಚನೆಗಳಲ್ಲಿ ಒದಗಿಸಲಾಗಿರುವುದು

ಒಂದು ವೇಳೆ ಇ-ಮೇಲ್ ID ಅನ್ನು ಕಂಪನಿ/ RTA/ DP ಯೊಂದಿಗೆ ನೋಂದಾಯಿಸಲಾಗಿದೆ	ವಿವರವಾದ ಕಾರ್ಯವಿಧಾನ W.R.T. ಇ-ಮತದಾನವನ್ನು ನೋಂದಾಯಿತ ಇ-ಮೇಲ್ ಐಡಿಗೆ ಕಳುಹಿಸಲಾಗುತ್ತದೆ ಮತ್ತು ಎಜಿಎಂ ನೋಟಿಸ್‌ನಲ್ಲಿ ಸಹ ಲಭ್ಯವಿರುತ್ತದೆ.
ಒಂದು ವೇಳೆ ಷೇರುಗಳನ್ನು ಭೌತಿಕ ರೂಪದಲ್ಲಿ ಅಥವಾ ಇ-ಮೇಲ್ ID ಯಲ್ಲಿ ಕಂಪನಿಯು/ RTA/ DP ಯೊಂದಿಗೆ ನೋಂದಾಯಿಸಲಾಗಿಲ್ಲ	ವಿವರವಾದ ಕಾರ್ಯವಿಧಾನ W.R.T. ಇ-ಮತದಾನವು ಎಜಿಎಂ ನೋಟಿಸ್‌ನಲ್ಲಿ ಲಭ್ಯವಿರುತ್ತದೆ.

ಕಟ್-ಆಫ್ ದಿನಾಂಕದಂತೆ ಕಂಪನಿಯ ಸದಸ್ಯರ ರಿಜಿಸ್ಟರ್‌ನಲ್ಲಿ ಅವರ ಹೆಸರನ್ನು ದಾಖಲಿಸಲಾಗಿದೆ, ಅಂದರೆ 09 ಜುಲೈ 2025, ಎಜಿಎಂನಲ್ಲಿ ರಿಮೋಟ್ ಇ-ಮತ ಚಲಾಯಿಸುವ ಅಥವಾ ಮತದಾನದ ಮೂಲಕ ಇ-ಮತದಾನದ ಸೌಲಭ್ಯವನ್ನು ಪಡೆಯಲು ಮಾತ್ರ ಅರ್ಹತೆ ಇರುತ್ತದೆ.

ರೆಕಾರ್ಡ್ ದಿನಾಂಕ ಮತ್ತು ಲಾಭಾಂಶ:

ದಿನಾಂಕ ಮೇ 08, 2025 ರಂದು ನಡೆದ ನಿರ್ದೇಶಕರ ಮಂಡಳಿಯ ಸಭೆಯಲ್ಲಿ ಮಾರ್ಚ್ 31, 2025ಕ್ಕೆ ಕೊನೆಗೊಂಡ ಆರ್ಥಿಕ ವರ್ಷದಲ್ಲಿ ಅಂತಿಮ ಲಾಭಾಂಶದ ಪ್ರತಿ ಷೇರಿಗೆ ₹2.50/- ಶಿಫಾರಸು ಮಾಡಿದ್ದನ್ನು ಷೇರುದಾರರು ಗಮನಿಸಬಹುದಾಗಿದೆ. 2025ರ ಆರ್ಥಿಕ ವರ್ಷದ ಅಂತಿಮ ಲಾಭಾಂಶದ ದಾಖಲಾತಿ ದಿನವು ಜುಲೈ 09, 2025 ಆಗಿರುತ್ತದೆ. ಬರಲಿರುವ ವಾರ್ಷಿಕ ಸರ್ವಸದಸ್ಯರ ಸಭೆಯಲ್ಲಿ ಲಾಭಾಂಶ ಸ್ವೀಕರಿಸುವುದು ತಡವಾಗುವುದನ್ನು ತಪ್ಪಿಸಲು ಷೇರುದಾರರು, ಲಾಭಾಂಶವನ್ನು ನೇರವಾಗಿ ತಮ್ಮ ಬ್ಯಾಂಕ್ ಖಾತೆಯಲ್ಲಿ ಪಡೆದುಕೊಳ್ಳಲು ತಮ್ಮ ಕೆವೈಸಿಯನ್ನು ತಮ್ಮ ಡಿಪಾಸಿಟರಿಗಳಲ್ಲಿ (ಎಲ್ಲಿ ಷೇರುಗಳನ್ನು ಡಿಮೆಟಿರಿಯಲೈಸ್ಡ್ ರೂಪದಲ್ಲಿ ಹೊಂದಿದ್ದಾರೋ ಅಲ್ಲಿ) ಮತ್ತು ಕಂಪನಿಯ ಆರ್‌ಟಿಎ ಬಳಿ (ಷೇರುಗಳನ್ನು ಭೌತಿಕ ರೂಪದಲ್ಲಿ ಹೊಂದಿರುವವರು) ನೋಂದಾಯಿಸಲು ಕೋರಲಾಗಿದೆ.

ಲಾಭಾಂಶವನ್ನು ಸ್ವೀಕರಿಸಲು ಬ್ಯಾಂಕ್ ಖಾತೆ ವಿವರಗಳನ್ನು ನವೀಕರಿಸುವ ಪ್ರಕ್ರಿಯೆ:

ಎಲೆಕ್ಟ್ರಾನಿಕ್ ಕ್ಲಿಯರಿಂಗ್ ಸೇವೆ ಅಥವಾ ಇನ್ನಾವುದೇ ವಿಧಾನಗಳ ಮೂಲಕ ತಮ್ಮ ಬ್ಯಾಂಕ್ ಖಾತೆಗಳಲ್ಲಿ ನೇರವಾಗಿ ಲಾಭಾಂಶವನ್ನು ಸ್ವೀಕರಿಸಲು ತಮ್ಮ ಬ್ಯಾಂಕ್ ಖಾತೆ ವಿವರಗಳನ್ನು ನವೀಕರಿಸದ ಸದಸ್ಯರು ಕೆಳಗಿನ ಸೂಚನೆಗಳನ್ನು ಅನುಸರಿಸಬಹುದು:

ಭೌತಿಕ ರೂಪದಲ್ಲಿ ಷೇರುಗಳನ್ನು ಹೊಂದಿರುವ	ವಿವರಗಳನ್ನು ನೋಂದಾಯಿಸಿ/ನವೀಕರಿಸಿ ಐಎಸ್‌ಆರ್ - 1 ಮತ್ತು ಇತರ ಸಂಬಂಧಿತ ಫಾರ್ಮ್‌ಗಳನ್ನು ಆರ್‌ಟಿಎ ಮತ್ತು ಆರ್‌ಟಿಎ ವೆಬ್‌ಸೈಟ್‌ನಲ್ಲಿ https://web.in.mpms.mufg.com/KYC-downloads.html ನಲ್ಲಿ ಲಭ್ಯವಿದೆ. ದಯವಿಟ್ಟು ಗಮನಿಸಿ: ಏಪ್ರಿಲ್ 1, 2024 ರಿಂದ ಜಾರಿಗೆ ಬರುವಂತೆ ಅನ್ವಯವಾಗುವ ಸೆಬಿ ವೃತ್ತಾಕಾರಗಳಿಗೆ ಅನುಗುಣವಾಗಿ, ಭೌತಿಕ ರೂಪದಲ್ಲಿ ಷೇರುಗಳನ್ನು ಹೊಂದಿರುವ ಷೇರುದಾರರಿಗೆ ಲಾಭಾಂಶವನ್ನು ಕಂಪನಿಯು ಎಲೆಕ್ಟ್ರಾನಿಕ್ ಮೂಲಕ ಮಾತ್ರ ಪಾವತಿಸುತ್ತದೆ. ಕಂಪನಿ ಅಥವಾ ಆರ್‌ಟಿಎಯೊಂದಿಗೆ ಅನುಗುಣವಾದ ಭೌತಿಕ ಫೋಲಿಯೊಗಳಿಗಾಗಿ ಅರ್ಹ ಷೇರುದಾರರು ತಮ್ಮ ಪ್ಯಾನ್, ಸಂಪರ್ಕ ವಿವರಗಳು (ಪಿನ್ ಮತ್ತು ಮೊಬೈಲ್ ಸಂಖ್ಯೆಯೊಂದಿಗೆ ಅಂಚೆ ವಿಳಾಸ), ಬ್ಯಾಂಕ್ ಖಾತೆ ವಿವರಗಳು, ಮಾದರಿ ಸಹಿ ಇತ್ಯಾದಿಗಳನ್ನು ಒದಗಿಸಿದ ನಂತರವೇ ಅಂತಹ ಪಾವತಿಗಳನ್ನು ಮಾಡಲಾಗುವುದು.
ಡಿಮ್ಯಾಟ್ ರೂಪದಲ್ಲಿ ಷೇರುಗಳನ್ನು ಹೊಂದಿರುವ ಸದಸ್ಯರು	ನಿಮ್ಮ ಠೇವಣಿ ಭಾಗವಹಿಸುವವರು ಸಲಹೆ ನೀಡಿದ ಪ್ರಕ್ರಿಯೆಯ ಪ್ರಕಾರ, ನಿಮ್ಮ ಡಿಮ್ಯಾಟ್ ಖಾತೆಯಲ್ಲಿ ವಿವರಗಳನ್ನು ನೋಂದಾಯಿಸಿ/ನವೀಕರಿಸಿ.

ಲಾಭಾಂಶದ ಮೇಲಿನ ತೆರಿಗೆ:

ಆದಾಯ ತೆರಿಗೆ ಕಾಯ್ದೆ, 1961 ರ ಪ್ರಕಾರ, ಹಣಕಾಸು ಕಾಯ್ದೆ, 2020 ರಿಂದ ತಿದ್ದುಪಡಿ ಮಾಡಿದಂತೆ, ಏಪ್ರಿಲ್ 01, 2020 ರ ನಂತರ ಕಂಪನಿಯು ಪಾವತಿಸಿದ ಅಥವಾ ವಿತರಿಸಿದ ಯಾವುದೇ ಲಾಭಾಂಶವು ಸದಸ್ಯರ ಕೈಯಲ್ಲಿ ತೆರಿಗೆಗೆ ಒಳಪಟ್ಟಿರುತ್ತದೆ ಮತ್ತು ಕಂಪನಿಯು ಕಾನೂನಿನ ಪ್ರಕಾರ ನಿಗದಿಪಡಿಸಿದ ದರಗಳಲ್ಲಿ ಮೂಲವನ್ನು ("ಟಿಡಿಎಸ್") ಕಡಿತಗೊಳಿಸುವ ಅಗತ್ಯವಿರುತ್ತದೆ ಎಂದು ಸದಸ್ಯರು ಗಮನಿಸಬಹುದು. ನಿಗದಿತ ದರದಲ್ಲಿ ಷೇರುದಾರರಿಗೆ ಪಾವತಿಸಿದ ಲಾಭಾಂಶದಿಂದ ತೆರಿಗೆಯನ್ನು ತಡೆಹಿಡಿಯುವ ಪ್ರಕ್ರಿಯೆಯನ್ನು ವಿವರಿಸಲು, ಕಂಪನಿಯು ಜೂನ್ 11 ರಂದು 2025 ರ ದಿನಾಂಕದ ಇಮೇಲ್ ಸಂವಹನವನ್ನು ಕಳುಹಿಸಿದೆ, ಅವರ ಇಮೇಲ್ ಐಡಿಗಳನ್ನು ಕಂಪನಿ/ ಠೇವಣಿಗಳಲ್ಲಿ ನೋಂದಾಯಿಸಲಾಗಿದೆ. ಸಂವಹನವು ಅಗತ್ಯ ಅನುಬಂಧಗಳನ್ನು ಸಹ ಒಳಗೊಂಡಿದೆ.

ದಿನಾಂಕ: 13 ಜೂನ್, 2025 ಎಸ್.ಜೆ.ಎಸ್. ಎಂಟರ್‌ಪ್ರೈಸಸ್ ಲಿಮಿಟೆಡ್ ಪರವಾಗಿ
ಸ್ಥಳ: ಬೆಂಗಳೂರು **Sd/-**
ಥಬ್ರಾಜ್ ಹುಶ್ಯೆನ್ ಡಬ್ಲ್ಯೂ.
ಕಂಪನಿ ಕಾರ್ಯದರ್ಶಿ
ಸದಸ್ಯತ್ವ ಸಂಖ್ಯೆ ಎ51119

CONCEPT

ಸ್ವಾಧೀನ ಸೂಚನೆ
(ಸ್ಥಿರ ಆಸ್ತಿಗಾಗಿ)

ಈ ಕಾರಣದಿಂದ,

ಸಮ್ಮಾನ್ ಫಿನ್ಸರ್ವ್ ಲಿಮಿಟೆಡ್ (CIN:U65923DL2006PLC150632) (ಈಗಿನ ಹೆಸರು: **ಇಂಡಿಯಾಬುಲ್ಸ್ ಕಮರ್ಷಿಯಲ್ ಕ್ರೆಡಿಟ್ ಲಿಮಿಟೆಡ್**) ನ ಅಧಿಕಾರ ಕೊಟ್ಟಿರುವ ಅಧಿಕಾರಿಯ ಹಸ್ತಾಕ್ಷರವಿರುವ ಐಹಿಕತೆ ಮತ್ತು ಪುನರ್ ನಿರ್ಮಾಣ ಮತ್ತು ಫೈನಾನ್ಸ್‌ನ ಸಾಲ ತೀರಿಸಲು ಇರುವ ಸ್ವತ್ತು ಮತ್ತು ಎನ್‌ಪೋರ್ಸ್‌ಮೆಂಟ್ ಅಫ್ ಸೆಕ್ಯೂರಿಟಿಸ್ ಆಕ್ಟ್ 2002 ಮತ್ತು ಅಧಿಕಾರದ ಪ್ರಯೋಗ ಮಾಡುವಿಕೆಯ ಸೆಕ್ಷನ್ 13 (12) ನಿಯಮ 3 ರ ಸೆಕ್ಯೂರಿಟಿಸ್ (ಎನ್‌ಪೋರ್ಸ್‌ಮೆಂಟ್) ನಿಯಮ, 2002 ದೊಂದಿಗೆ ಓದಿರಿ. ಬೇಡಿಕಯ ಸೂಚನೆ ಮುಲಕ ಪ್ರಕಟಿಸಿದ ತಾರೀಖು **14.10.2024** ರಂದು ಕರೆದು ಸಾಲಗಾರ **ಜಾವೀದ್ ಹುಸೇನ್, ವಿಕ್ವಾರ್ ಯೂನಸ್ ಮತ್ತು ಅಮೀನಾ ಬೇಗಂ** ನೋಟಿಸಿನಲ್ಲಿ ಹೇಳಿರುವಂತೆ ಮರುಪಾವತಿಸಬೇಕಾದ **ರೂ. 1,41,21,446.37 (ಒಂದು ಕೋಟಿ ನಲವತ್ತೊಂದು ಲಕ್ಷ ಇಪ್ಪತ್ತೊಂದು ಸಾವಿರದ ನಾಲ್ಕು ನೂರ ನಲವತ್ತಾರು ರೂಪಾಯಿಗಳು ಮತ್ತು ಮೂವತ್ತೇಳು ಪೈಸೆ ಮಾತ್ರ)** ಸಾಲ ಖಾತೆ ನಂ. **HLLAMYS00472083** ಈ ಲೋನ್ ಅಕೌಂಟ್‌ಗೆ ಸಂಬಂಧಿಸಿದಂತ, ಹೇಳಲಾಗಿರುವ ನೋಟಿಸ್ ನಿಮ್ಮನ್ನು ತಲುಪಿ 60 ದಿನಗಳಾಗುವುದರೊಳಗೆ **09.10.2024** ರ ವರೆಗಿನ ಮೊತ್ತ ಮತ್ತು ಅದರ ಮೇಲಿನ ಬಡ್ಡಿ.

ಸಾಲಗಾರ (ರು) ಮೊತ್ತವನ್ನು ಮರುಪಾವತಿಸಲು ವಿಫಲರಾದ ಕಾರಣ, ಕೆಳಗೆ ಸಹಿ ಮಾಡಿದವರು ಉಪ-ಅಧಿಕಾರದ ಅಡಿಯಲ್ಲಿ ತನಗೆ ನೀಡಿರುವ ಅಧಿಕಾರವನ್ನು ಚಲಾಯಿಸುವ ಮೂಲಕ ಕೆಳಗೆ ವಿವರಿಸಿದ ಆಸ್ತಿಯ **ಸಾಂಕೇತಿಕ ಸ್ವಾಧೀನ** ವನ್ನು ತೆಗೆದುಕೊಂಡಿದ್ದಾರೆ ಎಂದು ಈ ಮೂಲಕ ಸಾಲಗಾರರಿಗೆ (ರು) ಮತ್ತು ಸಾರ್ವಜನಿಕರಿಗೆ ಸೂಚನೆಯನ್ನು ನೀಡಲಾಗಿದೆ. ಕಾಯಿದೆಯ ಸೆಕ್ಷನ್ 13 ರ ವಿಭಾಗ (4) ಅನ್ನು **10.06.2025** ರಂದು ಭದ್ರತಾ ಆಸಕ್ತಿ (ಎನ್ಫೋರ್ಸ್ಮೆಂಟ್) ನಿಯಮಗಳು, 2002 ರ ನಿಯಮ 8 ರೊಂದಿಗೆ ಓದಲಾಗಿದೆ.

ಪ್ರತ್ಯೇಕವಾಗಿ ಸಾಲಗಾರರಿಗೆ ಮತ್ತು ಸರ್ವಸಾಮಾನ್ಯವಾದ ಸಾರ್ವಜನಿಕರ ಎಚ್ಚರಿಕೆಗಾಗಿ ಯಾವುದೇ ತರಹದ ಅಸ್ತಿ ವ್ಯವಹಾರವು ಮಾಡದಿರಲು ಮತ್ತು ಆಸ್ತಿಯಲ್ಲಿನ ಯಾವುದೇ ವ್ಯವಹಾರವು **ಸಮ್ಮಾನ್ ಫಿನ್ಸರ್ವ್ ಲಿಮಿಟೆಡ್** (ಈಗಿನ ಹೆಸರು: **ಇಂಡಿಯಾಬುಲ್ಸ್ ಕಮರ್ಷಿಯಲ್ ಕ್ರೆಡಿಟ್ ಲಿಮಿಟೆಡ್**)ಬಾಕಿ ಇರುವ ಮೊತ್ತ **ರೂ. 1,41,21,446.37 (ಒಂದು ಕೋಟಿ ನಲವತ್ತೊಂದು ಲಕ್ಷ ಇಪ್ಪತ್ತೊಂದು ಸಾವಿರದ ನಾಲ್ಕು ನೂರ ನಲವತ್ತಾರು ರೂಪಾಯಿಗಳು ಮತ್ತು ಮೂವತ್ತೇಳು ಪೈಸೆ ಮಾತ್ರ) 09.10.2024** ವರೆಗಿನ ಮೊತ್ತ ಮತ್ತು ಜೊತೆಗೆ ಅದರ ಮೇಲಿನ ಬಡ್ಡಿಗೆ ಒಳಪಟ್ಟಿದೆ.

ಸೆಕ್ಯೂರ್ಡ್ ಆಸ್ತಿಗಳನ್ನು ರಿಡೀಮ್ ಮಾಡಲು ಉಪಲಬ್ದವಿರುವ ಸಮಯದ ಬಗ್ಗೆ ಸಾಲಗಾರರ ಗಮನವನ್ನು ಕಾಯ್ದೆಯ ಸೆಕ್ಷನ್ 13ರ ಉಪ-ಸೆಕ್ಷನ್ (8) ಪ್ರಾವಧಾನಗಳತ್ತ ಸೆಳೆಯಲಾಗುತ್ತದೆ.

ಸ್ಥಿರಾಸ್ತಿಯ ವರ್ಣನೆ

ಆ ಎಲ್ಲಾ ಆಸ್ತಿಯ ತುಣುಕು ಮತ್ತು ಪಾರ್ಸೆಲ್, ಸೈಟ್ ಮತ್ತು ಆರ್.ಸಿ.ಸಿ. ಅಂಗಡಿ ಕಟ್ಟಡವನ್ನು ಒಳಗೊಂಡಿದೆ, ನೆಲಮಾಳಿಗೆ ನೆಲಮಾಳಿಗೆ, ನೆಲಮಾಳಿಗೆ ಮತ್ತು ಮೊದಲ ಮಹಡಿ ಭಾಗಗಳನ್ನು ಹೊಂದಿದ್ದು, ಸುಭಾಷ್ ಸ್ಕ್ವೇರ್ ಮುಖ್ಯ ರಸ್ತೆ, ಹಾಸನ ನಗರ, ಬೇರಿಂಗ್ ಡೋರ್ ಸಂ 25, ಹಳೆಯ ಖಾತಾ ಸಂ 600, 660, 661 ಮತ್ತು ಎಸ್.ಎ.ಎಸ್ ಸಂ 401 ಬೇರಿಂಗ್ ಪ್ರಾಪರ್ಟಿ ಐಡಿ ಸಂ 23-1-508-25, ವಾರ್ಡ್ ಸಂ 23, ಶರೀಫ್ ಕಾಲೋನಿ ಆಫ್ ಸಿಟಿ ಮುನ್ಸಿಪಲ್ ಕೌನ್ಸಿಲ್, ಹಸನ್, ಪೂರ್ವದಿಂದ ಪಶ್ಚಿಮಕ್ಕೆ ಅಳತೆ ಮಾಡುವ ಸ್ಥಳ 10.668021 ಮೀಟರ್ (35 ಅಡಿ) ಮತ್ತು ದಕ್ಷಿಣಕ್ಕೆ ಉತ್ತರಕ್ಕೆ: 6.096012 ಮೀಟರ್ (20 ಅಡಿ) ಅಂದರೆ, 65.0323 ಚದರ ಮೀಟರ್ ಮತ್ತು ನೆಲಮಾಳಿಗೆಯಲ್ಲಿ ಆರ್.ಸಿ.ಸಿ. ಅಂಗಡಿ ಕಟ್ಟಡಗಳನ್ನು ಹೊಂದಿದೆ. 55.7418 ಚದರ ಮೀಟರ್ ಮತ್ತು ಆರ್.ಸಿ.ಸಿ. ನೆಲಮಾಳಿಗೆಯಲ್ಲಿ ಅಂಗಡಿ ಕಟ್ಟಡವನ್ನು ಹೊಂದಿದೆ. 55.7418 ಚದರ ಮೀಟರ್ ಮತ್ತು ಆರ್.ಸಿ.ಸಿ. ಅಂಗಡಿ ಕಟ್ಟಡವನ್ನು ಹೊಂದಿದೆ. ಮೊದಲ ಮಹಡಿಯಲ್ಲಿ ಕಟ್ಟಡ ಅಳತೆ 55.7418 ಚದರ ಮೀಟರ್ ಮತ್ತು ಸಂಪೂರ್ಣ ಆರ್.ಸಿ.ಸಿ. ಕಟ್ಟಡ ಒಟ್ಟು ಅಳತೆ 167.2254 ಚದರ ಮೀಟರ್ ಹಸನ್ - 5732101, ಕರ್ನಾಟಕದಲ್ಲಿ ಮೊಸಾಯಿಕ್ ನೆಲಹಾಸನ್ನು ಹೊಂದಿರುವ ಮತ್ತು ಸಂಪೂರ್ಣ ಆಸ್ತಿಯನ್ನು ಈ ಕೆಳಗಿನಂತೆ ಬಂಧಿಸಲಾಗಿದೆ:-

ಪೂರ್ವದಲ್ಲಿ : ಸುಭಾಷ್ ಸ್ಕ್ವೇರ್ ಮುಖ್ಯ ರಸ್ತೆ
ಪಶ್ಚಿಮದಲ್ಲಿ : ಹಳೆಯ ತರಕಾರಿ ಮಾರುಕಟ್ಟೆ ಪ್ರದೇಶ
ಉತ್ತರದಲ್ಲಿ : ಶ್ರೀಮತಿ ಕುಸುಮಾಂಭ ಅವರ ಆಸ್ತಿ
ದಕ್ಷಿಣದಲ್ಲಿ : ಸಂರಕ್ಷಣಾವಾದವು ಹಳೆಯ ತರಕಾರಿ ಮಾರುಕಟ್ಟೆಯತ್ತ ಸಾಗುತ್ತಿದೆ

ಅಧಿಕಾರವಿರುವ ಅಧಿಕಾರಿ
ದಿನಾಂಕ : 10.06.2025 **ಸಮ್ಮಾನ್ ಫಿನ್ಸರ್ವ್ ಲಿಮಿಟೆಡ್**
ಸ್ಥಳ : ಹಸನ್ (ಈಗಿನ ಹೆಸರು: **ಇಂಡಿಯಾಬುಲ್ಸ್ ಕಮರ್ಷಿಯಲ್ ಕ್ರೆಡಿಟ್ ಲಿಮಿಟೆಡ್**)

ನಗರಾಭಿವೃದ್ಧಿ ಮತ್ತು ನಗರ ಯೋಜನೆ ಇಲಾಖೆಯಿಂದ ನೀಲನಕ್ಷೆ

ನವ ಮೈಸೂರು ನಿರ್ಮಾಣ ಯೋಜನೆ ಅನುಷ್ಠಾನಕ್ಕೆ ಚಿಂತನೆ

ಬೆಂಗಳೂರು: ಸಾಂಸ್ಕೃತಿಕ ನಗರ ಮೈಸೂರನ್ನು ಸುಸಜ್ಜಿತವಾಗಿಸುವ ನಿಟ್ಟಿನಲ್ಲಿ ರಾಜ್ಯ ಸರಕಾರ ಮಹತ್ವಾಕಾಂಕ್ಷೆಯ 'ನವ ಮೈಸೂರು ನಿರ್ಮಾಣ' ಯೋಜನೆ ಅನುಷ್ಠಾನಗೊಳಿಸಲು ಗಂಭೀರ ಚಿಂತನೆ ನಡೆದಿದೆ ಎಂದು ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವ ಬೈರತಿ ಸುರೇಶ್ ಹೇಳಿದರು.

ಈ ಸಂಬಂಧ ಗುರುವಾರ ಬೆಂಗಳೂರಿನಲ್ಲಿ ಉನ್ನತ ಮಟ್ಟದ ಸಭೆ ನಡೆಸಿದ ಅವರು, ಮೈಸೂರಿನ ಸುತ್ತಮುತ್ತಲಿನ ಪ್ರದೇಶಗಳನ್ನು ನಗರ ವ್ಯಾಪ್ತಿಗೆ ತಂದು ಸರ್ವಾಂಗೀಣ ಅಭಿವೃದ್ಧಿಗೆ ಪೂರಕವಾದ ಯೋಜನೆಗಳನ್ನು ಸಿದ್ಧಪಡಿಸಲಾಗುತ್ತಿದೆ. ರಾಜಧಾನಿ ಬೆಂಗಳೂರಿನಂತೆಯೇ ಮೈಸೂರು ಸಹ ವೇಗವಾಗಿ ನಡೆಯುತ್ತಿರುವ ನಗರವಾಗಿದೆ. ಇಲ್ಲಿ ಐಟಿ, ಬಿಟಿ ಸೇರಿದಂತೆ ಕೈಗಾರಿಕೆಗಳು, ವಸತಿ ಯೋಜನೆಗಳು ಹೆಚ್ಚಾಗುತ್ತಿವೆ. ಈ ಹಿನ್ನೆಲೆಯಲ್ಲಿ ನಗರ ವಿಸ್ತರಣೆಯಾಗುತ್ತಿದ್ದು, ಇದಕ್ಕೆ ಪೂರಕವಾಗಿ ಸಮಗ್ರ ಯೋಜನೆ ಸಿದ್ಧಪಡಿಸುವತ್ತ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರಕಾರ ಗಮನಹರಿಸಿದೆ ಎಂದು ತಿಳಿಸಿದರು.

ಉದ್ದೇಶಿತ ಯೋಜನೆಯಲ್ಲಿ ಏನಿರಲಿದೆ?

ನವ ಮೈಸೂರು ನಿರ್ಮಾಣ ಯೋಜನೆಗೆ ಪ್ರಮುಖವಾಗಿ ಐದು ಆಧಾರ ಸ್ತಂಭಗಳನ್ನು ಗುರುತಿಸಲಾಗಿದೆ. ಉದ್ಯಮ ಮೈಸೂರು, ನಿಪುಣ ಮೈಸೂರು, ಸುಖೀವಾಸ ಮೈಸೂರು, ಪ್ರವಾಸೋದ್ಯಮ ಮೈಸೂರು ಮತ್ತು ಸಂಚಾರ ಮೈಸೂರು ಎಂಬ ಪ್ರಮುಖವಾದ ಕ್ಷೇತ್ರಗಳನ್ನು ಅಭಿವೃದ್ಧಿಪಡಿಸುವ ಉದ್ದೇಶ ಹೊಂದಲಾಗಿದೆ. ಉದ್ಯಮ ಮೈಸೂರು ಕ್ಷೇತ್ರದ ಯೋಜನೆಯಲ್ಲಿ ಅತ್ಯಾಧುನಿಕ ಉತ್ಪಾದನಾ ಹಬ್ ಸ್ಥಾಪನೆ ಮಾಡಿ, ಸಮಗ್ರ ಅಭಿವೃದ್ಧಿಗೆ ಒತ್ತು ನೀಡುವುದು. ನಿಪುಣ ಮೈಸೂರು ವಲಯ ಸ್ಥಾಪಿಸಿ ಇದರ ಮೂಲಕ ಕೌಶಲ್ಯ ತರಬೇತಿ ಮತ್ತು ಕೌಶಲ್ಯಾಧಾರಿತ ಉದ್ಯೋಗಗಳಿಗೆ ಆದ್ಯತೆ ನೀಡುವುದು, ಉದ್ಯಮಶೀಲತ್ವ ವಿವಿ ಸ್ಥಾಪನೆ ಮಾಡುವುದು. ಸುಖೀವಾಸದಡಿಯಲ್ಲಿ ಸುಸಜ್ಜಿತ ಸಮಗ್ರ ಟೆಕ್ ಸಿಟಿ ನಿರ್ಮಾಣ, ಪ್ರವಾಸೋದ್ಯಮ ಮೈಸೂರು ಅಡಿಯಲ್ಲಿ ಸಮಗ್ರ, ಆರೋಗ್ಯ, ಕ್ಷೇಮ ಮತ್ತು ಪುನಶ್ಚೇತನ ಕೇಂದ್ರದ ಆರಂಭ ಮತ್ತು ಸಂಚಾರ ಮೈಸೂರು ಎಂಬ ಹೆಸರಿನ ಯೋಜನೆಯಡಿ ಮೈಸೂರು ಮೆಟ್ರೋ ಯೋಜನೆ ಪ್ರಸ್ತಾಪಿಸಲಾಗಿದೆ. ಸಮಗ್ರ ಯೋಜನೆಯನ್ನು ಪಿಪಿಪಿ ಮಾದರಿಯಲ್ಲಿ ಅನುಷ್ಠಾನಗೊಳಿಸುವ ಬಗ್ಗೆ ಚಿಂತನೆ ನಡೆಸಲಾಗಿದೆ. ಹೀಗಾಗಿ ಸರಕಾರದ ಮೇಲೆ ಯಾವುದೇ ಆರ್ಥಿಕ ಹೊರೆ ಬೀಳುವುದಿಲ್ಲ. ಖಾಸಗಿ ಸಂಸ್ಥೆಗಳ ಸಹಭಾಗಿತ್ವದಲ್ಲಿ ಅನುಷ್ಠಾನಕ್ಕೆ ತಂದು ಸಾಂಸ್ಕೃತಿಕ ನಗರವನ್ನು ಸಮಗ್ರ ಅಭಿವೃದ್ಧಿಪಡಿಸುವ ಉದ್ದೇಶವನ್ನು ಯೋಜನೆ ಹೊಂದಿದೆ ಎಂದು ಸಚಿವರು ತಿಳಿಸಿದರು.

ನವ ಮೈಸೂರು ನಿರ್ಮಾಣ ಯೋಜನೆ ಕುರಿತಾಗಿ ಸಚಿವ ಬಿ.ಎಸ್.ಸುರೇಶ್ ನಗರಾಭಿವೃದ್ಧಿ ಮತ್ತು ನಗರ ಯೋಜನೆ ಇಲಾಖೆ ಅಧಿಕಾರಿಗಳ ಜತೆ ಉನ್ನತಮಟ್ಟದ ಸಭೆ ನಡೆಸಿದರು.

- **ಅತಿ ವೇಗವಾಗಿ ಮೈಸೂರಿನಲ್ಲಿ ಐಟಿ, ಬಿಟಿ ಸೇರಿದಂತೆ ಕೈಗಾರಿಕೆಗಳು ಬೆಳವಣಿಗೆ**
- **ಮೈಸೂರಿನ ಸುತ್ತಮುತ್ತಲಿನ ಪ್ರದೇಶಗಳನ್ನು ನಗರ ವ್ಯಾಪ್ತಿಗೆ ತರಲು ಚಿಂತನೆ**
- **ಮೈಸೂರಿನ ಸರ್ವಾಂಗೀಣ ಅಭಿವೃದ್ಧಿಗೆ ಪೂರಕವಾದ ಯೋಜನೆಗಳ ತರಲು ಸಿದ್ಧ**

ಬೆಂಗಳೂರಿನಂತೆ ಸಾಂಸ್ಕರಿಕ ನಗರಿ ಮೈಸೂರು ಎಲ್ಲಾ ಕ್ಷೇತ್ರಗಳಲ್ಲಿಯೂ ಬೆಳೆಯುತ್ತಿದೆ. ವಿಸ್ತೀರ್ಣಗೊಳ್ಳುತ್ತಿರುವ ನಗರವನ್ನು ಸುಸಜ್ಜಿತಗೊಳಿಸಲು ನವ ಮೈಸೂರು ನಿರ್ಮಾಣ ಯೋಜನೆಗೆ ಸರಕಾರ ಚಿಂತಿಸಿದೆ. ಈ ಯೋಜನೆಯಲ್ಲಿ ಉದ್ಯಮ ಮೈಸೂರು, ನಿಪುಣ ಮೈಸೂರು, ಸುಖೀವಾಸ ಮೈಸೂರು, ಪ್ರವಾಸೋದ್ಯಮ ಮೈಸೂರು ಮತ್ತು ಸಂಚಾರ ಮೈಸೂರು ಎಂಬ ಪ್ರಮುಖವಾದ ಕ್ಷೇತ್ರಗಳನ್ನು ಅಭಿವೃದ್ಧಿಪಡಿಸುವ ಉದ್ದೇಶ ಹೊಂದಲಾಗಿದೆ.

-ಬೈರತಿ ಸುರೇಶ್, ನಗರಾಭಿವೃದ್ಧಿ ಸಚಿವ

ಫನ್‌ತರಂಗ

– ರಘುಪತಿ ಶೃಂಗೇರಿ –

ಸಾಲುಮರದ ತಿಮ್ಮಕ್ಕನ ಜೀವನ ಚರಿತ್ರೆ ಬರಲಿದೆ ಶೀಘ್ರದಲ್ಲಿ ಸಿನಿಮಾ ತೆರೆಗೆ. ಸುದ್ದಿ



ಮರು ಸಮೀಕ್ಷೆಗೆ ಸಂಪುಟ ಸಭೆಯಲ್ಲಿ ಸರ್ವಾನುಮತದ ತೀರ್ಮಾನ | ಎಜಿ ಆಗಿದ್ದ ಮಧುಸೂಧನ್ ನಾಯಕ್ ನೇತೃತ್ವದಲ್ಲಿ ಸಮೀಕ್ಷೆ | ಮುಂದಿನ ಮೂರು ತಿಂಗಳಲ್ಲಿ ವರದಿಯನ್ನು ಸಲ್ಲಿಸುವಂತೆ ಆಯೋಗಕ್ಕೆ ಸೂಚನೆ

ಹೈ ಸೂಚನೆ: ಸಂಪುಟ ಅನುಮೋದನೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಜ್ಯದಲ್ಲಿ ತೀವ್ರ ವಿವಾದಕ್ಕೆ ಕಾರಣವಾಗಿದ್ದ ಸಾಮಾಜಿ, ಶೈಕ್ಷಣಿಕ ಸಮೀಕ್ಷೆಯನ್ನು ಮರುಸಮೀಕ್ಷೆ ಮಾಡಲು ನಿರೀಕ್ಷೆಯಂತೆ ಸಚಿವ ಸಂಪುಟ ಸಭೆಯಲ್ಲಿ ಅನುಮೋದನೆ ನೀಡಲಾಗಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ದೆಹಲಿ ಪ್ರವಾಸದ ವೇಳೆ ಜಾತಿಗಣತಿಗೆ ಸಂಬಂಧಿಸಿದಂತೆ ಪರ-ವಿರೋಧ ಚರ್ಚೆ, ವಿವಾದಕ್ಕೆ ಸಂಬಂಧಿಸಿದಂತೆ ಚರ್ಚೆ ನಡೆಸಿದ್ದರು. ಈ ವೇಳೆ ಕಾಂಗ್ರೆಸ್ ವರಿಷ್ಠ ರಾಹುಲ್ ಗಾಂಧಿ ಅವರು ಮರುಸಮೀಕ್ಷೆಗೆ ಸೂಚನೆ ನೀಡಿದ್ದರು. ಆದ್ದರಿಂದ ಇದೀಗ ಮರುಸಮೀಕ್ಷೆಗೆ ಸಚಿವ ಸಂಪುಟ ಸಭೆಯಲ್ಲಿ ಅನುಮತಿ ನೀಡಲಾಗಿದ್ದು, ನಿವೃತ್ತ ಅಡ್ವೋಕೇಟ್ ಜನರಲ್ ಮಧುಸೂದನ ನಾಯಕ್ ಅವರ ನೇತೃತ್ವದಲ್ಲಿ ಸಮೀಕ್ಷೆ ನಡೆಯಲಿದ್ದು, 90 ದಿನದೊಳಗೆ ವರದಿ ಸಲ್ಲಿಸಲು ಸೂಚನೆ ನೀಡಲು ಸಂಪುಟದಲ್ಲಿ ತೀರ್ಮಾನಿಸಲಾಗಿದೆ.

ವಿಶೇಷ ಸಚಿವ ಸಂಪುಟ ಸಭೆ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಹಿಂದುಳಿದ ವರ್ಗಗಳ ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆ ಹತ್ತು ವರ್ಷಗಳು ಕಳೆದಿರುವ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗ ಅಧಿನಿಯಮ 1995 ಸೆಕ್ಷನ್ 11(2)ರಂತೆ ಮರುಸಮೀಕ್ಷೆ ಕೈಗೊಳ್ಳಲು ಸಚಿವ ಸಂಪುಟ ನಿರ್ಧರಿಸಿದೆ. ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆಯನ್ನು 54 ಮಾನದಂಡಗಳನ್ನು ಇಟ್ಟುಕೊಂಡು ಕೈಗೊಂಡು ಮನೆ ಮನೆಗೆ ಭೇಟಿ ನೀಡಿ ಸಲ್ಲಿಸಿರುವ ವರದಿಯಾಗಿದೆ. 2011 ರ ಜನಗಣತಿ ಪ್ರಕಾರ ಕರ್ನಾಟಕದಲ್ಲಿ 6.11 ಕೋಟಿ ಜನರಿದ್ದರು. ಈ ಜನಸಂಖ್ಯೆ 2015 ರ ವೇಳೆಗೆ 6.35 ಕೋಟಿ ಎಂದು ಅಂದಾಜಿಸಲಾಗಿದೆ. 5.98 ಕೋಟಿ ಜನರು ಸಮೀಕ್ಷೆಗೆ ಒಳಪಟ್ಟಿದ್ದಾರೆ. ಸಮೀಕ್ಷೆ ಪ್ರಾರಂಭವಾಗಿದ್ದು 11.4. 2015 ರಂದು ಹಾಗೂ 30-5-2015 ರಂದು ಮುಕ್ತಾಯವಾಗಿದೆ. 1.60 ಲಕ್ಷ ಸಿಬ್ಬಂದಿ ಹಾಗೂ 1.33 ಲಕ್ಷ ಉಪಾಧ್ಯಾಯರು ಸಮೀಕ್ಷೆಯಲ್ಲಿ ಪಾಲ್ಗೊಂಡಿದ್ದರು ಎಂದು ಮುಖ್ಯ ಮಂತ್ರಿಗಳು ವಿವರಿಸಿದರು.

ಹಿಂದಿನ ಸರಕಾರ ತೀರ್ಮಾನಿಸಲಿಲ್ಲ: ಈ ಹಿಂದೆ 2013-2018ರವರೆಗೆ ಮುಖ್ಯ ಮಂತ್ರಿಯಾಗಿದ್ದ ಸಂದರ್ಭದಲ್ಲಿ ವರದಿ ಮತ್ತು ಅದರ ಶಿಫಾರಸ್ಸುಗಳು ಅಂತಿಮಗೊಂಡಿರಲಿಲ್ಲ. 2018 ರಲ್ಲಿ ಸಮ್ಮಿಶ್ರ ಸರಕಾರ ರಚನೆಯಾಗಿ ಎಚ್.ಡಿ.ಕುಮಾರಸ್ವಾಮಿ ಮುಖ್ಯಮಂತ್ರಿಗಳಾದರು. ಪುಟ್ಟರಂಗಶೆಟ್ಟರು ಅವರು ಹಿಂದುಳಿದ ವರ್ಗಗಳ ಸಚಿವರಾದರು. ಆ ವೇಳೆಗೆ ವರದಿ ಪೂರ್ಣಗೊಂಡಿತ್ತು. ಅಂದಿನ ಆಯೋಗದ ಅಧ್ಯಕ್ಷರಾದ ಕಾಂತರಾಜು ಹಾಗೂ ಸದಸ್ಯರು ಸಚಿವ ಪುಟ್ಟರಂಗ ಶೆಟ್ಟರನ್ನು ಭೇಟಿ ಮಾಡಿ ವರದಿ ಪಡೆಯಬೇಕು ಎಂದು ಕೋರಿದಾಗ ಮುಖ್ಯಮಂತ್ರಿ ಕುಮಾರಸ್ವಾಮಿಯವರು ಒತ್ತಡ ಹಾಕಿ ವರದಿಯನ್ನು ಪಡೆಯಬಾರದು ಎಂದದ್ದರಿಂದ ಅವರು ವರದಿ ಪಡೆಯಲಿಲ್ಲ. ಕಾಂತರಾಜು ಅವರ ಅವಧಿ ಮುಗಿದ ನಂತರ ಜಯಪ್ರಕಾಶ್ ಹೆಗ್ಡೆಯವರನ್ನು ಬಿಜೆಪಿ ಸರಕಾರ ಆಯೋಗದ ಅಧ್ಯಕ್ಷರನ್ನಾಗಿ ನೇಮಕ ಮಾಡಿತು. ಸದಸ್ಯರೂ ಕೂಡ ಬಿಜೆಪಿಯವರೇ ಆಗಿದ್ದರು. ಜಯ ಪ್ರಕಾಶ್ ಹೆಗ್ಡೆಯವರು ಸಮೀಕ್ಷೆಯ ದತ್ತಾಂಶಗಳ ಆಧಾ ರದ ಮೇಲೆ ಶಿಫಾರಸ್ಸು ಮಾಡಿದರು. ಶಿಫಾರಸ್ಸುಗಳನ್ನು 29-2-2024 ರಂದು ಸರಕಾರಕ್ಕೆ ಸಲ್ಲಿಸಿದರು. ಕಾಂತರಾಜು ಅವರು ಕೂಡ ಈ ಸಂದರ್ಭದಲ್ಲಿ ಇದ್ದರು ಎಂದು ತಿಳಿಸಿದರು. ಪಕ್ಷದ

ವರಿಷ್ಠರ ಸಲಹೆ: ಪಕ್ಷದ ವರಿಷ್ಠರು ನನ್ನನ್ನು ಮತ್ತು ಉಪಮುಖ್ಯಮಂತ್ರಿಗಳನ್ನು ಕರೆದು ವರದಿ ಹತ್ತು ವರ್ಷಗಳಷ್ಟು ಹಳೆಯದಾಗಿದ್ದು, ಕಾನೂನು ಪ್ರಕಾರ ಅನೇಕ ಬದಲಾವಣೆಗಳು ಮತ್ತು ಬೆಳವಣಿಗೆಗಳು ಆಗಿರುತ್ತವೆ ಎಂದು ಸಲಹೆ ನೀಡಿದ್ದಾರೆ. ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗವು ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯನ್ನು ತಿದ್ದುಪಡಿ ವಿಧೇಯಕ (2014) ಸೆಕ್ಷನ್ 11 ಕಲಂ (1) ರಂತೆ ರಾಜ್ಯ ಸರಕಾರವು ಯಾವುದೇ ಸಮಯದಲ್ಲಿ ಈ ಅಧಿನಿಯಮ ಜಾರಿಗೆ ಬಂದ ದಿನಾಂಕದಿಂದ 10 ವರ್ಷಗಳ ಅವಧಿ ಮುಕ್ತಾಯವಾದಾಗ, ಮತ್ತು ಅದರ ನಂತರ ಬರುವ ಪ್ರತಿ 10 ವರ್ಷಗಳು ಮುಕ್ತಾಯವಾಗುವಾಗ ಹಿಂದುಳಿದ ವರ್ಗವಾಗಿ ಉಳಿಯದೇ ಹೋಗಿರುವ ವರ್ಗಗಳನ್ನು ಪಟ್ಟಿಯನ್ನು ತೆಗೆದುಹಾಕುವುದು ಅಥವಾ ಹೊಸ ಹಿಂದುಳಿದ ವರ್ಗಗಳನ್ನು ಪಟ್ಟಿಗೆ ಸೇರಿಸುವದು ಎಂದು ಸ್ಪಷ್ಟವಾಗಿದೆ ಹೇಳಿದೆ. ಕಲಂ 2 ರಲ್ಲಿ ಹೇಳಿದಂತೆ ಆಯೋಗದ ಅಧ್ಯಕ್ಷರಾದ ಮಧುಸೂದನ ನಾಯಕ್ ಅವರ ಸಲಹೆಯನ್ನೂ ಪಡೆಯಲಾಗುವುದು ಎಂದು ಮುಖ್ಯಮಂತ್ರಿಗಳು ತಿಳಿಸಿದರು.

ಕೇಂದ್ರದಿಂದ ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆ ನಡೆಸುತ್ತಿಲ್ಲ: ಕೇಂದ್ರ ಸರಕಾರ ನಡೆಸಲಿರುವ ಜಾತಿಗಣತಿಗಿಂತ ಈ ಸಮೀಕ್ಷೆ ಹೇಗೆ ಭಿನ್ನವಾಗಿ ಇರುತ್ತದೆ ಎನ್ನುವ ಪತ್ರಕರ್ತರ ಪ್ರಶ್ನೆಗೆ ಉತ್ತರಿಸಿದ ಮುಖ್ಯಮಂತ್ರಿಗಳು ಕೇಂದ್ರ ಸರಕಾರವೂ ಎಲ್ಲಿಯೂ ಕೂಡಾ ಸಾಮಾಜಿಕ ಶೈಕ್ಷಣಿಕ ಸಮೀಕ್ಷೆ ನಡೆಸುವುದಾಗಿ ಹೇಳಿಲ್ಲ. ನಾವು ಸಮಾಜಿಕ ಶೈಕ್ಷಣಿಕ ಸಮೀಕ್ಷೆ ನಡೆಸುವಿರಾ ಎಂದು ಕೇಳಿದಾಗಲೂ ಉತ್ತರ ಕೊಡಲಿಲ್ಲ. ಹಾಗಾಗಿ ನಾವು ಮಾಡುತ್ತಿದ್ದೇವೆ. ಸಮಾಜೋ-ಶೈಕ್ಷಣಿಕ ಸಮೀಕ್ಷೆ ವರದಿ ಅನ್ವಯ ಸಾಮಾಜಿಕ ನ್ಯಾಯ ನೀಡಲು ಬದ್ಧವಾಗಿದೆ ಎಂದು ಹೇಳಿದರು. ಸಮೀಕ್ಷೆಯನ್ನು 90 ದಿನಗಳ ಒಳಗೆ ಮಾಡಲು ಆಯೋಗವನ್ನು ಕೋರುತ್ತೇವೆ. ತೆಲಂಗಾಣದಲ್ಲಿ 70 ದಿನಗಳಲ್ಲಿ ಸಮೀಕ್ಷೆ ನಡೆಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಮಾತನಾಡಿದರು. ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ, ಸಚಿವರಾದ ಎಚ್.ಕೆ.ಪಾಟೀಲ್, ಶಿವರಾಜ್ ತಂಗಡಗಿ, ಎಚ್.ಸಿ ಮಹದೇವಪ್ಪ ಇದ್ದರು.

ಪ್ರಣಾಳಿಕೆಯಲ್ಲಿ ವರದಿ ಜಾರಿ ಮಾಡುವ ಬಗ್ಗೆ ಆಶ್ವಾಸನೆ ನೀಡಲಾಗಿತ್ತು. ಆದರೆ ಸಾಮಾಜಿಕ ಪರಿಸ್ಥಿತಿಗಳು ಬದಲಾಗಿರುವ ಹಿನ್ನೆಲೆಯಲ್ಲಿ ಹಾಗೂ ಪಕ್ಷದ ವರಿಷ್ಠರೂ ಮಾರ್ಗದರ್ಶನ ಮಾಡಿದ್ದು, ಸಚಿವ ಸಂಪುಟದಲ್ಲಿ ಮರುಸಮೀಕ್ಷೆಗೆ ತೀರ್ಮಾನಿಸಲಾಗಿದೆ. ಶಾಶ್ವತ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರಾದ ನಿವೃತ್ತ ಅಡ್ವೋಕೇಟ್ ಜನರಲ್ ಮಧುಸೂದನ ನಾಯಕ್ ನೇತೃತ್ವದಲ್ಲಿ ನಡೆಯಲಿದ್ದು, ಸದಸ್ಯರನ್ನು ಶೀಘ್ರವೇ ನೇಮಿಸಲಾಗುವುದು.

-ಸಿದ್ದರಾಮಯ್ಯ, ಮುಖ್ಯಮಂತ್ರಿ

ಲಿಂಗಾಯತ ಮತ್ತು ಒಕ್ಕಲಿಗರಿಂದ ವಿರೋಧದ ಬಗ್ಗೆ ನಾನು ಪ್ರತಿಕ್ರಿಯೆ ನೀಡುವುದಿಲ್ಲ. ಸಮಾಜದ ಎಲ್ಲರನ್ನು ಒಳಗೊಂಡ ಸಮೀಕ್ಷೆ ಇದಾಗಲಿದೆ. ಹೊರನಾಡು ಕನ್ನಡಿಗರಿಗೆ ಆನ್ ಲೈನ್ ಮೂಲಕ ಸಮೀಕ್ಷೆಯಲ್ಲಿ ಭಾಗವಹಿಸುವಂತೆ ವ್ಯವಸ್ಥೆ ಕಲ್ಪಿಸಲಾಗುವುದು. ಹೈಕಮಾಂಡ್ ನಮಗೆ ಮಾರ್ಗದರ್ಶನ ಮಾತ್ರ ನೀಡಿದೆ. 10 ವರ್ಷಗಳು ಆಗಿರುವ ಕಾರಣಕ್ಕೆ ಸಮಾಜದ ಎಲ್ಲರನ್ನು ಒಳಗೊಳ್ಳುವುದು ನಮ್ಮ ಉದ್ದೇಶ. ಇದು ಕಾಂಗ್ರೆಸ್ ಆಶಯ

-ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿ

ರಾಜಕೀಯ ಬೇಡ, ಸಾಮಾಜಿಕ ನ್ಯಾಯ ಬೇಕು: ಡಿಸಿಎಂ

ನಮಗೆ ರಾಜಕೀಯ ಬಣ್ಣ ಬೇಡ. ಸಾಮಾಜಿಕ ನ್ಯಾಯ ಬೇಕು. ಈ ಕಾರಣಕ್ಕೆ ನಾವು ಮತ್ತೊಮ್ಮೆ ಜಾತಿ ಜನಗಣತಿ ಮಾಡಲು ತೀರ್ಮಾನ ಮಾಡಿದ್ದೇವೆ. ಈ ಹಿಂದಿನ ವರದಿ ಬಗ್ಗೆ ಟೀಕೆ ಮಾಡಿದ್ದ ವಿರೋಧ ಪಕ್ಷದವರು ಈಗ ಉಲ್ಟಾ ಮಾತಾಡುತ್ತಿದ್ದಾರೆ. ಅದರ ಬದಲು ಹಳೆಯದನ್ನೇ ಒಪ್ಪಿಕೊಳ್ಳುವಂತೆ ಆಗ್ರಹಿಸಲಿ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಹೇಳಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಡಿ.ಕೆ. ಶಿವಕುಮಾರ್, ಕುಮಾರಸ್ವಾಮಿ, ವಿಜಯೇಂದ್ರ, ಅಶೋಕ್ ಅವರು ಪುನಃ ಮಾಧ್ಯಮಗೋಷ್ಠಿ ಮಾಡಿ ಹಳೆಯ ವರದಿಯನ್ನೇ ಸ್ವೀಕರಿಸಿ ಎಂದು ಈಗ ಹೇಳಲಿ. ಪ್ರತಿಪಕ್ಷದವರು ಈಗ ಏನೇನೋ ಮಾತನಾಡುತ್ತಿದ್ದಾರೆ. ಇದಕ್ಕೆ ನಿಧಾನಕ್ಕೆ ಉತ್ತರ ನೀಡೋಣ. ಯಾರು, ಯಾರು ಏನೇನು ಹೇಳುತ್ತಿದ್ದರು, ಅಶೋಕ್ ಏನು ಹೇಳಿದ್ದಾರೆ ಎಂಬುದನ್ನು ಮಾಧ್ಯಮಗಳು ಮತ್ತೆ ಪ್ರಸಾರ ಮಾಡಿಲಿ. ವಿರೋಧ ಪಕ್ಷದವರು ಹಿಂದೆ ಒಂದು, ಮುಂದೆ ಒಂದು ಮಾತನಾಡಿ ರಾಜಕೀಯವಾಗಿ ಬಣ್ಣ ಕಟ್ಟುತ್ತಿದ್ದಾರೆ. ಯಾರು ಏನು ಬೇಕಾದರೂ ಹೇಳಲಿ. ಜನರು, ಶಾಸಕರುಗಳ ಭಾವನೆ, ಅಭಿಪ್ರಾಯ ಅರಿತು ಕಾನೂನಾತ್ಮಕವಾಗಿ ಜಾತಿ ಗಣತಿ ಮರುಸಮೀಕ್ಷೆಗೆ ಒಪ್ಪಿಗೆ ಕೊಟ್ಟಿದ್ದೇವೆ. ಸೆಕ್ಷನ್ 11 ರ ಪ್ರಕಾರ ಜಾತಿ ಗಣತಿಗೆ 10 ವರ್ಷವಾಗಿದೆ ಎಂದು ಬೇಕಾದಷ್ಟು ಜನ ನ್ಯಾಯಾಲಯಕ್ಕೆ ಹೋಗಿ ತಡೆಯಾಜ್ಞೆ ತರಬಹುದು. 11.04.2015 ಅಲ್ಲಿ ಜಾತಿಗಣತಿ ಪ್ರಾರಂಭವಾಗಿ 30.05.2015 ರಲ್ಲಿ ಮುಗಿದಿತ್ತು. ಈ ವರ್ಷ ಫೆ. 29 ರಂದು ಜಾತಿಗಣತಿ ವರದಿ ಸಲ್ಲಿಕೆಯಾಗಿತ್ತು. ನಂತರ ಕ್ಯಾಬಿನೆಟ್ ನಲ್ಲಿ 5-6 ಬಾರಿ ಇದರ ಬಗ್ಗೆ ಚರ್ಚೆ ಮಾಡಲಾಗಿತ್ತು. ವಿರೋಧ ಪಕ್ಷದವರು ಸಹ ಮರು ಗಣತಿಗೆ ಒತ್ತಾಯ ಮಾಡುತ್ತಿದ್ದರು. ಈ ಮಧ್ಯೆ ಹೈಕಮಾಂಡ್ ಅವರು ನಮ್ಮನ್ನು ಕರೆಸಿ ಈ ಬಗ್ಗೆ ಒಂದಷ್ಟು ಮಾರ್ಗದರ್ಶನ ನೀಡಿದ್ದಾರೆ ಎಂದರು.

ಸಮಾಚಾರ ಸಣ್ಣದಲ್ಲ

ಪುಸ್ತಕ ಬಹುಮಾನಕ್ಕೆ ಅರ್ಜಿ ಆಹ್ವಾನ

ಬೆಂಗಳೂರು: ಕರ್ನಾಟಕ ಯಕ್ಷಗಾನ ಅಕಾಡೆಮಿಯು 2024ನೇ ಕ್ಯಾಲೆಂಡರ್ ವರ್ಷದಲ್ಲಿ ಪ್ರಕಟಿಸಿದ ಪುಸ್ತಕಗಳನ್ನುಬಹುಮಾನಕ್ಕೆ ಆಯ್ಕೆ ಮಾಡಲು ಲೇಖಕರಿಂದ , ಪ್ರಕಾಶಕರಿಂದ ಅರ್ಜಿ ಆಹ್ವಾನಿಸಿದೆ. ಯಕ್ಷಗಾನ (ತೆಂಕು, ಬಡಗು ಬಡಾಬಡಗು, ಯಕ್ಷಗಾನ ಗೊಂಬೆಯಾಟ), ಮೂಡಲಪಾಯ ಯಕ್ಷಗಾನ, ಕೇಳಿಕೆ, ಘಟ್ಟದಕೋರೆ ಮತ್ತು ತಾಳಮದ್ದಲೆ, ಇತ್ಯಾದಿ ಕಲಾಪ್ರಕಾರಗಳ ಪುಸ್ತಕಗಳನ್ನು ಬಹುಮಾನಕ್ಕೆ ಆಯ್ಕೆ ಮಾಡಲು ಅರ್ಜಿ ಆಹ್ವಾನಿಸಿದ್ದು, ಆಯ್ಕೆಯಾದ ಪುಸ್ತಕಕ್ಕೆ 25,000 ಬಹುಮಾನಗಳನ್ನು ನೀಡಲಾಗುವುದು. ಯಕ್ಷಗಾನ ಕ್ಷೇತ್ರದ ವಿವಿಧ ಆಯಾಮಗಳ ಬಗ್ಗೆ ಸಂಗೀತ, ಆಹಾರ, ಅಭಿನಯ, ಸಂಶೋಧನೆ, ವಿಮರ್ಶೆ, ಜೀವನಚರಿತ್ರೆ, ಪ್ರಸಂಗ ಪುಸ್ತಕ ಇತ್ಯಾದಿ ಪ್ರಕಾರಗಳನ್ನು ಒಳಗೊಂಡ ಪುಸ್ತಕಗಳನ್ನು ಬಹುಮಾನಕ್ಕಾಗಿ ಆಹ್ವಾನಿಸಿದ್ದು, ಪುಸ್ತಕ ಬಹುಮಾನಕ್ಕೆ ಸಲ್ಲಿಸುವ ಪುಸ್ತಕವನ್ನು ಪಠ್ಯಕ್ಕಾಗಿ ಸಿದ್ಧಪಡಿಸಿರಬಾರದು ಹಾಗೂ ಸಂಪಾದಿತ ಕೃತಿ ಅಥವಾ ಅಭಿನಂದನ ಕೃತಿಯಾಗಿರಬಾರದು, ಸ್ವರಚಿತವಾಗಿರಬೇಕು. ಪ್ರಥಮ ಮುದ್ರಣ ಆವೃತ್ತಿಯಾಗಿರಬೇಕು. ಜುಲೈ 10ರೊಳಗಾಗಿ ಅರ್ಜಿಯೊಂದಿಗೆ ಪುಸ್ತಕದ ನಾಲ್ಕು ಪ್ರತಿಗಳನ್ನು ಕಡ್ಡಾಯವಾಗಿ ಕಳುಹಿಸಬೇಕು. ಹೆಚ್ಚಿನ ಮಾಹಿತಿಗೆ ; 080-22113146 ಸಂಪರ್ಕಿಸಿ.

ನೇರ ಫೋನ್‌ಇನ್ ಕಾರ್ಯಕ್ರಮ

ಬೆಂಗಳೂರು: ಬೆಂಗಳೂರು ಜಲಮಂಡಳಿ ವತಿಯಿಂದ ಇಂದು ಬೆಳಗ್ಗೆ 9.30 ರಿಂದ 10.30ರವರಗೆ ನೇರ ಫೋನ್‌ಇನ್ ಕಾರ್ಯಕ್ರಮವನ್ನು ಆಯೋಜಿಸಿದೆ ಎಂದು ಮಂಡಳಿ ತಿಳಿಸಿದೆ. ಜಲಮಂಡಳಿ ಅಧ್ಯಕ್ಷ ಡಾ.ವಿ.ರಾಮ್‌ಪ್ರಸಾತ್ ಮನೋಹರ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದು, ಸಾರ್ವಜನಿಕರು ತಮ್ಮ ವಲಯ/ಪ್ರದೇಶಗಳಲ್ಲಿನ ಕುಡಿಯುವ ನೀರಿನ ಸಮಸ್ಯೆ ಮತ್ತು ಒಳಚರಂಡಿ ಕೊಳವೆ/ಇಳಿ ಗುಂಡಿ ಯಿಂದ ತ್ಯಾಜ್ಯ ನೀರು ಹೊರಬರುತ್ತಿರುವ ಬಗ್ಗೆ, ಜಲಮಾಪನ ಹಾಗೂ ನೀರಿನ ಬಿಲ್ಲಿನ ಸಮಸ್ಯೆಯ ಬಗ್ಗೆ ದೂರವಾಣಿ 080-22945119 ಮತ್ತು 080- 22229639ಗೆ ದೂರು ನೀಡಬಹುದು. ನೀರಿನ ಸಂಪರ್ಕ ಹೊಂದಿರುವ ಗ್ರಾಹಕರು ಆರ್‌ಆರ್ ಸಂಖ್ಯೆ ಯನ್ನು ತಿಳಿಸಿ ದೂರನ್ನು ನೀಡಬೇಕು ಎಂದು ಮಂಡಳಿ ತಿಳಿಸಿದೆ.

ಸಿಐಡಿಗೆ ಮಕ್ಕಳ ಹಕ್ಕು ಆಯೋಗ ನೋಟಿಸ್

ಬೆಂಗಳೂರು: ಚಿನ್ನಸ್ವಾಮಿಯಲ್ಲಿ ಕಾಲ್ತುಳಿತದಿಂದ ಸಮಸ್ಯೆಗೆ ಒಳಗಾದ ಮಕ್ಕಳ ವಿವರವನ್ನು ಕೋರಿ ಸಿಐಡಿಗೆ ಮಕ್ಕಳ ಹಕ್ಕು ಆಯೋಗ ನೋಟಿಸ್ ಜಾರಿ ಮಾಡಿದೆ. ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಸಾಕಷ್ಟು ಜನ ಮಕ್ಕಳು ತೊಂದರೆಗೆ ಒಳಗಾಗಿರುವ ಬಗ್ಗೆ ಸಾರ್ವಜನಿಕ ದೂರು ಆಧರಿಸಿ ಸ್ವಯಂಪ್ರೇರಿತ ದೂರು ದಾಖಲಿಸಿಕೊಂಡಿರುವ ಆಯೋಗ ಈ ಬಗ್ಗೆ ಹೆಚ್ಚಿನ ನಿಖರ ಮಾಹಿತಿ ನೀಡುವಂತೆ ನೋಟಿಸ್ ನೀಡಿದೆ. ಚಿನ್ನಸ್ವಾಮಿ ಸ್ಟೇಡಿಯಂ ಬಳಿ ಆರ್‌ಸಿಬಿ ವಿಜಯೋ ತ್ಸವದ ವೇಳೆ ಹೆಚ್ಚಿನ ಸಂಖ್ಯೆಯಲ್ಲಿ ಮಕ್ಕಳಿದ್ದರು. ಅವಘಡದಲ್ಲಿ ಸಾಕಷ್ಟು ಜನ ಮಕ್ಕಳಿಗೆ ತೊಂದರೆ ಯಾಗಿರುವ ಮಾಹಿತಿ ಇದೆ. ಆದರೆ ನಿಖರವಾಗಿ ಎಷ್ಟು ಮಕ್ಕಳಿಗೆ ಸಮಸ್ಯೆಯಾಗಿದೆ ಏನಾಗಿದೆ ಎಂಬುದರ ವಿವರ ಸಿಕ್ಕಿಲ್ಲ. ಹೀಗಾಗಿ ಮಕ್ಕಳ ಹಕ್ಕು ಆಯೋಗವು ಸಿಐಡಿಗೆ ವಿವರ ಕೋರಿ ನೋಟಿಸ್ ಜಾರಿ ಮಾಡಿದೆ.

ನದಿ ತಟದ ವೃಕ್ಷ ಕವನ ಸಂಕಲನ ಲೋಕಾರ್ಪಣೆ

ಬೆಂಗಳೂರು: ನದಿ ತಟದ ವೃಕ್ಷ ಕವನ ಸಂಕಲನ ಬಿಡುಗಡೆ ಸಮಾರಂಭ ಭಾನುವಾರ ಚಾಮರಾಜ ಪೇಟೆಯ ಕರ್ನಾಟಕ ಸಾಹಿತ್ಯ ಪರಿಷತ್ತಿನಲ್ಲಿ ನಡೆಯಿತು. ಡಾ.ಪ್ರವೀಣ್‌ರಾಜ್.ಎಸ್.ರಾವ್ ಅವರ ನದಿ ತಟದ ವೃಕ್ಷ ಕವನ ಸಂಕಲನವನ್ನು ಲೋಕಾರ್ಪಣೆಗೊಳಿಸಿದ ಬೆಂಗಳೂರು ನಗರ ಜಿಲ್ಲಾ ಸಾಹಿತ್ಯ ಪರಿಷತ್ ಅಧ್ಯಕ್ಷ ಎಂ.ವೆಂಕಟೇಶಮೂರ್ತಿ ಮಾತನಾಡಿ, ಕವನದಲ್ಲಿ ಆಧುನಿಕ ಯುಗದ ಆಕರ್ಷಣೆಗೆ ಒಳಗಾಗಿ ನಾವು ನಮ್ಮ ನೆಲ, ಜಲ, ಆಕಾಶವನ್ನು ನಿರ್ಲಕ್ಷ ಮಾಡುತ್ತಿರುವ ಬಗ್ಗೆ ಮಾರ್ಮಿಕವಾಗಿ ಚಿತ್ರಿಸಿದ್ದಾರೆ. ಹಾಗೆಯೇ ಪರಿಸರದ ಬಗ್ಗೆ ಒಳ್ಳೆಯ ಸಂದೇಶ ನೀಡುವಲ್ಲಿ ಯಶಸ್ವಿಯಾಗಿದ್ದಾರೆ. ಅವರ ಲೇಖನದಿಂದ ಇಂತಹ ಕವನಗಳು ಇನ್ನು ಹೆಚ್ಚೆಚ್ಚು ಬರಲಿ ಎಂದು ಆಶಿಸುತ್ತೇನೆ ಎಂದರು. ಕವನ ಸಂಕಲನದ ಕವಿ ಡಾ.ಪ್ರವೀಣ್.ಎಸ್.ರಾವ್ ಮಾತನಾಡಿ, ಕಾಸರಗೋಡು ಕನ್ನಡಿಗರು ಸದಾ ಕನ್ನಡದ ಕೆಲಸಗಳಲ್ಲಿ ಮುಂಚೂಣಿಯಲ್ಲಿರುತ್ತಾರೆ. ಕನ್ನಡ ಸಾಹಿತ್ಯ, ಸಂಸ್ಕೃತಿಯ ಕೆಲಸಗಳು ಇಲ್ಲಿ ನಿರಂತರ ನಡೆಯುತ್ತಿರುತ್ತದೆ. ಆದರೆ ಕರ್ನಾಟಕ ಸರಕಾರ ಗಡಿನಾಡಾದ ಕಾಸರಗೋಡಿನ ಬಗೆಗೆ ತೀವ್ರ ನಿರ್ಲಕ್ಷ್ಯ ಹೊಂದಿದೆ.

ಇಲ್ಲಿನ ಕನ್ನಡಿಗರು ಅತಂತ್ರರಾಗಿದ್ದಾರೆ, ಸರಕಾರ ಈ ಕುರಿತು ಅಧ್ಯಯನ ಮಾಡಿ ಇಲ್ಲಿನ ಕಾಸರಗೋಡಿನ ಕನ್ನಡಿಗರ ಸಮಸ್ಯೆಗಳನ್ನು ಬಗೆಹರಿಸಬೇಕು ಎಂದು ವಿನಂತಿಸಿದರು. ಕಾರ್ಯ ಕ್ರಮದಲ್ಲಿ ಆರ್‌ಆರ್ ನಗರ ಕಸಾಪ ಅಧ್ಯಕ್ಷ ಉದಂತ ಶಿವಕುಮಾರ್, ಮಕ್ಕಳ ಸಾಹಿತ್ಯ ಪರಿಷತ್ ಕಾರ್ಯದರ್ಶಿ ಡಾ.ಮಲಕಪ್ಪ, ನಾಗರಾಜ ತಂಬ್ರಹಳ್ಳಿ ಉಪಸ್ಥಿತರಿದ್ದರು.

ಬಾಲಕಾರ್ಮಿಕ ಪದ್ಧತಿ ವಿರೋಧಿ ಜಾಥಾದಲ್ಲಿ ಸಚಿವ ಸಂತೋಷ್ ಲಾಡ್ ಅಭಿಮತ

ಬಾಲ ಕಾರ್ಮಿಕ ಪದ್ಧತಿ ವಿರೋಧಿ ಅರಿವು ಮೂಡಲಿ

ಬೆಂಗಳೂರು: ಬಾಲ ಕಾರ್ಮಿಕ ಪದ್ಧತಿ ನಿರ್ಮೂಲನೆ ಕುರಿತ ಅರಿವು ಮನೆಗಳಿಂದಲೇ ಆರಂಭವಾಗಬೇಕು. ಸಾರ್ವಜನಿಕರು ಈ ಬಗ್ಗೆ ಜಾಗೃತರಾಗಬೇಕು ಎಂದು ಕಾರ್ಮಿಕ ಸಚಿವ ಸಂತೋಷ್ ಲಾಡ್ ಹೇಳಿದರು.

ಕಾರ್ಮಿಕ ಇಲಾಖೆ ವತಿಯಿಂದ ವಿಶ್ವ ಬಾಲಕಾರ್ಮಿಕ ಪದ್ಧತಿ ವಿರೋಧಿ ದಿನದ ಅಂಗವಾಗಿ ಬೆಂಗಳೂರಿನ ಎಂಜಿ ರಸ್ತೆಯ ಮಹಾತ್ಮ ಗಾಂಧಿ ಉದ್ಯಾನದಿಂದ ಕೆಆರ್ ವೃತ್ತದವರೆಗೆ ಹಮ್ಮಿಕೊಂಡಿದ್ದ ಜಾಥಾ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಬಾಲ ಕಾರ್ಮಿಕರಾಗುವುದನ್ನು ತಡೆಯಲು ಕಾರ್ಮಿಕ ಇಲಾಖೆ ಹಲವು ಕ್ರಮ ಕೈಗೊಂಡಿದೆ. ಸರಕಾರದೊಂದಿಗೆ ಜನರೂ ಕೈ ಜೋಡಿಸಿದರೆ ಇದನ್ನು ಇನ್ನಷ್ಟು ಪರಿಣಾಮಕಾರಿಯಾಗಿ ಅನುಷ್ಠಾನ ಮಾಡಬಹುದು. ಮಕ್ಕಳನ್ನು ದುಡಿಸಿಕೊಳ್ಳುವುದು ಅಪರಾಧ. ಯಾರೇ ಇದನ್ನು ಉಲ್ಲಂಘಿಸಿದರೆ ಆರು ತಿಂಗಳಿಂದ ಎರಡು ವರ್ಷದವರೆಗೆ ಶಿಕ್ಷೆ, ದಂಡ ವಿಧಿಸಲಾಗುತ್ತದೆ. ಜತೆಗೆ ಪೋಷಕರಿಗೂ ಶಿಕ್ಷೆ ಆಗಲಿದೆ. ಇದರ ಮೂಲಕ ಭಯ ಮೂಡಿಸುವುದು ಇಲಾಖೆಯ ಉದ್ದೇಶವಲ್ಲ. ಬಾಲ ಕಾರ್ಮಿಕ ಪದ್ಧತಿ ಬಗ್ಗೆ ಸಾಮಾಜಿಕ ವ್ಯವಸ್ಥೆಯಡಿ ಅರಿವು ಮೂಡಿಸಬೇಕು ಎಂದು ವಿವರಿಸಿದರು.

ರಾಜ್ಯದ 22 ಜಿಲ್ಲೆಗಳಲ್ಲಿ ಪ್ರವಾಸ ಮಾಡಿ, ಜಿಲ್ಲಾಧಿಕಾರಿ, ಎಸ್‌ಪಿ, ಜಿಲ್ಲಾ ಪಂಚಾಯಿತಿ ಸಿಇಒಗಳ ಜತೆ ಸಭೆ ಮಾಡಿ ಮಕ್ಕಳು ಕಾರ್ಮಿಕರಾಗುವುದನ್ನು ತಡೆಯಲು ಕ್ರಮ ಕೈಗೊಂಡಿದ್ದೇವೆ. ಡಿಸಿ, ಸಿಇಒ, ಎಸ್‌ಪಿಗಳು ಮುತುವರ್ಜಿ ವಹಿಸಿದರೆ ನಿರ್ಮೂಲನೆ ಸುಲಭವಾಗಲಿದೆ. ವರ್ಷಕ್ಕೆ ಒಂದು ಬಾರಿ ದಿನಾಚರಣೆ ಮಾಡಿದರೆ ಸಾಲದು. ಎರಡು ತಿಂಗಳಿಗೆ ಒಂದು ಬಾರಿ ಈ ಸಂಬಂಧ ಅರಿವು ಮೂಡಿಸುವ ಕೆಲಸ ಆಗಬೇಕು ಎಂದು ಸೂಚನೆ ನೀಡಿದರು.

ಜಾಥಾದಲ್ಲಿ ಬೆಂಗಳೂರು ನಗರ ಜಿಲ್ಲಾಧಿಕಾರಿ ಜಿ.ಜಗದೀಶ, ಕಾರ್ಮಿಕ ಇಲಾಖೆ ಸರಕಾರದ ಪ್ರಧಾನ ಕಾರ್ಯದರ್ಶಿ ಡಾ. ಎನ್.ವಿ.ಪ್ರಸಾದ್, ಕಾರ್ಮಿಕ ಆಯುಕ್ತ ಡಾ.ಎಚ್.ಎನ್. ಗೋಪಾಲಕೃಷ್ಣ, ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ ಸಿಇಒ ಭಾರತಿ.ಡಿ, ಜಂಟಿ ಕಾರ್ಮಿಕ ಆಯುಕ್ತ ರವಿಕುಮಾರ್, ಚಲನಚಿತ್ರ ನಟಿ ಅದಿತಿ ಪ್ರಭುದೇವ್, ಕಾರ್ಮಿಕ ಇಲಾಖೆ ಇತರ ಅಧಿಕಾರಿಗಳು, ಸರಕಾರೇತರ ಸಂಸ್ಥೆಗಳ ಪ್ರತಿನಿಧಿಗಳು, ಶಾಲಾ ಮಕ್ಕಳು ಭಾಗವಹಿಸಿದ್ದರು.

ಸಚಿವ ಸಂತೋಷ್ ಲಾಡ್ ಉಪಸ್ಥಿತಿಯಲ್ಲಿ ವಿಶ್ವ ಬಾಲಕಾರ್ಮಿಕ ಪದ್ಧತಿ ವಿರೋಧಿ ದಿನದ ಅಂಗವಾಗಿ ಮಹಾತ್ಮ ಗಾಂಧಿ ಉದ್ಯಾನದಿಂದ ಕೆಆರ್ ವೃತ್ತದವರೆಗೆ ಜಾಥಾ ನಡೆಯಿತು. ನಟಿ ಅದಿತಿ ಪ್ರಭುದೇವ್ ಸೇರಿದಂತೆ ಕಾರ್ಮಿಕ ಇಲಾಖೆಯ ಅಧಿಕಾರಿಗಳು ಇದ್ದರು.

ಶಿಕ್ಷಣದಿಂದ ಉತ್ತಮ ಪ್ರಜೆಯಾಗಲು ಸಾಧ್ಯ

ಚಲನಚಿತ್ರ ನಟ ಅದಿತಿ ಪ್ರಭುದೇವ ಮಾತನಾಡಿ, ಬಾಲ ಕಾರ್ಮಿಕರಾಗದಂತೆ ತಡೆಯುವುದು ಕೇವಲ ಸರಕಾರದ ಜವಾಬ್ದಾರಿ ಅಲ್ಲ, ಅದು ನಮ್ಮೆಲ್ಲರ ಜವಾಬ್ದಾರಿ ಕೂಡ ಆಗಿದೆ. ಮಕ್ಕಳನ್ನು ಓದಿಸಲಾಗದ ಪರಿಸ್ಥಿತಿಯಲ್ಲಿ ಎಷ್ಟೋ ಪೋಷಕರು ಇದ್ದಾರೆ. ಅಂತಹವರಿಗೊಂದು ಸಣ್ಣ ಸಹಾಯ ಮಾಡಿದರೆ ಎಷ್ಟೋ ಮಕ್ಕಳು ಬಾಲ ಕಾರ್ಮಿಕರಾಗುವುದು ತಪ್ಪಲಿದೆ. ಒಳ್ಳೆಯ ಶಿಕ್ಷಣ ಸಿಕ್ಕರೆ ಮಕ್ಕಳು ಉತ್ತಮ ಪ್ರಜೆ ಆಗುತ್ತಾರೆ. ನಮ್ಮ ಸುತ್ತಮುತ್ತ ಬಾಲ ಕಾರ್ಮಿಕರು ಕಂಡು ಬಂದರೆ ನಮ್ಮ ಜವಾಬ್ದಾರಿ ನಿರ್ವಹಿಸೋಣ ಎಂದರು.

ಬಿಎಂಟಿಸಿಯ ಯುಪಿಐ ವಹಿವಾಟು ಶೇ.50ಕ್ಕೇರಿಕೆ

ಬೆಂಗಳೂರು: ಬಿಎಂಟಿಸಿಯು ಡಿಜಿಟಲ್ ಪೇಮೆಂಟ್‌ನಲ್ಲಿ ಮಹತ್ವದ ದಾಖಲೆ ನಿರ್ಮಾಣ ಮಾಡಿದ್ದು, ಸಾರಿಗೆ ಸಂಸ್ಥೆಯ ಏಕೀಕೃತ ಪಾವತಿ ಇಂಟರ್‌ಫೇಸ್ ವಹಿವಾಟುಗಳು ಶೇ.50ರಷ್ಟು ದಾಖಲಾಗುತ್ತಿದೆ.

ಕ್ಯೂ ಆರ್ ಕೋಡ್ ಆಧಾರಿತ ಟಿಕೆಟ್ ಬಿಡುಗಡೆ ಮಾಡುವ ಸಂದರ್ಭದಲ್ಲಿ ಸಾಕಷ್ಟು ವಿರೋಧಗಳು ವ್ಯಕ್ತವಾಗಿತ್ತು. ಜನರು ಕ್ಯೂಆರ್ ಕೋಡ್ ಮೂಲಕ ಟಿಕೆಟ್ ಪಡೆಯಲು ಸಿದ್ಧರಿದ್ದರೂ ಕೂಡಾ ನಿರ್ವಾಹಕರು ಈ ವ್ಯವಸ್ಥೆಯನ್ನು ನಿರಾಕರಿಸುತ್ತಿದ್ದು, ನಗದು ಪಾವತಿಗೆ ಒತ್ತಾಯ ಮಾಡುತ್ತಿದ್ದರು. ಅಲ್ಲದೆ ಬಿಎಂಟಿಸಿಯು ಯುಪಿಐ ಸೇವೆ ಆರಂಭದ ವೇಳೆ ಸಂಸ್ಥೆಯು ಶೇ.30ರಷ್ಟು ಆದಾಯ ತಲುಪುವ ಗುರಿ ಹೊಂದಿದ್ದು, ಇದೀಗ ಶೇ.50ರಷ್ಟು ಹತ್ತಿರಕ್ಕೆ ತಲುಪಿದೆ ಎಂದು ಬಿಎಂಟಿಸಿ ಅಧಿಕಾರಿಗಳು ಹೇಳಿದ್ದಾರೆ. ಯುಪಿಐ ಪಾವತಿಯನ್ನು ಹೇಗೆ ಸ್ವೀಕರಿಸಬೇಕು ಮತ್ತು ಪಾವತಿ ಮಾಡಲಾಗಿದೆಯೇ ಅಥವಾ ಇಲ್ಲವೇ ಎಂಬುದನ್ನು ಹೇಗೆ ದೃಢೀಕರಿಸುವುದು ಎಂಬುದರ ಕುರಿತು ನಿರ್ವಾಹಕರಿಗೆ ತರಬೇತಿ ನೀಡಲಾಗಿದ್ದು, ಪ್ರಯಾಣಿಕರು ಹಾಗೂ ನಿರ್ವಾಹಕರಿಬ್ಬರೂ ಯುಪಿಐ ಪಾವತಿ ವ್ಯವಸ್ಥೆಯನ್ನು ಅಳವಡಿಸಿಕೊಂಡಿದ್ದರಿಂದ ಆದಾಯ ಹೆಚ್ಚಳವಾಗಿದೆ. ಇದೇ ವೇಳೆ ಯುಪಿಐ ಮೂಲಕ ಸಾರಿಗೆ ಸಂಸ್ಥೆಗೆ ಬರುತ್ತಿರುವ ಆದಾಯ ಕುರಿತ ಮಾಹಿತಿಯನ್ನು ಹಂಚಿಕೊಂಡಿದ್ದಾರೆ.

ಬಿಎಂಟಿಸಿಯ ದೈನಂದಿನ ಟಿಕೆಟ್ ಆದಾಯ ಸುಮಾರು 3 ಕೋಟಿ ರು. ಆಗಿದ್ದು, ಜನವರಿಯಲ್ಲಿ, ಮಾಸಿಕ ಯುಪಿಐ ಪಾವತಿಗಳು 10 ಕೋಟಿ ರು. ಆಗಿದ್ದು, ಫೆಬ್ರವರಿಯಲ್ಲಿ 19 ಕೋಟಿ ರು., ಮಾರ್ಚ್‌ನಲ್ಲಿ 21 ಕೋಟಿ ರು. ಮತ್ತು ಏಪ್ರಿಲ್‌ನಲ್ಲಿ 24 ಕೋಟಿ ರು. ಆದಾಯ ಬಂದಿದೆ. ಮೇ ತಿಂಗಳಲ್ಲಿ ದಾಖಲೆಯ 29.5 ಕೋಟಿ ರು. ಆದಾಯ ಬಂದಿದ್ದು. ಈ ಮೂಲಕ ಯುಪಿಐ ಮೂಲಕ ಶೇ.42 ರಷ್ಟು ಆದಾಯ ಬಂದಿದೆ. ಜೂನ್ ತಿಂಗಳಿನಲ್ಲಿ ಶೇ.45ರಷ್ಟು ದಾಟುವ ನಿರೀಕ್ಷೆಯಿದೆ ಎಂದು ಮಾಹಿತಿ ನೀಡಿದ್ದಾರೆ.

ಗೃಹ ಸಾಲ ಬಡ್ಡಿ ದರ ಕಡಿತ

ಬೆಂಗಳೂರು: ಕೆನರಾ ಬ್ಯಾಂಕ್ ತನ್ನ ಆಸ್ತಿ ಪೋರ್ಟ್‌ಫೋಲಿಯೊಗೆ ಅನ್ವಯವಾಗುವ ರೆಪೊ ಲಿಂಕ್ಡ್ ಬೆಂಚ್‌ಮಾರ್ಕ್ ಸಾಲದ ದರವನ್ನು ಶೇ.8.75 ರಿಂದ 8.25 ಕ್ಕೆ ಇಳಿಸಿದೆ. ಆರ್‌ಬಿಐ ತನ್ನ ಇತ್ತೀಚಿನ ಹಣಕಾಸು ನೀತಿ ಸಮಿತಿ (ಎಂಪಿಸಿ) ಸಭೆಯಲ್ಲಿ ರೆಪೊ ದರವನ್ನು ಶೇ.6 ರಿಂದ ಶೇ.5.50 ಕ್ಕೆ (50 ಬೇಸಿಸ್) ಇಳಿಸಿದ ನಂತರ ಕೆನರಾ ಬ್ಯಾಂಕ್ ಈ ನಿರ್ಧಾರ ತೆಗೆದುಕೊಂಡಿದೆ. ಬ್ಯಾಂಕ್, ಆರ್‌ಬಿಎಲ್‌ಆರ್ ಅನ್ನು ಶೇ.50 (50 ಬೇಸಿಸ್ ಪಾಯಿಂಟ್) ಕಡಿಮೆ ಮಾಡಿದೆ. ಇದು ಆರ್‌ಬಿಐನ ರೆಪೊ ದರದಲ್ಲಿನ ಇಳಿಕೆಯನ್ನು ನೇರವಾಗಿ ಪ್ರತಿಬಿಂಬಿಸುತ್ತದೆ.

ಈ ಕ್ರಮವು ಆರ್‌ಬಿಎಲ್‌ಆರ್‌ಗೆ ಲಿಂಕ್ ಮಾಡಲಾದ ಸಾಲಗಳನ್ನು ಹೊಂದಿರುವ ಗ್ರಾಹಕರಿಗೆ ಸಾಲ ಪಡೆಯುವ ವೆಚ್ಚವನ್ನು ಕಡಿಮೆ ಮಾಡುತ್ತದೆ. ಸಾಲದ ನಿಯಮಗಳನ್ನು ಅವಲಂಬಿಸಿ, ಗ್ರಾಹಕರು ಕಡಿಮೆ ಇಎಂಐ ಅಥವಾ ಕಡಿಮೆ ಸಾಲದ ಅವಧಿಯಿಂದ ಪ್ರಯೋಜನ ಪಡೆಯಬಹುದು. ಕೆನರಾ ಬ್ಯಾಂಕ್, ತನ್ನ ಗ್ರಾಹಕರಿಗೆ ಉತ್ತಮ ಬ್ಯಾಂಕಿಂಗ್ ಅನುಭವವನ್ನು ಒದಗಿಸುವ ಬದ್ಧತೆಯೊಂದಿಗೆ, ಆರ್‌ಬಿಎಲ್‌ಆರ್ ಅನ್ನು ಕಡಿಮೆ ಮಾಡುವ ಮೂಲಕ ಸಾಲಗಾರರಿಗೆ ಸೂಕ್ತ ಪ್ರಯೋಜನಗಳನ್ನು ನೀಡಿದೆ.

ರಾಜ ಸರಕಾರದ ವಿರುದ್ಧ ಬಿಜೆಪಿ ಕಾರ್ಯದರ್ಶಿ ಡಿ.ಎಸ್.ಅರುಣ್ ಆರೋಪ

ಹಿಂದೂ ದನಿ ಹತ್ತಿಕ್ಕುವ ಪ್ರಯತ್ನ

ಬೆಂಗಳೂರು: ರಾಜ್ಯ ಸರಕಾರದಿಂದ ಹಿಂದೂ ಧರ್ಮಪರ ಚಿಂತಕರ ದನಿ ಹತ್ತಿಕುವ ಪ್ರಯತ್ನವಾಗುತ್ತಿದೆ ಎಂದು ರಾಜ್ಯ ಬಿಜೆಪಿ ಕಾರ್ಯದರ್ಶಿ ಡಿ.ಎಸ್.ಅರುಣ್ ಆರೋಪಿಸಿದ್ದಾರೆ.

ಈ ಕುರಿತ ಪ್ರಕಟಣೆಯಲ್ಲಿ ಅವರು, ಇತ್ತೀಚೆಗೆ ರಾಜ್ಯದಲ್ಲಿ ಸಾರ್ವಜನಿಕರಿಂದ ಸರಕಾರದ ವಿರುದ್ಧ ಹಲವಾರು ಅಸಂತೋಷದ ಧ್ವನಿಗಳು ಎದ್ದಿರುವ ಹೊತ್ತಿನಲ್ಲಿ, ಜನರ ಗಮನವನ್ನು ಇತರ ವಿಷಯಗಳತ್ತ ತಿರುಗಿಸಲು ರಾಜ್ಯ ಸರಕಾರ ಹೊರಟಿದೆ. ಈ ಹಿಂದೆ ಹಿಂದೂ ಧರ್ಮಪರ ಬೆಂಬಲಿಗರನ್ನು ಉದ್ದೇಶಿಸಿ ಹಲವು ವಿಷಯಗಳಲ್ಲಿ ತಾತ್ಕಾಲಿಕ ವಾದ ವಿವಾದ ಉಂಟು ಮಾಡಿ, ದಿಕ್ಕು ತಪ್ಪಿಸುವ ಕೆಲಸ ಮಾಡಿತ್ತು. ಇದೀಗ ಚಿಂತಕ ಚಕ್ರವರ್ತಿ ಸೂಲಿಬೆಲೆ ಅವರ ಮೇಲೆ ರಾಜ್ಯ ಸರಕಾರದ ವಕ್ರ ದೃಷ್ಟಿ ಬಿದ್ದಿದೆ. ಅವರು ಯಾವುದೇ ಕೋಮು ಪ್ರಚೋದನಕಾರಿ ಭಾಷಣ ಮಾಡಿಲ್ಲವಾದರೂ, ರಾಜ್ಯದ ಎಲ್ಲಾ ಪೊಲೀಸ್ ಠಾಣೆಗಳಲ್ಲಿ ಚಕ್ರವರ್ತಿ ಸೂಲಿಬೆಲೆ ವಿರುದ್ಧ ಪ್ರಕರಣ ದಾಖಲಾಗಿದೆಯೇ ಎಂಬ ವಿಚಾರ ತಿಳಿದುಕೊಳ್ಳಲು ಸರಕಾರ ಹೊರಟಿರುವುದು ಒಂದು ಅನಗತ್ಯ ಪ್ರಯತ್ನವಾಗಿದೆ. ಈ ರೀತಿ ದನಿ ಹತ್ತಿಕ್ಕುವ ಕೆಲಸ ಮಾಡುವುದು ಪ್ರಜಾಪ್ರಭುತ್ವದ ಮೌಲ್ಯಗಳಿಗೆ ವಿರುದ್ಧವಾಗಿದೆ ಮತ್ತು ಜನಮನದಲ್ಲಿ ಗೊಂದಲ ಉಂಟುಮಾಡುವ ಪ್ರಯತ್ನವಾಗಿದೆ ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

ಸರಕಾರದಿಂದ ಈ ರೀತಿ ದಿಕ್ಕು ತಪ್ಪಿಸುವ ನೀತಿಯ ಬದಲು, ಸಾರ್ವಜನಿಕ ಸಮಸ್ಯೆಗಳಾದ ಗ್ಯಾರೆಂಟಿ ಯೋಜನೆಗಳನ್ನು ಗ್ಯಾರಂಟಿಯಾಗಿ ಜನತೆಗೆ ನೀಡುವುದು, ಶಾಂತಿ ಸುವ್ಯವಸ್ಥೆಯಲ್ಲಿ ಕುಂದು ಕೊರತೆ, ಪ್ರಜಾಪ್ರಭುತ್ವದಲ್ಲಿ ಪಾರದರ್ಶಕತೆಗೆ ಕೊರತೆ, ಆರ್ಥಿಕ ನಿರ್ವಹಣೆಯಲ್ಲಿನ ಅಸಮರ್ಥತೆ, ವಿದ್ಯುತ್ ದರ ಏರಿಕೆ ಮತ್ತು ಕೊರತೆ, ಬೇಸಾಯ ಸಮಸ್ಯೆಗಳಿಗೆ ಸೂಕ್ತ ಕ್ರಮ, ನೌಕರರ ನೇಮಕಾತಿಯಲ್ಲಿ ವಿಳಂಬ ಇಂತಹ ಸಾಕಷ್ಟು ವಿಚಾರಗಳಿಗೆ ಪರಿಹಾರ ನೀಡುವಲ್ಲಿ ಕೆಲಸ ಮಾಡಬೇಕು. ಚಕ್ರವರ್ತಿ ಸೂಲಿಬೆಲೆ ಅವರ ವಿರುದ್ಧ ಈ ರೀತಿ ಎಷ್ಟೇ ಪ್ರಯತ್ನ ಮಾಡಿದರು ಅವರ ದನಿ ತಗ್ಗಿಸಲಾಗುವುದಿಲ್ಲ, ಅವರ ಜತೆಗೆ ರಾಜ್ಯದ ಜನ ನಿಲ್ಲುತ್ತಾರೆ ಎಂದು ತಿಳಿಸಿದ್ದಾರೆ.

ವೀರಭದ್ರೇಶ್ವರ ಜಯಂತ್ಯುತ್ಸವ 2025 ಅಂಗವಾಗಿ ವೀರಶೈವ ಲಿಂಗಾಯತ ಸಂಘಟನಾ ವೇದಿಕೆ ಕೇಂದ್ರ ಕಚೇರಿಯಲ್ಲಿ ಪ್ರಚಾರ ಕಾರ್ಯಕ್ಕೆ ಜಗದ್ಗುರು ಭೀಮಾಶಂಕರಲಿಂಗ ಶಿವಾಚಾರ್ಯ ಭಗವತ್ಪಾದರು ಚಾಲನೆ ನೀಡಿದರು. ಸಂಘಟನೆಯ ರಾಷ್ಟ್ರೀಯ ಅಧ್ಯಕ್ಷ ಪ್ರದೀಪ್ ಕಂಕಣವಾಡಿ, ಕೆಯುಡಬ್ಲ್ಯುಜೆ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು, ಕನ್ನಡ ಚಳುವಳಿ ಹೋರಾಟಗಾರ ಪಾಲನೇತ್ರ ಸೋಮಶೇಖರ್, ಗಾಂಧಿ ಅರ್ಚಕರ ಮತ್ತು ಪುರೋಹಿತರ ಘಟಕದ ರಾಷ್ಟ್ರೀಯ ಅಧ್ಯಕ್ಷ ಚಂದ್ರಶೇಖರ ಶಾಸ್ತ್ರೀ ಕೊಡಿಕೊಪ್ಪಲು, ಶಂಭು ನಾಗಠಾಣ, ಮತ್ತಿತರರು ಉಪಸ್ಥಿತಿ ಇದ್ದರು.

ಚಿರಸ್ಮರಣೆ

ಶ್ರೀ ಚಿಕ್ಕಪುಟ್ಟಯ್ಯ

ನಿಧನ: 13.06.2000

ನೀವು ನಮ್ಮನ್ನಗಲಿ ಇಂದಿಗೆ 25 ವರ್ಷಗಳು ಉರುಳಿವೆ.

ನಿಮ್ಮ ಆದರ್ಶಮಯ ಜೀವನ ಪ್ರೀತಿ ವಾತ್ಸಲ್ಯ ನಮ್ಮ ಮನಸ್ಸಿನಲ್ಲಿ ಸದಾ ಹಸಿರಾಗಿ ಉಳಿದಿದೆ.

ಸದಾ ನಿಮ್ಮ ನೆನಪಿನಲ್ಲಿ

ಮಕ್ಕಳು, ಸೊಸೆ ಮತ್ತು ಮೊಮ್ಮಕ್ಕಳು ಹಾಗೂ ಕುಟುಂಬ ವರ್ಗ

ವಿಶ್ವವಾಣಿ

ಸಂಪಾದಕೀಯ

ದುರದೃಷ್ಟಕರ ದುರಂತ

ಗುಜರಾತ್‌ನ ಅಹಮದಾಬಾದ್‌ನಿಂದ ಲಂಡನ್‌ನತ್ತ ಹೊರಟಿದ್ದ ಏರ್‌ಇಂಡಿಯಾ ಸಂಸ್ಥೆಯ ಬೋಯಿಂಗ್ 787 ವಿಮಾನವು, ಟೇಕಾಫ್ ಆದ ಐದೇ ನಿಮಿಷಗಳಲ್ಲಿ ನಗರದ ಕಟ್ಟಡವೊಂದರ ಮೇಲೆ ಪತನಗೊಂಡು ಸ್ಫೋಟಿಸಿದ ದುರಂತ ಘಟನೆ ನಿಜಕ್ಕೂ ಮನವನ್ನು ಕಲಕುವಂಥದ್ದು. ವಿಮಾನದಲ್ಲಿದ್ದ 230 ಪ್ರಯಾಣಿಕರು ಮತ್ತು 12 ವಿಮಾನ ಸಿಬ್ಬಂದಿ ಪೈಕಿ ಒಬ್ಬ ಪ್ರಯಾಣಿಕರಷ್ಟೇ ಬದುಕುಳಿದಿದ್ದಾರೆ ಎನ್ನಲಾಗಿದೆ. ವಿಮಾನ ಪತನಗೊಂಡ ವೈದ್ಯಕೀಯ ಕಾಲೇಜು ಹಾಸ್ಟೆಲ್‌ನಲ್ಲಿದ್ದ ಐವರು ವಿದ್ಯಾರ್ಥಿಗಳು ಕೂಡ ದುರ್ಘಟನೆಯಲ್ಲಿ ಅಸುನೀಗಿದ್ದಾರೆ. 2010ರಲ್ಲಿ ಮಂಗಳೂರಿನಲ್ಲಿ ಘಟಿಸಿದ ಏರ್‌ಇಂಡಿಯಾದ ವಿಮಾನ ದುರಂತದಲ್ಲಿ, ಪ್ರಯಾಣಿಕರು ಮತ್ತು ಸಿಬ್ಬಂದಿ ಸೇರಿದಂತೆ ವಿಮಾನದಲ್ಲಿದ್ದ 166 ಜನರಲ್ಲಿ 158 ಮಂದಿ ಅಸುನೀಗಿದ್ದರು. ಈ ಬಳಿಕ ದೇಶದಲ್ಲಿ ನಡೆದ ಅತಿ ದೊಡ್ಡ ವಿಮಾನ ದುರಂತವಿದು. ಟಾಟಾ ಸಂಸ್ಥೆ ಏರ್ ಇಂಡಿಯಾ ಸಂಸ್ಥೆಯನ್ನು ಖರೀದಿಸಿದ ಬಳಿಕ ನಡೆದ ಅತಿ ದೊಡ್ಡ ದುರ್ಘಟನೆ ಇದಾಗಿದೆ. ಪ್ರಸ್ತುತ ಅಹಮದಾಬಾದ್ ವಿಮಾನ ದುರಂತಕ್ಕೆ ಸಂಬಂಧಿಸಿ ನೋಡುವುದಾದರೆ, ವಿಮಾನ ಪತನವಾಗುವುದಕ್ಕೂ ಮುನ್ನ ಅದರ ಪೈಲಟ್ ಅಹಮದಾಬಾದ್‌ನ ನಿಯಂತ್ರಣ ಕೇಂದ್ರಕ್ಕೆ 'ಮೇ ಡೇ' ಸಂದೇಶ (ವಿಮಾನಯಾನದ ವೇಳೆಯ ಕೊನೆಯ ಅಪಾಯದ ಎಚ್ಚರಿಕೆ ಸಂದೇಶ) ರವಾನಿಸಿದ್ದರು. ದುರಂತಕ್ಕೆ ಎಂಜಿನ್ ವೈಫಲ್ಯ ಸೇರಿದಂತೆ ತಾಂತ್ರಿಕ ದೋಷ ಕಾರಣವಾಗಿದೆಯೇ ಅಥವಾ ಪೈಲಟ್ ತಪ್ಪಿನಿಂದ ಘಟನೆ ನಡೆದಿದೆಯೇ ಎಂಬುದರ ಕೂಲಂಕಷ ಪರಿಶೀಲನೆ ನಡೆಸಬೇಕಿದ್ದು, ವಿಮಾನದಲ್ಲಿ ಅಡಕವಾಗಿರುವ 'ಬ್ಲ್ಯಾಕ್ ಬಾಕ್ಸ್' ಈ ನಿಟ್ಟಿನಲ್ಲಿ ಒಂದಷ್ಟು ಪೂರಕ ಮಾಹಿತಿಗಳನ್ನು ನೀಡುವ ಸಾಧ್ಯತೆಯಿದೆ. ಇವಿಷ್ಟನ್ನು ಹೊರತುಪಡಿಸಿ, ಈ ದುರಂತದ ಹಿಂದೆ ಯಾವುದಾದರೂ ವಿಧ್ವಂಸಕ ಶಕ್ತಿಗಳ ಕೈವಾಡವೇನಾದರೂ ಇದೆಯೇ ಎಂಬುದನ್ನು ಕೂಡ ಕೇಂದ್ರ ಸರಕಾರವು ಕಂಡುಕೊಳ್ಳುವ ಅನಿವಾರ್ಯತೆಯಿದೆ. ಕಾಶ್ಮೀರದ ಪಹಲ್ಗಾಮ್‌ನಲ್ಲಿ ಉಗ್ರರು ಅಮಾಯಕರ ಮಾರಣಹೋಮ ನಡೆಸಿದಾಗಲೂ ಆ ಕುರಿತು ಸುಳಿವು ಸಿಕ್ಕಿರಲಿಲ್ಲ. ತರುವಾಯದಲ್ಲಿ ಭಾರತ ಕೈಗೊಂಡ 'ಆಪರೇಷನ್ ಸಿಂದೂರ' ಕಾರ್ಯಾಚರಣೆಯಿಂದಾಗಿ ಉಗ್ರವಾದಿಗಳು ಕೆರಳಿ ಕೆಂಡವಾಗಿರುವುದನ್ನು ಬಿಡಿಸಿ ಹೇಳಬೇಕಿಲ್ಲ. ಅಂಥ ಯಾರಾದರೂ ಇಂಥ ವಿಧ್ವಂಸಕ ಕೃತ್ಯಕ್ಕೆ ಸಂಚು ಹೂಡಿರಬಹುದೇ ಎಂಬ ಅಂಶವನ್ನು ಪತ್ತೆಹಚ್ಚುವುದಕ್ಕೂ ಈ ಸಂದರ್ಭದಲ್ಲಿ ಮುಂದಾಗಬೇಕಿದೆ.

ಸೊಂಪಾದಕೀಯ

ಮಂಗ್ಲಿ ಮಾದಕತೆ

ಪುಷ್ಪ' ಚಿತ್ರದ 'ಊ ಅಂತೀಯಾ ಮಾವ, ಊಹ್ಞೂ ಅಂತೀಯಾ' ಹಾಡು ಮತ್ತು ಕನ್ನಡದ 'ರಾಬರ್ಟ್' ಚಿತ್ರದ ತೆಲುಗು ಅವತರಣಿಕೆಯ 'ಕಣ್ಣೇ ಅದಿರಿಂದಿ' ಹಾಡುಗಳ ಮೂಲಕ ಫೇಮಸ್ ಆದ ಮಾದಕ ಕಂಠದ ಗಾಯಕಿ ಮಂಗ್ಲಿ ಈಗ ಅದೇ ಮಾದಕತೆಯ ವಿಷಯಕ್ಕಾಗಿ ಸಂಕಷ್ಟದಲ್ಲಿದ್ದಾರೆ. ತಮ್ಮ ಹುಟ್ಟುಹಬ್ಬದ ಪಾರ್ಟಿ ಆಯೋಜಿಸಿದ್ದ ಮಂಗ್ಲಿ ಅವರಿಗೆ ಅಲ್ಲಿದ್ದ ಹಲವರು ಗಾಂಜಾ ಸೇವಿಸಿದ ಕಾರಣಕ್ಕೆ ಪೊಲೀಸರ ಅತಿಥಿ ಆಗುವ ಅನಿವಾರ್ಯತೆ ಬಂದಿದೆ. ಹೈದರಾಬಾದ್ ಹೊರಭಾಗದ ರೆಸಾರ್ಟ್‌ನಲ್ಲಿ ಮಂಗ್ಲಿ ಪಾರ್ಟಿ ಕೊಡ್ತಾ ಇದ್ರು. ಅದರಲ್ಲಿ 50ಕ್ಕೂ ಹೆಚ್ಚು ಮಂದಿ ಇದ್ದು ಅದರಲ್ಲಿ ಅನಧಿಕೃತ ವಿದೇಶಿ ಮದ್ಯದ ಬಾಟಲಿಗಳು ಸಿಕ್ಕಿವೆ. ಜತೆಗೆ 9 ಜನ ಗಾಂಜಾ ಸೇವಿಸಿರೋದು ದೃಢಪಟ್ಟಿದೆ. ಅನುಮತಿ ಇಲ್ಲದೆ ಅನಧಿಕೃತ ಮದ್ಯ ಶೇಖರಿಸಿದ್ದಕ್ಕೆ , ಮಾದಕ ದ್ರವ್ಯ ಸ್ವೀಕರಿಸಿದ್ದಕ್ಕೆ ಮತ್ತು ಇದರ ಜತೆಗೆ ಖಾಸಗಿ ರೆಸಾರ್ಟ್ ಮಾಲೀಕ ಕೂಡಾ ಮದ್ಯ ಪ್ರವೇಶಿಸಿ ತಮ್ಮ ಅನುಮತಿ ಇಲ್ಲದೆ ಮದ್ಯ ಸೇವನೆ ಮಾಡಿದ್ದಾರೆ ಅಂತ ಆರೋಪಿಸಿದ್ದಕ್ಕೆ ಮಂಗ್ಲಿಗೆ ಆತಂಕ ಎದುರಾಗಿದೆ. ಆದರೆ ಈ ಬಗ್ಗೆ ಮಂಗ್ಲಿ ಇನ್ನೂ ಪ್ರತಿಕ್ರಿಯೆ ನೀಡಿಲ್ಲ. ಗಾಂಜಾ ಸೇವನೆ ಬಗ್ಗೆ 'ಊ ಅಂತೀಯಾ, ಊಹ್ಞೂ ಅಂತೀಯಾ' ಅನ್ನೋ ಪ್ರಶ್ನೆಗೆ ಉತ್ತರ ಸಿಕ್ಕಿಲ್ಲವಾದರೂ ಗಾಂಜಾ ಸೇವಿಸಿರುವ ಮಂದಿ ಸಿಕ್ಕಿಬಿದ್ದಿರೋದ್ರಿಂದ ಮಂಗ್ಲಿಗೆ ಆಪತ್ತು ತಪ್ಪಿದ್ದಲ್ಲ. 'ಮಂಗ್ಲಿ ಹಾಡುಗಳು ಗಮ್ಮತ್ತಾಗಿವೆ' ಅಂದ ವರಿಗೆ ಈಗ ಮತ್ತಿನ ವಿಷಯದಲ್ಲಿ ಮಂಗ್ಲಿ ಸಿಕ್ಕಿ ಹಾಕಿಕೊಂಡಿರೋದು ಗೊತ್ತಾಗಿ ಮೂಗಿನ ಮೇಲೆ ಬೆರಳಿಟ್ಟುಕೊಂಡಿದ್ದಾರೆ. ಆದರೆ ಈ ನಶೆಯ ಪ್ರಕರಣದ ಕಿಕ್ಕಲ್ಲಿ ಮಂಗ್ಲಿಗೆ ಹೆಚ್ಚಿನ ಕಷ್ಟ ಎದುರಾಗುತ್ತದೋ ಅಥವಾ ಈ ಪ್ರಕರಣದ ನಶೆ ಪ್ರಭಾವಿಗಳ ಕಾರಣಕ್ಕೆ ಬೇಗನೇ ಇಳಿದುಹೋಗುತ್ತದೋ ಅನ್ನೋದನ್ನು ಕಾದುನೋಡಬೇಕಿದೆ.

ಸಂಪಾದಕರ ಸದ್ಯಶೋಧನೆ

ಬೋಯಿಂಗ್ 787-8 ಡ್ರೀಮ್‌ಲೈನರ್

ಅಹಮದಾಬಾದಿನಿಂದ ಲಂಡನ್‌ಗೆ ಹೊರಟಿದ್ದ ಏರ್ ಇಂಡಿಯಾ ವಿಮಾನ ಆಕಾಶಕ್ಕೆ ನೆಗೆದ ಎರಡು ನಿಮಿಷಗಳಲ್ಲಿ ಅಪಘಾತಕ್ಕೀಡಾಗಿ 242 ಮಂದಿ ಹತರಾದರು. ಆ ವಿಮಾನ ಅಮೆರಿಕದ ಬೋಯಿಂಗ್ ಕಂಪನಿ ನಿರ್ಮಿಸಿದ 787-8 ಡ್ರೀಮ್‌ಲೈನರ್ ಎಂಬುದು ಗಮನಾರ್ಹ. ಇದು ಅತ್ಯಾಧುನಿಕ, ದೀರ್ಘ ಪ್ರಯಾಣಕ್ಕೆ ಉಪಯುಕ್ತವಾದ, ಇಂಧನ ಉಳಿತಾಯಕ್ಕೆ ಹೆಸರುವಾಸಿಯಾದ ವಿಮಾನವಾಗಿದೆ. 2009ರಲ್ಲಿ ಇದನ್ನು ಮೊದಲ ಬಾರಿಗೆ ಹಾರಿಸಿ, 2011ರಲ್ಲಿ ಇದರ ಮೊದಲ ವಾಣಿಜ್ಯ ಹಾರಾಟ ಆರಂಭವಾಯಿತು. ಸುಮಾರು 13,530 ಕಿ.ಮೀ. ದೂರ ಕ್ರಮಿಸಬಲ್ಲ 242 ಜನ ಪ್ರಯಾಣಿಕರು ಕುಳಿತುಕೊಳ್ಳಬಹುದಾದ (ವಿಮಾನ ಸಂಸ್ಥೆಯ ಅವಶ್ಯಕತೆಗೆ ಅನುಗುಣವಾಗಿ ಈ ಸಂಖ್ಯೆಯಲ್ಲಿ ಬದಲಾವಣೆ ಸಾಧ್ಯ) ಆಸನ ಹೊಂದಿರುವ ಈ ವಿಮಾನದ ಮುಖ್ಯ ವೈಶಿಷ್ಟ್ಯವೆಂದರೆ ಇದರ ನಿರ್ಮಾಣದಲ್ಲಿ ಅತ್ಯಾಧುನಿಕ ಸಂಯೋಜಿತ ವಸ್ತುಗಳನ್ನು (composite materials) ಹೆಚ್ಚಿನ ಪ್ರಮಾಣದಲ್ಲಿ ಬಳಸಿರುವುದು. ಈ ವಿಮಾನದಲ್ಲಿ ಸುಮಾರು ಶೇ.50ರಷ್ಟು ಕಾರ್ಬನ್-ಫೈಬರ್ ಕಾಂಪೋಸಿಟ್‌ಗಳು, ಶೇ.20ರಷ್ಟು ಅಲ್ಯೂಮಿನಿಯಂ, ಶೇ. 15ರಷ್ಟು ಟೈಟಾನಿಯಂ, ಶೇ.10ರಷ್ಟು ಉಕ್ಕು ಮತ್ತು ಶೇ. 5ರಷ್ಟು ಇತರ ವಸ್ತುಗಳನ್ನು ಬಳಸಲಾಗಿದೆ. ಇದರಿಂದಾಗಿ ವಿಮಾನ ಹೆಚ್ಚು ಹಗುರವಾಗಿದ್ದು, ಇಂಧನದ ಬಳಕೆಯನ್ನು ತಗ್ಗಿಸುತ್ತದೆ. ಈ ವಿಮಾನ ಆಕರ್ಷಕ ವಿನ್ಯಾಸ, ಆಧುನಿಕ ತಂತ್ರಜ್ಞಾನ ಮತ್ತು ಪ್ರಯಾಣಿಕರಿಗೆ ಒದಗಿಸುವ ಅತ್ಯುತ್ತಮ ಅನುಭವದಿಂದಾಗಿ 'ಡ್ರೀಮ್‌ಲೈನರ್' ಎಂಬ ಹೆಸರಿಗೆ ತಕ್ಕಂತಿದೆ. ಈ ವಿಮಾನವು ಏರ್‌ಲೈನ್‌ಗಳಿಗೆ ಆರ್ಥಿಕ ಲಾಭವನ್ನು ನೀಡುವುದರ ಜತೆಗೆ ಪ್ರಯಾಣಿಕರಿಗೆ ಸೌಕರ್ಯದಾಯಕ ಮತ್ತು ಆನಂದದಾಯಕ ಯಾತ್ರೆಯನ್ನು ಒದಗಿಸುತ್ತದೆ. ಇದು ಪರಿಸರ ಸ್ನೇಹಿ ವಿಮಾನವಾಗಿದ್ದು ವಿಮಾನಯಾನ ಉದ್ಯಮದಲ್ಲಿ ಕಾರ್ಬನ್ ಫೂಟ್‌ಪ್ರಿಂಟ್ ಕಡಿಮೆ ಮಾಡಲು ಸಹಾಯ ಮಾಡುತ್ತದೆ. ಡ್ರೀಮ್‌ಲೈನರ್‌ನ ಕಿಟಕಿಗಳು ಇತರ ವಿಮಾನಗಳಿಗಿಂತ ಶೇ. 30ರಷ್ಟು ದೊಡ್ಡದಾಗಿದ್ದು, ಇದು ಪ್ರಾಕೃತಿಕ ಬೆಳಕು ಹೆಚ್ಚು ಒಳಬರುವಂತೆ ಮಾಡುತ್ತದೆ. ತಮಗೆ ಬೇಕಾದಂತೆ ಕಿಟಕಿಗಳ ಗಾಜಿನ ತೀವ್ರತೆಯನ್ನು ಎಲೆಕ್ಟ್ರೋಕ್ರೋಮಿಕ್ ಡಿಮ್ಮಿಂಗ್ ತಂತ್ರಜ್ಞಾನದಿಂದ ನಿಯಂತ್ರಿಸಬಹುದು. ಇದರಿಂದ ಸಾಂಪ್ರದಾಯಿಕ ಕಿಟಕಿಯ ಶೇಡ್‌ಗಳ ಅಗತ್ಯವಿಲ್ಲ. 787-8ರ ಕ್ಯಾಬಿನ್ ಒತ್ತಡವನ್ನು 6,000 ಅಡಿ ಎತ್ತರದ ಒತ್ತಡಕ್ಕೆ ಸಮಾನವಾಗಿರುವಂತೆ ಹೊಂದಿಸಲಾಗಿದೆ (ಸಾಮಾನ್ಯ ವಿಮಾನಗಳಲ್ಲಿ ಇದು 8,000 ಅಡಿಗಳಿಗೆ ಸೆಟ್ ಆಗಿರುತ್ತದೆ). ಇದರಿಂದ ಪ್ರಯಾಣಿಕರಿಗೆ ಆಮ್ಲಜನಕ ಹೆಚ್ಚಾಗಿ ಲಭ್ಯವಾಗುತ್ತದೆ, ಇದು ದೀರ್ಘ-ದೂರದ ಯಾತ್ರೆಯಲ್ಲಿ ಆಯಾಸ ಮತ್ತು ತಲೆನೋವನ್ನು ಕಡಿಮೆ ಮಾಡುತ್ತದೆ. ಡ್ರೀಮ್‌ಲೈನರ್‌ನ ಕ್ಯಾಬಿನ್‌ನಲ್ಲಿ ತೇವಾಂಶ ಅಥವಾ ಆರ್ದ್ರತೆಯ ಮಟ್ಟ ಶೇ.15ರಷ್ಟು ಇರಿಸಬಹುದು. ಇದು ಸಾಮಾನ್ಯ ವಿಮಾನಗಳಿಗಿಂತ ಎರಡರಿಂದ ಮೂರು ಪಟ್ಟು ಹೆಚ್ಚು, ಇದರಿಂದ ಒಣಗಿದ ಗಾಳಿಯಿಂದ ಉಂಟಾಗುವ ಒಣಚರ್ಮ, ಕಣ್ಣಿನ ಕಿರಿಕಿರಿ ಮತ್ತು ಗಂಟಲಿನ ಒಣಗುವಿಕೆ ಕಡಿಮೆಯಾಗುತ್ತವೆ. ಎಂಜಿನ್‌ಗಳು ಮತ್ತು ಏರೋಡೈನಮಿಕ್ ವಿನ್ಯಾಸದಿಂದಾಗಿ ಕ್ಯಾಬಿನ್‌ನ ಶಬ್ದದ ಮಟ್ಟವು ಸಾಂಪ್ರದಾಯಿಕ ವಿಮಾನಗಳಿಗಿಂತ ಶೇ.60ರಷ್ಟು ಕಡಿಮೆಯಾಗಿದೆ. ಇದು ಪ್ರಯಾಣಿಕರಿಗೆ ಶಾಂತವಾದ ವಾತಾವರಣವನ್ನು ಒದಗಿಸುತ್ತದೆ. 787-8ರಲ್ಲಿ ಸಂಪೂರ್ಣ ಫ್ಲೈ-ಬೈ-ವೈರ್ ತಂತ್ರಜ್ಞಾನವನ್ನು ಬಳಸಲಾಗಿದೆ, ಇದರಲ್ಲಿ ಯಾಂತ್ರಿಕ ಕೇಬಲ್‌ಗಳ ಬದಲಿಗೆ ಇಲೆಕ್ಟ್ರಾನಿಕ್ ಸಿಗ್ನಲ್‌ಗಳು ವಿಮಾನದ ಎಲ್ಲ ಭಾಗಗಳನ್ನು ನಿಯಂತ್ರಿಸುತ್ತವೆ. ಇದು ನಿಖರವಾದ ನಿಯಂತ್ರಣವನ್ನು ಒದಗಿಸುತ್ತದೆ ಮತ್ತು ತೂಕವನ್ನು ಕಡಿಮೆ ಮಾಡುತ್ತದೆ. 2011ರಲ್ಲಿ, ಈ ವಿಮಾನ 19,835 ಕಿ.ಮೀ. ದೂರವನ್ನು 22 ಗಂಟೆ 48 ನಿಮಿಷಗಳಲ್ಲಿ ಕ್ರಮಿಸಿ, ಗಿನ್ನೆಸ್ ವಿಶ್ವ ದಾಖಲೆಯನ್ನು ಸ್ಥಾಪಿಸಿತು. ಡ್ರೀಮ್‌ಲೈನರ್‌ನ ಯಶಸ್ಸಿನ ಹೊರತಾಗಿಯೂ, ಇದರ ಅಭಿವೃದ್ಧಿ ಮತ್ತು ಆರಂಭಿಕ ದಿನಗಳಲ್ಲಿ ಕೆಲವು ಸವಾಲುಗಳನ್ನು ಎದುರಿಸಿತು. 2013'ಲ್ಲಿ, ಲಿಥಿಯಂ-ಐಯಾನ್ ಬ್ಯಾಟರಿಗಳಿಂದ ಉಂಟಾದ ಒಂದೆರಡು ಘಟನೆಗಳಿಂದಾಗಿ ಎಲ್ಲ ವಿಮಾನಗಳನ್ನು ತಾತ್ಕಾಲಿಕವಾಗಿ ಗ್ರೌಂಡ್ ಮಾಡಲಾಯಿತು. ಆದರೆ, ಬೋಯಿಂಗ್ ಈ ಸಮಸ್ಯೆಯನ್ನು ಶೀಘ್ರವಾಗಿ ಪರಿಹರಿಸಿತು. ಈಗ 787-8 ಒಂದು ವಿಶ್ವಾಸಾರ್ಹ ವಿಮಾನ ಎಂದು ಪರಿಗಣಿತವಾಗಿದೆ. ಆದರೂ ಈ ವಿಮಾನ ಅಹಮದಾಬಾದಿನಲ್ಲಿ ಅಪಘಾತಕ್ಕೀಡಾಗಿರುವುದು ಮತ್ತೆ ಹತ್ತಾರು ಸಂದೇಹಗಳನ್ನು ಮೂಡಿಸಿದೆ.

ಜಿಮ್ಮಿ ಕಾರ್ಟರ್ ಮತ್ತು ಇನ್ನೊಂದೆರಡು ಮರಣಶಯ್ಯೆಯ ಕಥೆಗಳು

ಶಿಶಿರಕಾಲ

ಶಿಶಿರ್ ಹೆಗಡೆ

shishirh@gmail.com

ಹೆಚ್ಚಿನ ರಾಜಕಾರಣಿಗಳ ಬದುಕು ಗಂಜಿಯಲ್ಲಿ ಬಿದ್ದ ನೊಣದಂತೆ, ಒಮ್ಮೆ ರಾಜಕೀಯಕ್ಕೆ ಬಿದ್ದವರು ಅಲ್ಲಿಂದ ಮತ್ತೆಂದೂ ಮೇಲೆದ್ದು ಬರಲಾರರು. ಅವರಿಗೆ ಮುಕ್ತಿ ಇಲ್ಲ. ಕೈಕಾಲು ನಡುಗುವ, ಬಾಯಿ ತೊದಲುವ, ನಡೆಯಲಾಗದೆ ಡೈಪರ್ ಧರಿಸುವ ಸ್ಥಿತಿ ಮುಟ್ಟಿದರೂ, ರಾಜಕಾರಣವನ್ನು ಮಾತ್ರ ಬಿಲ್‌ಕುಲ್ ಬಿಡುವುದಿಲ್ಲ. ವಯಸ್ಸು ಎಂಬತ್ತು-ತೊಂಬತ್ತು ದಾಟಿದರೂ ರಾಜಕೀಯ ನಿಲ್ಲುವುದಿಲ್ಲ. ಅಧಿಕಾರ- ಇನ್ನೂ ಬೇಕು. ತಾನು ಹೇಳಿದ್ದು- ಇನ್ನೂ ನಡೆಯಬೇಕು. ಜನರು ಜೈಕಾರ ಹಾಕುತ್ತಿರಬೇಕು. ತನ್ನ ಮುಂದಿನ ತಲೆಮಾರು ರಾಜಕೀಯದಲ್ಲಿ ಸ್ಥಾಪಿತವಾಗಬೇಕು. ಥೋ, ಇವರದು ಆಸ್ತಿಯಷ್ಟೇ ಆಸೆಯೂ ಮೂರ್ನಾಲ್ಕು ಜನ್ಮಕ್ಕಾಗುವಷ್ಟು! ತೃಪ್ತಿ-ಮುಕ್ತಾಯ-ನಿವೃತ್ತಿ ಎಂಬುದು ಇಲ್ಲವೇ ಇಲ್ಲ. ಇದು ನಮ್ಮ ದೇಶದ ಕಥೆ ಮಾತ್ರವಲ್ಲ. ಯಾವುದೇ ದೇಶ-ಕಾಲದಲ್ಲಿಯೂ ರಾಜಕಾರಣಿಗಳೆಂದರೆ ಹೆಚ್ಚು ಕಡಿಮೆ ಹೀಗೆಯೇ. ಯಾವ ರಾಜಕಾರಣಿಯನ್ನೇ ಕೇಳಿ- 'ರಾಜಕಾರಣ ಸಾಕಾಗಿದೆ, ಸರಿಯಿಲ್ಲ' ಎಂದೇ ಹೇಳುವುದು. ಆದರೆ ಯಾರೊಬ್ಬರೂ ಬಿಡಲೊಲ್ಲರು. ಒಬ್ಬೊಬ್ಬರದು ಒಂದೊಂದು ಅನಿವಾರ್ಯತೆಯ ಸಿದ್ಧ ಕಾರಣ. ರಾಜಕೀಯದಾಚೆಯ ಬದುಕು ಸಾಧ್ಯವೇ ಇಲ್ಲ. ಇದು ಅವರದೇ ನಿರ್ಬಂಧ.

ಈ ಎಲ್ಲದಕ್ಕೆ ಅಪವಾದವಾಗಿ ಬದುಕಿದವರು ಇಲ್ಲವೆಂದಲ್ಲ, ಆದರೆ ಬಹಳ ವಿರಳ. ಅಂಥ ವಿರಳಾತಿವಿರಳರಲ್ಲಿ ಅಮೆರಿಕದ ಅಧ್ಯಕ್ಷ ಜಿಮ್ಮಿ ಕಾರ್ಟರ್ ಕೂಡ ಒಬ್ಬರು. ಸಾಮಾನ್ಯವಾಗಿ, ಅಮೆರಿಕದ ಅಧ್ಯಕ್ಷರಾದವರು ತಮ್ಮ ಅವಧಿ ಮುಗಿಯುತ್ತಿದ್ದಂತೆ ಯಾವುದೋ ಬೀಚ್ ಬದಿಯ ದೊಡ್ಡ ಬಂಗಲೆಗಳೊಳಗೆ ಸೇರಿಕೊಳ್ಳುತ್ತಾರೆ. ಸಾಮಾನ್ಯವಾಗಿ 25-30 ಬೆಡ್‌ರೂಮ್‌ನ ಹತ್ತಿಪ್ಪತ್ತು ಎಕರೆ ಜಾಗದ ಮನೆ, ಆಳುಕಾಳು, ರಕ್ಷಣೆಗೆ ಸೀಕ್ರೆಟ್ ಸರ್ವೀಸ್‌ನವರು. ಸ್ವಂತ ವಿಮಾನದಲ್ಲೇ ಹಾರಾಟ. ಅಷ್ಟೇ ಅಲ್ಲ, ನಿವೃತ್ತರಾಗುತ್ತಿದ್ದಂತೆ ದೊಡ್ಡ ದೊಡ್ಡ ಕಾರ್ಪೊರೇಟ್ ಕಂಪನಿಗಳ ಬೋರ್ಡ್ ಮೆಂಬರ್ ಆಗುತ್ತಾರೆ, ಭಾಷಣಕ್ಕೆ ಲಕ್ಷಗಟ್ಟಲೆ ಡಾಲರ್ ಗೌರವಧನ ಪಡೆಯುತ್ತಾರೆ, ವಶೀಲಿ ವ್ಯವಹಾರಕ್ಕೆ ಇಳಿಯುತ್ತಾರೆ, ಪುಸ್ತಕ ಬರೆಯುತ್ತಾರೆ ಇತ್ಯಾದಿ. ಈ ರೀತಿ ಬಹುಕೃತ ವೇಷ ಧರಿಸಿ ಯಥೇಚ್ಛ ದುಡಿಯುತ್ತಾರೆ. ಅದೇ ಸಮಯದಲ್ಲಿ ರಾಜಕೀಯವನ್ನೂ ಮುಂದುವರಿಸಿಕೊಂಡು ಹೋಗುತ್ತಾರೆ.

ಆದರೆ ಜಿಮ್ಮಿ ಕಾರ್ಟರ್ ಮಾತ್ರ ಇದೆಲ್ಲದಕ್ಕೂ ಅಪವಾದ. ಜಿಮ್ಮಿ ಅಧ್ಯಕ್ಷ ಪದವಿಯನ್ನು ಮುಗಿಸಿದ ಮಾರನೆಯ ದಿನ ವೈಟ್‌ಹೌಸ್‌ನಿಂದ ಹೊರಟುಹೋದದ್ದು ಜಾರ್ಜಿಯಾದ ತನ್ನ ಚಿಕ್ಕ ಮನೆಗೆ. ಚಿಕ್ಕದು ಎಂದರೆ ಚಿಕ್ಕದೇ- ಇಂದಿನ ಕಾಲಮಾನದಲ್ಲಿ ಎರಡು ಲಕ್ಷ ಡಾಲರ್. ಅಮೆರಿಕದ ಕೆಳಮಧ್ಯಮ ವರ್ಗದವರು ವಾಸಿಸುವ ಮನೆ. ಜಿಮ್ಮಿ ಕಾರ್ಟರ್ ಅಧ್ಯಕ್ಷರಾಗಿದ್ದಾಗ ಪತ್ರಕರ್ತರು, ''ರಿಟೈರ್ಡ್ ಆದ ನಂತರ ಎಲ್ಲಿಗೆ ಹೋಗುತ್ತೀರಿ?'' ಎಂದು ಕೇಳಿದ್ದರಂತೆ. ಅದಕ್ಕೆ ಜಿಮ್ಮಿ ''ನಾನು ಜಾರ್ಜಿಯಾದ ನನ್ನ ಮನೆಗೆ ಹೋಗುತ್ತೇನೆ'' ಎಂದು ಹೇಳಿದ್ದರಂತೆ. ಆಗ ಪತ್ರಕರ್ತರು ಇಪ್ಪತ್ತು ವರ್ಷ ಹಳೆಯ ಆ ಮುರುಕು ಮನೆಯನ್ನು ತೋರಿಸಿ, ಜಿಮ್ಮಿ ಜೋಕ್ ಮಾಡುತ್ತಿದ್ದಾರೆ ಎಂದು ಬರೆದುಕೊಂಡಿದ್ದರಂತೆ. ಜಿಮ್ಮಿ ಕಾರ್ಟರ್ ಅಧಿಕಾರ ಬಿಟ್ಟು ಕೊನೆಯ ಬಾರಿ ವೈಟ್ ಹೌಸ್‌ನಿಂದ ಹೊರಡುವಾಗ ಹೇಳಿದ ಮಾತುಗಳು ಇವು "I didn't want to capitalize on being president. I didn't want to be rich. I have everything I need''- ''ನಾನು ಅಮೆರಿಕದ ಮಾಜಿ ಅಧ್ಯಕ್ಷಗಿರಿಯನ್ನು ಸ್ವಂತಕ್ಕೆ ಬಳಸಿಕೊಳ್ಳುವುದಿಲ್ಲ. ನನಗೆ ಶ್ರೀಮಂತನಾಗಬೇಕು ಎಂದು ಮೊದಲೂ ಇರಲಿಲ್ಲ, ಈಗಲೂ ಇಲ್ಲ, ನನ್ನ ಬಳಿ ನನಗೆ ಬೇಕಾದದ್ದು ಎಲ್ಲವೂ ಇದೆ''. ಜಿಮ್ಮಿ ಮುಂದಿನ 43 ವರ್ಷ ಅಕ್ಷರಶಃ ಆಡಿದಂತೆ, ಬಯಸಿದಂತೆ ಬದುಕಿದರು.

ಜಿಮ್ಮಿ ಕಾರ್ಟರ್ ಅಮೆರಿಕದ ಅಧ್ಯಕ್ಷರಾಗುವುದಕ್ಕಿಂತ ಮೊದಲು ಜಾರ್ಜಿಯಾ ಗವರ್ನರ್ (ನಮ್ಮಲ್ಲಿ ಮುಖ್ಯಮಂತ್ರಿಗೆ ಸಮಾನ) ಆದವರು. ಅಮೆರಿಕದ ಹಾಲಿ ಮತ್ತು ಮಾಜಿ ಅಧ್ಯಕ್ಷರಿಗೆ 'ಸೀಕ್ರೆಟ್ ಸರ್ವೀಸ್' ರಕ್ಷಣೆ ನೀಡುತ್ತದೆ. ಅದನ್ನು ಕೂಡ ಎಷ್ಟು ಬೇಕೋ ಅಷ್ಟಕ್ಕೆ ಸೀಮಿತಗೊಳಿಸಲು ಅವರು ಕೋರಿಕೊಂಡಿದ್ದರು. ಜಿಮ್ಮಿ ಊರಿನ ರಸ್ತೆಗಳಲ್ಲಿ ಆರಾಮಾಗಿ ಓಡಾಡಿಕೊಂಡು, ಆದಿತ್ಯವಾರ ಚರ್ಚಿನ ಸೇವೆಯಲ್ಲಿ, ಸ್ಥಳೀಯ ಊರಿನ ಮೀಟಿಂಗ್‌ಗಳಲ್ಲಿ ಭಾಗಿಯಾಗಿ ಹೀಗೆ ಆ ಊರಿನ ಒಬ್ಬ ತೀರಾ ಸಾಮಾನ್ಯರಂತೆ ಬದುಕಿದರು. ಜಿಮ್ಮಿ ಪ್ರತಿ ವಾರ ಹೆಂಡತಿಯ ಜತೆ ಸ್ನೇಹಿತನ ಮನೆಗೆ ಊಟಕ್ಕೆ ಹೋಗುತ್ತಿದ್ದರಂತೆ. ಆಗಲೂ ಅಷ್ಟೇ. ಮನೆಯಿಂದ ಅವರ ಮನೆಗೆ ರಸ್ತೆಯಲ್ಲಿ, ಸುಮಾರು ಎರಡು ಕಿಲೋಮೀಟರ್ ನಡೆದು ಹೋಗಿ ಬರುವುದು. ಜಿಮ್ಮಿ ಊರಿನ ಯಾವುದೇ ಕಾರ್ಯಕ್ರಮಕ್ಕೆ, ಮನೆಗೆ ಹೋದರೂ ಎಲ್ಲರಂತೆ ಪೇಪರ್ ಪ್ಲೇಟಿನಲ್ಲಿ, ಪ್ಲಾಸ್ಟಿಕ್ ಚಮಚ ಬಳಸಿ ತಿನ್ನುತ್ತಿದ್ದರು ಎಂದರೆ ಮಾಜಿ ಅಧ್ಯಕ್ಷರ ಸರಳತೆಯನ್ನು ಊಹಿಸಿಕೊಳ್ಳಿ. ನಿವೃತ್ತಿಯ ನಂತರ ತಮಗೆ ದಾನವಾಗಿ ಬರುತ್ತಿದ್ದ ಹಣದಿಂದ ಬಡವರಿಗೆ ಮನೆ ಕಟ್ಟಿಸಿಕೊಡುವುದು ಇತ್ಯಾದಿ ಮಾಡಿದ್ದೇ ವಿನಾ ತಮಗೆ ಬೇರೆ ಮನೆಯನ್ನೂ ಕಟ್ಟಿಕೊಳ್ಳಲಿಲ್ಲ. ಜಿಮ್ಮಿ ತಾವೇ ಅಡುಗೆ ಮಾಡಿಕೊಳ್ಳುತ್ತಿದ್ದರು, ಪಾತ್ರೆ ತೊಳೆಯುತ್ತಿದ್ದರು. ಇವೆಲ್ಲ ಸರಳತೆ ಯಾವ ತೋರಿಕೆಗೂ ಆಗಿರಲಿಲ್ಲ. ಜಿಮ್ಮಿಯಂತೆಯೇ ಜತೆಯಲ್ಲಿ ಸರಳವಾಗಿ ಬದುಕಿದವರು ಅವರ ಪತ್ನಿ ರೋಸಲಿನ್.

ಅಂಥ ಜಿಮ್ಮಿಯ ಕೊನೆಯ ದಿನಗಳು ಕೂಡ ಹಾಗೆಯೇ ಇದ್ದವು. ಜಿಮ್ಮಿ 2023ರಲ್ಲಿ, 98ನೇ ವಯಸ್ಸಿನಲ್ಲಿ- 'ಇನ್ನು ನನಗೆ ಬೇರಿನ್ನೇನೂ ಆರೈಕೆ ಬೇಡ, ಪೂರ್ಣ ಬದುಕಿದ್ದೇನೆ, ಇಷ್ಟು ಸಾಕು, ಸಂತೃಪ್ತ ಬದುಕು' ಎಂದು ಹಾಸ್ಪೈಸ್ ಆರಿಸಿಕೊಂಡರು. ಪತ್ನಿ ರೋಸಲಿನ್‌ಗೆ ಕೂಡ 96 ವರ್ಷವಾಗಿತ್ತು. ಅವಳೂ ಅದೇ ಸಮಯದಲ್ಲಿ ಹಾಸ್ಪೈಸ್ ಆಯ್ದುಕೊಂಡಳು. ಅಮೆರಿಕದಲ್ಲಿ ವಿಚ್ಛೇದನ ಎಷ್ಟು ಸಾಮಾನ್ಯ ಎಂಬ ಅರಿವು ನಿಮಗಿರಬಹುದು. ಆದರೆ ಜಿಮ್ಮಿ ಮತ್ತು ರೋಸಲಿನ್ 77 ವರ್ಷ ಜತೆಯಲ್ಲಿಯೇ ಇದ್ದರು. ಕೊನೆಯಲ್ಲಿ ಅಕ್ಕಪಕ್ಕದ ಹಾಸಿಗೆಯಲ್ಲಿ ಪತಿ ಪತ್ನಿ ಇಬ್ಬರೂ ಹಾಸ್ಪೈಸ್ ಆರೈಕೆ ಪಡೆದರು. ಆದರೆ ಜಿಮ್ಮಿಗಿಂತ ಮೊದಲೇ ಪತ್ನಿ ರೋಸಲಿನ್ ತೀರಿಕೊಂಡರು. ಜಿಮ್ಮಿ ಕೈ ಹಿಡಿದುಕೊಂಡಿರುವಾಗಲೇ ರೋಸಲಿನ್ ಕೊನೆಯುಸಿರೆಳೆದದ್ದು. ಅದಾದ ವರ್ಷದೊಳಗೆ ಜಿಮ್ಮಿ ಕೂಡ ತೀರಿಕೊಂಡರು. ಹಾಸ್ಪೈಸ್‌ನಲ್ಲಿ ಜಿಮ್ಮಿ ಹೇಳಿದ್ದು ಮತ್ತು ರೋಸಲಿನ್ ಬಯಸಿದ್ದು ಒಂದೇ ಒಂದು. ಯಾವತ್ತೂ ಒಬ್ಬರ ಪಕ್ಕದಲ್ಲಿ ಇನ್ನೊಬ್ಬರಿರಬೇಕು. ಜತೆಯಲ್ಲೇ ಬದುಕಿದವರು ಕೊನೆ ಕ್ಷಣದವರೆಗೂ ಜತೆಯಲ್ಲಿಯೇ ಇರಬೇಕು. ಜಿಮ್ಮಿ ಕಾರ್ಟರ್ ಸಾಯಲು ಕೆಲವು ದಿನವಿರುವಾಗ ತಮ್ಮ ಆಪ್ತ ಬಳಗದವರಲ್ಲಿ ಮತ್ತು ಆರೈಕೆ ಮಾಡುವವರಲ್ಲಿ ಹೇಳಿದ ಮಾತುಗಳು ಇವು- ''For experiencing the life, you don't need more. To be happy, you don't need to be rich, influential or king. You can be happy without everything. In fact, you can be only happy without things''. ''ಜೀವನ ಅನುಭವಿಸಲು ವಸ್ತುಗಳು, ಅಧಿಕಾರ, ಸಂಪತ್ತು ಯಾವುದೂ ಬೇಕಿಲ್ಲ. ಅಸಲಿಗೆ ಅವೆಲ್ಲ ಇಲ್ಲದಿದ್ದರೇ ಪೂರ್ಣ ಬದುಕಲು ಸಾಧ್ಯ. ಪೂರ್ಣ ಬದುಕಿಗೆ ಇಂಥದ್ದೊಂದು ಬೇಕು ಎಂಬುದು ಇರುವುದಿಲ್ಲ. ಯಾವಾಗ 'ಬೇಕು' ಎನ್ನುವುದು ನಿಲ್ಲುತ್ತದೆಯೋ ಆಗಲೇ ಬದುಕು ಪೂರ್ಣವಾಗುವುದು''.

ಬದುಕಿನ ಕೊನೆಯಲ್ಲಿ ಜೀವನವೆಂದರೆ ಏನು ಎಂದು ಅರ್ಥವಾಗುವುದು, ಬದಲಾಗುವುದು ಇವೆಲ್ಲ ಸಾಮಾನ್ಯ. ಹಲವರಿಗೆ ಜ್ಞಾನೋದಯವಾಗುವುದು ಬದುಕಿನ ಕೊನೆಯ ಕೆಲವು ದಿನ-ಗಂಟೆಗಳಲ್ಲಿ. ಆದರೆ ಜೀವನದಲ್ಲಿ ತನಗೇನು ಬೇಕು ಎಂಬುದರ ಸ್ಪಷ್ಟತೆ ಹೊಂದುವುದು ಮತ್ತು ಅದರಂತೆಯೇ ಬದುಕುವುದು ಬಹಳ ಅಪರೂಪ. ಹಾಗಾಗಿಯೇ ಜಿಮ್ಮಿ ಕಾರ್ಟರ್ ವಿಶೇಷ, ಅನನ್ಯ.

ಈಗೆರಡು ವಾರದ ಹಿಂದೆ ಹಾಸ್ಪೈಸ್- ಅಂತ್ಯಕಾಲದ ಆರೈಕೆ ನೀಡುವ ನರ್ಸ್, ಸ್ನೇಹಿತೆ ಸ್ಟೇಸಿ ಮಾರ್ಕಂ ಹೇಳಿದ ಮರಣಶಯ್ಯೆಯ ಕಥೆಗಳನ್ನು ಹಂಚಿಕೊಂಡಿದ್ದೆ. ಜಿಮ್ಮಿ ಕಾರ್ಟರ್ ಕಥೆ ಹೇಳಿದ ಮೇಲೆ ಸ್ಟೇಸಿ ಹೇಳಿದ ಇನ್ನೊಂದಿಷ್ಟು ಕಥೆಗಳು ನೆನಪಾಗುತ್ತಿವೆ. ಹಿಂದಿನ ಲೇಖನದಂತೆ- ದಾದಿ ಸ್ಟೇಸಿ ಧ್ವನಿಯಲ್ಲಿ ಈ ಕಥೆಗಳು. ಒಂದೊಂದು ಪ್ಯಾರಾ- ಒಂದೊಂದು ಕಥೆ, ಪಾಠ.

ಅವಳ ಹೆಸರು ಮರಿಯಮ್. ಅವಳು ಹಾಸ್ಪೈಸ್ ಸೇರಿ ಒಂದು ತಿಂಗಳಾಗಿತ್ತು. ವಯಸ್ಸು 70ರ ಆಸುಪಾಸು. ಆ ದಿನ ಹಾಸ್ಪೈಸ್ ರೋಗಿಗಳ ಮನರಂಜಿಸಲು ಸ್ಥಳೀಯ ಮ್ಯೂಸಿಕ್ ಶಾಲೆಯ ಮಕ್ಕಳು ಆಸ್ಪತ್ರೆಗೆ ಬಂದಿದ್ದರು, ಗಿಟಾರ್ ಇತ್ಯಾದಿ ಸಂಗೀತ ಸಲಕರಣೆಯ ಜತೆ. ಅವರು ಪ್ರತಿ ಹಾಸ್ಪೈಸ್ ರೋಗಿಯಿರುವ ಕೋಣೆಗೆ ಹೋಗಿ, ಅಲ್ಲಿನ ರೋಗಿಯ ಇಷ್ಟದ ಹಾಡು ಯಾವುದೆಂದು ಕೇಳಿ, ಅದನ್ನು ನುಡಿಸುತ್ತಿದ್ದರು. ಮರಿಯಮ್ ಸಂಗೀತಪ್ರಿಯೆ ಎಂದು ನಮಗೆಲ್ಲ ಗೊತ್ತಿತ್ತು. ಮರಿಯಮ್ ಹಾಸ್ಪೈಸ್ ಸೇರಿದಾಗಿನಿಂದ ಮಾತನ್ನೇ ನಿಲ್ಲಿಸಿದ್ದಳು. ಆದರೆ ಆ ದಿನ ಈ ಹುಡುಗರು ಸಂಗೀತ ನುಡಿಸಿ ಹೊರನಡೆದ ನಂತರ ಮೊದಲ ಬಾರಿ ಅವಳು ನಮ್ಮೆಲ್ಲರ ಜತೆ ಮಾತನಾಡಿದಳು. ಅವಳು ಹೇಳಿದ್ದು- In My Life, I should have danced more. I waited for parties never danced in the kitchen. ''ನಾನು ಇನ್ನಷ್ಟು ಡಾನ್ಸ್ ಮಾಡಬೇಕಿತ್ತು. ಕುಣಿಯಬೇಕು ಎಂದು ಅನಿಸಿದಾಗಲೆಲ್ಲ ನಾನು ಪಾರ್ಟಿಗೆ, ಏನೋ ಒಂದು ವಿಶೇಷ ಕಾರಣಕ್ಕೆ ಕಾಯುತ್ತಿದ್ದೆ. ನಾನು ಅಡುಗೆಮನೆಯಲ್ಲಿ ನನ್ನಷ್ಟಕ್ಕೇ ನರ್ತಿಸಬಹುದಿತ್ತು. ಬಚ್ಚಲು ಮನೆಯಲ್ಲಿ ನನ್ನಷ್ಟಕ್ಕೆ ನಾನೇ ಹಾಡಬಹುದಿತ್ತು. ಛೇ, ನಾನು ಇನ್ನಷ್ಟು ಕುಣಿಯಬೇಕಿತ್ತು!''

ರಾಬರ್ಟ್ 89 ವರ್ಷದ ವೃದ್ಧ. ಹಾಸ್ಪೈಸ್ ಸೇರುವಾಗ ಒಂದು ಚೀಲದಲ್ಲಿ ಒಂದಿಷ್ಟು ಗ್ರೀಟಿಂಗ್ ಕಾರ್ಡ್ ತಂದಿದ್ದ. ಅದೆಲ್ಲ ಅವನ ಸ್ನೇಹಿತರು, ಕುಟುಂಬದವರು ಕ್ರಿಸ್ಮಸ್ ಮೊದಲಾದ ಹಬ್ಬಗಳ ಸಮಯದಲ್ಲಿ ಕಳುಹಿಸಿದ್ದು. ಅವನ್ನು ಅತ್ಯಂತ ಜೋಪಾನವಾಗಿ ಬಳ್ಳಿಯೊಂದರಲ್ಲಿ ಸುತ್ತಿ ತಂದಿದ್ದ. ಅವನ್ನು ತನ್ನ ಹಾಸಿಗೆಯ ಪಕ್ಕದ ಡ್ರಾವರ್‌ನಲ್ಲಿ ಇಟ್ಟುಕೊಂಡಿದ್ದ ಮತ್ತು ಆಗೀಗ ಆ ಗ್ರೀಟಿಂಗ್ ಕಾರ್ಡ್‌ಗಳನ್ನೆಲ್ಲ ಬಿಚ್ಚಿ ನೋಡುತ್ತಿದ್ದ. ನಾವು ದಾದಿಯರಿಗೆ ಅದೇನೆಂದು ಕುತೂಹಲ. ನಾನು ಆ ದಿನ ಕಿಚಾಯಿಸುತ್ತ ಅದೇನು ಹಳೆಯ ಪ್ರೇಮಪತ್ರಗಳೇ ಇಂದು ಕೇಳಿದೆ. ರಾಬರ್ಟ್‌ಗೆ ಮರೆವಿನ ರೋಗವೂ ಇತ್ತು. ಆತನಿಗೆ ತನ್ನ ಮಕ್ಕಳದೇ ಹೆಸರು ನೆನಪಿರುತ್ತಿರಲಿಲ್ಲ. ಹಾಗಿರುವಾಗ ಈ ಗ್ರೀಟಿಂಗ್ಸ್ ಬರೆದವರು ಯಾರು, ಯಾವಾಗ ಇವೆಲ್ಲ ನೆನಪಿರಲು ಶಕ್ಯವಿರಲಿಲ್ಲ. ನನ್ನ ಪ್ರಶ್ನೆಗೆ ರಾಬರ್ಟ್ ಸ್ವಲ್ಪ ಹೊತ್ತು ಸುಮ್ಮನಾದ. ಆನಂತರ ಅವನು ಹೇಳಿದ್ದು ಇಷ್ಟು. ''Stacy, This is what love looks like when time passes..' ''ಸ್ಟೇಸಿ, ಕಾಲ ಕಳೆದಂತೆ ಪ್ರೀತಿ ಹೀಗೆಯೇ ವಸ್ತುಗಳಾಗಿ ಕಾಣಿಸುವುದು. ಗ್ರೀಟಿಂಗ್ ಕಾರ್ಡ್, ಕೊಟ್ಟ ಗಿಫ್ಟ್, ಆಪ್ತರು ಬಳಸಿದ ಕುರ್ಚಿ, ಬಟ್ಟೆ, ನೆಟ್ಟ ಗಿಡ ಈ ರೀತಿ ವಸ್ತುಗಳೇ ಮಧುರ ನೆನಪುಗಳಾಗಿಬಿಡುವುವು''.

ಮಿಸ್ ರೋಮರ್‌ಗೆ ಜಾಸ್ತಿ ವಯಸ್ಸಾಗಿರಲಿಲ್ಲ- ಐವತ್ತು. ಆದರೆ ಕ್ಯಾನ್ಸರ್. ಕೊನೆಯ ಹಂತವಾಗಿ ನಮ್ಮ ಹಾಸ್ಪೈಸ್‌ಗೆ ಸೇರಿದ್ದಳು. ಅವಳಿಗೆ ಹೆಚ್ಚೆಂದರೆ ಇನ್ನೆರಡು ತಿಂಗಳ ಬದುಕಿದೆ ಎಂಬುದು ಡಾಕ್ಟರ್ ಲೆಕ್ಕವಾಗಿತ್ತು. ಆಕೆ ಒಂದು ದಿನ ಅವಳ ಆಸ್ಪತ್ರೆಯ ಕೊನೆಯಲ್ಲಿ ಕೂತು ಗಂಭೀರವಾಗಿ ಏನನ್ನೋ ಬರೆಯುತ್ತಿದ್ದಳು. ಸುಮಾರು ಮೂರು ಪೇಜು. ಏನು ಎಂದು ಕೇಳಿದೆ. ಅದು ಅವಳ ತಂದೆಗೆ ಬರೆಯುತ್ತಿದ್ದ ಪತ್ರ. ನಾವೆಂದೂ ಅವಳ ತಂದೆ ಆಸ್ಪತ್ರೆಗೆ ಬಂದದ್ದು ನೋಡಿರಲಿಲ್ಲ, ಕೇಳಿದರೆ ಅವಳ ತಂದೆ ತೀರಿಕೊಂಡು ಸುಮಾರು ಇಪ್ಪತ್ತು ವರ್ಷವಾಗಿತ್ತು. ಅವಳು ಎರಡು ದಿನದ ನಂತರ ಆ ಐದು ಪೇಜಿನ ಪತ್ರವನ್ನು ಬರೆದು ಮುಗಿಸಿದಳು. ಆ ದಿನ ಸಂಜೆ ಒಂದು ಬೆಂಕಿಪೊಟ್ಟಣ ಕೇಳಿದಳು. ನಾನು ತಂದುಕೊಟ್ಟೆ. ಟೇಬಲ್ಲಿನ ಮೇಲೆ ಬರೆದಿಟ್ಟ ಪತ್ರದ ಹಾಳೆಗಳನ್ನು ತೆಗೆದುಕೊಂಡಳು ಮತ್ತು ಅವನ್ನು ಸುಟ್ಟುಬಿಟ್ಟಳು. ಅವಳು ಹೇಳಿದ್ದು ಇಷ್ಟೇ- ''ನಾನು ಇವತ್ತು ನನ್ನ ತಂದೆಯನ್ನು ಕ್ಷಮಿಸಿದ್ದೇನೆ''. ಅವಳ ತಂದೆ ಅವಳಿಗೇನು ಅನ್ಯಾಯ, ಕೆಟ್ಟದು ಮಾಡಿದ್ದ ಎಂಬುದನ್ನು ನಾವೂ ಕೇಳಲಿಲ್ಲ, ಅವಳೂ ಹೇಳಲಿಲ್ಲ. ''ಕ್ಷಮಿಸುವುದು ಇನ್ನೊಬ್ಬರ ಅವಶ್ಯಕತೆಯಲ್ಲ. ನಮಗೆ ಕೆಟ್ಟದ್ದು ಮಾಡಿದವರನ್ನು ಕ್ಷಮಿಸುವುದು ನಮ್ಮ ಸ್ವಂತದ ಅವಶ್ಯಕತೆ'' ಎಂದು ರೋಮರ್ ಹೇಳುವಾಗ ನನ್ನ ಕಣ್ಣಂಚಿನಲ್ಲಿ ನೀರೊಡೆಯಿತು.

ಹಾಸ್ಪೈಸ್ ಸೇರುವವರು ತಮ್ಮಿಷ್ಟದ ಒಂದಿಷ್ಟು ವಸ್ತುಗಳನ್ನು ತಮ್ಮ ಜತೆ ತರುವುದು ಸಾಮಾನ್ಯ. ಆಪ್ತೇಷ್ಟರ ಫೋಟೋ, ಮತ್ತಿನ್ನೇನಾದರೂ ಇಷ್ಟವಾದ ವಸ್ತುಗಳನ್ನು ತಮ್ಮ ಬೆಡ್ಡಿನ ಅಕ್ಕ ಪಕ್ಕ, ಮಲಗಿದಾಗ ಕಾಣುವಂತೆ ಇಟ್ಟುಕೊಳ್ಳುವುದು ಇತ್ಯಾದಿ. ಆದರೆ ಎಂಬತ್ತರ 'ಬೋಬಾ ನಿಕೋವಾ' ತನ್ನ ಜತೆಯಲ್ಲಿ ಮನೆಯ ಅಡುಗೆಮನೆಯಲ್ಲಿದ್ದ ಗೋಡೆಗಡಿಯಾರವನ್ನು ತಂದಿದ್ದಳು. ಅದನ್ನು ಅವಳು ಮಲಗಿದಾಗ ಕಣ್ಣೆದುರಿಗೆ ಕಾಣಿಸುವಂತೆ ಮೊಳೆಹೊಡೆಸಿ ನೇತುಹಾಕಿಕೊಂಡಿದ್ದಳು. ಸಾಮಾನ್ಯವಾಗಿ ಯಾರದೋ ಫೋಟೋ, ಯಾರೋ ಕೊಟ್ಟ ಗಿಫ್ಟ್, ಒಡವೆ ಇತ್ಯಾದಿ ತಂದಿಟ್ಟುಕೊಳ್ಳುವುದು ಸಾಮಾನ್ಯ. ಆದರೆ ಗೋಡೆಗಡಿಯಾರ ತಂದವರನ್ನು ನಾನು ಕಂಡಿರಲಿಲ್ಲ, ಹಾಗಾಗಿ ಆ ಬಗ್ಗೆ ನಮಗೆಲ್ಲರಿಗೂ ಕುತೂಹಲವಿತ್ತು. ಅವಳು ವಿವರಿಸಿದಳು- ''ಈ ಗಡಿಯಾರವಿದೆಯಲ್ಲ ಅದು ನನ್ನ ಬದುಕನ್ನು ಹತ್ತಿರದಿಂದ ಕಂಡಷ್ಟು ಇನ್ಯಾರೂ ನೋಡಿರಲಿಕ್ಕಿಲ್ಲ. ನಾನು ಉಕ್ಕಿಸಿದ ಹಾಲನ್ನು ಈ ಗಡಿಯಾರ ಕಂಡಿದೆ. ನನ್ನ ಮಕ್ಕಳು ಶಾಲೆಗೆ ಹೋಗುವಾಗಿನ ಬೆಳಗಿನ ಗಡಿಬಿಡಿಯನ್ನು ಇದು ನೋಡಿದೆ. ನನ್ನ ಗಂಡ ಕೊಡುವ ಮುತ್ತನ್ನು, ಆಗ ನಾನು ನಾಚಿದ್ದನ್ನು ಎಲ್ಲವನ್ನೂ ನೋಡಿದ್ದು ಈ ಗಡಿಯಾರ ಮಾತ್ರ. ಮನೆಗೆ ಬಂದ ಸ್ನೇಹಿತರು, ಆಪ್ತೇಷ್ಟರು, ಅವರ ಜತೆಯಲ್ಲಿ ಕಳೆದ ಸುಂದರ ಕ್ಷಣಗಳು ಈಗ ಈ ಗಡಿಯಾರಕ್ಕೆ ಮಾತ್ರ ನೆನಪಿದೆ. ಮಧ್ಯಾಹ್ನ ಗಂಡ-ಮಕ್ಕಳು ಮನೆಯಲ್ಲಿರದಾಗ ಒಬ್ಬಳೇ ಊಟ ಮಾಡುವಾಗ 'ಕಚಕ್ ಕಚಕ್' ಎಂದು ನನಗೆ ಸಾಥ್ ಕೊಡುತ್ತಿದ್ದುದು ಇದೇ ಗಡಿಯಾರ. Time doesn't wait, but it does witness. And we should, too- 'ಸಮಯ ಕಾಯುವುದಿಲ್ಲ ಆದರೆ ಸಾಕ್ಷ್ಯವಾಗಿರುತ್ತದೆ. ನಾವು ಕೂಡ.. ಈ ಗಡಿಯಾರಕ್ಕೆ ಮಾತ್ರ ನನ್ನ ಸಮಯ ಯಾವಾಗ ಮತ್ತು ಏನು ಎಂಬುದು ಗೊತ್ತು''. ಬೋಬಾ ಕೆಲದಿನಗಳ ನಂತರ ಕೊನೆಯಾದಳು. ಅವಳ ದಿಂಬಿನ ಕೆಳಗಡೆ ಈ ಪತ್ರವಿತ್ತು- 'ಪ್ರಿಯ ಸ್ಟೇಸಿ, ನಾನು ಹೋಗುವಾಗ ಈ ಗೋಡೆಗಡಿಯಾರವನ್ನು ನಿನಗೆ ಬಿಟ್ಟು ಹೋಗುತ್ತಿದ್ದೇನೆ. ಇದು ನಮ್ಮ ಮನೆಗೆ ಹೋಗುವುದು ಬೇಡ. ಈ ಗಡಿಯಾರಕ್ಕೆ ನಾನಿಲ್ಲದೆ ಬೇಸರಬರಬಹುದು. ಈ ಹಾಸ್ಪೈಸ್ ಆಸ್ಪತ್ರೆಯಲ್ಲಿ ಇಡುವುದೂ ಬೇಡ. ನನ್ನ ಗಡಿಯಾರ ಎಷ್ಟು ಜನರ ಕೊನೆಯ ಸಮಯವನ್ನು ನೋಡಬೇಕು? ನೀನು ಒಂದು ಉಪಕಾರ ಮಾಡಬೇಕು. ಇದನ್ನು ದಯವಿಟ್ಟು ನಿನ್ನ ಮನೆಗೆ ತೆಗೆದುಕೊಂಡು ಹೋಗು. ಅದು ನಿಮ್ಮ ಸುಂದರ ಕುಟುಂಬವನ್ನು ಕಂಡು ಮಾತ್ರ ಖುಷಿಯಾಗಿರಬಲ್ಲದು'. ಇಂದಿಗೂ ಆ ಗಡಿಯಾರ ನಮ್ಮ ಮನೆಯ ಅಡುಗೆಮನೆಯ ಗೋಡೆಯಲ್ಲಿದೆ. ಈಗ ಆ ಗಡಿಯಾರಕ್ಕೆ ನನ್ನ ಸಮಯ ಏನೆಂದು ಗೊತ್ತು!''

ಸ್ಟೇಸಿ ಜತೆಯಲ್ಲಿ ಕೂತರೆ ಇಂಥ ಸಾವಿರದೆಂಟು ಕಥೆಗಳು. ಕಾಫಿ ಕುಡಿಯುತ್ತ ಕೇಳಲು ಕುಳಿತರೆ ಒಂದಾದ ಮೇಲೆ ಒಂದು- ಫಿಲ್ಮಿನಂತೆ. ಆದರೆ ಇಂಥ ಕಥೆಗಳು ಏಕಕಾಲದಲ್ಲಿ ಐದಾರು ಕೇಳಿಬಿಟ್ಟರೆ ಜೀರ್ಣವಾಗುವುದಿಲ್ಲ. ಮುಲ್ಲಾ ನಸ್ರುದ್ದೀನ್ ಮರಣಶಯ್ಯೆಯಲ್ಲಿದ್ದನಂತೆ. ಅವನ ಬಳಿ ಊರವರು ಬಂದು ''ನಸ್ರುದ್ದೀನ್, ನೀನು ಇಷ್ಟು ಕಾಲ ಮೋಜು-ಮಸ್ತಿಯಿಂದ ಬದುಕಿದೆ. ನೀನು ಯಾವುದಕ್ಕೂ ಬೇಸರ ಮಾಡಿಕೊಂಡದ್ದು ನಾವು ನೋಡಿಲ್ಲ. ನಿನ್ನ ಲೆಕ್ಕದಲ್ಲಿ ಉತ್ತಮ, ಪೂರ್ಣ ಬದುಕಿಗೆ ಏನು ಅವಶ್ಯಕ?''. ಮುಲ್ಲಾ ನಸ್ರುದ್ದೀನ್ ಅಲ್ಪವಿರಾಮದ ನಂತರ ಮೆಲ್ಲಗೆ 'ಒಳ್ಳೆಯ ಹಲ್ಲುಗಳು' ಎಂದ. ಎಲ್ಲರಿಗೂ ಸ್ವಲ್ಪ ಗೊಂದಲ- ಒಳ್ಳೆ ಹಲ್ಲಿಗೂ ಉತ್ತಮ ಬದುಕಿಗೂ ಎಲ್ಲಿಯ ಸಂಬಂಧ! ಮುಲ್ಲಾ ಮಾತು ಮುಂದುವರಿಸಿ ''ಹೌದು- ಉತ್ತಮ ಹಲ್ಲು. ಈ ಹಲ್ಲು ಎಷ್ಟು ಅವಶ್ಯಕ, ಮುಖ್ಯ ಎಂಬುದು ಅದು ಇರುವಾಗ ಗೊತ್ತಾಗುವುದಿಲ್ಲ. ಒಂದೇ ಒಂದು ಉದುರಿದರೆ ಆಗ ಒಂದೊಂದು ಹಲ್ಲಿನ ಮಹತ್ವ ಗೊತ್ತಾಗುವುದು. ಈ ವಿಷಯ ಹಲ್ಲಿಗಷ್ಟೇ ಲಾಗುವಲ್ಲ, ಸಮಯ, ಆರೋಗ್ಯ, ನಗು, ಜನರು, ಸಂಬಂಧ, ಪ್ರೀತಿ ಇವೆಲ್ಲವೂ ಹಾಗೆಯೇ. ಕಳೆದುಕೊಂಡಾಗಲೇ ಗೊತ್ತಾಗುವುದು''.

ಬೇಗನೆ ಶ್ರೀಮಂತರಾಗಲು ಸಾಧ್ಯವಿಲ್ಲ, ಸಂಬಳ ಒಂದೇ ಸಾಲದು!

ಮನಿ ಮೈಂಡೆಡ್

ಕೇಶವ ಪ್ರಸಾದ್ ಬಿ.

vveditoped@gmail.com

ನೀವು ದಿಢೀರ್ ಶ್ರೀಮಂತರಾಗಲು ಸಾಧ್ಯವಿಲ್ಲ, ಸಂಬಳ ಒಂದೇ ಸಾಲದು. ನೀವೆಷ್ಟು ಸಂಪಾದಿಸುತ್ತೀರಿ ಎನ್ನುವುದು ಮಾತ್ರ ಮುಖ್ಯವಲ್ಲ, ಎಷ್ಟು ಉಳಿತಾಯ ಮಾಡುತ್ತೀರಿ ಮತ್ತು ಹೂಡಿಕೆ ಮಾಡುತ್ತೀರಿ ಎಂಬುದನ್ನು ಅವಲಂಬಿಸಿ ಶ್ರೀಮಂತರಾಗುತ್ತೀರಿ''- ಹೀಗೆ ಖಚಿತವಾಗಿ ಹೇಳುತ್ತಾರೆ ಖ್ಯಾತ ಲೇಖಕ ಚೇತನ್ ಭಗತ್! 1974ರಲ್ಲಿ ಜನಿಸಿದ ಅವರು ಅಸಂಖ್ಯಾತ ಯುವ ಓದುಗರ ಕಣ್ಮಣಿ. ಅಂಕಣಕಾರ, ಚಿತ್ರಕಥೆ ಬರಹಗಾರ, ಯುಟ್ಯೂಬರ್ ಮತ್ತು ಪ್ರೇರಣಾದಾಯಿ ಲೇಖನಗಳ ಸರದಾರ. 2010ರಲ್ಲಿ 'ಟೈಮ್' ನಿಯತಕಾಲಿಕೆಯ, ಜಗತ್ತಿನ 100 ಅತಿ ಪ್ರಭಾವಿ ವ್ಯಕ್ತಿಗಳ ಪಟ್ಟಿಯಲ್ಲಿ ಕಾಣಿಸಿಕೊಂಡ ಲೇಖಕ! ಅವರ ಕಾದಂಬರಿಗಳು ಬಾಲಿವುಡ್ ಸಿನಿಮಾ ಆಗಿವೆ.

ಪಂಜಾಬಿ ಹಿಂದೂ ಕುಟುಂಬದಲ್ಲಿ ಜನಿಸಿದ ಚೇತನ್ ಭಗತ್ ಅವರ ತಂದೆ ಸೇನೆಯಲ್ಲಿ ಲೆಫ್ಟಿನೆಂಟ್ ಕರ್ನಲ್ ಆಗಿದ್ದರು. ತಾಯಿ ಇಂಡಿಯನ್ ಅಗ್ರಿಕಲ್ಚರ್ ರಿಸರ್ಚ್ ಇನ್ಸ್ಟಿಟ್ಯೂಟ್‌ನಲ್ಲಿ ವಿಜ್ಞಾನಿಯಾಗಿದ್ದರು. ಆರ್ಮಿ ಪಬ್ಲಿಕ್ ಸ್ಕೂಲ್‌ನಲ್ಲಿ ಓದುತ್ತಿದ್ದಾಗ ಶಾಲೆಯ ನಿಯತಕಾಲಿಕೆಗೆ 'ಜೋಕ್ಸ್' ಬರೆಯುತ್ತಿದ್ದರಂತೆ. ದಿಲ್ಲಿಯ ಐಐಟಿಯಲ್ಲಿ ಮೆಕ್ಯಾನಿಕಲ್ ಎಂಜಿನಿಯರಿಂಗ್‌ನಲ್ಲಿ ಪದವಿ ಗಳಿಸಿದ ಬಳಿಕ ಅಹಮದಾಬಾದ್‌ನ ಐಐಎಂನಲ್ಲಿ ಮಾರ್ಕೆಟಿಂಗ್ ಮತ್ತು ಬಿಸಿನೆಸ್ ಮ್ಯಾನೇಜ್ಮೆಂಟ್‌ನಲ್ಲಿ ಡಿಗ್ರಿ ಪಡೆದರು.

ಪೂರ್ಣ ಪ್ರಮಾಣದ ಲೇಖಕರಾಗುವುದಕ್ಕೆ ಮೊದಲು ಬ್ಯಾಂಕಿಂಗ್ ಕ್ಷೇತ್ರದಲ್ಲಿ ಅವರು 11 ವರ್ಷಗಳ ಸೇವೆ ಸಲ್ಲಿಸಿದ್ದರು. ಆದ್ದರಿಂದ ಹಣದ ಬಗ್ಗೆ ಅವರು ಆಗಿಂದಾಗ್ಗೆ ಬರೆಯುವ ಲೇಖನಗಳು ಸ್ವಾರಸ್ಯಕರವಾಗಿರುತ್ತವೆ. ಅಮೆರಿಕ ಮೂಲದ ಬಹುರಾಷ್ಟ್ರೀಯ ಬ್ಯಾಂಕಿಂಗ್ ದಿಗ್ಗಜ 'ಗೋಲ್ಡ್‌ಮನ್ ಸ್ಯಾಕ್ಸ್'ನ ಹಾಂಕಾಂಗ್ ಕಚೇರಿಯಲ್ಲಿ ದುಡಿದಿದ್ದರು. ಡೊಯೆಚ್ ಬ್ಯಾಂಕ್‌ನ ಮುಂಬಯಿ ಶಾಖೆಯಲ್ಲೂ ಕೆಲ ಕಾಲ ನಿರ್ದೇಶಕರಾಗಿದ್ದರು.

''ಗೋಲ್ಡ್‌ಮನ್ ಸ್ಯಾಕ್ಸ್‌ನಂಥ ಬ್ಯಾಂಕ್‌ನಲ್ಲಿ ಡಾಲರ್ ಗಟ್ಟಲೆ ಸಂಬಳ ಪಡೆಯುತ್ತಿದ್ದೆ. ಮಧ್ಯಮ ವರ್ಗದ ಕುಟುಂಬದ ದೃಷ್ಟಿಯಿಂದ ಹೋಲಿಸಿದರೆ, ಅದ್ಭುತ ಸಕ್ಸಸ್ ಅದಾಗಿತ್ತು. ಅನೇಕ ಮಂದಿ ಗೋಲ್ಡ್‌ಮನ್ ಸ್ಯಾಕ್ಸ್‌ನಲ್ಲಿ ಕೆಲಸ ಸಿಕ್ಕಿದರೆ ಸಾಕು ಎಂದು ಹೆಣಗಾಡುತ್ತಿದ್ದರು. ಅದಕ್ಕಾಗಿ ನಾನೂ ಇಪ್ಪತ್ತೇಳು ಇಂಟರ್‌ವ್ಯೂಗಳನ್ನು ಎದುರಿಸಿದ್ದೆ. ಹೀಗಿದ್ದರೂ, ನನಗೆ ಸಂತೋಷ ಇರಲಿಲ್ಲ. ಐಐಟಿಯ ಹಾಸ್ಟೆಲ್‌ನ ಸಣ್ಣ ಕೊಠಡಿಯಲ್ಲಿ ಮನಸ್ಸಿಗೆ ತೋಚಿದ್ದನ್ನು ಗೀಚುತ್ತಿದ್ದಾಗ, ಗೆಳೆಯರೊಂದಿಗೆ ಹರಟೆ ಹೊಡೆಯುತ್ತಿದ್ದ ದಿನಗಳಲ್ಲೇ ಆರಾಮವಾಗಿ ಇರುತ್ತಿದ್ದೆ. ಆದ್ದರಿಂದ ಬ್ಯಾಂಕಿನ ಕೆಲಸದ ಜತೆ ಜತೆಯಲ್ಲಿಯೇ ಬಿಡುವಿನಲ್ಲಿ ಬರವಣಿಗೆಯ ಹವ್ಯಾಸವನ್ನು ಮುಂದುವರಿಸಿದೆ. ಗೋಲ್ಡ್‌ಮನ್ ಸ್ಯಾಕ್ಸ್‌ನಲ್ಲಿದ್ದಾಗಲೇ 2000ರಲ್ಲಿ 'ಫೈವ್ ಪಾಯಿಂಟ್ ಸಮ್‌ವನ್' ಕಾದಂಬರಿ ಬರೆದೆ. ಅದು ನನಗೆ ತೃಪ್ತಿ ಕೊಟ್ಟಿತು. ಮಾತ್ರವಲ್ಲದೆ ಪೂರ್ಣಕಾಲಿಕ ಲೇಖಕನಾಗುವ ಹಂತಕ್ಕೆ ಕರೆದೊಯ್ದಿತು'' ಎನ್ನುತ್ತಾರೆ ಚೇತನ್ ಭಗತ್. 2009ರಲ್ಲಿ ಗಲ್ಲಾಪೆಟ್ಟಿಗೆಯನ್ನು ಕೊಳ್ಳೆ ಹೊಡೆದಿದ್ದ ಪ್ರಸಿದ್ಧ ಬಾಲಿವುಡ್ ಸಿನಿಮಾ 'ತ್ರೀ ಈಡಿಯಟ್ಸ್'ನ ಕಥೆ ಇದೇ ಕಾದಂಬರಿಯನ್ನು ಆಧರಿಸಿದ್ದು. 2005ರಲ್ಲಿ ಅವರು ಎರಡನೇ ಕಾದಂಬರಿ 'ಒನ್ ನೈಟ್ ಅಟ್ ದಿ ಕಾಲ್ ಸೆಂಟರ್' ಬಿಡುಗಡೆಗೊಳಿಸಿದರು, ಮೂರೇ ದಿನದಲ್ಲಿ ಅದರ 50,000 ಪ್ರತಿಗಳು ಮಾರಾಟವಾದವು. ಬ್ಯಾಂಕಿಂಗ್‌ನಲ್ಲಿ ದಶಕದ ಅನುಭವ ಇರುವುದರಿಂದಲೋ ಏನೋ, ಚೇತನ್ ಭಗತ್ ಅವರು ಹಲವಾರು ಸಲ ವೈಯಕ್ತಿಕ ಹಣಕಾಸು ವಿಚಾರಗಳ ಬಗ್ಗೆ ಬರೆದಿದ್ದಾರೆ. ಸಂದರ್ಶನಗಳಲ್ಲಿ ಉಪಯುಕ್ತ ಸಲಹೆಗಳನ್ನೂ ಕೊಟ್ಟಿದ್ದಾರೆ.

''ನೀವು ಸಂಬಳ ಮಾತ್ರ ಪಡೆಯುತ್ತಿದ್ದರೆ ಶ್ರೀಮಂತರಾಗಲು ಸಾಧ್ಯವಿಲ್ಲ'' ಎಂಬ ವಾಸ್ತವವನ್ನು ಹೇಳಲು ಚೇತನ್ ಭಗತ್ ಹಿಂಜರಿಯುವುದಿಲ್ಲ. ಹಾಗಾದರೆ ಏನು ಮಾಡಬೇಕು? ಉಳಿತಾಯ ಮತ್ತು ಹೂಡಿಕೆ ಎರಡನ್ನೂ ಮಾಡಲು ಕಲಿಯಬೇಕು. ಇದನ್ನು ಮನದಟ್ಟು ಮಾಡಿಕೊಡಲು ತಮ್ಮ ಮತ್ತು ಸ್ನೇಹಿತನ ಸ್ವಾರಸ್ಯಕರ ಕಥೆಯೊಂದನ್ನು ಇತ್ತೀಚಿನ ಕೃತಿ '11 ರೂಲ್ಸ್ ಫಾರ್ ಲೈಫ್'ನಲ್ಲಿ ವಿವರಿಸಿದ್ದಾರೆ. ಅದರ ಸಾರ ಇಲ್ಲಿದೆ.

''ನನ್ನ ಸ್ನೇಹಿತ ದಿನೇಶ್ (ಹೆಸರು ಬದಲಿಸಿದೆ). ಈಗ ಸಂಕ್ಷಿಪ್ತವಾಗಿ 'ಡಿ' ಎನ್ನೋಣ. ಕಾಲೇಜು ದಿನಗಳಿಂದ ಸ್ನೇಹಿತರು. ಇಬ್ಬರೂ ಐವತ್ತರ ವಯಸ್ಸಿಗೆ ಬಂದು ಮುಟ್ಟಿದ್ದೇವೆ. ವರ್ಷದ ಹಿಂದೆ 'ಡಿ' ಕೆಲಸ ಕಳೆದುಕೊಂಡ. ಮತ್ತೊಂದು ಕೆಲಸ ಸಿಗುತ್ತಿಲ್ಲ ಎಂಬ ಆತಂಕದಲ್ಲಿದ್ದಾನೆ. ಒಂದು ದಿನ ಬಾರ್‌ನಲ್ಲಿ ಭೇಟಿಯಾಗಿ, ವಿಸ್ಕಿ ಹೀರುತ್ತಾ ಮಾತನಾಡುತ್ತಾ ಕುಳಿತೆವು. 'ಚಿಂತೆ ಬಿಡು, ಹೇಗೂ ಒಂದಷ್ಟು ಉಳಿತಾಯದ ಹಣ ಇದೆಯಲ್ಲವೇ, ಹೊಸತು ಏನನ್ನಾದರೂ ಮಾಡು' ಎಂದೆ. 'ಡಿ' ಸಿಗರೇಟ್ ಪ್ಯಾಕ್ ಹೊರ ತೆಗೆಯುತ್ತಿದ್ದಂತೆ 'ಇದು ಬೇಡ, ಆರೋಗ್ಯಕ್ಕೆ ಒಳ್ಳೆಯದಲ್ಲ' ಎಂದೆ. 'ಫೈನ್ ಮಿಸ್ಟರ್ ಮೋಟಿವೇಷನಲ್ ಸ್ಪೀಕರ್, ನನಗೀಗ ಯಾರ ಬಳಿಯಿಂದಾದರೂ ಖರ್ಚಿಗೆ ಒಂದಷ್ಟು ದುಡ್ಡು ಬೇಕು' ಅಂದ. 'ಇದು ನಿನಗೆ ತಾತ್ಕಾಲಿಕ ನೆಮ್ಮದಿ ಕೊಡಬಹುದು, ಆದರೆ ಪರಿಸ್ಥಿತಿಯನ್ನು ಮತ್ತಷ್ಟು ಬಿಗಡಾಯಿಸುತ್ತೆ' ಎಂದೆ. 'ನಿನ್ನ ಆಯ್ಕೆಯ ಲಕ್ಷುರಿ ನನಗಿಲ್ಲ ಮಿಸ್ಟರ್ ರೈಟರ್, ನಾನೀಗ ಕತ್ತೆಯಂತೆ ದುಡಿಯಲೇಬೇಕು. ಹೊಸ ಮನೆಯ ಇಎಂಐ ಇದೆ. ಮಕ್ಕಳ ಶಾಲೆಯ ಖರ್ಚುಗಳು ಇವೆ. ಕಾರ್ ಲೋನ್ ಇದೆ. ಬಿಲ್ಲುಗಳನ್ನು ಕಟ್ಟಬೇಕು. ಉಳಿತಾಯ ಏನೂ ಇಲ್ಲ. ನಾನು ನಿನ್ನಷ್ಟು ಅದೃಷ್ಟವಂತ ಬೆಸ್ಟ್ ಸೆಲ್ಲರ್ ಲೇಖಕನಲ್ಲ' ಎಂದ…

''ಆದರೆ ನನ್ನ ಹಾದಿ ಹೇಗಿತ್ತು? ಬಹಳ ಸುಲಭದ ಹಾದಿಯಂತೂ ಆಗಿರಲಿಲ್ಲ. ನಾನು ಬ್ಯಾಂಕಿನ ಹುದ್ದೆಗೆ ರಾಜೀನಾಮೆ ಕೊಟ್ಟು ಪೂರ್ಣಕಾಲಿಕ ಲೇಖಕನಾಗಲು ನಿರ್ಧರಿಸಿದಾಗ ಬರವಣಿಗೆಯೊಂದರಲ್ಲೇ ಆಗ ಅಂಥ ಗಳಿಕೆ ಇದ್ದಿರಲಿಲ್ಲ. ಬ್ಯಾಂಕಿನ ಹುದ್ದೆಯಲ್ಲೇ ಸಂಪಾದಿಸುತ್ತಿದ್ದ ಹಣದ ಐದು ಪರ್ಸೆಂಟಿಗೂ ಕಡಿಮೆಯಷ್ಟನ್ನು ಬರವಣಿಗೆಯಲ್ಲಿ ಪಡೆಯುತ್ತಿದ್ದೆ. ಅಂದರೆ ನನ್ನ ಆದಾಯದಲ್ಲಿ 95 ಪರ್ಸೆಂಟ್ ಇಳಿದಿತ್ತು. ಐದು ಪರ್ಸೆಂಟ್ ಆದಾಯಕ್ಕೂ ಖಾತರಿ ಇದ್ದಿರಲಿಲ್ಲ. ಒಂದು ವೇಳೆ ಮತ್ತೊಬ್ಬ ಲೇಖಕ ನನ್ನನ್ನು ಹಿಂದಿಕ್ಕುತ್ತಿದ್ದರೆ? ಓದುಗರು ಚೇತನ ಭಗತ್‌ನನ್ನು ಮರೆಯುತ್ತಿದ್ದರೆ? ಇದ್ದ ಐದು ಪರ್ಸೆಂಟ್ ಆದಾಯವೂ ಶೂನ್ಯವಾಗುತ್ತಿತ್ತು…

''ನನ್ನಲ್ಲಿ ಧೈರ್ಯ ಇದ್ದುದರಿಂದ ಬ್ಯಾಂಕಿನ ಉದ್ಯೋಗವನ್ನು ಬಿಟ್ಟು ಲೇಖಕನಾದೆ. ಹೊಸ ಬರಹಗಾರ ಜನ್ಮ ತಾಳಿದ. ಹೀಗಿದ್ದರೂ, ನಾನು ಒಂದು ಸೇಫ್ಟಿ ನೆಟ್ ಅನ್ನು ಇಟ್ಟುಕೊಂಡೇ ಧುಮುಕಿದ್ದೆ. ಅದು ಯಾವುದು ಎಂದರೆ ನನ್ನ ಹಣಕಾಸು ಯೋಜನೆ (Financial planning). ಆದ್ದರಿಂದಲೇ 35ನೇ ವಯಸ್ಸಿನಲ್ಲಿ ನನ್ನ ರೆಗ್ಯುಲರ್ ಜಾಬ್ ಅನ್ನು ಬಿಟ್ಟು ಬಿಡಲು ಅದು ಸಹಕಾರಿಯಾಯಿತು. ಆದರೆ 'ಡಿ'ಗೆ ಐವತ್ತರ ವಯಸ್ಸಿನಲ್ಲೂ ಹಣಕಾಸು ಯೋಜನೆ ಮಾಡಲು ಸಾಧ್ಯವಾಗಿಲ್ಲ. ಯಾಕೆ?…

''ನಾನು ಮತ್ತು 'ಡಿ' ಒಟ್ಟಿಗೆ ವಿದೇಶದಲ್ಲಿ ಸಮಾನ ಸಂಬಳದ ಕೆಲಸಕ್ಕೆ ಸೇರಿದ್ದೆವು. ಇಬ್ಬರೂ ದುಬಾರಿಯಾದ ಹಾಂಕಾಂಗ್ ನಗರದಲ್ಲಿ ವಾಸಿಸುತ್ತಿದ್ದೆವು. ಆದರೆ ನಾನು

ಹಣವನ್ನು ಸಾಧ್ಯವಾದಷ್ಟು ಉಳಿತಾಯ ಮಾಡುತ್ತಿದ್ದೆ. 'ಡಿ' ಮಾಡುತ್ತಿರಲಿಲ್ಲ. ಕಡಿಮೆ ಬಾಡಿಗೆಯ ಮನೆಯಲ್ಲಿದ್ದುಕೊಂಡು ವರ್ಷಕ್ಕೆ 18,000 ಡಾಲರ್ ಉಳಿಸುತ್ತಿದ್ದೆ. ಮನೆಯಲ್ಲೇ ಹೆಚ್ಚಿನ ಊಟೋಪಚಾರ ಮಾಡುತ್ತಿದ್ದೆ. ವಿಲಾಸಿ ಪ್ರವಾಸಗಳು ಕಡಿಮೆಯೇ ಇತ್ತು. ಟ್ಯಾಕ್ಸಿಯ ಬದಲಿಗೆ ಸಾರ್ವಜನಿಕ ಸಾರಿಗೆ ಬಳಸುತ್ತಿದ್ದೆ. ಆದರೆ 'ಡಿ' ಹಾಂಕಾಂಗ್‌ನ ದುಬಾರಿ ಬಡಾವಣೆಯಲ್ಲಿ ದುಬಾರಿ ಬಾಡಿಗೆಯ ಮನೆಯಲ್ಲಿ ವಾಸಿಸುತ್ತಿದ್ದ, ದುಬಾರಿ ಮದ್ಯವನ್ನೇ ಸೇವಿಸುತ್ತಿದ್ದ. ಲಕ್ಷುರಿ ಕಾರನ್ನು ಖರೀದಿಸಿದ್ದ. ಉಳಿತಾಯ ಆತನಿಗೆ ಆಗದ ಮಾತಾಗಿತ್ತು….

''ನಾನು ಉಳಿತಾಯ ಮಾಡಿದ್ದು ಮಾತ್ರವಲ್ಲದೆ, ಹೂಡಿಕೆಯನ್ನೂ ಮಾಡುತ್ತಿದ್ದೆ. ಸ್ಟಾಕ್ ಮಾರ್ಕೆಟ್‌ನಲ್ಲಿ ಹೂಡಿಕೆ ಮಾಡುವುದು ಹೇಗೆ ಎಂಬುದು ನನಗೆ ಗೊತ್ತಿರಲಿಲ್ಲ. ಹಾಂಕಾಂಗ್‌ನಲ್ಲಿ ಗೋಲ್ಡ್‌ಮನ್ ಸ್ಯಾಕ್ಸ್‌ಗೆ ಸೇರುವುದಕ್ಕೆ ಮೊದಲು ನಾನು ಕೆಲಸಕ್ಕೆ ಸೇರಿದ್ದ ಕಂಪನಿಯೊಂದರಲ್ಲಿ ಕೆಲವೇ ತಿಂಗಳಲ್ಲಿ ಸಹೋದ್ಯೋಗಿಯ ನೆರವು ಪಡೆದು ಬ್ರೋಕರೇಜ್ ಅಕೌಂಟ್ ತೆರೆದೆ. ನಾನು ಕೆಲಸ ಮಾಡುತ್ತಿದ್ದ ಕಂಪನಿಯದ್ದೇ ಷೇರುಗಳಲ್ಲಿ ಆಗಿನ ನನ್ನ ಉಳಿತಾಯದ ಬಹುಪಾಲು ಹಣವನ್ನು ಹೂಡಿಕೆ ಮಾಡಿದ್ದೆ. 5,000 ಡಾಲರ್ ಮೊತ್ತವಾಗಿತ್ತು. ಬೇರೆ ಕಂಪನಿ ಬಗ್ಗೆ ತಿಳಿದಿರಲಿಲ್ಲ. ಆದರೆ ಅದು ದೊಡ್ಡ ಪ್ರಮಾದವಾಗಿತ್ತು. ಆರು ತಿಂಗಳುಗಳ ಬಳಿಕ ಹಣಕಾಸು ಬಿಕ್ಕಟ್ಟಿನ ಪರಿಣಾಮ ಆ ಕಂಪನಿ ದಿವಾಳಿಯಾಗಿ ಬಾಗಿಲು ಮುಚ್ಚಿತು. ಷೇರು ನಷ್ಟಕ್ಕೀಡಾಗಿ ನನ್ನ ಉಳಿತಾಯ ಶೂನ್ಯಕ್ಕೆ ತಿರುಗಿತ್ತು. ಜತೆಗೆ ಉದ್ಯೋಗವನ್ನೂ ಕಳೆದುಕೊಂಡೆ. ಹೀಗಿದ್ದರೂ, ಗೋಲ್ಡ್‌ಮನ್ ಸ್ಯಾಕ್ಸ್ ಬ್ಯಾಂಕಿಗೆ ಸೇರಿದ ಬಳಿಕ ಹೊಸ ಸಹೋದ್ಯೋಗಿಗಳೊಂದಿಗೆ ಸ್ಟಾಕ್ ಮಾರ್ಕೆಟ್ ಬಗ್ಗೆ ಹೆಚ್ಚು ತಿಳಿದುಕೊಂಡೆ. ಅವರೆಲ್ಲ ಟೆಕ್ ಸ್ಟಾಕ್‌ಗಳಲ್ಲಿ ಹೂಡಿಕೆ ಮಾಡಿದ್ದರು. ಈ ಹಿಂದಿನ ಅನುಭವದಿಂದ ಪಾಠ ಕಲಿತು ಒಂದೇ ಕಂಪನಿಯಲ್ಲಿ ಹೂಡದಿರಲು ನಿರ್ಧರಿಸಿದೆ. ಭಿನ್ನ ಟೆಕ್ ಇಂಡೆಕ್ಸ್ ಫಂಡ್‌ಗಳು ಮತ್ತು ಷೇರುಗಳಲ್ಲಿ ಹೂಡಿಕೆ ಮಾಡಿದೆ. ಡಾಟ್ ಕಾಮ್ ಬಿಕ್ಕಟ್ಟಿನಿಂದ ಒಂದಷ್ಟು ನಷ್ಟವಾದರೂ, ಮೂಲ ಹೂಡಿಕೆಯ ಮೊತ್ತಕ್ಕೆ ಧಕ್ಕೆಯಾಗಿರಲಿಲ್ಲ. ಈ ನಡುವೆ ಹೂಡಿಕೆಗೆ ಸಂಬಂಧಿಸಿದ ಅನೇಕ ಪುಸ್ತಕಗಳನ್ನು ಓದಿದೆ. ವಾರೆನ್ ಬಫೆಟ್ ಅವರ ಮೌಲ್ಯಾಧಾರಿತ ಷೇರು ಹೂಡಿಕೆ ಪದ್ಧತಿಯನ್ನು ಅನುಸರಿಸಿದೆ. ಮೆಕ್ ಡೊನಾಲ್ಡ್, ಸ್ಟಾರ್‌ಬಕ್ಸ್, ಆಪಲ್ ಮೊದಲಾದ ಒಳ್ಳೆಯ ಕಂಪನಿಗಳ ಷೇರುಗಳನ್ನು ಖರೀದಿಸಿದೆ. ಈ ಎಲ್ಲ ಬ್ರ್ಯಾಂಡ್‌ಗಳನ್ನು ಸ್ವತಃ ಬಳಸುತ್ತಿದ್ದೆ. ಭಾರತದಲ್ಲೂ ರಿಯಲ್ ಎಸ್ಟೇಟ್‌ನಲ್ಲಿ ಹೂಡಿಕೆ ಮಾಡಿದ್ದೆ. ಇಪ್ಪತ್ತೈದು ವರ್ಷಗಳ ಹಿಂದಿನಿಂದಲೂ ನನ್ನ ಉದ್ಯೋಗವೇ ಇರಲಿ, ನಂತರದ ಬರವಣಿಗೆಯೇ ಇರಲಿ. ಜತೆಜತೆಯಲ್ಲಿ ಉಳಿತಾಯ ಮತ್ತು ಹೂಡಿಕೆಯನ್ನು ಮುಂದುವರಿಸಿದ್ದೆ. ಅಲ್ಲಿಂದ ಇಲ್ಲಿಯವರೆಗೆ ಹಲವು ಷೇರುಗಳು ಹಲವಾರು ಪಟ್ಟು ಬೆಳೆದು ಲಾಭದಾಯಕವಾಗಿವೆ. ಇದನ್ನು ನನ್ನ ಸಂಪತ್ತಿನ ಬಗ್ಗೆ ಜಂಭದಿಂದ ಕೊಚ್ಚಿಕೊಳ್ಳಲು ಹೇಳುತ್ತಿಲ್ಲ. ಒಂದೇ ವ್ಯತ್ಯಾಸವೇನೆಂದರೆ ನನ್ನ ಸ್ನೇಹಿತ 'ಡಿ' ತನ್ನ ಸಂಪಾದನೆಯ ಬಹುಪಾಲು ಹಣವನ್ನು ಖರ್ಚು ಮಾಡುತ್ತಿದ್ದ. ಉಳಿತಾಯ ಮತ್ತು ಹೂಡಿಕೆಯನ್ನು ಮಾಡುವುದಕ್ಕೆ ಆದ್ಯತೆ ನೀಡಿರಲಿಲ್ಲ. ಇದರ ಪರಿಣಾಮ ಐವತ್ತನೇ ವರ್ಷದಲ್ಲಿ 'ಡಿ' ತನ್ನ ಪ್ರಾಥಮಿಕ ಅವಶ್ಯಕತೆಗಳಿಗೆ ಉದ್ಯೋಗವನ್ನು ಹುಡುಕಬೇಕಾಗಿದೆ. ಮತ್ತೊಂದು ಕಡೆ ನಾನು ಮತ್ತೊಮ್ಮೆ ಕಾರ್ಪೊರೇಟ್ ಕಚೇರಿಗಳಲ್ಲಿ ಕೆಲಸ ಮಾಡಬೇಕಾದ ಅನಿವಾರ್ಯತೆಯಲ್ಲಿ ಇಲ್ಲ. ಇದು ಲಕ್ಷುರಿಯೇ? ಖಂಡಿತವಾಗಿಯೂ ಹೌದು. ಆದರೆ ಇದಕ್ಕಾಗಿ ಕೆಲವೊಂದು ಇತರ ಲಕ್ಷುರಿಗಳನ್ನು ನಾನು ಕೈಬಿಟ್ಟಿದ್ದೆ. ನಾನು ಅದೃಷ್ಟಶಾಲಿಯೇ? ಹೌದು. ದೀರ್ಘಾವಧಿಗೆ ಹೂಡಿಕೆ ಮಾಡಿದ್ದರಿಂದ ಮಾರುಕಟ್ಟೆ ನನಗೆ ಉತ್ತಮವಾದ ಪ್ರತಿಫಲವನ್ನೂ ಕೊಟ್ಟಿದೆ. ಇಂಥ ಆಯ್ಕೆಗಳಿಂದ ತನ್ನ ಅದೃಷ್ಟವನ್ನು ಸಂಪಾದಿಸಲು 'ಡಿ'ಯನ್ನು ಯಾರೊಬ್ಬರೂ ತಡೆದಿರಲಿಲ್ಲ''.

ಹೀಗೆ ಚೇತನ್ ಭಗತ್ ವಿವರಿಸುತ್ತಾರೆ. ಎಲ್ಲರೂ ಯಾವುದೇ ವೃತ್ತಿ-ಪ್ರವೃತ್ತಿಯಲ್ಲಿದ್ದರೂ, ಉತ್ತಮ ಜೀವನಕ್ಕಾಗಿ ತಪ್ಪದೇ ಅನುಸರಿಸಬೇಕಾದ ನಿಯಮವಿದು. ಅಲ್ವಾ?

ಭಟ್ಟರ್ ಸ್ಕಾಚ್

- ಮಂಜುನಾಥ ಹತ್ತರವಾಟ, ಕೊಳವಿ
ಭಟ್ರೇ, ವಯಸ್ಸಾದ ನಂತರ ಬದನೇಕಾಯಿ ತಿನ್ನಬಹುದಾ?
– **ಹೂಂ.. ತಿನ್ನಬಹುದು. ಆದರೆ ತಲೆ ತಿನ್ನಬಾರದು!**

- ಎಲ್.ವಿ.ಸತೀಶ್, ಮೈಸೂರು
ಭಟ್ರೇ, ಆರ್‌ಸಿಬಿಯಿಂದ ನಾವು ಕಲಿಯುವ ಪಾಠವೇನು?
– **ಕಪ್ ಗೆದ್ದು ತಪ್ ಮಾಡುವುದಕ್ಕಿಂತ, ಕಪ್ ಗೆಲ್ಲದೇ ತಪ್ ಮಾಡೋದೇ ವಾಸಿ!**

- ವೇಣುಗೋಪಾಲ ಕಂಚಿತೋಟ, ಕಡೂರು
ಭಟ್ರೇ, ಕಾಲ್ತುಳಿತ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಜ್ಯ ಸರಕಾರ ಇನ್ನೂ ಹೇಳದ ಸಂಗತಿ ಇದೆಯಾ?
– **ಕಾಲ್ತುಳಿತಕ್ಕೆ ಜನರ ಕಾಲೇ ಕಾರಣ!**

- ಸಮೀರ ಕಲ್ಕುಣೆ, (ಇಮೇಲ್ ಮೂಲಕ)
ಭಟ್ರೇ, ಕೆಲವು ಸಲ ಒಂದು ಕೆಲಸವನ್ನು ಮಾಡಲು ಇಡೀ ದಿನ ಹಿಡಿಯುತ್ತದಲ್ಲ?
– **ನನಗೆ ಒಮ್ಮೊಮ್ಮೆ ಏನನ್ನೂ ಮಾಡದಿರಲು ಇಡೀ ದಿನ ಹಿಡಿಯುತ್ತೆ!**

- ವಿ.ಹೇಮಂತಕುಮಾರ, ಬೆಂಗಳೂರು
ಭಟ್ರೇ, ಏನೇ ಕದ್ದರೂ ಶಿಕ್ಷೆ ಗ್ಯಾರಂಟಿಯಾ?
– **ಮನಸ್ಸು, ಹೃದಯ ಕದ್ದರೆ ಮಾಫ್!**

- ರಾಜು ಪತ್ತಾರ, ಹುಬ್ಬಳ್ಳಿ
ಭಟ್ರೇ, ನಮ್ಮ ಕೈಯಲ್ಲಿರುವುದು ಮತ್ತು ಕೈಯಲ್ಲಿ ಇಲ್ಲದಿರುವುದು ಯಾವುದು?
– **ಹೆಂಡತಿ ಮತ್ತು ಸರಕಾರವನ್ನು ಆಯ್ಕೆ ಮಾಡುವುದು ಮತ್ತು ನಂತರ ಅವನ್ನು ನಿಯಂತ್ರಿಸಲಾಗದಿರುವುದು!**

- ಶಿವಲಿಂಗಪ್ಪ ಸಿಂಗಶೆಟ್ಟಿ, ಕಲಬುರ್ಗಿ
ಭಟ್ರೇ, ಕುಮಾರಣ್ಣ ಮತ್ತು ಡಿಕೆಶಿ ಕಣ್ಣೀರನ್ನು ಮೊಸಳೆ ನೋಡಿದ್ದರೆ ಏನು ಹೇಳುತ್ತಿತ್ತು?
– **ನಿಮ್ಮಿಬ್ಬರ ಕಣ್ಣೀರ ಮುಂದೆ ನನ್ನದು ಶುದ್ಧ ನಟನೆ ಅಂತಿತ್ತು!**

- ಪರಬ್ರಹ್ಮ ಶಾಸ್ತ್ರೀ, ಶಂಕರಪುರ
ಭಟ್ರೇ, ಕಾಲ್ತುಳಿತದ ತನಿಖೆಗೆ ನ್ಯಾಯಮೂರ್ತಿ ನಾಗಮೋಹನ ದಾಸರು ಯಾಕೆ ಸರಕಾರಕ್ಕೆ ನೆನಪಾಗಲಿಲ್ಲ?
– **ಅವರು ಜಾತಿ ಗಣತಿಯಲ್ಲಿ ಬ್ಯುಸಿ ಆಗಿದ್ದಾರಲ್ಲ?!**

- ಅಮಾಸೆ ಸುಬ್ಬು, ಮೈಸೂರು
ಭಟ್ರೇ, ಹೆಂಗಸರ ಸೀರೆಯ ಸೇಫ್ಟಿ ಪಿನ್ ಅನ್ನು ಯಾರು ಕಂಡು ಹಿಡಿದರು?
– **ದಿಟ್ಟಿಸಿ ನೋಡುವ ಯುವಕರ ದೃಷ್ಟಿ ತಾಗಲೆಂದು ಯಾರೋ ಅಮ್ಮಾವ್ರ ಗಂಡ ಕಂಡುಹಿಡಿದಿರಬಹುದಾ?!**

- ರವಿ ಪಾಟೀಲ, ಗದಗ
ಭಟ್ರೇ, ನಮಗೇ ನಾವು ಅಚ್ಚರಿ ನೀಡಬೇಕು ಅಂದ್ರೆ ಏನು ಮಾಡಬೇಕು?
– **ನಮಗೇ ನಾವು ಫುಲ್ ಬಾಟಲಿ ಗಿಫ್ಟ್ ಕೊಡಬೇಕು!**

ಬೆಲ್ಲ ಬೆರೆಸಿದ ಸಾಂಬಾರು ಗೊತ್ತೇ ನಿಮಗೆ?

ಶಶಾಂಕಣ
ಶಶಿಧರ ಹಾಲಾಡಿ
vveditoped@gmail.com

ಇಪ್ಪತ್ತೊಂದನೆಯ ಶತಮಾನವನ್ನು 'ಮಧುಮೇಹಿಗಳ ಯುಗ' ಎಂದೇ ಕರೆಯಬಹುದೇನೊ! ಸ್ವಲ್ಪ ಗಮನಿಸಿ ನೋಡಿ: ನಮ್ಮ ಸುತ್ತಲಿನ ಹಳ್ಳಿ, ಪಟ್ಟಣ, ನಗರ ಮತ್ತು ಮಹಾನಗರಗಳಲ್ಲಿ ಇಂದು ಎಲ್ಲಿ ಕಂಡರೂ ತಮಗೆ 'ಶುಗರ್ ಪ್ರಾಬ್ಲಮ್' ಎಂದು ಹೇಳಿಕೊಳ್ಳುವವರು ಸಿಗುತ್ತಾರೆ! ನಗರೀಕರಣದ ಪ್ರಭಾವವೋ ಎಂಬಂತೆ, ಸದಾಕಾಲ ಕುಳಿತು ಕೆಲಸ ಮಾಡುವವರಿಗೆ ಇಂಥ ಒಂದು ಸ್ಥಿತಿ ತೀರಾ ಸಾಮಾನ್ಯ. ಕಚೇರಿ, ಬ್ಯಾಂಕು ಮೊದಲಾದ ಕಡೆ, ದಿನವಿಡೀ ಕುಳಿತು ಒತ್ತಡದಿಂದ ಕೆಲಸ ಮಾಡುತ್ತಾ, ಆಗಾಗ ಕಾಫಿಯನ್ನೋ, ಚಹಾವನ್ನೋ ಹೀರುವವರಿಗೆ 'ಸಕ್ಕರೆ ಸಮಸ್ಯೆ' ಅಕ್ಕರೆಯಿಂದ ಒಕ್ಕರಿಸುತ್ತದೆ! ಆದರೆ, ಸಮಾಜದ ಎಲ್ಲಾ ಸ್ತರಗಳ ಜನರಲ್ಲೂ 'ಸಕ್ಕರೆ ಕಾಯಿಲೆ' ಕಾಣಿಸಿಕೊಂಡಿರುವ ದಿನಮಾನಗಳಿವು! ವಿಶೇಷವೆಂದರೆ (ಇದು ಸಣ್ಣ ದುರಂತವೂ ಹೌದು), ಸಾಕಷ್ಟು ಕೆಲಸ ಮಾಡುವ, ಹೊಲಗದ್ದೆಗಳಲ್ಲಿ ಓಡಾಡುತ್ತಾ ಚಟುವಟಿಕೆಯಿಂದ ಇರುವ ಕೃಷಿಕರನ್ನೂ, ಹಳ್ಳಿಗಳ ನಿವಾಸಿಗಳನ್ನೂ ಇಂದು 'ಸಕ್ಕರೆ ಕಾಯಿಲೆ' ಅಪ್ಪಿಕೊಂಡಿದೆ. ಅಂಥ ಬಹುಪಾಲು ಜನರು ಗುಳಿಗೆ ನುಂಗುತ್ತಾ ಆ 'ಕಾಯಿಲೆ'ಯನ್ನು ಒಪ್ಪಿಕೊಂಡಿದ್ದಾರೆ!

ನಮ್ಮ ದೇಶದ ಕುರಿತು ಇನ್ನೊಂದು ವಿಶೇಷ ಪ್ರಚಾರವಿದೆ, ಅದನ್ನು ಸುಳ್ಳು ಎಂದು ಹೇಳುವ ಧೈರ್ಯವಿಲ್ಲ. ಏಕೆಂದರೆ, ವೈದ್ಯಕೀಯ ವಲಯದಲ್ಲೇ ಈ ವಿಚಾರವನ್ನು ಹೇಳಲಾಗಿದೆ. ಅದೇನೆಂದರೆ, ಭಾರತವು ಜಗತ್ತಿನ 'ಡಯಾಬಿಟಿಸ್ ಕ್ಯಾಪಿಟಲ್' ಆಗಿದೆ ಅಥವಾ ಆಗುವ ದಾರಿಯನ್ನು ಹಿಡಿದಿದೆ; ಅಂದರೆ, ಮಧುಮೇಹ ಸಮಸ್ಯೆ ಇರುವವರ ರಾಜಧಾನಿಯಾಗಿ ನಮ್ಮ ದೇಶ ರೂಪುಗೊಂಡಿದೆ ಅಥವಾ ರೂಪುಗೊಳ್ಳುತ್ತಿದೆ ಎಂಬ ವಿಚಾರ. ಭಾರತದ ಅಧಿಕ ಜನಸಂಖ್ಯೆಯ ಅನುಪಾತಕ್ಕೆ ಅನುಗುಣವಾಗಿ, ಡಯಾಬಿಟಿಸ್ ಇರುವವರ ಸಂಖ್ಯೆಯೂ ಜಾಸ್ತಿ. ಜತೆಗೆ, ದೈಹಿಕ ಸ್ಥಿತಿ, ಆನುವಂಶಿಕ ದೇಹ ರಚನೆ ಮೊದಲಾದವುಗಳೂ ನಮ್ಮ ದೇಶದವರಿಗೆ ಬಹುಬೇಗನೆ ಸಕ್ಕರೆ ಕಾಯಿಲೆ ಬರುವಂತೆ ಮಾಡಿವೆ ಎಂಬುದು ಸಹ ಪ್ರಚಾರದಲ್ಲಿದೆ ಮತ್ತು ಅಧಿಕೃತ ಸಂಸ್ಥೆಗಳು ಇದನ್ನು ಒಪ್ಪಿಕೊಂಡಿವೆ.

ಇರಲಿ, ಸಕ್ಕರೆ ಕಾಯಿಲೆ ಬರದಂತೆ ತಡೆಯುವುದು ಒಂದು ವಿಚಾರ. ಬಂದ ಮೇಲೆ, ಅದನ್ನು ಮ್ಯಾನೇಜ್ ಮಾಡುವುದು, ಅದರ ಜತೆ ಹೊಂದಾಣಿಕೆ ಮಾಡಿಕೊಂಡು ಜೀವನ ನಡೆಸುವುದು, ಅದನ್ನು ನಿಯಂತ್ರಿಸುವುದು ಇಂದಿನ ಬಹುಮುಖ್ಯ ವಿಚಾರ. ಏಕೆಂದರೆ, ಒಮ್ಮೆ ಸಕ್ಕರೆ ಕಾಯಿಲೆ ಬಂದರೆ, ಕ್ರಮೇಣ ಅದರ ಜತೆಯಲ್ಲೇ ಇತರ ಗಂಭೀರ ಆರೋಗ್ಯ ಸಮಸ್ಯೆಗಳು ಉದ್ಭವಿಸುತ್ತವೆ ಎಂದು ಹಲವು ವೈದ್ಯರೇ ಹೇಳುತ್ತಾರೆ. ಆದ್ದರಿಂದ, ರಕ್ತದಲ್ಲಿ ಸಕ್ಕರೆಯ ಅಂಶ ಅಧಿಕವಾದಾಗ, ಅದನ್ನು ಮಾತ್ರೆ ತಿನ್ನುವ ಮೂಲಕ ನಿಯಂತ್ರಿಸುವುದು ಅಗತ್ಯ; ಜತೆಗೆ, ಹಲವು ರೀತಿಯ ಆಹಾರ ಪದಾರ್ಥಗಳನ್ನು ದೂರವಿಟ್ಟು, ಆಯ್ದ ಆಹಾರವನ್ನು ತಿನ್ನುತ್ತಾ, ಹೆಚ್ಚು ನಾರಿನ ಅಂಶವನ್ನು ತಿನ್ನುವುದನ್ನು ರೂಢಿ ಮಾಡಿಕೊಂಡು, ದಿನಕ್ಕೆ ಅರ್ಧ ಗಂಟೆಯಿಂದ ಒಂದು ಗಂಟೆಯಾದರೂ ನಡೆದಾಡುವ ಚಟುವಟಿಕೆಯನ್ನು ಅಭ್ಯಾಸ ಮಾಡಿಕೊಂಡು, ಮಧುಮೇಹ ಸಮಸ್ಯೆಯನ್ನು ನಿಯಂತ್ರಣ ಮಾಡುವ ಸಲಹೆ ಇಂದು ಸಾಮಾನ್ಯ ಎನಿಸಿದೆ.

ಆಹಾರ ಸೇವನೆಯ ವಿಚಾರಕ್ಕೆ ಬಂದರೆ, ಡಯಾಬಿಟಿಸ್ ಇರುವವರು ಸಕ್ಕರೆ, ಬೆಲ್ಲ ತಿನ್ನಬಾರದು ಎಂಬುದು ಬಹುಮುಖ್ಯ ಪಥ್ಯ. ನಾವು ಸೇವಿಸಿದ ಆಹಾರವು ಹೊಟ್ಟೆಯಲ್ಲಿ ಜೀರ್ಣಗೊಂಡು, ಅದು ಗ್ಲೂಕೋಸ್ ಆಗಿ ಪರಿವರ್ತನೆಗೊಂಡು ದೇಹಕ್ಕೆ ಶಕ್ತಿ ನೀಡುವುದು ಸಹಜ ಕ್ರಿಯೆ; ಆದರೆ, ಸಕ್ಕರೆ ಮತ್ತು ಬೆಲ್ಲವನ್ನು ಕಾಫಿಗೆ ಬೆರೆಸಿಯೋ, ತಂಪು ಪಾನೀಯಗಳ ಮೂಲಕವೋ ನೇರವಾಗಿ ಸೇವಿಸಿದಾಗ, ಅದು ಬೇಗನೆ ಗ್ಲೂಕೋಸ್ (ಸಕ್ಕರೆಯ ಅಂಶ) ಆಗಿ ಪರಿವರ್ತನೆಗೊಂಡು, ರಕ್ತಕ್ಕೆ ಸೇರುವುದು ಅಸಹಜ ಕ್ರಿಯೆ. ಈ ಚಯಾಪಚಯಗಳ ಪ್ರಕ್ರಿಯೆಯನ್ನು ವಿಶ್ಲೇಷಿಸುವುದು ಈ ಬರಹದ ಉದ್ದೇಶವಲ್ಲ. ನೇರವಾಗಿ ಸಕ್ಕರೆಯು ರಕ್ತಕ್ಕೆ ಬೇಗನೆ ಸೇರುವುದನ್ನು ತಪ್ಪಿಸಲು, ಮಧುಮೇಹಿಗಳಿಗೆ 'ಸಕ್ಕರೆ ತಿನ್ನಬೇಡಿ' ಎಂಬ ಸಲಹೆ ನೀಡುತ್ತಾರೆ.

ಆದ್ದರಿಂದಲೇ 'ಶುಗರ್‌ಲೆಸ್ ಕಾಫಿ' ಇಂದು ಎಲ್ಲೆಡೆ ತೀರಾ ಸಾಮಾನ್ಯ. ಹಲವು ಹೋಟೆಲ್, ದರ್ಶಿನಿ, ರೆಸ್ಟೋರೆಂಟ್‌ಗಳಲ್ಲಿ ಶುಗರ್‌ಲೆಸ್ ಕಾಫಿ ಅಥವಾ ಚಹಾವನ್ನು ಮಾರುತ್ತಾರೆ, ಡಯಾಬಿಟಿಸ್ ಇರುವವರಿಗೆಂದೇ ಈ ವಿಶೇಷ ವ್ಯವಸ್ಥೆ. ಆರೋಗ್ಯದ ಬಗ್ಗೆ ಕಾಳಜಿ ಇರುವವರೆಲ್ಲರೂ, 'ಶುಗರ್‌ಲೆಸ್ ಕಾಫಿ'ಯನ್ನು ಕೇಳಿ ಪಡೆಯುವುದು ಇಂದಿನ ದಿನಗಳಲ್ಲಿ ಸಾಮಾನ್ಯ ಎನಿಸಿದೆ ಮತ್ತು ಇದೊಂದು ಉತ್ತಮ ಅಭ್ಯಾಸವೂ ಹೌದು. ಯಾರದ್ದಾದರೂ ಮನೆಗೆ ಹೋದಾಗ 'ಸಕ್ಕರೆ ಹಾಕಿದ ಕಾಫಿ ನಿಮಗೆ ಪರವಾಗಿಲ್ವ?' ಎಂದು ಸೌಜನ್ಯದಿಂದ ವಿಚಾರಿಸುತ್ತಾರೆ. ಏಕೆಂದರೆ, ಈಚಿನ ಹತ್ತಿಪ್ಪತ್ತು ವರ್ಷಗಳಲ್ಲಿ ನಡುವಯಸ್ಸಿನವರಿಗೂ, ಎಳೆಯ ವಯಸ್ಸಿನವರಿಗೂ ಅಲ್ಲಲ್ಲಿ 'ಸಕ್ಕರೆ ಸಮಸ್ಯೆ' ಕಂಡುಬರುತ್ತಿದೆ. ಆದ್ದರಿಂದ, ಅತಿಥಿಗಳಿಗೂ ಸಕ್ಕರೆ ರಹಿತ ಕಾಫಿ ನೀಡುವ ಸೌಜನ್ಯವನ್ನು ಆತಿಥೇಯರು ತೋರಿಸುತ್ತಾರೆ.

ಡಯಾಬಿಟಿಸ್ ಇರುವ ಬಹುಪಾಲು ಮಂದಿ, ಗಂಭೀರ ವ್ರತ ಹಿಡಿದವರಂತೆ, ಸಕ್ಕರೆ ರಹಿತ ಕಾಫಿ, ಚಹಾ ಕುಡಿಯುವುದು ಸಾಮಾನ್ಯ. ಆದರೆ, ಅಂಥ ಸಜ್ಜನರ 'ಸಕ್ಕರೆ ರಹಿತ ವ್ರತ'ವನ್ನು ಭಂಗ ಮಾಡುವ ನಾನಾ ವಿದ್ಯಮಾನಗಳೂ ನಮ್ಮಲ್ಲಿ ಇಂದು ಸದ್ದಿಲ್ಲದೆ ನಡೆಯುತ್ತಿವೆ. 'ಸಕ್ಕರೆ ರಹಿತ ವ್ರತ' ಪಾಲಿಸುವವರಿಗೆ ಗೊತ್ತಿಲ್ಲದಂತೆ ಸಾಕಷ್ಟು ಸಕ್ಕರೆಯ (ಬೆಲ್ಲದ) ಅಂಶವು ಆಹಾರದ ಮೂಲಕ ಅವರ ದೇಹ ಸೇರಿರುತ್ತದೆ! ಹೇಗೆ ಎಂದಿರಾ?

ಇಡ್ಲಿ-ವಡೆ-ಸಾಂಬಾರ್ ಸಾಕಷ್ಟು ಸುರಕ್ಷಿತ ಮತ್ತು ಆರೋಗ್ಯಕರ ಉಪಾಹಾರ ಎಂದೇ ಪ್ರಚಾರ ಗೊಂಡಿದೆ. ಅದರಲ್ಲೂ ಕರ್ನಾಟಕದವರು, 'ನಮ್ಮ ನಾಡಿನ ಇಡ್ಲಿ-ಸಾಂಬಾರು, ವಿಶ್ವದರ್ಜೆಯ ಉತ್ತಮ ಮತ್ತು ಪೌಷ್ಟಿಕ ಉಪಾಹಾರ' ಎಂದು ಹೆಮ್ಮೆಯಿಂದ ಹೇಳಿಕೊಳ್ಳುವುದುಂಟು. ಇದು ನಿಜವೂ ಆಗಿರಬಹುದು. ನಮ್ಮ ರಾಜ್ಯದ ಹೋಟೆಲ್, ರೆಸ್ಟೋರೆಂಟ್, ದರ್ಶಿನಿಗಳಲ್ಲಿ ಬೆಳಗಿನ ಉಪಾಹಾರವಾಗಿ ಇಡ್ಲಿ, ವಡೆ, ಸಾಂಬಾರ್ ಬಹು ಜನಪ್ರಿಯ. ಹಾಗೆಂದು, ಡಯಾಬಿಟಿಸ್ ಇರುವವರು ಇಡ್ಲಿ, ವಡೆ, ಸಾಂಬಾರನ್ನು ಪಟ್ಟಾಗಿ ಸೇವಿಸಿದಾಗ, ಅವರ ದೇಹದೊಳಗೆ ಬೆಲ್ಲದ ಅಂಶ ನೇರವಾಗಿ ಸೇರಿಕೊಳ್ಳುತ್ತದೆ! ಹೇಗೆ? ಸಾಂಬಾರಿನ ರುಚಿಗಾಗಿ ಉಂಡೆ ಉಂಡೆ ಬೆಲ್ಲವನ್ನು ಹೆಚ್ಚಿನ ಹೋಟೆಲಿನವರು, ದರ್ಶಿನಿಯವರು ಹಾಕುತ್ತಾರೆ!

ಉಪ್ಪಿಟ್ಟು, ಬಿಸಿಬೇಳೆ ಭಾತ್ ಮೊದಲಾದ ತಿನಿಸುಗಳಿಗೆ, ರುಚಿಗಾಗಿ ತುಸು ಸಕ್ಕರೆ ಅಥವಾ ಬೆಲ್ಲ ಹಾಕುತ್ತಾರೆ; ಸಾಂಬಾರು, ತಿಳಿಸಾರು ಮೊದಲಾದವುಗಳಿಗೆ ಸ್ವಲ್ಪ ಸಕ್ಕರೆ ಅಥವಾ ಬೆಲ್ಲ ಬೆರೆಸುವ ಪದ್ಧತಿ ಹೆಚ್ಚಿನ ಹೋಟೆಲ್‌ಗಳಲ್ಲಿ, ಮದುವೆಯ ವಿಶೇಷ ಊಟಗಳಲ್ಲಿ ತೀರಾ ಸಾಮಾನ್ಯ (ಅಂದರೆ, ಈ ಪದ್ಧತಿ ರಹಸ್ಯವೇನಲ್ಲ!). ರುಚಿಕರ ಮಸಾಲೆ ದೋಸೆ ತಯಾರಿಸುವಾಗ, ಅದು ಕೆಂಪಗೆ ಕಾಣಲಿ ಎಂದು ಕೆಲವು ರೆಸ್ಟೋರೆಂಟ್‌ನವರು, ಹಿಟ್ಟಿಗೆ ಸ್ವಲ್ಪ ಸಕ್ಕರೆ ಬೆರೆಸುತ್ತಾರೆ! ಮದುವೆಮನೆಯ ಊಟವನ್ನು ಸೇವಿಸುವಾಗ, ಅಲ್ಲಿನ ಸಿಹಿ ತಿನಿಸುಗಳ ಜತೆಯಲ್ಲೇ, ಕಾಯಿರಸ, ಸಾಂಬಾರು, ಚಿತ್ರಾನ್ನ (ಹೌದು, ಕೆಲವು ಕಡೆ ಇದಕ್ಕೂ ಬೆಲ್ಲದ ಬೆರಕೆ ಇದೆ) ಮೊದಲಾದ ತಿನಿಸುಗಳ ಜತೆ ಸಾಕಷ್ಟು ಬೆಲ್ಲ ನಮ್ಮ ದೇಹದೊಳಗೆ ಸೇರುತ್ತದೆ. ಇದು ಸಾಮಾನ್ಯ ಜನರಿಗೆ ತೊಂದರೆ ನೀಡದೇ ಇದ್ದರೂ, 'ಶುಗರ್‌ಲೆಸ್ ಕಾಫಿ'ಯನ್ನು ಕೇಳಿ ಪಡೆದು ಕುಡಿಯುವ ಸಜ್ಜನರಿಗೆ ಸಣ್ಣ ತೊಂದರೆಯನ್ನೇ ಉಂಟುಮಾಡಬಹುದು!

ಇನ್ನು ನಮ್ಮ ರಾಜ್ಯದ ಮಲೆನಾಡು, ಕರಾವಳಿಯ ಅಡುಗೆಯ ಶೈಲಿ ತುಸು ಭಿನ್ನ. ಅಲ್ಲಿ ಬೆಲ್ಲದ ಬಳಕೆ ಧಾರಾಳ. ಸಾಂಬಾರು, ಸಾರು, ಸಾಸಿವೆ, ಗೊಜ್ಜು, ಮುದ್ದುಳಿ, ಕಾಯಿರಸ ಮೊದಲಾದ, ಯಾವುದು ಸಕ್ಕರೆ ರಹಿತ ಎಂದು ಮೇಲ್ನೋಟಕ್ಕೆ ಕಾಣಿಸುತ್ತದೋ, ಅವೆಲ್ಲಕ್ಕೂ ಬೆಲ್ಲ, ಸಕ್ಕರೆ ಧಾರಾಳ ಉಪಯೋಗವಿದೆ! ಅವರನ್ನು ಕೇಳಿದರೆ, 'ನಮ್ಮ ಶೈಲಿಯ ಅಡುಗೆಯ ರುಚಿಗೆ ಮುಖ್ಯವಾಗಿ ಬೆಲ್ಲ ಬೇಕೇ ಬೇಕು!' ಎಂದು ಹೆಮ್ಮೆಯಿಂದ ಹೇಳಿಕೊಂಡಾರು! ಸಾಂಬರಿನ ರುಚಿ ಹೆಚ್ಚಿಸಲು ಸ್ವಲ್ಪ ಬೆಲ್ಲ ಬಳಕೆ ಮಾಡುವ ಈ ಪದ್ಧತಿಯು, ಈಗ ನಿಧಾನವಾಗಿ ಹಾಸನ ದಾಟಿ, ಮೈಸೂರು ಕಡೆಗೂ (ಅಲ್ಲಲ್ಲಿ) ಹರಡಿದೆ!

ವೈದ್ಯರ ಸಲಹೆಯ ಮೇರೆಗೆ, ಸಕ್ಕರೆ ರಹಿತ ಕಾಫಿಯನ್ನೇ ಕುಡಿಯುತ್ತಾ, ನಾಲಗೆ ಚಪಲದಿಂದ ಕೇಳಿದರೂ, ನಿಷ್ಠೆಯಿಂದ ಸಿಹಿ ತಿನಿಸುಗಳನ್ನು ವರ್ಷಗಟ್ಟಲೆ ದೂರವಿರಿಸಿರುವ 'ಮಧುಮೇಹಿ'ಗಳ ದೇಹದೊಳಗೆ, ಈ ರೀತಿ ಸಾಕಷ್ಟು ಗ್ರಾಂ ಸಕ್ಕರೆ ಅಂಶವು, ಅವರ ಅರಿವಿಗೇ ಬರದಂತೆ ಸೇರಿಕೊಳ್ಳುತ್ತಿದೆ. ಇಲ್ಲಿ ಒಂದು ಪ್ರಶ್ನೆಯನ್ನು ನೀವು ಕೇಳಬಹುದು: ಸಕ್ಕರೆಯನ್ನು ಬಿಡುತ್ತೇವೆ, ಬೆಲ್ಲವನ್ನು ಸ್ವಲ್ಪ ಸೇವಿಸಬಹುದು; ಏಕೆಂದರೆ, ಅದು ಹೆಚ್ಚು ಪರಿಷ್ಕರಣೆಗೆ ಒಳಪಟ್ಟಿಲ್ಲವಲ್ಲ ಎಂದು.

ಮೊದಲನೆಯದಾಗಿ, ಸಕ್ಕರೆಯು ಹರಳಿನ ರೂಪ ತಾಳಲು ಸಾಕಷ್ಟು ರಾಸಾಯನಿಕ ಪರಿಷ್ಕರಣೆಗೆ ಒಳಪಟ್ಟಿರುವುದು ನಿಜ. ಅದು ನೇರವಾಗಿ ದೇಹವನ್ನು ಸೇರುತ್ತದೆ. ಆದರೆ, ಈ ನಿಟ್ಟಿನಲ್ಲಿ ಬೆಲ್ಲವೂ ಬಹುಮಟ್ಟಿಗೆ ಸಕ್ಕರೆಯನ್ನೇ ಹೋಲುತ್ತದೆ ಎನ್ನುತ್ತಾರೆ, ಆಹಾರ ತಜ್ಞರು. ಉತ್ತಮ ರೀತಿಯಲ್ಲಿ, ಆಲೆಮನೆಗಳಲ್ಲಿ ತಯಾರಿಸಿದ ಗುಣಮಟ್ಟದ ಬೆಲ್ಲದಲ್ಲಿ ಹೆಚ್ಚು ರಾಸಾಯನಿಕಗಳ ಬೆರಕೆ ಇಲ್ಲದೇ ಇರಬಹುದು. ಆದರೆ, ಸಕ್ಕರೆಯನ್ನು ದೂರವಿರಿಸಿ, ಧಾರಾಳವಾಗಿ ಬೆಲ್ಲ ಸೇವಿಸಿದರೆ, ಅದರಿಂದ ಲಾಭಕ್ಕಿಂತ ನಷ್ಟವೇ ಹೆಚ್ಚು, ಅದರಲ್ಲೂ ಮುಖ್ಯವಾಗಿ ಡಯಾಬಿಟಿಸ್ ಸಮಸ್ಯೆ ಇರುವವರಿಗೆ.

ಅಂಗಡಿಗಳಲ್ಲಿ ದೊರಕುವ ಬೆಲ್ಲದ ಕುರಿತು ಇನ್ನೊಂದು ವಿಚಾರವನ್ನು ಹಂಚಿಕೊಳ್ಳಲೇಬೇಕು. ಹಲವು ಕಡೆ, ವಾಣಿಜ್ಯಕವಾಗಿ ಬೆಲ್ಲ ತಯಾರಿಸುವವರು, ಸಕ್ಕರೆಯನ್ನು ಧಾರಾಳವಾಗಿ ಬಳಸಿ ಬೆಲ್ಲ ತಯಾರಿಸುತ್ತಾರೆ! ಏಕೆಂದರೆ, ಸಕ್ಕರೆಗೆ ಬೆಲೆ ಕಡಿಮೆ, ಬೆಲ್ಲಕ್ಕೆ ಬೆಲೆ ಜಾಸ್ತಿ! ಬೆಲ್ಲ ತಯಾರಿಸುವಾಗ ಸಕ್ಕರೆ ಬಳಸುತ್ತಾರೆ ಎಂದು ಹೇಳಿದರೆ, ಕೆಲವರಿಗೆ ನಿಜಕ್ಕೂ ಅಚ್ಚರಿ ಎನಿಸಬಹುದು. ಮೂಟೆ ಮೂಟೆ ಸಕ್ಕರೆಯನ್ನು ಬೆಲ್ಲ ತಯಾರಿಸುವ ಬೃಹತ್ ಪಾತ್ರೆಗೆ ಸುರಿಯುತ್ತಿದ್ದುದನ್ನು ಈ ಲೇಖಕ ಕಣ್ಣಾರೆ ನೋಡಿದ್ದಾನೆ! ಆ ಬೆಲ್ಲಕ್ಕೆ ಆಕರ್ಷಕ ಬಣ್ಣ ಬರುವ ಉದ್ದೇಶಕ್ಕಾಗಿ, ಕೃತಕ ಮತ್ತು ರಾಸಾಯನಿಕ ಬಣ್ಣಗಳನ್ನು ಸಹ ಬೆರೆಸುತ್ತಾರೆ!

ಆದರೆ, ಕೆಲವು ಕಡೆ ಯಾವುದೇ ರಾಸಾಯನಿಕ ಬಳಸದೇ, ಸಕ್ಕರೆಯನ್ನು ಮಿಶ್ರಣ ಮಾಡದೇ ಬೆಲ್ಲ ತಯಾರಿಸುತ್ತಾರೆ. ಈಚಿನ ದಿನಗಳಲ್ಲಿ ಸಾವಯವ ಬೆಲ್ಲ ತಯಾರಿಕೆ ಹೆಚ್ಚು ಜನಪ್ರಿಯಗೊಂಡಿದ್ದು, ಶುದ್ಧ ಕಬ್ಬಿನ ರಸದಿಂದ ಬೆಲ್ಲವನ್ನು ತಯಾರಿಸಿ, ಎಲ್ಲಾ ಕಡೆ ಮಾರಾಟಕ್ಕೆ ಒದಗಿಸುವ ಪದ್ಧತಿ ಜಾರಿಗೆ ಬಂದಿದೆ ಮತ್ತು ಅಷ್ಟರ ಮಟ್ಟಿಗೆ, ಅದನ್ನು ಸೇವಿಸುವ ಜನರ ಆರೋಗ್ಯಕ್ಕೆ ಧಕ್ಕೆಯಾಗಿಲ್ಲ. ಆದರೆ, ಈ ರೀತಿಯ ಉತ್ತಮ ಬೆಲ್ಲಕ್ಕೆ ಬೆಲೆ ಜಾಸ್ತಿ. ಆದ್ದರಿಂದ, ಹಲವರು ಆಕರ್ಷಕ ಬಣ್ಣ ಹೊಂದಿರುವ, ತುಸು ಕಡಿಮೆ ಬೆಲೆಗೆ ದೊರಕುವ ಬಿಳಿ ಬೆಲ್ಲವನ್ನೇ ಖರೀದಿಸುತ್ತಾರೆ. ಸಾವಯವ ಬೆಲ್ಲವಾಗಲೀ, ಬಿಳಿ ಬೆಲ್ಲವಾಗಲೀ ಮಧುಮೇಹಿಗಳಿಗೆ ತೊಂದರೆಯೇ. ಅವರು, ಎಲ್ಲಾ ಬೆಲ್ಲಗಳಿಂದ ದೂರವಿರುವುದು ಕ್ಷೇಮ.

ಈ ನಿಟ್ಟಿನಲ್ಲಿ ಕಂಡರೆ, ಮಧುಮೇಹದ ಸಮಸ್ಯೆ ಇರುವವರು 'ಶುಗರ್ ಲೆಸ್ ಕಾಫಿ'ಯನ್ನು ಕೇಳಿ ಪಡೆಯುವುದು ಸೂಕ್ತ ಎಂದೆನ್ನಬಹುದು. ಆದರೆ, ನಮ್ಮ ರಾಜ್ಯದಲ್ಲಿ ಇತ್ತೀಚೆಗೆ ರೂಢಿಗೆ ಬಂದಿರುವ ಆಹಾರ ತಯಾರಿಕಾ ಪದ್ಧತಿಯಲ್ಲಿ, ಮುಖ್ಯವಾಗಿ ಹೋಟೆಲ್‌ಗಳಲ್ಲಿ, ರುಚಿಗಾಗಿ ಕೆಲವು ಬಗೆಯ ಸಾಂಬಾರಿಗೆ ಬೆಲ್ಲ ಸೇರಿಸುವುದು ಸಾಮಾನ್ಯ ಎನಿಸಿದೆ. ಅದರಲ್ಲೂ ಮುಖ್ಯವಾಗಿ, ಇಡ್ಲಿ, ವಡೆಯ ಜತೆ ನೀಡುವ ಸಾಂಬಾರಿಗೆ ಹೆಚ್ಚಿನ ರೆಸ್ಟೋರೆಂಟ್‌ಗಳಲ್ಲಿ ಬೆಲ್ಲ ಸೇರಿಸುವುದು ಸಾಮಾನ್ಯ ಎನಿಸಿದೆ. ಆದ್ದರಿಂದ, 'ಸಕ್ಕರೆ ರಹಿತ ಕಾಫಿ' ವ್ರತ ಹಿಡಿದಿರುವ ಸಜ್ಜನರೇ, ಗಮನಿಸಿ: ನೀವು ದರ್ಶಿನಿಗಳಲ್ಲಿ, ಹೆಚ್ಚಿನ ಹೋಟೆಲ್‌ಗಳಲ್ಲಿ, ಪದೇ ಪದೆ ಇಡ್ಲಿ-ಸಾಂಬಾರ್ ಸೇವಿಸುತ್ತಿದ್ದರೆ, ಅದರಿಂದ ಒಂದಷ್ಟು ಗ್ರಾಂ ಸಕ್ಕರೆ (ಬೆಲ್ಲ)ಯನ್ನು ಅರಿವಿಲ್ಲದೇ ಸೇವಿಸುತ್ತಿದ್ದೀರಿ! ಕೆಲವರ ಮನೆಗಳಲ್ಲೂ ಸಾಂಬಾರು, ಸಾರಿಗೆ ಬೆಲ್ಲ ಸೇರಿಸುವ ಪದ್ಧತಿ ಇದ್ದು, ಅದು ಮಧುಮೇಹಿಗಳ 'ವ್ರತ'ವನ್ನು ಹಾಳುಮಾಡುತ್ತಿದೆ!

'ಸಕ್ಕರೆ ಕಾಯಿಲೆ' ಇರುವವರು ಸಕ್ಕರೆ ಮತ್ತು ಬೆಲ್ಲ ರಹಿತ ಕಾಫಿ ಕುಡಿಯುತ್ತಿರುವುದರಿಂದ, ರೆಸ್ಟೋರೆಂಟ್‌ಗಳಲ್ಲಿ ಅಂಥ ವ್ಯವಸ್ಥೆ ಮಾಡಿದ್ದಾರೆ. ಅದೇ ರೀತಿ, ಶುಗರ್‌ಲೆಸ್ ಸಾಂಬಾರ್, ಶುಗರ್‌ಲೆಸ್ ತಿಳಿಸಾರನ್ನು ಸಹ ತಾವು ಒದಗಿಸುತ್ತಿದ್ದೇವೆ ಎಂದು ರೆಸ್ಟೋರೆಂಟಿನವರು, ದರ್ಶಿನಿಯವರು ಘೋಷಿಸಿ, ಅಂಥದೊಂದು ವ್ಯವಸ್ಥೆ ಮಾಡಿಕೊಡುವುದು ಇಂದಿನ ದಿನಗಳ ಅಗತ್ಯ ಎನಿಸಿದೆ. ಇದರಿಂದ ಡಯಾಬಿಟಿಸ್ ಇರುವವರಿಗೆ ಅನುಕೂಲ. ಬೆಂಗಳೂರು, ಮೈಸೂರು ಮೊದಲಾದ ನಗರಗಳಲ್ಲಿ, ರಜಾದಿನಗಳಲ್ಲಿ, ಇತರ ದಿನಗಳಲ್ಲಿ ಸಾಕಷ್ಟು ಮಂದಿ ಹೋಟೆಲ್, ರೆಸ್ಟೋರೆಂಟ್‌ಗಳಲ್ಲೇ ಆಹಾರ ಸೇವಿಸುವ ಪದ್ಧತಿ, ಆನ್‌ಲೈನ್‌ನಲ್ಲಿ ಆರ್ಡರ್ ಮಾಡಿ ಆಹಾರವನ್ನು ಮನೆಗೆ ತರಿಸಿಕೊಳ್ಳುವ ಪದ್ಧತಿ ಸಾಮಾನ್ಯ ಎನಿಸಿದೆ. ಅಂಥವರು, ಸಾಂಬಾರಿನ ಜತೆ, ತಮಗೇ ಗೊತ್ತಿಲ್ಲದೆ ಸಾಕಷ್ಟು ಬೆಲ್ಲವನ್ನು ಸೇವಿಸುತ್ತಿದ್ದಾರೆ. ಇದು ಮಧುಮೇಹಿಗಳಿಗೆ, ಡಯಾಬಿಟಿಸ್ ಬಾರ್ಡರ್ ಲೈನ್‌ನಲ್ಲಿರುವವರಿಗೆ ಆರೋಗ್ಯದ ಸಮಸ್ಯೆಯನ್ನು ಉಂಟುಮಾಡಬಹುದು. ಆದ್ದರಿಂದ, ಸಾಂಬಾರಿಗೆ ಬೆರೆಸುವ ಬೆಲ್ಲದ ಪ್ರಮಾಣವನ್ನು ಮಿತಗೊಳಿಸಲು ಎಲ್ಲಾ ರೆಸ್ಟೋರೆಂಟ್, ದರ್ಶಿನಿಗಳವರು ಮನಸ್ಸು ಮಾಡುವುದು ಉತ್ತಮ ಎಂದೇ ಹೇಳಬಹುದು.

ಸುದ್ದಿಗಿಷ್ಟು ಒಗ್ಗರಣೆ

ಯಗಟಿ ರಘು ನಾಡಿಗ್

- ಖ್ಯಾತ ಗಾಯಕಿ 'ಮಂಗ್ಲಿ' (ಸತ್ಯವತಿ ರಾಥೋಡ್) ಅವರ ಜನ್ಮದಿನ ಸಂಭ್ರಮಾಚರಣೆ ಪಾರ್ಟಿಯಲ್ಲಿ ಗಾಂಜಾ, ವಿದೇಶಿ ಮದ್ಯ ಪತ್ತೆ. ಮಾದಕ ವಸ್ತು ಸೇವಿಸಿ ಮತ್ತಿನಲ್ಲಿದ್ದ ಹಲವರನ್ನು ಬಂಧಿಸಿದ ತೆಲಂಗಾಣ ಪೊಲೀಸರು: ಸುದ್ದಿ
– **ಗುಂಡಿನ ಮತ್ತೇ ಗಮ್ಮತ್ತು, ಅಳತೆ ಮೀರಿದರೇ ಆಪತ್ತು..!**

- ಮಹಿಳೆಯರ ಉಚಿತ ಪ್ರಯಾಣದ 'ಶಕ್ತಿ' ಯೋಜನೆಗೆ ತುಂಬಿತು 2 ವರ್ಷ; ಇದುವರೆಗೆ 474 ಕೋಟಿ ಮಹಿಳೆಯರ ಪ್ರಯಾಣ. ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಸಂತಸ: ಸುದ್ದಿ
– **'ಪ್ರವಾಸಿ ಪ್ರಪಂಚ' ವಾರಪತ್ರಿಕೆಯ ಬ್ರ್ಯಾಂಡ್ ಅಂಬಾಸಡರ್‌ಗಳಾಗಲು ಈ ಮಹಿಳೆಯರೇ ಸೂಕ್ತ, ಅಲ್ವೇನ್ರೀ...?!**

- ಮುಂಬೈನ ಲೋಕಲ್ ಟ್ರೇನ್ ಬೋಗಿಗಳಿಗೆ ಸ್ವಯಂಚಾಲಿತ ಬಾಗಿಲುಗಳ ಅಳವಡಿಕೆಗೆ ಕೇಂದ್ರ ರೇಲ್ವೆ ಮಂಡಳಿ ನಿರ್ಧಾರ: ಸುದ್ದಿ
– **ಆದಷ್ಟು ಬೇಗ ಹಾಗೆ ಮಾಡಿ ಪುಣ್ಯ ಕಟ್ಕೊಳ್ಳಿ. ಇಲ್ಲಾಂದ್ರೆ, ''ಓ, ಇನ್ನೊಂದು ರೈಲು ಬಿಟ್ರಪ್ಪಾ...'' ಅಂತ ಜನ ಟೀಕಾಪ್ರಹಾರ ಮಾಡ್ತಾರೆ!!**

- ಮುಖ್ಯಮಂತ್ರಿ ಹಾಗೂ ಉಪಮುಖ್ಯಮಂತ್ರಿಗಳ ದೆಹಲಿ ಭೇಟಿಯ ಬೆನ್ನಲ್ಲೇ ಮತ್ತೆ ಮುನ್ನೆಲೆಗೆ ಬಂದ 'ಸಿಎಂ ಕೂಗು': ಸುದ್ದಿ
– **ಇದ್ಯಾಕೋ ಬರ್ತಾ ಬರ್ತಾ 'ಹುಲಿ ಬಂತು ಹುಲಿ' ಕಥೆಯನ್ನು ನೆನಪಿಸುವಂತಿದೆ.... ಮುಂದೇನಾಗುತ್ತೆ ಅನ್ನೋ 'ಸಸ್ಪೆನ್ಸ್'ನ ತಡ್ಕೊಳ್ಳೋಕ್ಕೇ ಆಗ್ತಾ ಇಲ್ಲ ಕಣ್ರೀ...!!**

- ಅಧಿಕಾರ ಅನುಭವಿಸಿ ಜಿಡ್ಡು ಹಿಡಿದ ಹಿರಿಯ ಸಚಿವರು. ಹೊಸಬರಿಗೆ ಸಚಿವ ಸ್ಥಾನ ಕೊಟ್ರೆ ಒಳ್ಳೆಯದು: ಚನ್ನಗಿರಿ ಶಾಸಕ ಶಿವಗಂಗಾ ಬಸವರಾಜ್
– **'ಚನ್ನಗಿರಿ ಚಮಕ್' ಚೆನ್ನಾಗಿದೆ...!!**

- ಬೆಂಗಳೂರು ಮಹಾನಗರಿಯಲ್ಲಿ ಶೀಘ್ರದಲ್ಲೇ ಆಟೋ ಪ್ರಯಾಣ ದರ ಹೆಚ್ಚಳ ಸಾಧ್ಯತೆ: ಸುದ್ದಿ
– **ಈಗಾಗಲೇ ಜನರು ಹಲವು ಬಾಬತ್ತುಗಳಲ್ಲಿ ಬುಡಕ್ಕೆ ಬರೆ ಹಾಕಿಸಿಕೊಂಡು ಆಗಿದೆ.... ಈ ಸೇವೆಯೂ ನಡೀಲಿ ಬಿಡಿ!!**

- ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ದೆಹಲಿಯಲ್ಲಿ ಭೇಟಿ ಮಾಡಿ ಮಾತುಕತೆ ನಡೆಸಿದ ದೇವದುರ್ಗದ ಜೆಡಿಎಸ್ ಶಾಸಕಿ. ಬಹಿರಂಗವಾಗದ ಭೇಟಿಯ ಉದ್ದೇಶ: ಸುದ್ದಿ
– **ಭೇಟಿಯ ಉದ್ದೇಶ ಏನೇ ಇರಲಿ, ದೇವದುರ್ಗಕ್ಕೆ ಕರ್ನಾಟಕದ ರಾಜಧಾನಿ ಬೆಂಗಳೂರಿಗಿಂತಲೂ ರಾಷ್ಟ್ರದ ರಾಜಧಾನಿ ದೆಹಲಿಯೇ ಹತ್ತಿರ ಅನ್ನಿಸುತ್ತೆ ಅಲ್ಲವೇ?!**

- ತಮ್ಮ ಮೊಮ್ಮಗನ ಮದುವೆ ಆರತಕ್ಷತೆಯಲ್ಲಿ ಭಾಗಿಯಾದ ಕೆ.ಎಸ್.ಈಶ್ವರಪ್ಪ ಅವರನ್ನು ಆತ್ಮೀಯವಾಗಿ ಸ್ವಾಗತಿಸಿ, ಶಾಲು ಹೊದಿಸಿ ಸನ್ಮಾನಿಸಿದ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ: ಸುದ್ದಿ
– **ಅದಕ್ಕೇ ಇರಬೇಕು, ''ಸಿಗಿವೆಂ ಕ್ಷಣದಲಿ ನಿನ್ನ ನಾಂ, ಎಲ್ಲಿ ಹೋದರೇನು ನಿನ್ನ ಉಳಿಸೆನು'' ಎಂಬ ಹಾಡೇ ಕೇಳಿಸುತ್ತಿದ್ದ ಶಿವಮೊಗ್ಗದಲ್ಲಿ ಈಗ ''ಅರಳಿದೇ ಅರಳಿದೇ, ಮುದುಡಿದ 'ತಾವರೆ' ಅರಳಿದೇ..'' ಅನ್ನೋ ಹಾಡೇ ಮತ್ತೆ ಮತ್ತೆ ಕೇಳಿಸುತ್ತಿದೆಯಂತೆ!!**

ಸಾಧನೆಯಲ್ಲಿ ಪ್ರಮುಖ ಪಾತ್ರ ವಹಿಸುವ ಈಶಾನ್ಯ ಭಾರತ

ದೇವಮೂಲೆ
ಜ್ಯೋತಿರಾದಿತ್ಯ ಸಿಂಧಿಯಾ
vveditoped@gmail.com

ಗದ್ದಲವೇ ತುಂಬಿರುವ ದುಬೈನ ಮಾರುಕಟ್ಟೆಗಳಲ್ಲಿ ಜನರು ವಿಲಕ್ಷಣವಾದ ಸತ್ಕಾರವನ್ನು ಬಯಸುತ್ತಾರೆ, ಅದನ್ನು ಅರಸಿಕೊಂಡು ಹೋಗುತ್ತಾರೆ. ಅದುವೇ 'ತ್ರಿಪುರಾದ ಚಿನ್ನದ ರಾಣಿ' ಎಂದೇ ಕರೆಯಲ್ಪಡುವ ಅನಾನಸ್ ಹಣ್ಣು. ಇದರ ಸವಿರುಚಿಯು ಮಾನ್ಸೂನ್ ಮಳೆಮೋಡಗಳಿಂದ ಚುಂಬಿಸಲ್ಪಟ್ಟ ಬೆಟ್ಟಗಳನ್ನು ಮಾತ್ರವಲ್ಲದೆ, ತಲೆತಲಾಂತರದಿಂದ ಸಾಗಿಬಂದ ಬುಡಕಟ್ಟು ಜನರ ಬುದ್ಧಿವಂತಿಕೆಯನ್ನೂ ನೆನಪಿಸುತ್ತದೆ. ಭಾರತದ ಒಂದು ಮೂಲೆಯಿಂದ ಬಂದ ಈ ಹಣ್ಣನ್ನು ಮಧ್ಯಪ್ರಾಚ್ಯ ವಲಯದಲ್ಲಿ ಸತ್ಕಾರದ ಭಾಗವಾಗಿ ಬಡಿಸಲಾಗುತ್ತದೆ ಎಂಬುದನ್ನು ಸುಮಾರು 11 ವರ್ಷಗಳ ಹಿಂದೆ ಯಾರಾದರೂ ಊಹಿಸಿಕೊಳ್ಳಲು ಸಾಧ್ಯವಿತ್ತೇ? ಅಂಥ ಸ್ವರ್ಣಸದೃಶ ಅನಾನಸ್ ಹಣ್ಣುಗಳನ್ನು ಸುಮಾರು 10,000 ಟನ್‌ಗಳಷ್ಟು ಪ್ರಮಾಣದಲ್ಲಿ ಬೆಳೆಯುವ ಹಾಗೂ ವಿಶ್ವದ ವಿವಿಧ ದೇಶಗಳಿಗೆ ಅವನ್ನು ರವಾನಿಸುವ ತ್ರಿಪುರಾ ಎಂಬ ತಾಣ ನಮ್ಮ ಭಾರತದಲ್ಲೇ ಇರುವಂಥದ್ದು ಎಂಬುದು ನಮಗೆ ಹೆಮ್ಮೆಯ ಸಂಗತಿಯಾಗಬೇಕು.

ಹಾಗೆಂದ ಮಾತ್ರಕ್ಕೆ, ಇದು ಅನಾನಸ್ ಕುರಿತಾದ ಕಥಾನಕ ಮಾತ್ರವೇ ಅಲ್ಲ; ಇದು ಪ್ರದೇಶವೊಂದರ ಉದಯ ಮತ್ತು ಅಭ್ಯುದಯಕ್ಕೆ ಸಂಬಂಧಿಸಿದ ಬಾಬತ್ತು ಕೂಡ ಹೌದು! ಭಾರತದ ಅಭಿವೃದ್ಧಿ ಮಾದರಿಯ ವಿಷಯದಲ್ಲಿ ಒಂದು ಕಾಲಕ್ಕೆ ಮೂಲೆಗುಂಪಾಗಿದ್ದ ಈಶಾನ್ಯ ಪ್ರದೇಶವು ಪ್ರಧಾನಿ ನರೇಂದ್ರ ಮೋದಿಯವರ ನಾಯಕತ್ವದಿಂದಾಗಿ, ರಾಷ್ಟ್ರದ ಪೂರ್ವವಲಯದ ಮಹಾದ್ವಾರವಾಗಿ ಹೊರಹೊಮ್ಮುತ್ತಿದೆ, ಆ ನಿಟ್ಟಿನಲ್ಲಿ ತನ್ನ ಹೊರಪೊರೆಯನ್ನು ಕಳಚಿಕೊಳ್ಳುತ್ತಿದೆ. ಅರ್ಥಶಾಸ್ತ್ರದಲ್ಲಿ 'ಸುವರ್ಣಕುಡ್ಯಕ' ಎಂಬುದಾಗಿ ಉಲ್ಲೇಖಿಸಲ್ಪಟ್ಟಿರುವ ಬಂಗಾರದ ಛಾಯೆಯ ರೇಷ್ಮೆಯನ್ನು ಉತ್ಪಾದಿಸುತ್ತಿದ್ದ ಪ್ರಾಚೀನ ಕಾಮರೂಪ ಪ್ರದೇಶದ ವ್ಯಾಪಾರ ಮಾರ್ಗಗಳಿಂದ ಮೊದಲ್ಗೊಂಡು, ಸಿಲಿಕಾನ್ ಕನಸುಗಳ ಭರವಸೆಯನ್ನು ನೀಡುವ ಸೆಮಿಕಂಡಕ್ಟರ್ ಫ್ಯಾಬ್‌ಗಳವರೆಗೆ, ಈ ಪ್ರದೇಶವು ತನ್ನ ಹಣೆಬರಹವನ್ನು ತಾನೇ ಬರೆದುಕೊಳ್ಳುತ್ತಿದೆ, ಭವಿಷ್ಯವನ್ನು ರೂಪಿಸಿಕೊಳ್ಳುತ್ತಿದೆ. 2047ರ ವೇಳೆಗೆ 'ವಿಕಸಿತ ಭಾರತ' ಎನಿಸಿಕೊಳ್ಳುವ ಮತ್ತು '30 ಟ್ರಿಲಿಯನ್ ಡಾಲರ್ ಆರ್ಥಿಕತೆ'ಯನ್ನು ಸಾಧಿಸುವ ನಿಟ್ಟಿನಲ್ಲಿನ ಭಾರತದ ಪಯಣದಲ್ಲಿ, ಈ ಪ್ರದೇಶವು ನೀಡಲಿರುವ ಕೊಡುಗೆಯನ್ನು ತಳ್ಳಿಹಾಕಲಾಗದು.

ಹನ್ನೊಂದು ವರ್ಷಗಳ ಹಿಂದೆ, ಪ್ರಧಾನಿ ನರೇಂದ್ರ ಮೋದಿಯವರು ಪ್ರಮಾಣವಚನ ಸ್ವೀಕರಿಸಿದ ತರುವಾಯದಲ್ಲಿ ಭಾರತದ ಅಭಿವೃದ್ಧಿಗೆ ವೇಗ ದಕ್ಕಿತು ಹಾಗೂ ಈಶಾನ್ಯ ಭಾರತವು ಪುನರುಜ್ಜೀವನಗೊಂಡಿತು ಎಂದು ಹೇಳಿದರೆ ಅತಿಶಯೋಕ್ತಿ ಆಗಲಾರದು. ಅಭಿವೃದ್ಧಿ ಚಟುವಟಿಕೆಗಳಿಗೆ ಹೊಸ ದೃಷ್ಟಿಕೋನವನ್ನೇ ನೀಡಿದ ಮೋದಿಯವರು ಈಶಾನ್ಯ ವಲಯದ ಎಂಟು ರಾಜ್ಯಗಳನ್ನು 'ಭಾರತದ ಅಷ್ಟಲಕ್ಷ್ಮಿಯರು' ಎಂದೇ ಘೋಷಿಸಿದರು. ಅಧಿಕಾರ ವಹಿಸಿಕೊಂಡ ಮೊದಲ ಕೆಲವು ತಿಂಗಳುಗಳಲ್ಲೇ ಅವರು ಈಶಾನ್ಯ ಭಾರತದ ಈ ಪ್ರದೇಶಗಳಲ್ಲಿ ಕಾಲ ಕಳೆದಿದ್ದುಂಟು, ಸುತ್ತುಹಾಕಿದ್ದುಂಟು. ಈ ಬೆಳವಣಿಗೆಯನ್ನು ಈಶಾನ್ಯ ಭಾರತದ ಹೊರಗಿನ ಕೆಲವರು ಗಮನಿಸಿದ್ದು ಹೌದಾದರೂ, ಆ ಭೇಟಿಗಿರುವ ಮಹತ್ವ ಬಹುಮಂದಿಗೆ ಗೊತ್ತಾಗಿದ್ದೇ ಕಮ್ಮಿ ಎನ್ನಬೇಕು. ಅದೇನೇ ಇರಲಿ, ಮೋದಿಯವರು ನೀಡಿದ ಈ ಭೇಟಿ ಹಾಗೂ ಆ ನೆಲದಲ್ಲಿ ನಿಂತು ಅವರು ನೀಡಿದ ಭರವಸೆಗಳು, ಒಂದು ದಶಕದಷ್ಟು ಸುದೀರ್ಘವಾಗಿದ್ದ ಕಾರ್ಯಾಚರಣೆಯೊಂದಕ್ಕೆ ನಾಂದಿಹಾಡಿದವು ಎನ್ನಲಡ್ಡಿಯಿಲ್ಲ; ಅಂದರೆ, ಬಹುತೇಕವಾಗಿ 'ನಿರ್ಲಕ್ಷಿತ ಮೂಲೆ' ಎಂದೇ ಕರೆಸಿಕೊಂಡಿದ್ದ ಈಶಾನ್ಯ ಭಾರತವನ್ನು, ಬೆಳವಣಿಗೆ, ಭದ್ರತೆ ಮತ್ತು ಅಂತಾರಾಷ್ಟ್ರೀಯ ಅವಕಾಶಗಳಿಗೆ ಸಂಬಂಧಿಸಿದ ಒಂದು 'ರಾಷ್ಟ್ರೀಯ ಮುನ್ನೆಲೆ'ಯಾಗಿ ಪರಿವರ್ತಿಸುವ ಧ್ಯೇಯಕ್ಕೆ ಆ ಭೇಟಿ ನಾಂದಿಹಾಡಿತು.

ಹಣಕಾಸಿನ ಬದ್ಧತೆಯ ವಿಷಯದಲ್ಲಿ ಹೇಳುವುದಾದರೆ, ಪ್ರಧಾನಿ ನರೇಂದ್ರ ಮೋದಿಯವರ ನಾಯಕತ್ವದ ಅಡಿಯಲ್ಲಿ ಶುರುವಾಗಿರುವ ಈಶಾನ್ಯ ಭಾರತದ ರೂಪಾಂತರದ ಸಾಹಸಕ್ಕೆ ಐತಿಹಾಸಿಕ ಎನ್ನಬಹುದಾದ ಮಟ್ಟಿಗಿನ ಹಣಹಾಸು ಹೂಡಿಕೆಯಾಗಿದೆ. ಕೇಂದ್ರದ ಸಚಿವಾಲಯಗಳಿಂದ ದಕ್ಕಿರುವ ಶೇ.10ರಷ್ಟು ಬಜೆಟ್ ಅನುದಾನದ ಬೆಂಬಲದ ಮೂಲಕ ಈ ಪ್ರದೇಶಕ್ಕೆ 6.2 ಲಕ್ಷ ಕೋಟಿ ರುಪಾಯಿಗಳಿಗೂ ಹೆಚ್ಚು ಹಣವನ್ನು ಹರಿಸಲಾಗಿದೆ. ಈ ಪೈಕಿ, ಮೂಲಸೌಕರ್ಯಗಳಿಗಾಗಿನ ಹೂಡಿಕೆಗಳೇ 5 ಲಕ್ಷ ಕೋಟಿಯನ್ನು ದಾಟಿವೆ. ಈಶಾನ್ಯ ವಲಯಕ್ಕಾಗಿನ ತೆರಿಗೆ ಹಂಚಿಕೆಯ ಪ್ರಮಾಣವೂ ಅನೇಕ ಪಟ್ಟು ಬೆಳೆದು ಈಗ 5.74 ಲಕ್ಷ ಕೋಟಿಯಷ್ಟಾಗಿದ್ದರೆ, 'ಅನುದಾನದ ನೆರವಿನ' ರೂಪದಲ್ಲಿನ ಹಣದ ಹರಿವು ಬಹುತೇಕ ದ್ವಿಗುಣಗೊಂಡು 5.66 ಲಕ್ಷ ಕೋಟಿಯನ್ನು ಮುಟ್ಟಿದೆ. ಈ ಗುಡ್ಡಗಾಡು ಪ್ರದೇಶದಲ್ಲಿನ ನಾಲ್ಕು ಲೇನ್‌ಗಳ ಸಿಲ್ಚಾರ್-ಶಿಲ್ಲಾಂಗ್ ಕಾರಿಡಾರ್, ಭೂಪೇನ್ ಹಜಾರಿಕಾ ಸೇತು ಅಥವಾ ಬೋಗಿಬೀಲ್ ಬ್ರಿಜ್ ಹೀಗೆ ಪ್ರತಿಯೊಂದು ಯೋಜನೆಯೂ ಮೋದಿ ಸರಕಾರದ ಸಾಮರ್ಥ್ಯಕ್ಕೆ ಅನನ್ಯ ನಿದರ್ಶನಗಳೇ; ಹೆಜ್ಜೆ ಹೆಜ್ಜೆಗೂ ಸವಾಲು ಒಡ್ಡುವ ಇಂಥ ಭೌಗೋಳಿಕ ಪ್ರದೇಶದಲ್ಲಿ ಇಂಥ ಸಂಕೀರ್ಣ ಸ್ವರೂಪದ ಸಂಪರ್ಕಶೀಲತೆಯನ್ನು ಕಲ್ಪಿಸುವ ನಿಟ್ಟಿನಲ್ಲಿ ಈ ಸರಕಾರಕ್ಕಿರುವ ಸಾಮರ್ಥ್ಯವೇನು ಎಂಬುದಕ್ಕೆ ಈ ಯೋಜನೆಗಳೇ ಪ್ರತ್ಯಕ್ಷ ನಿದರ್ಶನಗಳಾಗಿವೆ. ಮಿಜೋರಾಂನಲ್ಲಿ ಇತ್ತೀಚೆಗೆ ಪೂರ್ಣಗೊಂಡ 'ಬೈರಾಬಿ-ಸೆರಾಂಗ್' ರೈಲುಮಾರ್ಗವು ಐಜ್ವಾಲ್ ಅನ್ನು ರಾಷ್ಟ್ರೀಯ ರೈಲ್ವೆ ಜಾಲಕ್ಕೆ ಸಂಪರ್ಕಿಸುತ್ತದೆ; ಇದರಿಂದಾಗಿ ಈಶಾನ್ಯದ ಎಲ್ಲ ಎಂಟು ರಾಜ್ಯಗಳ ರಾಜಧಾನಿಗಳಿಗೆ ರೈಲುಮಾರ್ಗದಿಂದ ಸಂಪರ್ಕಶೀಲತೆ ಒದಗಿದಂತಾಗಿದೆ. ಮಾತ್ರವಲ್ಲದೆ, ಈಶಾನ್ಯ ವಲಯದ ರೈಲ್ವೆಯಲ್ಲಿ ಆಗಿರುವ 80,000 ಕೋಟಿ ರುಪಾಯಿಯಷ್ಟು ಹೂಡಿಕೆ ಮತ್ತು ವಿಮಾನ ನಿಲ್ದಾಣಗಳ ಸಂಖ್ಯೆಯು 9ರಿಂದ 17ಕ್ಕೆ ಏರಿರುವುದು ಕೂಡ ಒಂದು ಕಾಲಕ್ಕೆ land-locked ಎಂದು ಕರೆಯಲ್ಪಡುತ್ತಿದ್ದ ಈ ವಲಯವು ಈಗ land-linked ಎನಿಸಿಕೊಳ್ಳುವಷ್ಟರ ಮಟ್ಟಿಗೆ ರೂಪಾಂತರವನ್ನು ಉಂಟುಮಾಡಿದೆ ಹಾಗೂ ಭವಿಷ್ಯದ ಕಾರ್ಯಾಚರಣೆಗಳಿಗೆ ಸಜ್ಜಾಗಿದೆ.

ಈ ರೂಪಾಂತರಕ್ಕೆ ಅಡಿಪಾಯ ಹಾಕಿದ್ದು ಮೂಲಸೌಕರ್ಯಗಳು ಹೌದಾದರೂ, ಈ ಎಂಟೂ ರಾಜ್ಯಗಳಲ್ಲಿ ಹೂಡಿಕೆದಾರರ 'ನವೀಕೃತ' ವಿಶ್ವಾಸ ಕಂಡುಬಂದಿದ್ದು ಈ ರೂಪಾಂತರಕ್ಕೆ ನಿಜವಾದ ಅರ್ಥವನ್ನು ನೀಡಿತು ಎನ್ನಬೇಕು. ಪ್ರಧಾನಿ ಮೋದಿಯವರು ಪ್ರತಿಪಾದಿಸಿದ ಸ್ಥಿರ ಆಡಳಿತ, ಅವರ ದೂರದೃಷ್ಟಿಯ ನಾಯಕತ್ವ ಮತ್ತು ಕಾರ್ಯನೀತಿಗಳಿಗೆ ಬಲ ತುಂಬುವಿಕೆ ಮುಂತಾದವುಗಳ ನೇರ ಪರಿಣಾಮವಾಗಿ ಇದು ಹೊರಹೊಮ್ಮಿತು. ಈ ಮೂಲಭೂತ ಬದಲಾವಣೆಯು, ಪ್ರಧಾನಿಯವರಿಂದಲೇ ಉದ್ಘಾಟಿಸಲ್ಪಟ್ಟ Rising Northeast Investors Summit 2025 ಹೆಸರಿನ ಶೃಂಗಸಭೆಗೆ ಭೂಮಿಕೆಯನ್ನು ಸಜ್ಜುಗೊಳಿಸಿತು. ಇದು ಈಶಾನ್ಯ ರಾಜ್ಯಗಳ 45 ದಶಲಕ್ಷ ನಾಗರಿಕರ ಪಾಲಿಗೆ ಒಂದು ನಿರ್ಣಾಯಕ ಮೈಲಿಗಲ್ಲಾಗಿ ಪರಿಣಮಿಸಿದ್ದರ ಜತೆಗೆ, ಒಟ್ಟಾರೆಯಾಗಿ 140 ಕೋಟಿ ಭಾರತೀಯರ ಹೆಬ್ಬಯಕೆಗಳನ್ನು ನೆರವೇರಿಸುವೆಡೆಗಿನ ಒಂದು ನಿರ್ಣಾಯಕ ಹೆಜ್ಜೆಯೂ ಆಗಿತ್ತು. ಈ ಉಪಕ್ರಮಕ್ಕೆ ದಕ್ಕಿದ ಪ್ರತಿಕ್ರಿಯೆ ಭರ್ಜರಿಯಾಗಿದೆ. ವ್ಯವಸಾಯ, ಕೃಷಿ ತಂತ್ರಜ್ಞಾನ, ಆತಿಥ್ಯ, ಪ್ರವಾಸೋದ್ಯಮ, ನವೀಕರಿಸಬಹುದಾದ ಇಂಧನ, ಕ್ರೀಡೆ, ಸೇವೆಗಳು ಹೀಗೆ ವೈವಿಧ್ಯಮಯ ವಲಯಗಳಲ್ಲಿ 4.3 ಲಕ್ಷ ಕೋಟಿ ರುಪಾಯಿಗಳಿಗೂ ಹೆಚ್ಚಿನ ಮೌಲ್ಯದ ಹೂಡಿಕಾ ಪ್ರಸ್ತಾವನೆಗಳನ್ನು ಈಗಾಗಲೇ ಸ್ವೀಕರಿಸಲಾಗಿದೆ. ಜಪಾನ್ ಮತ್ತು ಐರೋಪ್ಯ ಒಕ್ಕೂಟದಂಥ ಕಾರ್ಯತಂತ್ರದ ಪಾಲುದಾರರು ಸೇರಿದಂತೆ, 80ಕ್ಕೂ ಹೆಚ್ಚು ದೇಶಗಳು ಈ ಸಭೆಯಲ್ಲಿ ಭಾಗವಹಿಸಿದ್ದವು. ಮಾತ್ರವಲ್ಲದೆ, ಭಾರತದ ಅಗ್ರಗಣ್ಯ ಕೈಗಾರಿಕೋದ್ಯಮಿಗಳು ಮತ್ತು ನವೋದ್ಯಮಶೀಲರ ಜತೆಜತೆಗೆ ವಿದೇಶಿ ರಾಯಭಾರಿಗಳು ಮತ್ತು ಜಾಗತಿಕ ಹೂಡಿಕೆದಾರರೂ ಈ ಶೃಂಗಸಭೆಯಲ್ಲಿ ಪಾಲ್ಗೊಂಡಿದ್ದು ಮತ್ತೊಂದು ವಿಶೇಷ; ಇವರೆಲ್ಲಾ ತಂತಮ್ಮ ಉದ್ಯಮಗಳ ಪಾಲಿನ ಮುಂದಿನ 'ಅವಕಾಶ ಕೇಂದ್ರ'ವಾಗಿ ಹಾಗೂ 'ವಿಕಸಿತ ಭಾರತ' ಪರಿಕಲ್ಪನೆಯ ಸಾಕಾರಕ್ಕಾಗಿ ಈಶಾನ್ಯ ವಲಯವನ್ನು ನೆಚ್ಚುವುದಕ್ಕೆ ಮತ್ತು ಜಾಗತಿಕ ಮಟ್ಟದಲ್ಲಿ ಈಶಾನ್ಯ ಭಾರತಕ್ಕೊಂದು ಮಾನ್ಯತೆ ಸಿಗುವುದಕ್ಕೆ ಈ ಸಭೆ ಕಾರಣವಾಯಿತು ಎನ್ನಲಡ್ಡಿಯಿಲ್ಲ.

ಈ ಆವೇಗವನ್ನು ಮತ್ತಷ್ಟು ಕಾಪಿಟ್ಟುಕೊಳ್ಳಲೆಂದು, ಈಶಾನ್ಯ ವಲಯದ ಅಭಿವೃದ್ಧಿಗೆ ಸಂಬಂಧಿಸಿದ ಸಚಿವಾಲಯವು ಒಂದಷ್ಟು ಅನುಕೂಲಗಳನ್ನು ಮಾಡಿಕೊಟ್ಟಿದೆ. ಅಂದರೆ, ಯಾವುದೇ ಯೋಜನೆಗೆ ಸಂಬಂಧಿಸಿದಂತೆ ಏಕಗವಾಕ್ಷಿ ಅನುಮತಿಗಳನ್ನು ಹಾಗೂ ಹೂಡಿಕೆದಾರರಿಗೆ ಅಬಾಧಿತ ನೆರವನ್ನು ನೀಡುವಂತಾಗಲೆಂದು ಈ ವಲಯದ ಎಲ್ಲಾ ಎಂಟು ರಾಜ್ಯಗಳಲ್ಲಿ ಹೂಡಿಕೆ ಪ್ರವರ್ತನಾ ಸಂಸ್ಥೆಗಳ ಸ್ಥಾಪನೆಗೆ ಅದು ಅನುವುಮಾಡಿಕೊಟ್ಟಿದೆ. ಎಂಟು ಮಂದಿ ಮುಖ್ಯಮಂತ್ರಿಗಳ ನೇತೃತ್ವದ ಉನ್ನತ ಮಟ್ಟದ ಕಾರ್ಯಪಡೆಗಳು, ಆಯಾ ರಾಜ್ಯದ ವಿಶಿಷ್ಟ ಸಾಮರ್ಥ್ಯಗಳಿಗೆ ಅನುಗುಣವಾಗಿ ಈ ವಲಯದ ಉದ್ದಗಲಕ್ಕೂ ಪ್ರಾದೇಶಿಕ ಕಾರ್ಯತಂತ್ರಗಳನ್ನು ಹೆಣೆಯುತ್ತಿವೆ. ಜತೆಗೆ, ಈ ಉಪಕ್ರಮಗಳು ಮತ್ತು ಕಾರ್ಯನೀತಿಯ ಚೌಕಟ್ಟುಗಳು, ಈಶಾನ್ಯ ವಲಯವು ತನ್ನ ಸಾಮರ್ಥ್ಯವನ್ನು ಮೀರಿ ಸಾಗಿದೆ ಎಂಬುದನ್ನು ಸೂಚಿಸುತ್ತಿದ್ದು, ಇದು ವೇಗವರ್ಧಿತ ಆರ್ಥಿಕ ಪ್ರವರ್ಧಮಾನತೆಗಾಗಿ ಸಜ್ಜಾಗಿದೆ. ಈ ಕಾರ್ಯನೀತಿಗಳು ಹಾಗೂ ಅಳತೆಗೆ ದಕ್ಕುವ ಉಪಕ್ರಮಗಳು, ಪ್ರಧಾನಿ ಮೋದಿಯವರ Act East, Act Fast, and Act First ಎಂಬ ತ್ರಿವಳಿ ಸಿದ್ಧಾಂತದೊಂದಿಗೆ ಹೊಂದಿಕೆಯಾಗುತ್ತವೆ. ಈಶಾನ್ಯ ವಲಯವು ಪ್ರಸ್ತುತ ಆಗ್ನೇಯ ಏಷ್ಯಾಕ್ಕೆ ಪ್ರವೇಶದ್ವಾರವಾಗಿದೆ ಮತ್ತು ನಮ್ಮ ಬೃಹತ್ 'ಇಂಡೋ-ಪೆಸಿಫಿಕ್ ಕಾರ್ಯತಂತ್ರ'ಕ್ಕೆ ನಿರ್ಣಾಯಕ ಊರುಗೋಲಾಗಿದೆ. ಕೆಲ ಅಂತಾರಾಷ್ಟ್ರೀಯ ನಗರಗಳಿಗೆ ಅನನ್ಯ ರೀತಿಯಲ್ಲಿ ಭೌಗೋಳಿಕ ಸಾಮೀಪ್ಯವನ್ನು ಹೊಂದಿರುವುದರಿಂದಾಗಿ ಈಶಾನ್ಯ ವಲಯವು ಭಾರತದ ಆರ್ಥಿಕ ರಾಜತಾಂತ್ರಿಕತೆ ಮತ್ತು ವ್ಯಾಪಾರ ಚಟುವಟಿಕೆಗಳ ಸಮನ್ವಯತೆಗೆ ಒಂದು ಪ್ರಮುಖ ಕಾರಿಡಾರ್ ಆಗಿ ಪರಿಣಮಿಸಿದೆ.

ಕೊಂಚ ಕಾವ್ಯಾತ್ಮಕವಾಗಿ ಅಥವಾ 'ರೂಪಾಲಂಕಾರಿಕವಾಗಿ' ಹೇಳುವುದಾದರೆ, ಮುಂಬೈನ ಉದ್ಯಮಿಯೊಬ್ಬರು ಚೆನ್ನೈಗೆ ಹೋಗುವುದಕ್ಕಿಂತ ಸಲೀಸಾಗಿ ಗುವಾಹಟಿಯಲ್ಲಿನ ಉದ್ಯಮಿಯೊಬ್ಬರು ತಮ್ಮ ಕಚೇರಿಯ ಕಿಟಕಿಯಿಂದಲೇ ಸಿಂಗಾಪುರವನ್ನು ಪ್ರಾಯೋಗಿಕವಾಗಿ ನೋಡಬಲ್ಲರು! ಗುವಾಹಟಿ ಮತ್ತು ಅಗರ್ತಲಾದಂಥ ನಗರಗಳು ಆಗ್ನೇಯ ಏಷ್ಯಾದ ಕೇಂದ್ರಗಳಿಗೆ ಭಾರತದ ಮಿಕ್ಕ ಮೆಟ್ರೋ ನಗರಗಳಿಗಿಂತ ಹತ್ತಿರವಾಗಿರುವುದರಿಂದ, 'ಪೂರ್ವ ವಲಯದೆಡೆಗಿನ' ಆರ್ಥಿಕ ಚಟುವಟಿಕೆಗಳ ಸಮನ್ವಯತೆಯ ಅಗತ್ಯ ಹಿಂದೆಂದಿಗಿಂತ ಈಗ ಹೆಚ್ಚಾಗಿದೆ. ವಿಶೇಷೀಕೃತ 'ವಾಯುಮಾರ್ಗದ ಸರಕು ಸಾಗಣೆ ಸೌಲಭ್ಯ'ದಂಥ ಉನ್ನತೀಕರಣಗೊಂಡ ಮೂಲಸೌಕರ್ಯದೊಂದಿಗೆ ಈ ವರ್ಧಿತ ಸಂಪರ್ಕಶೀಲತೆಯನ್ನು ಬಲಪಡಿಸಲಾಗುತ್ತಿದೆ ಹಾಗೂ ತನ್ಮೂಲಕ ಈಶಾನ್ಯ ವಲಯಕ್ಕೆ ಅನನ್ಯತೆಯನ್ನು ತಂದುಕೊಟ್ಟಿರುವ ಮೌಲ್ಯವರ್ಧಿತ ಉತ್ಪನ್ನಗಳ ರಫ್ತಿಗೆ ಒತ್ತಾಸೆಯಾಗಿ ನಿಲ್ಲಲಾಗುತ್ತಿದೆ. ಭಾರತ-ಮ್ಯಾನ್ಮಾರ್-ಥಾಯ್ಲೆಂಡ್ ತ್ರಿಪಕ್ಷೀಯ ಹೆದ್ದಾರಿ, 'ಕಲಾದನ್' ಬಹು-ಮಾದರಿ ವಾಹನಗಳ ಸಾರಿಗೆ ಯೋಜನೆ ಮತ್ತು ಸಿಟ್ವೆ ಬಂದರಿನ ಕಾರ್ಯಾಚರಣೆಯಂಥ ಉಪಕ್ರಮಗಳು, ಈಶಾನ್ಯದ ರಾಜ್ಯಗಳನ್ನು ಆಗ್ನೇಯ ಏಷ್ಯಾ ಮತ್ತು ಅದರಾಚೆಗಿನ ವಲಯದೊಂದಿಗೆ ಭೌತಿಕವಾಗಿ, ವಾಣಿಜ್ಯಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಸಂಪರ್ಕಿಸುವಂತಾಗುವಲ್ಲಿನ ಒಂದು ಸದೃಢ ಕಾರ್ಯತಂತ್ರವಾಗಿ ಪರಿಣಮಿಸಿವೆ.

(ಲೇಖಕರು ಈಶಾನ್ಯ ವಲಯದ ಸಂವಹನ ಮತ್ತು ಅಭಿವೃದ್ಧಿ ಸಚಿವರು)

ನಾರದ ಸಂಚಾರ
ಕಲಹಪ್ರಿಯ
naadigru@gmail.com

ಅವತ್ತೇ ಎಡವಿದ್ರಲ್ಲಾ ಟ್ರಂಪಣ್ಣ..!

ದೊಡ್ಡ ಮನುಷ್ಯರು ಎನಿಸಿಕೊಂಡವರು ಕೆನ್ನೆಗೆ ಪೌಡರ್ ಪೂಸಿದ್ದು, ಕೆಮ್ಮಿದ್ದು ಕೂಡ ಸುದ್ದಿಯಾಗಿ ಅದೆಷ್ಟು ವೈರಲ್ ಆಗಿಬಿಡುತ್ತದೆ ಎಂಬುದಕ್ಕೆ ಈ ಘಟನೆ ಸಾಕ್ಷಿ. ಇದು, 'ವಿಶ್ವದ ದೊಡ್ಡಣ್ಣ' ಎಂದೇ ಕರೆಸಿಕೊಳ್ಳುವ ಅಮೆರಿಕದ ಅಧ್ಯಕ್ಷ ಡೊನಾಲ್ ಟ್ರಂಪ್ ಅವರಿಗೆ ಸಂಬಂಧಿಸಿದ್ದು. ನಮ್ ಟ್ರಂಪಣ್ಣ ನ್ಯೂಜೆರ್ಸಿಯ ಮಾರಿಸ್‌ಟೌನ್‌ನಲ್ಲಿರುವ 'ಮುನಿಸಿಪಲ್' ವಿಮಾನ ನಿಲ್ದಾಣದಲ್ಲಿ, ಏರ್‌ಫೋರ್ಸ್-1 ವಿಮಾನವನ್ನೇರುವಾಗ ಮೆಟ್ಟಿಲುಗಳ ಮೇಲೆ ಎಡವಿಬಿಟ್ಟರಂತೆ. ''ಅಂದ್ಮಾಗೆ, ಆ 'ಮುನಿಸಿಪಲ್' ನಿಲ್ದಾಣದಲ್ಲಿ ಹಾಗೆ ನಿಂತಿದ್ದ ವಿಮಾನದ ಮೆಟ್ಟಿಲುಗಳು ಅದ್ಯಾವ ಕಾರಣಕ್ಕೆ ಟ್ರಂಪಣ್ಣನ ಮೇಲೆ 'ಮುನಿಸಿ'ಕೊಂಡಿದ್ದವಂತೆ?'' ಅಂತ ಮಾತ್ರ ನೀವು ಪ್ರಶ್ನೆ ಕೇಳಬೇಡಿ ಮಾರ್ರೇ.... ಗಾಳಿಸುದ್ದಿ ನೀಡುವಾಗ ನಿಮ್ಮದು ಇದೆಂಥದು ಪಿರಿಪಿರಿ?! ಒಟ್ನಲ್ಲಿ ಟ್ರಂಪಣ್ಣ ಎಡವಿದರು, ಎಡವಿದ ಬಳಿಕ ಕೊಂಚ ಸಾವರಿಸಿಕೊಂಡು, 'ಉಶ್ಶಪ್ಪಾ' ಅಂತ ಮೇಲೆದ್ದು, ವಿಮಾನದೊಳಗೆ ತೂರಿಕೊಂಡರು, ಅಷ್ಟೇ.

ಆದರೆ, ಟ್ರಂಪಣ್ಣ ಹೀಗೆ 'ಕಾಲೆಡವಿ' ಬಿದ್ದ ಸುದ್ದಿ ಗೊತ್ತಾಗಿದ್ದೇ ಗೊತ್ತಾಗಿದ್ದು, ಸೋಷಿಯಲ್ ಮೀಡಿಯಾಗಳಲ್ಲಿ 'ಟ್ರೋಲಿಗರು' ಇನ್ನಿಲ್ಲದಂತೆ ಅವರ 'ಕಾಲೆಳೆಯಲು' ಶುರುಹಚ್ಚಿಕೊಂಡಿದ್ದಾರಂತೆ. ಇದಕ್ಕೂ ಮೊದಲು ಟ್ರಂಪ್ ಅವರು ಜೋ ಬೈಡನ್‌ರನ್ನು ಲೇವಡಿ ಮಾಡಿದ್ದನ್ನು ಮುಂದಿಟ್ಟುಕೊಂಡು ಅವರು ಹೀಗೆ 'ಕಾಲೆಳೆಯುವ' ಕಾರ್ಯದಲ್ಲಿ ತಲ್ಲೀನರಾಗಿದ್ದಾರಂತೆ. ಪಾಪ ನಮ್ ಟ್ರಂಪಣ್ಣ, ಮೆಟ್ಟಿಲು ಎಡವಿ ಬಿದ್ದ ಭರಕ್ಕೆ 'ಕಾಲೆಳೆದುಕೊಂಡೇ' ಮಿಕ್ಕ ಮೆಟ್ಟಿಲು ಹತ್ತಿ ವಿಮಾನದೊಳಗೆ ಸೇರಿಕೊಂಡ ಮೇಲೂ ಟ್ರೋಲಿಗರು ಹೀಗೆ 'ಕಾಲೆಳೆಯುವುದು' ತರವೇ?! ಇಂಥ ಘಟನೆಗಳನ್ನು ಕಂಡಾಗಲೆಲ್ಲಾ ಕಂಡಕಂಡಲ್ಲಿ ಅದನ್ನು 'ಪುಂಗುವ' ಅಣಕಗೀತೆಯ 'ಪುಂಗವ'ರೊಬ್ಬರು ಸರ್ವಜ್ಞನ ವಚನವೊಂದನ್ನು ತಿರುಚಿ, ''ಪರರ ಬಗೆಗಿನ ಟ್ರೋಲಿಗರ ಟ್ರೋಲನು ಕಂಡಾಗ ಹಾಲೋಗರವ ಉಂಡಂತೆ, ಟ್ರೋಲಿಗರು ಬಂದು ಕಾಲೆಳೆಯುವಾಗ ಕಾಲಿನ ಮೂಳೆ ಮುರಿದಂತೆ'' ಎಂದು ತಮ್ಮ 'ಪೆನ್'ನಲ್ಲಿ 'ಪನ್'ಭರಿತ 'ಫನ್' ಮಾಡಿ, ''ಪೆನ್ನಲ್ಲಿ ನಾನ್ ಬರೆದ ಸಾಲು 'ಪೆನ್-ಟಾಸ್ಟಿಕ್' ಆಗಿದೆಯಾ? 'ಪನ್-ಟಾಸ್ಟಿಕ್' ಆಗಿದೆಯಾ? ಅಥವಾ 'ಫನ್-ಟಾಸ್ಟಿಕ್' ಆಗಿದೆಯಾ?'' ಅಂತ ಪಲ್ಲಂಗದೊಳಗೆ ಪಕ್ಕದಲ್ಲಿ ಮಲಗಿದ್ದ (ತಮ್ಮದೇ) ಪತ್ನಿಯನ್ನು ತಿವಿದು ಕೇಳಿದರಂತೆ...

ಪತಿ'ಪುಂಗವ' ರಾತ್ರಿ ಮನೆಗೆ ಬರೋವಾಗ್ಲೇ ಕಂಠಮಟ್ಟ 'ಪೋಟ್ಕೊಂಡು' ಬಂದು ತಮ್ಮ ಮೂಗುಮುಚ್ಚಿಸಿದ್ದು ಸಾಲದೆಂಬಂತೆ ಈಗ ಇಂಥ ಕಿತ್ತೋದ 'ಪನ್'ಗಳನ್ನು ಉದುರಿಸಿ ಕಿವಿಯನ್ನೂ ಮುಚ್ಚಿಸಲು ಮುಂದಾಗಿದ್ದಕ್ಕೆ ಕೆರಳಿ ಕೆಂಡವಾದ ಆ 'ಕರಿಮಣಿ-ಮಾಲಕಿ'ಯು, ''ರೀ... ಸುಮ್ನೇ ಬಿದ್ಕೊಳ್ರೀ. 'ಆಪರೇಷನ್ ಸಿಂದೂರ ಅಂತ್ಯವಾಗಿದೆ, ಭಾರತ ಮತ್ತು ಪಾಕಿಸ್ತಾನದ ನಡುವೆ ಕದನವಿರಾಮ ಘೋಷಣೆಯಾಗಿದೆ, ಅದಕ್ಕೆ ಕಾರಣವೇ ತಾವು' ಅಂತ ಆತುರಗೆಟ್ಟ ಆಂಜನೇಯನ ಥರ ನಿಮ್ ಟ್ರಂಪಣ್ಣ ಘೋಷಿಸಿಕೊಂಡಾಗ್ಲೇ ಅವರು 'ಕಾಲೆಡವಿದ್ದು' ಆಯ್ತು, ಟ್ರೋಲಿಗರು ಅವರ 'ಕಾಲೆಳೆದಿದ್ದೂ' ಆಯ್ತು! ಈಗ ಮತ್ತೆ ಹೊಸಪುರಾಣ ಹೊಸೆಯೋಕೆ ಬರಬೇಡಿ'' ಎಂದು ಪತಿಯ ಸ್ವಾಟೆ ತಿವಿದು ಪಾಚ್ಕೊಂಡ್ರಂತೆ!!

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:10, Issue:150

ಕರ್ನಾಟಕ ಸರ್ಕಾರ

ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ, ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ದಾವಣಗೆರೆ.

ಸಂ:ಕಾಪಾಇಂ/ಪಂರಾಇಂ/ವಿ/ದಾ/ಸ.ಇಂ/ಟೆಂಡರ್/2025-26/388
ದಿನಾಂಕ:-11/06/2025

ಸಂಕ್ಷಿಪ್ತ ಟೆಂಡರ್ ಪ್ರಕಟಣೆ

("ಕೆಪಿಪಿಪಿ-ಪ್ರೊಕ್ಯೂರ್‌ಮೆಂಟ್" ಮೂಲಕ)

ಈ ವಿಭಾಗ ವ್ಯಾಪ್ತಿಯ ವಿವಿದ ಲೆಕ್ಕ ಶೀರ್ಷಿಕೆ ಯೋಜನೆಯಡಿಲ್ಲಿ ಅನುಮೋದನೆಯಾದ ಕಾಮಗಾರಿಗಳನ್ನು ಕರ್ನಾಟಕ ರಾಜ್ಯಪಾಲರ ಪರವಾಗಿ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ಹಾಗೂ ಕೆಪಿಪಿಪಿ-ಪ್ರೊಕ್ಯೂರ್‌ಮೆಂಟ್‌ನಲ್ಲಿ ನೋಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಇಲಾಖಾ ನಿಯಮಾವಳಿಯ ಮೇರೆಗೆ ಕೆಪಿಪಿಪಿ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಐಟಂವಾರು ಏಕ & ದ್ವಿಲಕೋಟೆಯಲ್ಲಿ ಟೆಂಡರ್‌ಗಳನ್ನು ಕೆ.ಡಬ್ಲ್ಯೂ ನಮೂನೆ-1 & 3 ರಲ್ಲಿ ಆಹ್ವಾನಿಸಲಾಗಿದೆ. ಒಟ್ಟು ಕಾಮಗಾರಿಗಳ ಸಂಖ್ಯೆ:04 ಟೆಂಡರ್‌ಗಿಟ್ಟ ಮೊತ್ತ ರೂ.8.37 ಲಕ್ಷಗಳಿಂದ 59.22 ಲಕ್ಷಗಳವರೆಗೆ ಇರುತ್ತವೆ. ಕಾಮಗಾರಿ ಸ್ವರೂಪ ಕಟ್ಟಡ ದುರಸ್ಥಿ ಮತ್ತು ಚರಂಡಿ ರಸ್ತೆ ಹಾಗೂ ರಕ್ಷಣಾ ಗೋಡೆ ನಿರ್ಮಾಣ ಕಾಮಗಾರಿಗಳು. ಟೆಂಡರ್ ಫಾರಂಗಳನ್ನು ದಿನಾಂಕ: 11/06/2025 ರಿಂದ ಭರ್ತಿ ಮಾಡಿ ಸಲ್ಲಿಸಲು ಕೊನೆಯ ದಿನಾಂಕ: 19/06/2025 ಸಂಜೆ 4.00 ಗಂಟೆಯವರೆಗೆ ಹೆಚ್ಚಿನ ವಿವರಗಳಿಗೆ ಈ ಕಛೇರಿಯು ದೂರವಾಣಿ ಸಂಖ್ಯೆ:08192-250156 ಅಥವಾ www.KPPP.karnataka.gov.in ವೆಬ್‌ಸೈಟ್‌ನಲ್ಲಿ ಪಡೆಯಬಹುದಾಗಿರುತ್ತದೆ.

ವಾಸಾಇ/ಡಿವಿಜಿ/126/ಕೆಎಸ್‌ಎಂಸಿಎ/2025-26

ಸಹಿ/- ಕಾರ್ಯಪಾಲಕ ಇಂಜಿನಿಯರ್,
ಪಂ.ರಾ.ಇಂ.ವಿಭಾಗ, ದಾವಣಗೆರೆ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

ಕಾರ್ಯಪಾಲಕ ಅಭಿಯಂತರರವರ ಕಛೇರಿ, ಆಕುಕ ಇಂಜಿನಿಯರಿಂಗ್ ವಿಭಾಗ, ಎನ್.ಪಿ.ಸಿ.ಆಸ್ಪತ್ರೆ ಆವರಣ, ನಜರ್‌ಬಾದ್, ಮೈಸೂರು-10.
(ದೂರವಾಣಿ : 0821-2979772 ಇ-ಮೇಲ್: -khsdrp.divmys@gmail.com)

ಸಂ: ಆಕುಕ/ಇಂ.ವಿ./ಕಾ.ಆ/ಮೈ/ಸಇ-3&4/ಟೆಂಡರ್-21/4ನೇ ಕರೆ/2025-26 ದಿನಾಂಕ: 06.06.2025

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕಾರ್ಯಪಾಲಕ ಅಭಿಯಂತರರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಇಂಜಿನಿಯರಿಂಗ್ ವಿಭಾಗ, ಮೈಸೂರು ರವರಿಂದ ಯೋಜನಾ ನಿರ್ವಹಣೆ ಸಮಾಲೋಚಕರನ್ನು ನೇಮಿಸಲು ಈ ಕೆಳಕಂಡ ಕಾಮಗಾರಿಗೆ ಟೆಂಡರ್‌ನ್ನು ದ್ವಿ-ಟೆಂಡರ್ ದಸ್ತಾವೇಜು ಪದ್ಧತಿಯಲ್ಲಿ ವಿದ್ಯುನ್ಮಾನ ಸಂಗ್ರಹಣೆ ವೇದಿಕೆ (Karnataka Public Procurement portal) ಮೂಲಕ ಆಹ್ವಾನಿಸಲಾಗಿದೆ. ಕಾಮಗಾರಿಗಳ ವಿವರಗಳು ಈ ಕೆಳಕಂಡಂತಿರುತ್ತದೆ. ಕಾಮಗಾರಿಯ ವಿವರ: **(1)** Up gradation of Infrastructure facilities to the TLH and staff Quarters at Holenarasipura in Hassan District **(2)** Up gradation of PHC to CHC at Doddakunche in Holenarasipura Taluk, Hassan District **(3)** Construction of Doctors, Nurses and Group D Quarters to CHC at Hallimysuru in Holenarasipura Taluk, Hassan District. (Pkg-4) (Call-4) ಯೋಜನಾ ಸಮಾಲೋಚಕರ ಅಂದಾಜು ಮೊತ್ತ (ರೂ.ಗಳಲ್ಲಿ): **6,40,357.80, ಇಎಂಡಿ ಮೊತ್ತ** (ರೂ.ಗಳಲ್ಲಿ): **16,000.00, ಕಾಲಾವಧಿ :** ಕಾಮಗಾರಿ ಪೂರ್ಣಗೊಳ್ಳುವವರೆಗೂ.

ಟೆಂಡರ್ ಪ್ರಕ್ರಿಯೆ ವೇಳಾಪಟ್ಟಿ ಮತ್ತು ಇತರೆ ವಿವರಗಳು:- 1) ಭರ್ತಿ ಮಾಡಿದ ಟೆಂಡರ್ ದಾಖಲೆಗಳನ್ನು ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ : **23.06.2025ರ ಸಂಜೆ 16.00 ಗಂಟೆಯವರೆಗೆ** 2) ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ತಾಂತ್ರಿಕ ಬಿಡ್ ಅನ್ನು ತೆರೆಯುವ ದಿನಾಂಕ ಮತ್ತು ಸಮಯ **: 24.06.2025ರ ಸಂಜೆ 16.30 ಗಂಟೆಗೆ**

ಸೂಚನೆ : 1) ಈ ಕೆಳಗೆ ಸಹಿ ಮಾಡಿರುವವರು ಯಾವುದೇ ಕಾರಣಗಳನ್ನು ನೀಡದೆ ಟೆಂಡರ್ ಪ್ರಕ್ರಿಯೆಯನ್ನು ಮುಂದೂಡುವ/ಸಂಪೂರ್ಣವಾಗಿ ಟೆಂಡರ್ ರದ್ದುಗೊಳಿಸುವ/ಟೆಂಡರ್ ನಿರಾಕರಿಸುವ ಹಕ್ಕನ್ನು ಹೊಂದಿರುತ್ತಾರೆ. 2) ಅಲ್ಪಾವಧಿ ಟೆಂಡರ್ ಪ್ರಕಟಣೆಯಲ್ಲಿ ವ್ಯತ್ಯಾಸವಿದ್ದಲ್ಲಿ ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಅದನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ (www.eproc.karnataka.gov.in.) ಮಾತ್ರ ಪ್ರಕಟಿಸಲಾಗುವುದು.

ಸಹಿ/- ಕಾರ್ಯಪಾಲಕ ಅಭಿಯಂತರರು
ಆಕುಕ ಇಂಜಿನಿಯರಿಂಗ್ ವಿಭಾಗ, ಮೈಸೂರು.

DIPR/MYS/448/SA/2025-26

ಬೆಳಗಾವಿ ಮಹಾನಗರ ಪಾಲಿಕೆ

ಸಿಟಿಎಸ್.ನಂ.4821/26, 4821/27, ಆರ್.ಎಸ್.ನಂ.1005, ಸುಭಾಷನಗರ, ಬೆಳಗಾವಿ. ದೂರವಾಣಿ : 0831-2405304,
Email : itstaff_ulb_belgaum@yahoo.com, Website : www.belgaumcity.mrc.gov.in

ಸಂಖ್ಯೆ : ಮ.ನ.ಪಾ.ಬೆ./ಲೋ.ಶಾ./ಕಾ.ಅ./ಡಿ.ಎಂ./ಟಿಎನ್‌ಡಿ/ಇಪ್ರೋ-08/2025-26 ದಿನಾಂಕ : 12-06-2025

ಇ-ಪ್ರೊಕ್ಯೂರ್‌ಮೆಂಟ್ ಮರು ಟೆಂಡರ್ ಪ್ರಕಟಣೆ

ಆಯುಕ್ತರು, ಮಹಾನಗರ ಪಾಲಿಕೆ ಬೆಳಗಾವಿ, ಇವರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದೇಶ 1999 - 2000 ಪ್ರಕಾರ ಆ್ಯಕ್ಟ 2000 ನಿಯಮದಂತೆ **ಸನ್ 2025-26 ನೇ ಸಾಲಿನ 15ನೇ ಹಣಕಾಸು, ಎಸ್.ಎಫ್.ಸಿ. ಹಾಗೂ ಮಹಾನಗರ ಪಾಲಿಕೆಯ ನಿಧಿಯಡಿಯಲ್ಲಿ ಅನುಮೋದನೆಯಾದ ಎಸ್.ಸಿ. ಮಿಸಲಾತಿಗೆ 01, ಎಸ್.ಟಿ. ಮಿಸಲಾತಿಗೆ 02, ಕ್ಯಾಟೆಗೆರಿ 2ಎ ಮಿಸಲಾತಿಗೆ - 03 ಹಾಗೂ ಸಾಮಾನ್ಯ ಮಿಸಲಾತಿಗೆ 03 ಹೀಗೆ ಒಟ್ಟು 09 ಕಾಮಗಾರಿಳಿಗೆ** ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಐಟಂವಾರು ಟೆಂಡರ್‌ನ್ನು ಆಹ್ವಾನಿಸಲಾಗಿದೆ. ವಿವರಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ಪಡೆಯಬಹುದಾಗಿದೆ.

1) ಟೆಂಡರ್ ಕುರಿತು ವಿವರಣೆಗಾಗಿ ಕೊನೆಯ ದಿನಾಂಕ : 18-06-2025 ರ ಸಂಜೆ 5.00 ಘಂಟೆವರೆಗೆ, 2) ಟೆಂಡರಿನ ಮೊದಲನೆ ಸಭೆಯ ದಿನಾಂಕ : 19-06-2025 ರ ಬೆಳಿಗ್ಗೆ 11.00 ಘಂಟೆಗೆ, ಆಯುಕ್ತರು, ಮಹಾನಗರ ಪಾಲಿಕೆ ಬೆಳಗಾವಿ, ಕಚೇರಿಯಲ್ಲಿ, 3) ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ : 21-06-2025 ರ ಅಪರಾಹ್ನ 4.00 ಘಂಟೆವರೆಗೆ, 4) ಟೆಂಡರಿನ ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ : 23-06-2025 ರ ಬೆಳಿಗ್ಗೆ 11.00 ಘಂಟೆಗೆ, ಆಯುಕ್ತರು, ಮಹಾನಗರ ಪಾಲಿಕೆ ಬೆಳಗಾವಿ, ಕಚೇರಿಯಲ್ಲಿ, 5) ಟೆಂಡರಿನ ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ : 25-06-2025 ರ ಬೆಳಿಗ್ಗೆ 11.00 ಘಂಟೆ, ಆಯುಕ್ತರು, ಮಹಾನಗರ ಪಾಲಿಕೆ ಬೆಳಗಾವಿ, ಕಚೇರಿಯಲ್ಲಿ.

ಹೆಚ್ಚಿನ ವಿವರಗಳಿಗೆ ಆನ್‌ಲೈನ್ **ವೆಬ್‌ಸೈಟ್ : (https://www.kppp.karnataka.gov.in)** ನಲ್ಲಿ ವೇಳಾ ಪಟ್ಟಿಯೊಂದಿಗೆ ಪ್ರಕಟಿಸಲಾಗಿದೆ. ಒಂದು ವೇಳೆ ತಾಂತ್ರಿಕ ಕಾರಣಗಳಿಂದ ಸದರಿ ಟೆಂಡರಿನಲ್ಲಿ ಯಾವುದಾದರು ಬದಲಾವಣೆಯಾದಲ್ಲಿ ಸದರಿ ಬದಲಾವಣೆಯ ವಿವರಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಹಿ/- ಆಯುಕ್ತರು,
ಮಹಾನಗರ ಪಾಲಿಕೆ, ಬೆಳಗಾವಿ.

ಡಿಐಪಿಆರ್/ಬೆಳಗಾವಿ/469/ಮಣಿಪಾಲ್/2025-26

ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ,
ಲೋಕೋಪಯೋಗಿ ಇಲಾಖೆ, ತುಮಕೂರು.

ಕ್ರ.ಸಂ:ಕಾಇಂ:ಲೋಇವಿ:ತುವು:ಸಇಂ-2:ಟೆಂಡರ್08/2025-26
ದಿನಾಂಕ : 09.06.2025

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂ.08/2025-26 ದಿನಾಂಕ: 09.06.2025

ಈ ಕಚೇರಿ ಟೆಂಡರ್ ಪ್ರಕಟಣೆ ಸಂಖ್ಯೆ: 08/2025-26 ದಿನಾಂಕ 09-06-2025 ರಂದು ತುಮಕೂರು ವಿಭಾಗದ ವ್ಯಾಪ್ತಿಯಲ್ಲಿ 8443 (ಠೇವಣಿ ವಂತಿಕೆ) ರಾಜ್ಯ ವಿಪತ್ತು ಉಪಶಮನ ನಿಧಿ ಲೆಕ್ಕ ಶೀರ್ಷಿಕೆ ಅಡಿಯಲ್ಲಿ 01 ಕಾಮಗಾರಿಗೆ KPPP-Portal ಮೂಲಕ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಟೆಂಡರಿಗಿಟ್ಟ ಮೊತ್ತ ರೂ:120.42 ಲಕ್ಷಗಳು ಮತ್ತು ಇ.ಎಂ.ಡಿ ಮೊತ್ತ ರೂ.2,00,000/-, ಅರ್ಹ ಗುತ್ತಿಗೆದಾರರು 3 ನೇ ದರ್ಜೆ ಮೇಲ್ಪಟ್ಟು, ಕಾಲಾವಧಿ: 04 ತಿಂಗಳು, ಸಂಬಂಧಿಸಿದ ವಿಚಾರಣೆ ಮತ್ತು ಸ್ಪಷ್ಟೀಕರಣಗಳಿಗೆ ಕೊನೆ ದಿನಾಂಕ ಮತ್ತು ವೇಳೆ: 16-06-2025 ರ 17-30 ಗಂಟೆಗೆ, KPPP-Portal ಮೂಲಕ ಟೆಂಡರ್‌ಅನ್ನು ದಿನಾಂಕ 09-06-2025 ರಿಂದ 17-06-2025 ರ 16.00 ಗಂಟೆವರೆಗೆ ಪಡೆಯಬಹುದಾಗಿದೆ. ಟೆಂಡರ್‌ಅನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ವೇಳೆ: 17-06-2025 ರ 16-00 ಗಂಟೆವರೆಗೆ, ತಾಂತ್ರಿಕ ಬಿಡ್‌ಅನ್ನು ತೆರೆಯುವ ದಿನಾಂಕ ಮತ್ತು ವೇಳೆ: 18-06-2025 ರ 16-30 ಗಂಟೆಗೆ, ಆರ್ಥಿಕ ಬಿಡ್‌ಅನ್ನು ತೆರೆಯುವ ದಿನಾಂಕ ಮತ್ತು ವೇಳೆ: 19-06-2025 ರ 16-00 ಗಂಟೆಗೆ, ಹೆಚ್ಚಿನ ವಿವರಗಳನ್ನು ಸದರಿ ಕಚೇರಿಯಿಂದ ಕಚೇರಿ ವೇಳೆಯಲ್ಲಿ ಪಡೆಯಬಹುದಾಗಿದೆ ಹಾಗೂ ವೆಬ್‌ಸೈಟ್ ಸಂ:https://kppp.karnataka.gov.in ರಲ್ಲಿ ಪಡೆಯಬಹುದಾಗಿದೆ.

ಸೂಚನೆ: ಆರ್ಥಿಕ ವಹಿವಾಟಿನ ಪತ್ರದಲ್ಲಿ ಯು.ಡಿ.ಐ ಸಂಖ್ಯೆಯನ್ನು ನಮೂದಿಸಿಲ್ಲದಿರುವ ಆರ್ಥಿಕ ವಹಿವಾಟನ್ನು ಪರಿಗಣಿಸುವುದಿಲ್ಲ. ಸದರಿ ಟೆಂಡರ್ ಪ್ರಕಟಣೆಯಲ್ಲಿ ಆಗುವಂತಹ ಮುಂದಿನ ಬದಲಾವಣೆಗಳನ್ನು ಕೆ.ಪಿ.ಪಿ.ಪಿ ಪೋರ್ಟಲ್‌ನಲ್ಲಿ ನೋಡಿಕೊಳ್ಳುವುದು

ಸಹಿ/-ಕಾರ್ಯಪಾಲಕ ಇಂಜಿನಿಯರ್,
ಲೋಕೋಪಯೋಗಿ ಇಲಾಖೆ ವಿಭಾಗ, ತುಮಕೂರು.

DIPR/TUM/144/KSMCA/2025-26

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

ಪುರಸಭಾ ಕಾರ್ಯಾಲಯ, ಬೇಲೂರು

E-mail: itstaff_ulb_belur@yahoo.co.in, townmunicipal.belur@gmail.com ದೂರವಾಣಿ: 08177-222221

ಸಂಖ್ಯೆ: ಪು.ಬೇ/ಜೆ.ಇ/ಟೆಂಡರ್-10/2024-25 ದಿನಾಂಕ: 11.06.2025

ಮರು ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್)

ಈ ಕೆಳಕಂಡ ಕಾಮಗಾರಿಗಳನ್ನು ನಿರ್ವಹಿಸುವ ಬಗ್ಗೆ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ದರ್ಜೆಯ ಸಿವಿಲ್ ಗುತ್ತಿಗೆದಾರರುಗಳಿಂದ ಐಟಂವಾರು ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಟೆಂಡರ್‌ನ ವೇಳಾಪಟ್ಟಿ ವಿವರ ಕೆಳಗಿನಂತಿದೆ 1)ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ ದಿನಾಂಕ: 27.06.2025 ಸಂಜೆ 5.30 ಗಂಟೆಗೆ 2)ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಹಾಗೂ ಸಮಯ ದಿನಾಂಕ: 30.06.2025 ಬೆಳಿಗ್ಗೆ 11.30 ಗಂಟೆಗೆ 3)ಆರ್ಥಿಕ ಬಿಡ್ ತೆರೆಯುವ ದಿನಾಂಕ ಹಾಗೂ ಸಮಯ ದಿನಾಂಕ: 03.07.2025 ಬೆಳಿಗ್ಗೆ 11.30 ಗಂಟೆಗೆ 4)ಕೆಲಸ ಮುಗಿಸಲು ಕಾಲಾವಧಿ: 06 ತಿಂಗಳು (ಮಳೆಗಾಲ ಹೊರತುಪಡಿಸಿ) (ಟೆಂಡರ್‌ನ ವೇಳಾಪಟ್ಟಿಯಲ್ಲಿ ಯಾವುದೇ ಬದಲಾವಣೆಗಳಿದ್ದಲ್ಲಿ ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ ಪ್ರಚುರ ಪಡಿಸಲಾಗುವುದು) ಕ್ರಸಂ.1)ಕಾಮಗಾರಿ ವಿವರ: DMA/2024-25/WS/WORK_INDENT34642/CALL-3 ಟೆಂಡರ್‌ಗಿಟ್ಟ ಮೊತ್ತ (ರೂ.ಲಕ್ಷಗಳಲ್ಲಿ)76,51,257/- ಇ.ಎಂ.ಡಿ.ಮೊತ್ತ: 1,53,025/- ಹೆಚ್ಚಿನ ವಿವರಗಳನ್ನು ಈ ಕಛೇರಿಯ ಕಾಮಗಾರಿ ಶಾಖೆಯಲ್ಲಿ ಕೆಲಸದ ವೇಳೆಯಲ್ಲಿ ಮತ್ತು http://kppp.karnataka.gov.in ನಲ್ಲಿ ಪಡೆಯಬಹುದಾಗಿರುತ್ತದೆ.

ಸಹಿ/-(ಉಷಾಸತೀಶ್ ಬಿ.ಎಸ್) ಪ್ರಭಾರ ಅಧ್ಯಕ್ಷರು, ಪುರಸಭೆ, ಬೇಲೂರು

ಸಹಿ/-(ಎಸ್.ಎಂ. ಸುಜಯ ಕುಮಾರ್) ಮುಖ್ಯಾಧಿಕಾರಿ, ಪುರಸಭೆ, ಬೇಲೂರು

ವಾಸಾಸಂಇ/ಹಿಸನಿ/ಹಾಸನ/205/ಕೆಎಸ್‌ಎಂಸಿಎ/2025-26

ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿರುತ್ತದೆ)
ನಿಗಮ ಕಚೇರಿ, ಪೂನಾ ಬೆಂಗಳೂರು ರಸ್ತೆ, ನವನಗರ, ಹುಬ್ಬಳ್ಳಿ
Tel : (0836) 2223526 Website : www.hescom.co.in
E-mail: seepmc.hescom@gmail.com / eepmc1.hescom@gmail.com
Corporate Identity Number (CIN): U31401KA2002SGC030437

No: HESCOM/SEE(PMC)/EE-P1/AEE-1/2025-26/Cys: 2255 Date: 12-06-2025

ಟೆಂಡರ್ ಪ್ರಕಟಣೆ (ಕೆ.ಪಿ.ಪಿ.ಪಿ.ಮೂಲಕ ಮಾತ್ರ)

ಅಧೀಕ್ಷಕ ಇಂಜನೀಯರ (ವಿ), ಪಿಎಮ್‌ಸಿ, ನಿಗಮ ಕಚೇರಿ, ಹು.ವಿ.ಸ.ಕಂ.ನಿ., ಹುಬ್ಬಳ್ಳಿ ರವರಿಂದ ಪೂರ್ಣಗುತ್ತಿಗೆ ಆಧಾರದಡಿಯಲ್ಲಿ ಕೆಳಕಂಡ ಕಾಮಗಾರಿಗೆ ಟೆಂಡರಗಳನ್ನು ಆಹ್ವಾನಿಸಲಾಗಿದೆ.

ಅನು ಕ್ರಮ	ಯೋಜನೆಗಳು	ಬಿಡ್ ಇಂಡೆಂಟ್ ಸಂಖ್ಯೆ
1	33ಕೆವಿ ವಿದ್ಯುತ್ ಮಾರ್ಗಗಳ ವಾಹಕ ಬದಲಾವಣೆ ಕಾಮಗಾರಿಗಳು	HESCOM/2025-26/EL/WORK_ INDENT 853 to 858 (6 packages)
2	33 ಕೆವಿ ಎಸ್&ಎಲ್ ಭಾಗದ ಬೆಳಗಾವಿ ವ್ಯಾಪ್ತಿಯಲ್ಲಿ ಬರುವ ವಿವಿಧ 33/11 ಕೆವಿ ವಿದ್ಯುತ್ ಉಪಕೇಂದ್ರಗಳಲ್ಲಿ ವಿಫಲವಾಗಿರುವ 5 ಎಮ್.ವಿ.ಎ ವಿದ್ಯುತ್ ಪರಿವರ್ತಕಗಳ ದುರಸ್ತಿ ಮತ್ತು ಪುನಃ ಸ್ಥಿತಿಗೊಳಿಸುವುದು.	HESCOM/2025-26/SE0440 to 441 (2 packages)

ಸದರಿ ಟೆಂಡರಗಳ ಪೂರ್ಣ ವಿವರಗಳನ್ನು ವೆಬ್‌ಸೈಟ್, www.kppp.karnataka.gov.in ರಲ್ಲಿ **ದಿನಾಂಕ: 12-06-2025,** 05:00 PM ನಂತರ ಪಡೆಯಬಹುದು.

ಸಹಿ/- ಅಧೀಕ್ಷಕ ಇಂಜನೀಯರರು(ವಿ)
(ಪಿಎಮ್‌ಸಿ), ಹೆಸ್ಕಾಂ, ಹುಬ್ಬಳ್ಳಿ.

ವಾ.ಸಾ.ಇ/ಧಾರವಾಡ/272/ದೇಶಪಾಂಡೆಪಬ್ಲಿಸಿಟಿ/2025-26

ಕರ್ನಾಟಕ ಅರಣ್ಯ ಇಲಾಖೆ

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಸಂಶೋಧನೆ ಉಪ ವಿಭಾಗ, ಬೆಂಗಳೂರು 1ನೇ ಮುಖ್ಯ ರಸ್ತೆ, ಅರಕೆರೆ ಮೈಕೋ ಬಡಾವಣೆ, ದೊರೆಸಾನಿಪಾಳ್ಯ, ಬನ್ನೇರುಘಟ್ಟ ರಸ್ತೆ, ಬೆಂಗಳೂರು - 560076.
ದೂರವಾಣಿ: 080-26587663/26492218.
ಇ ಮೇಲ್ ಐಡಿ: ccfrbangalore@gmail.com

ಸಂಖ್ಯೆ: ಎಸ್ಎಎಸ್/ಹರಾಜು/ಸಿಆರ್-03/2025-26 ದಿನಾಂಕ: 12-06-2025

ಸಂಕ್ಷಿಪ್ತ ಟೆಂಡರ್ ಹಾಗೂ ಹರಾಜು ಪ್ರಕಟಣೆ

ವಿಷಯ: ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಂಶೋಧನೆ ಬೆಂಗಳೂರು ಘಟಕಕ್ಕೆ ಸಂಬಂಧಿಸಿದ ಕಿರು ಅರಣ್ಯ ಉತ್ಪನ್ನಗಳನ್ನು 2025-26 ಮತ್ತು 2026-27 ನೇ ಸಾಲಿಗೆ ಟೆಂಡರ್-ಕಂ-ಹರಾಜಿನ ಮೂಲಕ ವಿಲೇವಾರಿ ಮಾಡುವ ಬಗ್ಗೆ.

ಈ ಮೂಲಕ ಸಮಸ್ತ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ಈ ವೃತ್ತಕ್ಕೆ ಸಂಬಂಧಿಸಿದ ಸಂಶೋಧನಾ ವಲಯಗಳಲ್ಲಿನ ಸಂಶೋಧನ ಕೇಂದ್ರಗಳಲ್ಲಿನ ಕಿರು ಅರಣ್ಯ ಉತ್ಪನ್ನಗಳ ಫಸಲುಗಳನ್ನು 2025-26 ಮತ್ತು 2026-27 ನೇ ಸಾಲಿಗೆ ಅಂದರೆ ಟೆಂಡರ್ ಕಂ ಹರಾಜು ಒಪ್ಪಿಗೆಯಾಗಿ ಕರಾರು ಮಾಡಿಕೊಂಡ ದಿನದಿಂದ 2 ವರ್ಷಗಳ ಅವದಿಯವರೆಗೆ ಕಿರು ಅರಣ್ಯ ಉತ್ಪನ್ನಗಳನ್ನು ಸಂಗ್ರಹಿಸುವ ಹಕ್ಕನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಂಶೋಧನೆ, ಬೆಂಗಳೂರು ಇವರು ಅಥವಾ ಇವರಿಂದ ಅಧಿಕಾರ ಪಡೆದ ಅಧಿಕಾರಿಗಳು ಈ ಕಛೇರಿಯ ವಿವರವುಳ್ಳ ಪ್ರಕಟಣೆಯಲ್ಲಿರುವ ಷರತ್ತುಗಳಿಗನುಗುಣವಾಗಿ ಕೆಳಗಿನ ತಪ್ಸೀಲಿನಲ್ಲಿ ಸೂಚಿರುವ ಪ್ರಕಾರ ಟೆಂಡರ್-ಕಂ-ಹರಾಜಿನ ಮೂಲಕ ದಿನಾಂಕ: 19-06-2025 ರಂದು ಅಪರಾಹ್ನ 12.00 ಗಂಟೆಗೆ ಮಾರಾಟ ಮಾಡುವರು. ಅರಣ್ಯ ಗುತ್ತಿಗೆದಾರರು ಇದರಲ್ಲಿ ಭಾಗವಹಿಸಬಹುದು. ಇದರಲ್ಲಿ ಪ್ರಕಟಿಸಿರುವ ಅರಣ್ಯ ಉತ್ಪನ್ನವು ತಪ್ಸೀಲಿನಲ್ಲಿ ಸೂಚಿಸಿರುವ ಸಂಶೋಧನಾ ಕೇಂದ್ರಗಳಿಗೆ ಮಾತ್ರ ಸಂಬಂಧಿಸಿರುತ್ತದೆ. ಹೆಚ್ಚಿನ ಮಾಹಿತಿಯನ್ನು ಕಛೇರಿ ಕೆಲಸದ ವೇಳೆಯನ್ನು ಸಂಪರ್ಕಿಸಿ ಪಡೆಯಬಹುದಾಗಿದೆ.

ಸಹಿ/- ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ
ಸಂಶೋಧನಾ ಉಪ ವಿಭಾಗ, ಬೆಂಗಳೂರು

ವಾಸಾಸಂಇ/ವಾಪ್ರ/1203/ಆಕಾರ್/2025-26

ಕರ್ನಾಟಕ ಸರ್ಕಾರ

ಜಿಲ್ಲಾಧಿಕಾರಿಗಳ ಕಾರ್ಯಾಲಯ, ಕೊಡಗು ಜಿಲ್ಲೆ, ಮಡಿಕೇರಿ
ಜಿಲ್ಲಾ ನಗರಾಭಿವೃದ್ಧಿ ಕೋಶ

ಇ-ಮೇಲ್:dudc_kdg@yahoo.co.in
ವೆಬ್‌ಸೈಟ್ : www.kodagududc.mrc.gov.in
ka.kodagu.dudc@gmail.com ದೂರವಾಣಿ ಮತ್ತು ಫ್ಯಾಕ್ಸ್: 08272-295551

ಸಂಖ್ಯೆ:ಡಿಯುಡಿಸಿ:ಪುವಿ:142:2024-25 ದಿನಾಂಕ::12-06-2025

ದರಪಟ್ಟಿ ಅಹ್ವಾನ ಪ್ರಕಟಣೆ (ಮರು ದರಪಟ್ಟಿ ಪ್ರಕಟಣೆ)

ವಿರಾಜಪೇಟೆ ಪುರಸಭೆ ಮಾನ್ಯ ಶಾಸಕರ 2023-24ನೇ ಸಾಲಿನ ವಿಶೇಷ ಅನುದಾನದಡಿ ಈ ಕೆಳಕಂಡ ಕಾಮಗಾರಿಗಳಿಗೆ ಆಸಕ್ತ ಗುತ್ತಿಗೆದಾರರಿಂದ ದರಪಟ್ಟಿಗಳನ್ನು ಅಹ್ವಾನಿಸಲಾಗಿದೆ.

SL.No	DETAILS OF WORK/MACHINARIES
1	SUPPLY AND INSTALLATION OF 10HP TWIN SHAFT SHREDDER WITH CONVEYOR SYSTEM (including Transportation, Installation, Electrical Work, Bed Construction to place the entire machine component)
2	SUPPLY AND INSTALLATION OF SLAUGHTER HOUSE INCINERATOR OF ITPD CAPACITY ((including Transportation, Installation, Electrical Work, Bed Construction to place the entire machine component)
3	SUPPLY OF VEHICLE MOUNTED CANON SPRAYING MACHINE (including registration insurance of vechicle)

ಸದರಿ ಕಾಮಗಾರಿಯನ್ನು ನಿರ್ವಹಿಸಲು ಮಾರುಕಟ್ಟೆ ದರಕ್ಕೆ ಅನುಗುಣವಾಗಿ ತಮ್ಮ ಕನಿಷ್ಠ ದರಗಳನ್ನು ನಮೂದಿಸಿ ದರಪಟ್ಟಿಗಳನ್ನು ದಿನಾಂಕ:20-06-2025ರ ಸಂಜೆ 5.00 ಗಂಟೆಗೆ ಒಳಗಾಗಿ ಈ ಕಚೇರಿಗೆ ಸಲ್ಲಿಸತಕ್ಕದ್ದು. ಹೆಚ್ಚಿನ ವಿವರಗಳಿಗೆ ಮತ್ತು ವಿವರವಾದ ತಾಂತ್ರಿಕ ನಿರ್ದಿಷ್ಟತೆಗಳನ್ನು ಪಡೆಯಲು ಈ ಕಚೇರಿಯನ್ನು ಸಂಪರ್ಕಿಸತಕ್ಕದ್ದು.

ಸಹಿ/-
ಯೋಜನಾ ನಿರ್ದೇಶಕರು,
ಜಿಲ್ಲಾ ನಗರಾಭಿವೃದ್ಧಿ ಕೋಶ, ಜಿಲ್ಲಾಧಿಕಾರಿಗಳ ಕಚೇರಿ,
ಕೊಡಗು ಜಿಲ್ಲೆ, ಮಡಿಕೇರಿ.

ಷರತ್ತುಗಳು
1. ದರಪಟ್ಟಿಯು ಎಲ್ಲಾ ವಿಧದ ತೆರಿಗೆಗಳನ್ನು ಒಳಗೊಂಡಿರಬೇಕು. 2. ದರಪಟ್ಟಿ ಸಲ್ಲಿಸುವಾಗ ಪ್ರಸ್ತುತ ಮಾರುಕಟ್ಟೆ ದರದಂತೆ ದರಪಟಿ ಸಲ್ಲಿಸುವುದು. 3. ದರಪಟ್ಟಿಗಳನ್ನು ಅಂಗೀಕರಿಸುವ ತಿರಸ್ಕರಿಸುವ ಹಕ್ಕನ್ನು ಜಿಲ್ಲಾ ನಗರಾಭಿವೃದ್ಧಿ ಕೋಶ ಕಚೇರಿ ಕಾಯ್ದಿರಿಸಿದೆ. 4. ಈ ದರಪಟ್ಟಿಯನ್ನು ಕೇವಲ ದರ ನಿಗಧಿ ಪ್ರಕ್ರಿಯೆಗಾಗಿ ಮಾತ್ರ ಪರಿಗಣಿಸಲಾಗುವುದು. 5. ದರಪಟ್ಟಿಯ ವಿಷಯಕ್ಕೆ ಸಂಬಂಧಿಸಿದಂತೆ ನಿಗದಿಪಡಿಸಿದ ದಿನಾಂಕಗಳೊಳಗೆ ಕಚೇರಿಗೆ (ಬೆಳಿಗ್ಗೆ 10.30 ರಿಂದ ಸಂಜೆ 5.00ರೊಳಗಾಗಿ) ಭೇಟಿ ನೀಡಿ ಸಂಬಂಧಪಟ್ಟ ಅಧಿಕಾರಿಗಳಿಮದ ಮಾಹಿತಿಯನ್ನು ಪಡೆಯಬಹುದಾಗಿದೆ.

ಕೇರಳ ಅರಣ್ಯ ಸಚಿವ ಸಶೀಂದ್ರನ್ ಭೇಟಿ; ಈಶ್ವರ್ ಖಂಡ್ರೆ ಭರವಸೆ

ವನ್ಯ ಜೀವಿಗಳ ವಿನಿಮಯಕ್ಕೆ ಸಹಕಾರ

ಬೆಂಗಳೂರು: ಕೇರಳದ ತ್ರಿಶೂರ್ ಜಿಲ್ಲೆಯ ಪುತ್ತೂರಿನಲ್ಲಿ ನೂತನವಾಗಿ ಆರಂಭಿಸುತ್ತಿರುವ ಜೈವಿಕ ಉದ್ಯಾನದಲ್ಲಿ ವನ್ಯಜೀವಿ ಮತ್ತು ಪಕ್ಷಿಗಳ ನಿರ್ವಹಣೆಗೆ ಅಗತ್ಯವಾದ ನೈಪುಣ್ಯತೆ ಮತ್ತು ಜ್ಞಾನ ವಿನಿಮಯಕ್ಕೆ ಅರಣ್ಯ ಸಚಿವ ಈಶ್ವರ ಖಂಡ್ರೆ ಸಮ್ಮತಿಸಿದರು.

ಕೇರಳ ಅರಣ್ಯ ಸಚಿವ ಎ.ಕೆ.ಸಶೀಂದ್ರನ್ ಗುರುವಾರ ವಿಕಾಸಸೌಧದಲ್ಲಿ ಸಚಿವ ಈಶ್ವರ್ ಖಂಡ್ರೆ ಅವರನ್ನು ಭೇಟಿ ಮಾಡಿ, ಕೇರಳ ಅರಣ್ಯ ಇಲಾಖೆಯಿಂದ ಆರಂಭಿಸಲಾಗುತ್ತಿರುವ ಪ್ರಥಮ ಜೈವಿಕ ಉದ್ಯಾನದಲ್ಲಿ ವನ್ಯಜೀವಿಗಳ ನಿರ್ವಹಣೆ ಕುರಿತಂತೆ ತಾಂತ್ರಿಕ ನೈಪುಣ್ಯತೆ ಹಂಚಿಕೊಳ್ಳುವಂತೆ ಮನವಿ ಮಾಡಿದರು. ವಿಶ್ವ ವಿಖ್ಯಾತ ಮೃಗಾಲಯ ವಿನ್ಯಾಸಕಾರ ಆಸ್ಟ್ರೇಲಿಯಾದ ಜಾನ್ ಸಿಯೋ ಅವರಿಂದ 136.8 ಎಕರೆ ಪ್ರದೇಶದಲ್ಲಿ ಜೈವಿಕ ಉದ್ಯಾನದ ವಿನ್ಯಾಸ ಮಾಡಿಸಿದ್ದು, ಬರುವ ಆಗಸ್ಟ್ ಅಂತ್ಯಕ್ಕೆ ಕಾರ್ಯಾರಂಭ ಮಾಡಲಿದೆ. ಹೊಸ ಮೃಗಾಲಯಕ್ಕೆ ಕರ್ನಾಟಕದ ಮೃಗಾಲಯಗಳಲ್ಲಿ ಹೆಚ್ಚುವರಿಯಾಗಿರುವ ಕೆಲವು ವನ್ಯಜೀವಿಗಳನ್ನು ನೀಡುವಂತೆ ಮತ್ತು ವನ್ಯಜೀವಿಗಳ ನಿರ್ವಹಣೆ ಕುರಿತಂತೆ ತಾಂತ್ರಿಕ ನೈಪುಣ್ಯತೆ ಹಂಚಿಕೊಳ್ಳುವಂತೆ ಮನವಿ ಮಾಡಿದರು. ಮನವಿಗೆ ಸ್ಪಂದಿಸಿದ ಸಚಿವ ಈಶ್ವರ್ ಖಂಡ್ರೆ, ಕೇರಳ ರಾಜ್ಯದ ನೂತನ ಮೃಗಾಲಯಕ್ಕೆ ಅಗತ್ಯವಿರುವ ತಾಂತ್ರಿಕ ನೈಪುಣ್ಯತೆಯ ನೆರವು, ಜತೆಗೆ ವನ್ಯಜೀವಿಗಳ ವಿನಿಮಯಕ್ಕೆ ಸಹಕಾರ ನೀಡಲಾಗುವುದು ಎಂದು ತಿಳಿಸಿದರು. ಈ ವೇಳೆ ಕೇರಳ ರಾಜ್ಯದಲ್ಲಿ ಡೀಮ್ಡ್ ಅರಣ್ಯ ಕುರಿತಂತೆ ಕೈಗೊಂಡಿರುವ ಕ್ರಮಗಳು, ಕಸ್ತೂರಿ ರಂಗನ್ ವರದಿಯ ಕುರಿತಂತೆ ಕೈಗೊಳ್ಳಲಾಗಿರುವ ನಿರ್ಣಯಗಳ ಕುರಿತಂತೆ ಸಮಾಲೋಚಿಸಲಾಯಿತು. ಸಭೆಯಲ್ಲಿ ಕೇರಳ ಅರಣ್ಯ ಇಲಾಖೆ ಮುಖ್ಯ ವನ್ಯಜೀವಿ ಪರಿಪಾಲಕ ಪ್ರಮೋದ್.ಜಿ.ಕೃಷ್ಣನ್ ಮತ್ತು ಕರ್ನಾಟಕದ ಅರಣ್ಯ ಇಲಾಖೆ ಉನ್ನತಾಧಿಕಾರಿಗಳಾದ ಮೀನಾಕ್ಷಿ ನೇಗಿ, ಸುಭಾಷ್ ಮಲ್ಕಡೆ, ಸುನೀಲ್ ಪನ್ವಾರ್, ಸೂರ್ಯ ಸೇನ್ ಮತ್ತಿತರರು ಉಪಸ್ಥಿತರಿದ್ದರು.



ವಿಕಾಸಸೌಧದ ಕೃಷಿ ಇಲಾಖೆ ಕಛೇರಿಗೆ ಭೇಟಿ ನೀಡಿದ ಕೇರಳ ಅರಣ್ಯ ಸಚಿವ ಎ.ಕೆ.ಸಶೀಂದ್ರನ್ ಅವರನ್ನು ಸಚಿವ ಈಶ್ವರ್ ಖಂಡ್ರೆ ಸನ್ಮಾನಿಸಿದರು.

ಹೊಸದಾಗಿ ಜಾತಿ ಗಣತಿಗೆ ಸಚಿವೆ ಶೋಭಾ ಕಂರದ್ಲಾಜೆ ಕಿಡಿ

ಅಲ್ಪಸಂಖ್ಯಾತರ ಮೀಸಲು ಹೆಚ್ಚಳಕ್ಕೆ ಪಿತೂರಿ

ಮಂಗಳೂರು: ಕರ್ನಾಟಕದಲ್ಲಿ ಹೊಸದಾಗಿ ಜಾತಿ ಗಣತಿ ನಡೆಸುವ ಮೂಲಕ ಅಲ್ಪಸಂಖ್ಯಾತರ ಮೀಸಲಾತಿ ಹೆಚ್ಚಿಸಲು ಕಾಂಗ್ರೆಸ್ ಸರಕಾರ ಪಿತೂರಿ ನಡೆಸುತ್ತಿದೆ ಎಂದು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಆರೋಪಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಿದ್ದರಾಮಯ್ಯ ಸರಕಾರವು ಹೊಸದಾಗಿ ಜಾತಿ ಗಣತಿ ನಡೆಸುವುದರ ಹಿಂದೆ ಅಲ್ಪಸಂಖ್ಯಾತರ ಜನಸಂಖ್ಯೆ ಹೆಚ್ಚಿದೆ ಎಂದು ತೋರಿಸುವುದು ಮತ್ತು ಆ ಮೂಲಕ ಅವರಿಗೆ ಮೀಸಲಾತಿ ಹೆಚ್ಚಿಸುವ ಉದ್ದೇಶವನ್ನು ಹೊಂದಿದೆ ಎಂದು ಆರೋಪಿಸಿದರು. 90 ದಿನಗಳಲ್ಲಿ ಹೊಸ ಜಾತಿ ಗಣತಿ ಪೂರ್ಣಗೊಳ್ಳುವ ಬಗ್ಗೆ ಗಂಭೀರ ಅನುಮಾನಗ'ಳನ್ನು ವ್ಯಕ್ತಪಡಿಸಿದ ಅವರು, ಹವಾನಿಯಂತ್ರಣ ಕೊಠಡಿಗಳಲ್ಲಿ ಕುಳಿತು ಜಾತಿ ಸಂಖ್ಯೆಯನ್ನು ಬರೆಯಲಾಗುತ್ತದೆ. ಜಯಪ್ರಕಾಶ್ ಹೆಗ್ಡೆ ಆಯೋಗವು ನಿಮ್ಮ ಮನೆಗಳಿಗೆ ಭೇಟಿ ನೀಡಿ ನಿಮ್ಮ ಜಾತಿಯನ್ನು ಪರಿಶೀಲಿಸಿದೆಯೇ?' ಎಂದು ಅವರು ಕೇಳಿದರು. ಈ ಹಿಂದೆ, ಬೆಂಗಳೂರಿನಲ್ಲಿ ಆರ್‌ಸಿಬಿ ವಿಜಯೋತ್ಸವದ ಸಂದರ್ಭದಲ್ಲಿ 11 ಜನರನ್ನು ಬಲಿ ಪಡೆದ ಕಾಲ್ತುಳಿ ತದಿಂದ ಜನರ ಗಮನವನ್ನು ಬೇರೆಡೆ ಸೆಳೆಯುವ ಉದ್ದೇಶದಿಂದ ಹೊಸದಾಗಿ ಜಾತಿ ಗಣತಿ ನಡೆಸುವುದಾಗಿ ಘೋಷಿಸಲಾಗಿದೆ ಎಂದು ಅವರು ಹೇಳಿದರು.

ಜನರನ್ನು ವಿಭಜಿಸಲು ಪ್ರಯತ್ನ

ಸಿದ್ದರಾಮಯ್ಯ ಅಧಿಕಾರಕ್ಕೆ ಬಂದಾಗಲೆಲ್ಲ ಧರ್ಮ ಮತ್ತು ಜಾತಿ ಆಧಾರದ ಮೇಲೆ ಜನರನ್ನು ವಿಭಜಿಸಲು ಪ್ರಯತ್ನಿಸುತ್ತಾರೆ. ಹೊಸದಾಗಿ ಜಾತಿ ಗಣತಿ ನಡೆಸುವುದು ಜನರನ್ನು ಮತ್ತಷ್ಟು ವಿಭಜಿಸುವ ಉದ್ದೇಶವನ್ನು ಹೊಂದಿದೆ ಮತ್ತು ರಾಜ್ಯದ ಜನರು ಅದನ್ನು ಸ್ವೀಕರಿಸುವುದಿಲ್ಲ. ವಿರೋಧದ ನಡುವೆಯೂ ಜಾತಿ ಗಣತಿಯನ್ನು ಜಾರಿಗೆ ತರುವುದಾಗಿ ಹೇಳಿದ್ದರೂ ಮುಖ್ಯಮಂತ್ರಿಗಳ ಹಠಾತ್ ಯೂಟರ್ನ್ ಮಾಡಿದ್ದೇಕೆ ಎಂದು ಪ್ರಶ್ನಿಸಿದರು. 10 ವರ್ಷಗಳ ಅವಧಿಯಲ್ಲಿ ಇದಕ್ಕಾಗಿ ಹೆಚ್ಚು ಹಣವನ್ನು ಖರ್ಚು ಮಾಡಲಾಗಿದೆ. ಎರಡು ಆಯೋಗಗಳನ್ನು ನೇಮಿಸಲಾಗಿದೆ ಎಂದು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಹೇಳಿದರು.

ಕುಟುಂಬಸ್ಥರಿಗೆ ನ್ಯಾಯ ಒದಗಿಸಲು ಸರಕಾರ ಬದ್ಧ

ಮಂಗಳೂರು: ಬಂಟ್ವಾಳ ತಾಲೂಕಿನ ಕೊಳತ್ತಮಜಲಿನಲ್ಲಿ ಮೇ 27 ರಂದು ಹತ್ಯೆಗೀಡಾದ ಅಬ್ದುಲ್ ರಹಿಮಾನ್ ಅವರ ನಿವಾಸಕ್ಕೆ ವಿಧಾನಸಭಾ ಸ್ಪೀಕರ್ ಯು.ಟಿ. ಖಾದರ್ ಅವರು ಬುಧವಾರ ಭೇಟಿ ನೀಡಿದ್ದು, ದುಃಖಿತ ಕುಟುಂಬಕ್ಕೆ ಸಾಂತ್ವನ ಹೇಳಿದರು. ಈ ಸಂದರ್ಭದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಇದು ಕೇವಲ ಕೊಲೆಯಲ್ಲ, ದಕ್ಷಿಣ ಕನ್ನಡದ ಸಾಮರಸ್ಯದ ಸಾಮಾಜಿಕ ವ್ಯವಸ್ಥೆಯ ಮೇಲಾಗಿರುವ ದಾಳಿ ಎಂದು ಹೇಳಿದರು. ಪ್ರಕರಣದ ಕುರಿತು ಮುಖ್ಯಮಂತ್ರಿ, ಗೃಹ ಸಚಿವರು, ಡಿಸಿ, ಎಸ್ಪಿ ಮತ್ತು ನಗರ ಪೊಲೀಸ್ ಆಯುಕ್ತರೊಂದಿಗೆ ಮಾತನಾಡಿದ್ದೇನೆ. ರಹಿಮಾನ್ ಅವರ ಕುಟುಂಬಕ್ಕೆ ನ್ಯಾಯ ಒದಗಿಸಲು ಸರಕಾರ ಬದ್ಧವಾಗಿದೆ ಎಂದು ತಿಳಿಸಿದರು.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು - 560020.

ಸಂಖ್ಯೆ:ಬೆಂಅಪ್ರಾ/ಕಾಪಾಅ(ಪೂರ್ವ)/ಟೆಂಡರ್/205/2025-26 ದಿನಾಂಕ: 12-06-2025

ಟೆಂಡರ್‌ಗಳಿಗಾಗಿ ಆಹ್ವಾನ (ಐಎಫ್‌ಟಿ)

(ದ್ವಿ-ಲಕೋಟೆ ಪದ್ಧತಿ) (ಜಿಕೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಪೂರ್ವ ವಿಭಾಗ (ಬಿಡಿಎ) ಬೆಂಗಳೂರು ರವರು ಈ ಕೆಳಗೆ ವಿವರಿಸಿದ ಕಾಮಗಾರಿಗಾಗಿ ಅರ್ಹ ಟೆಂಡರ್‌ದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ. ಕಾಮಗಾರಿ ಹೆಸರು: **ಬೆಂಗಳೂರು ಪೂರ್ವ ತಾಲ್ಲೂಕಿನ ಕೋನದಾಸಪುರದ ಕೋನದಾಸಪುರ ಕೆರೆಯಲ್ಲಿ ಆರ್‌ಸಿಸಿ ರಿಟೈನಿಂಗ್ ವಾಲ್ ಮತ್ತು ಆರ್‌ಸಿಸಿ ಚರಂಡಿ ನಿರ್ಮಾಣ ಕಾಮಗಾರಿ.** ಕಾಮಗಾರಿ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): **200.00,** ಇ.ಎಂ.ಡಿ ಮೊತ್ತ (ರೂ. ಲಕ್ಷಗಳಲ್ಲಿ): **3.00,** ಟೆಂಡರ್ ಪ್ರೊಸೆಸ್ಸಿಂಗ್ ಫೀ (ರೂ. ಗಳಲ್ಲಿ): **ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿರುವಂತೆ,** ಪೂರ್ಣಗೊಳಿಸುವ ಅವಧಿ: **03 ತಿಂಗಳು (ಮಳೆಗಾಲ ಸೇರಿದಂತೆ).**

ಟೆಂಡರ್ ವೇಳಾಪಟ್ಟಿ: 1) ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಕೆಪಿಪಿ ಪೋರ್ಟಲ್ ವೆಬ್‌ಸೈಟ್: **https://kppp.karnataka.gov.in** ನಲ್ಲಿ ದಿನಾಂಕ: **12-06-2025 ರಿಂದ** ಡೌನ್‌ಲೋಡ್ ಮಾಡಿಕೊಳ್ಳಬಹುದು. **2)** ವಿಚಾರಣೆಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ: **18-06-2025 ರಂದು 16.00 ಗಂಟೆವರೆಗೆ. 3)** ಬಿಡ್ ಪೂರ್ವಭಾವಿ ಸಭೆ ದಿನಾಂಕ: **20-06-2025 ರಂದು 16.00 ಗಂಟೆಗೆ. 4) ವಿಚಾರಣೆಗಳಿಗೆ ಪ್ರತಿಕ್ರಿಯೆ ನೀಡುವ ದಿನಾಂಕ: 23-06-2025. 5)** ಬಿಡ್‌ನ್ನು ಸ್ವೀಕರಿಸುವ ಕೊನೆಯ ದಿನಾಂಕ: **25-06-2025 ರಂದು 16.00 ಗಂಟೆವರೆಗೆ. 6)** ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: **27-06-2025 ರಂದು 16.00 ಗಂಟೆಗೆ. 7)** ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ: **ತಿಳಿಸಲಾಗುವುದು.**

ಹೆಚ್ಚಿನ ವಿವರಗಳಿಗಾಗಿ ದಯವಿಟ್ಟು ವೆಬ್‌ಸೈಟ್: **https://kppp.karnataka.gov.in** ಅನ್ನು ಸಂಪರ್ಕಿಸಬಹುದು.

ಸೂಚನೆ: ಡಾಕ್ಯೂಮೆಂಟ್‌ಗಳನ್ನು ಅಪ್‌ಲೋಡ್ ಮಾಡಲು ವಿಳಂಬವಾದಲ್ಲಿ ಟೆಂಡರ್‌ನ ಪರಿಷ್ಕೃತ/ಮರು-ನಿಗದಿತ ವೇಳಾಪಟ್ಟಿಯನ್ನು ಕೆಪಿಪಿ ಪೋರ್ಟಲ್ ಮೂಲಕ ನೀಡಲಾಗುತ್ತದೆ.

ಸಹಿ/- ಕಾರ್ಯಪಾಲಕ ಅಭಿಯಂತರರು
ಪೂರ್ವ ವಿಭಾಗ, ಬಿಡಿಎ, ಬೆಂಗಳೂರು.

ಮೋದಿ ಸರಕಾರಕ್ಕೆ ಶೂನ್ಯ ಮಾರ್ಕ್ಸ್ ಕೊಡಲು ಸಿದ್ದು ಯಾರು?

ದಾವಣಗೆರೆ: ಪ್ರಧಾನಿ ನರೇಂದ್ರ ಮೋದಿ ಸರಕಾರಕ್ಕೆ ಶೂನ್ಯ ಮಾರ್ಕ್ಸ್ ಕೊಡಲು ಸಿದ್ದರಾಮಯ್ಯ ಯಾರು? ದೇಶದ ಜನತೆ ಮೋದಿ ಸರಕಾರಕ್ಕೆ ನೂರಕ್ಕೆ ನೂರು ಅಂಕ ಕೊಟ್ಟಿದ್ದಾರೆ ಎಂದು ವಿಧಾನ ಪರಿಷತ್ ಸದಸ್ಯ ಸಿ.ಟಿ. ರವಿ ಪ್ರಶ್ನಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, "ಕಾಂಗ್ರೆಸ್ ನಾಯಕರು 'ತಾನು ಕಳ್ಳ ಪರರ ನಂಬ' ಎಂಬ ಗಾದೆಯಂತೆ ನಡೆದುಕೊಳ್ಳುತ್ತಿದ್ದಾರೆ. ಭ್ರಷ್ಟಾಚಾರ, ಸ್ವಜನಪಕ್ಷಪಾತ ಮತ್ತು ಸ್ವಾರ್ಥ ರಾಜಕಾರಣದಲ್ಲಿ ಮೋದಿಗೆ ಜನತೆ ಶೂನ್ಯ ಅಂಕ ಕೊಡುತ್ತಾರೆ. ಆದರೆ, ಜಾಗತಿಕ ಸಾಧನೆಯಲ್ಲಿ ನಿಜಕ್ಕೂ ಅವರು ತ್ರಿವಿಕ್ರಮ ಎಂದು ಬಣ್ಣಿಸಿದರು. "ಭಯೋತ್ಪಾದಕ ನೆಲೆಗಳಿಗೆ ನುಗ್ಗಿ ಶಿಕ್ಷೆ ನೀಡುವ ಮೂಲಕ ಭಾರತ ತನ್ನ ಸಾಮರ್ಥ್ಯ ಪ್ರದರ್ಶಿಸಿ, ಶೇ. 90ರಷ್ಟು ಭಯೋತ್ಪಾದಕ ಚಟುವಟಿಕೆಗೆ ಕೇಂದ್ರ ಸರಕಾರ ಕಡಿವಾಣ ಹಾಕಿದೆ. 21ನೇ ಶತಮಾನದಲ್ಲಿ ಭಾರತ ವಿಶ್ವದ ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ನಾಯಕನಾಗಿ ರೂಪುಗೊಂಡು ವಿಶ್ವಮಿತ್ರನಾಗಬೇಕು ಎನ್ನುವುದು ಮೋದಿ ಅವರ ಸಂಕಲ್ಪವಾಗಿದೆ ಎಂದು ಹೇಳಿದರು. ಹಿಂದಿನ ಸರಕಾರಗಳು ಜಾತಿ ಆಧಾರದ ಮೇಲೆ ಯೋಜನೆಗಳನ್ನು ರೂಪಿಸುತ್ತಿದ್ದವು. ಆದರೆ, ಮೋದಿ ಅಧಿಕಾರಕ್ಕೆ ಬಂದ 11 ವರ್ಷಗಳಲ್ಲಿ ಬಡತನದ ಆಧಾರದ ಮೇಲೆ ಯೋಜನೆ ರೂಪಿಸಿದ್ದಾರೆ. ಜಿ-20 ಶೃಂಗಸಭೆಯ ಅಧ್ಯಕ್ಷತೆ ವಹಿಸುವ ಮೂಲಕ ಭಾರತ ತನ್ನ ಸಾಮರ್ಥ್ಯವನ್ನು ಜಗತ್ತಿಗೆ ತೋರಿಸಿದೆ. ರಾಜತಾಂತ್ರಿಕತೆಗೆ ಆದ್ಯತೆ ನೀಡುವ ಮೂಲಕವೂ ತನ್ನ ಸಾಮರ್ಥ್ಯವನ್ನು ಸಾಬೀತುಪಡಿಸಿದೆ ಎಂದು ಹೇಳಿದರು.

ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ನಿಗಮ ಕಾರ್ಯಾಲಯ, ಖರೀದಿ ಶಾಖೆ, ಚಾವಿಸನಿನಿ, ಮೈಸೂರು-570017,
ದೂರವಾಣಿ: 0821-2544963 ಇ-ಮೇಲ್: gmproc@cescmysore.org ವೆಬ್‌ಸೈಟ್: www.cescmysore.org

ಸಂಖ್ಯೆ: ಪ್ರವ್ಯ(ಖ)/ಉಪ್ರವ್ಯ(ಕಾ)/ಸಪ್ರವ್ಯ(ಕಾ)/ನಿ.ಕ/ಎಫ್-20/2025-26/6376 ದಿನಾಂಕ: 03.06.2025

ಅಲ್ಪಾವಧಿ ಟೆಂಡರ್ ಪ್ರಕಟಣೆ" (ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ)

ಪ್ರಧಾನ ವ್ಯವಸ್ಥಾಪಕರು(ಖರೀದಿ), ನಿಗಮ ಕಛೇರಿ, ಚಾವಿಸನಿನಿ, ಮೈಸೂರು ಇವರು ಚಾವಿಸನಿನಿಯ ಪರವಾಗಿ ಈ ಕೆಳಕಂಡ ಸಿವಿಲ್ ಕಾಮಗಾರಿಗಳಿಗೆ ಅರ್ಹ ಬಿಡ್ಡುದಾರರಿಂದ ಟೆಂಡರನ್ನು ಆಹ್ವಾನಿಸಿರುತ್ತಾರೆ.

ಕ್ರ. ಸಂ.	ವಿಚಾರಣಾ ಸಂಖ್ಯೆ	ಕಾಮಗಾರಿ ವಿವರ	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ) (ಜಿ.ಎಸ್.ಟಿ ಒಳಗೊಂಡಂತೆ)
1	ಸೆಸ್ಕ್/ನಿ.ಕ/ಪ್ರವ್ಯ(ಖ)/ಸಿವಿಲ್/2025-26/ಸಿವಿಲ್-43 ದಿ:03.06.2025.	ಕೊಳ್ಳೇಗಾಲ ವಿಭಾಗ ಕೊಳ್ಳೇಗಾಲ ಉಪ-ವಿಭಾಗದ ಚಿಲಕವಾಡಿ ಶಾಖಾ ಕಛೇರಿ ಕಟ್ಟಡ ನಿರ್ಮಾಣ ಕಾಮಗಾರಿ.	100.00
2	ಸೆಸ್ಕ್/ನಿ.ಕ/ಪ್ರವ್ಯ(ಖ)/ಸಿವಿಲ್/2025-26/ಸಿವಿಲ್-44 ದಿ:03.06.2025.	ಕೊಳ್ಳೇಗಾಲ ವಿಭಾಗ ಕೊಳ್ಳೇಗಾಲ ಉಪ-ವಿಭಾಗದ ಮಧುವನಹಳ್ಳಿ ಶಾಖಾ ಕಛೇರಿ ಕಟ್ಟಡ ನಿರ್ಮಾಣ ಕಾಮಗಾರಿ.	120.00
3	ಸೆಸ್ಕ್/ನಿ.ಕ/ಪ್ರವ್ಯ(ಖ)/ ಸಿವಿಲ್/2025-26/ಸಿವಿಲ್-45 ದಿ:03.06.2025.	ಕೊಳ್ಳೇಗಾಲ ವಿಭಾಗ ಹನೂರು ಉಪ-ವಿಭಾಗ ಕಛೇರಿ ಮತ್ತು ಶಾಖಾ ಕಛೇರಿ ಕಟ್ಟಡ ನಿರ್ಮಾಣ ಕಾಮಗಾರಿ.	200.00
4	ಸೆಸ್ಕ್/ನಿ.ಕ/ಪ್ರವ್ಯ(ಖ)/ಸಿವಿಲ್/2025-26/ಸಿವಿಲ್-46 ದಿ:03.06.2025.	ಕೊಳ್ಳೇಗಾಲ ವಿಭಾಗ ಯಳಂದೂರು ಉಪ-ವಿಭಾಗ ಕಛೇರಿ ಮತ್ತು ಶಾಖಾ ಕಛೇರಿ ಕಟ್ಟಡ ನಿರ್ಮಾಣ ಕಾಮಗಾರಿ.	200.00
5	ಸೆಸ್ಕ್/ನಿ.ಕ/ಪ್ರವ್ಯ(ಖ)/ಸಿವಿಲ್/2025-26/ಸಿವಿಲ್-47 ದಿ:03.06.2025.	ಕೊಳ್ಳೇಗಾಲ ವಿಭಾಗ ಯಳಂದೂರು ಉಪ-ವಿಭಾಗದ ಮಾಂಬಳ್ಳಿ ಶಾಖಾ ಕಛೇರಿ(ಕಿನಕನಹಳ್ಳಿ) ಕಟ್ಟಡ ನಿರ್ಮಾಣ ಕಾಮಗಾರಿ.	100.00
6	ಸೆಸ್ಕ್/ನಿ.ಕ/ಪ್ರವ್ಯ(ಖ)/ಸಿವಿಲ್/2025-26/ಸಿವಿಲ್-48 ದಿ:03.06.2025.	ಹೊಳೇನರಸಿಪುರ ವಿಭಾಗ, ಹಂಗರಹಳ್ಳಿ ಉಪ-ವಿಭಾಗದ ಹಿರೆಬೇಳಗೋಳಿ ಶಾಖಾ ಕಛೇರಿ ಆವರಣದಲ್ಲಿ ಎಲ್.ಎಂ ಕ್ಯಾಂಪ್‌ಗೆ ಕಾಂಪೌಂಡ್ ಗೋಡೆ ನಿರ್ಮಾಣ ಕಾಮಗಾರಿ.	45.00
7	ಸೆಸ್ಕ್/ನಿ.ಕ/ಪ್ರವ್ಯ(ಖ)/ಸಿವಿಲ್/2025-26/ಸಿವಿಲ್-49 ದಿ:03.06.2025.	ಹೊಳೇನರಸಿಪುರ ವಿಭಾಗದ ಹೊಳೇನರಸಿಪುರ ಉಪ-ವಿಭಾಗದ ಮುಡಲಹಿಪ್ಪೆ ಶಾಖಾ ಕಛೇರಿ ಕಟ್ಟಡದ ನಿರ್ಮಾಣ ಕಾಮಗಾರಿ.	116.00
8	ಸೆಸ್ಕ್/ನಿ.ಕ/ಪ್ರವ್ಯ(ಖ)/ಸಿವಿಲ್/2025-26/ಸಿವಿಲ್-50 ದಿ:03.06.2025.	ಮಡಿಕೇರಿ ವಿಭಾಗ ಸೋಮವಾರಪೇಟೆ ಉಪ-ವಿಭಾಗದ ಶಾಂತಹಳ್ಳಿ ಶಾಖಾ ಕಛೇರಿ ಕಟ್ಟಡ ನಿರ್ಮಾಣ ಕಾಮಗಾರಿ.	90.00
9	ಸೆಸ್ಕ್/ನಿ.ಕ/ಪ್ರವ್ಯ(ಖ)/ಸಿವಿಲ್/2025-26/ಸಿವಿಲ್-51 ದಿ:03.06.2025.	ಎನ್.ಆರ್ ಮೊಹಲ್ಲಾ ವಿಭಾಗದ ಎಂ.ಪಿ.ಎಲ್ ಕಛೇರಿ ಆವರಣದಲ್ಲಿ ಹೊಸದಾಗಿ ಪುರುಷ ಮತ್ತು ಮಹಿಳೆಯರ ಶೌಚಾಲಯ ಗೃಹ ನಿರ್ಮಾಣ ಕಾಮಗಾರಿ.	16.00
10	ಸೆಸ್ಕ್/ನಿ.ಕ/ಪ್ರವ್ಯ(ಖ)/ಸಿವಿಲ್/2025-26/ಸಿವಿಲ್-52 ದಿ:03.06.2025.	ಚಾಮರಾಜನಗರ ವಿಭಾಗ ಕಛೇರಿ ಆವರಣದಲ್ಲಿ ಅತಿಥಿ ಗೃಹ ಮತ್ತು ಡಾರ್ಮಿಟರಿ ಕಟ್ಟಡ ನಿರ್ಮಾಣ ಕಾಮಗಾರಿ.	150.00

ಹೆಚ್ಚಿನ ಮಾಹಿತಿಗಾಗಿ ಇ-ಪ್ರಕ್ಯೂರ್‌ಮೆಂಟ್ ವೆಬ್‌ಸೈಟ್ **http//kppp.karnataka.gov.in** ಗೆ ಲಾಗಿನ್ ಆಗಿ **ದಿನಾಂಕ:26.06.2025ರ** ನಂತರ ಡೌನ್‌ಲೋಡ್ ಮಾಡಿಕೊಳ್ಳಬಹುದು. ಹೆಚ್ಚಿನ ಮಾಹಿತಿಗಾಗಿ **ಹೆಲ್ಪ್ ಲೈನ್ +91-8046010000, +91-8068948777**ಗೆ ಅಥವಾ ಇ-ಮೇಲ್ ವಿಳಾಸ **support@eprochelpdesk.com.** ಸದರಿ ಕಾಮಗಾರಿಗಳಿಗೆ ಟೆಂಡರ್ ಸಲ್ಲಿಸಲು ಕಡೆಯ **ದಿನಾಂಕ:10.07.2025.** ಉಳಿದಂತೆ ಹೆಚ್ಚಿನ ವಿವರಗಳನ್ನು ಈ ಕಛೇರಿಯಿಂದ ಪಡೆಯಬಹುದು. **ಸೂಚನೆ:** Randamization for the above tenders will be notified at the time of uploading of tenders in E-Procurement portal.

ವಿದ್ಯುತ್ ಸಂಬಂಧಿಸಿದ ದೂರುಗಳಿಗೆ ಕರೆ ಮಾಡಿ : 1912

ಸಹಿ/-
ಪ್ರಧಾನ ವ್ಯವಸ್ಥಾಪಕರು(ಖರೀದಿ)
ನಿಗಮ ಕಛೇರಿ, ಚಾವಿಸನಿನಿ, ಮೈಸೂರು

DIPR/MYS/KAVITA/413/2025-26

ಸಿದ್ದರಾಮಯ್ಯ ಸ್ಥಾನಕ್ಕೆ ಗ್ಯಾರಂಟಿ ಇಲ್ಲ: ಟೀಕೆ

ಮೈಸೂರು: ಮುಖ್ಯಮಂತ್ರಿ ಸಿದ್ದರಾಮಯ್ಯನವರದ್ದೇ ಗ್ಯಾರಂಟಿ ಇಲ್ಲ. ಅವರು ಔಟ್ ಗೋಯಿಂಗ್ ಸಿಎಂ. ಇವರ ಸರಕಾರ ಎರಡು ವರ್ಷದಲ್ಲಿ ಏನೂ ಸಾಧನೆ ಮಾಡಿಲ್ಲ ಎಂದು ವಿಪಕ್ಷ ನಾಯಕ ಆರ್. ಅಶೋಕ್ ಟೀಕಿಸಿದರು. ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಡಿ.ಕೆ.ಶಿವಕುಮಾರ್ ಪ್ರತ್ಯೇಕ ಕೋಟೆ ಕಟ್ಟಿಕೊಂಡಿದ್ದಾರೆ. ಎಂ.ಬಿ. ಪಾಟೀಲ್, ಸತೀಶ್ ಜಾರಕಿಹೊಳಿ ಪ್ರತ್ಯೇಕವಾಗಿದ್ದಾರೆ. ಕಾಂಗ್ರೆಸ್ ನಲ್ಲಿ ಎಲ್ಲರೂ ಸಿಎಂ ಆಗುತ್ತೇನೆಂದು ಹೇಳುತ್ತಿದ್ದಾರೆ. ಪರಮೇಶ್ವರ್, ಡಿ.ಕೆ. ಶಿವಕುಮಾರ್ ಸಿಎಂ ಆಗಲು ಕಾಯುತ್ತಿದ್ದಾರೆ. ಗ್ಯಾರಂಟಿಗಳಿಂದಾಗಿ ಯಾವುದೇ ಕೆಲಸ ನಡೆಯುತ್ತಿಲ್ಲ. ಸಿಎಂ ಕುರ್ಚಿಯನ್ನು ನಾಲ್ಕು ಜನರು ಎಳೆಯುತ್ತಿದ್ದಾರೆ ಎಂದು ಲೇವಡಿ ಮಾಡಿದರು.ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿನ ಕಾಲ್ತುಳಿತ ದುರಂತಕ್ಕೆ ರಾಜ್ಯ ಸರಕಾರವೇ ಕಾರಣವಾಗಿದೆ. ಆದರೆ ಪೊಲೀಸರ ಮೇಲೆ ತಪ್ಪು ಹೊರಿಸಲಾಗುತ್ತಿದೆ. ರಾಜ್ಯಪಾಲರನ್ನು ಮುಖ್ಯಮಂತ್ರಿಗಳೇ ಆಹ್ವಾನಿಸಿದ್ದಾರೆ ಎಂದು ಒಪ್ಪಿಕೊಂಡಿದ್ದಾರೆ. ಮುಖ್ಯ ಕಾರ್ಯದರ್ಶಿಯೇ ಕರೆ ಮಾಡಿ ರಾಜ್ಯಪಾಲರನ್ನು ಆಹ್ವಾನಿಸಿದ್ದಾರೆ. ಆದರೆ ಮೊದಲು ಆ ವಿಷಯವನ್ನು ಹೇಳಿರಲಿಲ್ಲ. ಇವರ ತಪ್ಪು ಮುಚ್ಚಿಹಾಕಲು ಗೋವಿಂದರಾಜು ಅವರ ವಿರುದ್ಧ ಕ್ರಮ ವಹಿಸಲಾಗಿದೆ ಎಂದರು.

ಸಮಾಚಾರ ಸಣ್ಣದಲ್ಲ

ಹೃದಯಾಘಾತ: ಕಲಾವಿದ ನಿಧನ

ಶಿವಮೊಗ್ಗ: ಕಾಂತಾರ ಅಧ್ಯಾಯ 1 ಚಲನಚಿತ್ರದ ಕಲಾವಿದನೋರ್ವ ಹೃದಯಾಘಾತದಿಂದ ಆಗುಂಬೆಯಲ್ಲಿ ಮೃತಪಟ್ಟಿದ್ದಾರೆ. ತೀರ್ಥಹಳ್ಳಿ ತಾಲೂಕಿನ ಸುತ್ತಮುತ್ತ ಕಳೆದ 15 ದಿನಗಳಿಂದ ಕಾಂತಾರ ಅಧ್ಯಾಯ 1ರ ಚಿತ್ರದ ಚಿತ್ರೀಕರಣ ನಡೆಯುತ್ತಿದೆ. ಈ ಹಿನ್ನಲೆ ಕೇರಳದ ತ್ರಿಶೂರ್ ಮೂಲದ ಹಾಸ್ಯ ಕಲಾವಿದ ನಿಜು ಕಲಾಭವನ್(55) ಬುಧವಾರ ಶೂಟಿಂಗ್‌ಗೆಂದು ಆಗಮಿಸಿದ್ದರು. ನಿಜು ಸೇರಿದಂತೆ ಇತರರಿಗೆ ಆಗುಂಬೆಯ ಮಿಥಿಲ ಹೋಂ ಸ್ಟೇನಲ್ಲಿ ಉಳಿದು ಕೊಳ್ಳಲು ಚಿತ್ರತಂಡ ವ್ಯವಸ್ಥೆ ಮಾಡಿಕೊಟ್ಟಿತ್ತು. ಬುಧವಾರ ರಾತ್ರಿ ಹೋಂಸ್ಟೇನಲ್ಲಿ ನಿಜು ಅವರಿಗೆ ಎದೆ ನೋವು ಕಾಣಿಸಿಕೊಂಡಿತ್ತು. ಆಗ ತಕ್ಷಣವೇ ಅವರನ್ನು ಆಂಬ್ಯುಲೆನ್ಸ್‌ನಲ್ಲಿ ತೀರ್ಥಹಳ್ಳಿಯ ಜೆ.ಸಿ. ಆಸ್ಪತ್ರೆಗೆ ಕರೆದುಕೊಂಡು ಹೋಗುವಾಗ ದಾರಿ ಮಧ್ಯೆ ನಿಜು ಕೊನೆಯುಸಿರೆಳೆದಿದ್ದಾರೆ ಎಂದು ವರದಿಯಾಗಿದೆ. ಆಗುಂಬೆ ಪೊಲೀಸ್ ಠಾಣೆಯ ಪಿಎಸ್‌ಐ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಈ ಕುರಿತು ಮೃತ ನಿಜು ಅವರ ಕುಟುಂಬಕ್ಕೆ ಮಾಹಿತಿ ನೀಡಿಲಾಗಿದೆ.

ಯುವಕ ಆತ್ಮಹತ್ಯೆ

ಕಾರವಾರ: ಪ್ರೇಮ ಪ್ರಕರಣವೊಂದಕ್ಕೆ ಸಂಬಂಧಿಸಿದಂತೆ ಹುಡುಗಿ ಕಡೆಯವರು ಬೆದರಿಕೆ ಮತ್ತು ಮಾನಸಿಕ ಹಿಂಸೆ ನೀಡಿದ್ದಾರೆಂಬ ಆರೋಪ ಹಿನ್ನೆಲೆಯಲ್ಲಿ, ಯುವಕನೊಬ್ಬ ಆತ್ಮಹತ್ಯೆ ಮಾಡಿಕೊಂಡ ಘಟನೆ ಜಿಲ್ಲೆಯ ಸಿದ್ದಾಪುರ ತಾಲೂಕಿನಲ್ಲಿ ನಡೆದಿದೆ. ಶಿವಮೊಗ್ಗ ಜಿಲ್ಲೆ ಸೊರಬದ ಸಂತೋಷ ಗಣಪತಿ ನಾಯ್ಕ (26) ಆತ್ಮಹತ್ಯೆ ಮಾಡಿಕೊಂಡ ಯುವಕ. ಖಾಸಗಿ ಬ್ಯಾಂಕ್ ಉದ್ಯೋಗಿಯಾಗಿದ್ದ.

ನಾಡ ಸಮಸ್ಯೆಗೆ ಸಿಎಂ ಪರಿಹಾರ

- **ಸ್ಥಳ : ಬೆಂಗಳೂರು**

ಸಮಸ್ಯೆಯೇನು..?

- ಬನಶಂಕರಿ ದೇವಸ್ಥಾನದ ಹೊರಭಾಗದಲ್ಲಿ ಮೂರು ಮುಖ್ಯ ಗೇಟ್‌ಗಳ ಬಳಿ ಕಸದ ರಾಶಿಗಳು, ಹಳಸಿದ ಆಹಾರ, ಪ್ಲಾಸ್ಟಿಕ್ ಮತ್ತು ಹೂವುಗಳ ಕಸ ಶೇಖರಣೆಯಾಗಿರುವುದು.
- **ಪರಿಹಾರ:** ಬನಶಂಕರಿ ದೇವಸ್ಥಾನದ ಹೊರಭಾಗದಲ್ಲಿ ಮೂರು ಮುಖ್ಯ ಗೇಟ್‌ಗಳ ಬಳಿ ಕಸದ ರಾಶಿಗಳು, ಹಳಸಿದ ಆಹಾರ, ಪ್ಲಾಸ್ಟಿಕ್ ಮತ್ತು ಹೂವುಗಳ ಕಸ ಶೇಖರಣೆಯಾಗಿದ್ದು, ಬಿಬಿಎಂಪಿ ಸಿಬ್ಬಂದಿ ಕಸ ವಿಲೇವಾರಿ ಮಾಡಲಾಗಿದ್ದು, ಸಾರ್ವಜನಿಕರಿಗೆ ಅನುಕೂಲ ಮಾಡಕೊಡಲಾಗಿದೆ.

ವಿಶ್ವವಾಣಿ ಕ್ಲಬ್ ಹೌಸ್ 06.06.2025
ಶುಕ್ರವಾರದ ಅತಿಥಿ

ಶ್ರೀ ಪಿ.ಕೆ.ನಂದೀಶ
ವಿಷಯ
ಕುವೆಂಪು ರಾಮಾಯಣ ದರ್ಶನಂ - 48
vishwavani.news

ಟ್ವೀಟೂ-ಖಾರಾ

ಕರ್ನಾಟಕ ಕಾಂಗ್ರೆಸ್

ಜಾತಿಗಣತಿ ವರದಿಯನ್ನು ವಿರೋಧಿಸಿದ್ದ ಬಿಜೆಪಿಯವರು, ಗೊಂದಲ ನಿವಾರಿಸಲು ಮರು ಸಮೀಕ್ಷೆ ನಡೆಸುವ ತೀರ್ಮಾನವನ್ನು ವಿರೋಧಿಸುತ್ತಿರುವುದೇಕೆ?. ಜಾತಿ ಗಣತಿ ವರದಿಯನ್ನು ಬಿಜೆಪಿಯವರು ತಮ್ಮ ಅವಧಿಯಲ್ಲಿ ಏಕೆ ಸ್ವೀಕರಿಸಲಿಲ್ಲ?. ನಾವು ಈಗಾಗಲೇ ಸ್ವೀಕರಿಸಿರುವ ವರದಿಯನ್ನು ಬಳಸಿಕೊಂಡು, ಬಿಟ್ಟುಹೋಗಿರುವ ಅಂಕಿಅಂಶಗಳನ್ನು ಸೇರಿಸಲು ಅವಕಾಶ ನೀಡುತ್ತೇವೆ.

ಸಾಗರ್ ಹೊಳ್ಳ

160ಕೋಟಿ ಖರ್ಚಿನ ಜಾತಿ ಗಣತಿ ಮೊದಲು ಸರಿಯಾದ ಪೂರ್ವಾಲೋಚನೆ ಮಾಡಬೇಕಿತ್ತು. ಹಾಗೆಯೇ ಆರ್‌ಸಿಬಿ ಆಟಗಾರರ ಸನ್ಮಾನ ಕಾರ್ಯಕ್ರಮ ಸಹ ಸರಿಯಾದ ಪೂರ್ವಾಲೋಚನೆ ಮಾಡಿ ಮಾಡಬೇಕಿತ್ತು.ಈ ಎರಡೂ ವೈಫಲ್ಯಗಳು ಸರಕಾರದ ಆಡಳಿತಕ್ಕೆ ಕೈಗನ್ನಡಿ ಹಿಡಿದಿವೆ.ಒಂದು ಜನರ ಹಣ ಪೋಲು ಮಾಡಿದರೆ ಮತ್ತೊಂದು ತಪ್ಪುಯಾರದೇ ಇರಲಿ 11 ಯುವ ಜನರ ಬಲಿ ಪಡೆದಿದೆ.

ಬೆಣ್ಣೆಹಳ್ಳ, ತುಪ್ಪರಿಹಳ್ಳದಲ್ಲಿ ಜಲಪ್ರವಾಹ | ಹಲವೆಡೆ ಸೇತುವೆಗಳು ಮುಳುಗಡೆ | ಉಡುಪಿ, ಧಾರವಾಡ, ಕೊಡಗಿನಲ್ಲಿ ಇಂದು ರಜೆ

ರಾಜ್ಯದಲ್ಲಿ ಮತ್ತೆ ಅಬ್ಬರಿಸಿದ ಮುಂಗಾರು ಮಳೆ

ಬೆಂಗಳೂರು: ಬಂಗಾಳಕೊಲ್ಲಿಯಲ್ಲಿ ವಾಯು ಭಾರ ಕುಸಿತದಿಂದ ರಾಜ್ಯದಲ್ಲಿ ಮುಂಗಾರು ಮಳೆ ಅಬ್ಬರಿಸುತ್ತಿದೆ. ವರುಣಾರ್ಭಟದಿಂದ ಧಾರವಾಡ, ಬಾಗಲಕೋಟೆ, ಗದಗ ಜಿಲ್ಲೆಯ ಹಳ್ಳ-ಕೊಳ್ಳಗಳು ಅಪಾಯದ ಮಟ್ಟ ಮೀರಿ ಹರಿಯುತ್ತಿವೆ. ಬೆಣ್ಣೆಹಳ್ಳ, ತುಪ್ಪರಿಹಳ್ಳದಲ್ಲಿ ಪ್ರವಾಹ ಪರಿಸ್ಥಿತಿ ಉಂಟಾಗಿದೆ. ಧಾರವಾಡ,ಉಡುಪಿ, ಕೊಡಗು ಜಿಲ್ಲೆಯಲ್ಲಿ ಮಳೆ ಮುಂದುವರಿದಿದ್ದು, ಇಂದು ಈ ಜಿಲ್ಲೆಗಳಲ್ಲಿ ಶಾಲಾ-ಕಾಲೇಜಿಗೆ ರಜೆ ಘೋಷಿಸಲಾಗಿದೆ.

ಮನೆ ಜಲಾವೃತ, ಕುಟುಂಬ ಪರದಾಟ: ಧಾರವಾಡ ಜಿಲ್ಲೆಯಲ್ಲಿ ಸುರಿದ ಭಾರೀ ಮಳೆ ಯಿಂದಾಗಿ ನವಲಗುಂದ ತಾಲೂಕಿನ ಯಮನೂರು ಬಳಿ ಬೆಣ್ಣೆಹಳ್ಳ ಅಪಾಯದ ಮಟ್ಟ ಮೀರಿ ಹರಿಯುತ್ತಿರುವುದರಿಂದ ತೋಟದಲ್ಲಿರುವ ಮನೆಯೊಂದ ಜಲಾವೃತಗೊಂಡಿದೆ. ಹೊರಗಡೆ ಬರಲಾಗದೆ ಕುಟುಂಬಸ್ಥರು ಪರದಾಟ ನಡೆಸಿದರು. ಬೆಣ್ಣೆಹಳ್ಳದ ನೀರಿನಿಂದ ನೂರಾರು ಎಕರೆ ಬೆಳೆ ನಾಶಗೊಂಡಿದ್ದು, ಸಮೀಕ್ಷೆ ನಡೆಸಿ ಬೆಳೆ ಪರಿಹಾರ ನೀಡಲು ರೈತರು ಆಗ್ರಹ ಮಾಡಿದ್ದಾರೆ. ರೋಣದಿಂದ ನರಗುಂದ ಸಂಪರ್ಕಿಸುವ ರಸ್ತೆಯ ಯಾವಗಲ್ ಸಮೀಪದ ಹಳ್ಳ ತುಂಬಿ ಹರಿಯುತ್ತಿದ್ದು ಅಕ್ಕಪಕ್ಕದ ಜಮೀನುಗಳಿಗೆ ನೀರು ನುಗ್ಗಿದೆ. ಜತೆಗೆ ರಸ್ತೆ ಸಂಪರ್ಕ ಸಂಪೂರ್ಣ ಬಂದ್ ಆಗಿದ್ದು ನರಗುಂದ ಪಟ್ಟಣಕ್ಕೆ ತೆರಳುವ ಮತ್ತು ನರಗುಂದದಿಂದ ರೋಣ ಪಟ್ಟಣಕ್ಕೆ ಬರುವ ವಾಹನಗಳು ನವಲಗುಂದ ಮಾರ್ಗದ ಮೂಲಕ ಸಂಚರಿಸಬೇಕಾದ ಅನಿವಾರ್ಯತೆ ಉಂಟಾಗಿದೆ.

ಹುಬ್ಬಳ್ಳಿ ಪಾಲಿಕೆ ವಿರುದ್ಧ ಆಕ್ರೋಶ : ಮಳೆಯಿಂದ ಹುಬ್ಬಳ್ಳಿಯ ಹಲವು ಬಡಾವಣೆಗಳಿಗೆ ನೀರು ನುಗ್ಗಿದ್ದು, ಆರ್.ಎನ್. ಶೆಟ್ಟಿ ರಸ್ತೆ ಸಮೀಪದ ಬಡಾವಣೆಗಳು ಜಲಾವೃತಗೊಂಡಿವೆ. ಎನ್.ಆರ್.ಶೆಟ್ಟಿ ರಸ್ತೆ ಸಮೀಪದ ಬಡಾವಣೆಗಳಿಗೆ ನೀರು ನುಗ್ಗಿದ್ದು, ಮನೆಯಿಂದ ನೀರು ಹೊರಹಾಕಲು ಸ್ಥಳೀಯರು ಪರದಾಡಿದರು. ರಾಜಕಾಲುವೆ ಒತ್ತುವರಿಯಿಂದ ಬಡಾವಣೆಗಳಿಗೆ ನೀರು ನುಗ್ಗಿದೆ. ಪಾಲಿಕೆ ಚರಂಡಿಗಳನ್ನು ಸಮರ್ಪಕವಾಗಿ ನಿರ್ವಹಣೆ ಮಾಡುತ್ತಿಲ್ಲ. ಆದ್ದರಿಂದ ಮಳೆ ಬಂದಾಗಲೆಲ್ಲ ಮನೆಗಳಿಗೆ ನೀರು ನುಗ್ಗುತ್ತಿದೆ ಎಂದು ಎನ್.ಆರ್.ಶೆಟ್ಟಿ ರಸ್ತೆ ತಡೆದು ಸ್ಥಳೀಯರು ಪ್ರತಿಭಟನೆ ನಡೆಸಿದರು. ಪಾಲಿಕೆ ವಿರುದ್ಧ ಘೋಷಣೆ ಕೂಗಿ, ಶಾಶ್ವತ ಪರಿಹಾರ ಕಲ್ಪಿಸಲು ಆಗ್ರಹಿಸಿದರು.

ಕಾರವಾರದಲ್ಲಿ ಭಾರೀ ಮಳೆ, ರೆಡ್ ಅಲರ್ಟ್ : ಕಾರವಾರದಲ್ಲಿ ಭಾರೀ ಮಳೆಯಾಗಿದ್ದು, ಹಲವೆಡೆ ರಸ್ತೆಗಳು ಜಲಾವೃತವಾಗಿವೆ, ಹಲವು ಮನೆಗಳಿಗೆ ನೀರು ನುಗ್ಗಿದ್ದು, ಜನಜೀವನ ಅಸ್ತವ್ಯಸ್ಥಗೊಂಡಿದೆ. ಇಲ್ಲಿನ ರಾಘವೇಂದ್ರ ಸ್ವಾಮಿ ಮಠ, ಕೋಣೆನಾಲ ಸೇರಿದಂತೆ ಹಲವು ಭಾಗದಲ್ಲಿ ಮನೆಗಳಿಗೆ ನೀರು ನುಗ್ಗಿ ಅವಾಂತರ ಸೃಷ್ಟಿಸಿದೆ. ನಗರಸಭೆ ನಿರ್ಲಕ್ಷದಿಂದ ತ್ಯಾಜ್ಯ ವಿಲೇವಾರಿ ಮಾಡದೇ ಕಸ ಚರಂಡಿ, ನಾಲೆಗಳಲ್ಲಿ ಕಟ್ಟಿಕೊಂಡಿದೆ. ಇದರಿಂದ ನೀರು ತುಂಬಿಕೊಂಡು ಮನೆಗಳಿಗೆ ನುಗ್ಗಿದೆ ಎಂದು ಸಾರ್ವಜನಿಕರು ಆಕ್ರೋಶ ಹೊರಹಾಕಿದ್ದಾರೆ. ಭಾರೀ ಮಳೆಯ ಕಾರಣ ನಗರದ ಹಲವೆಡೆ ವಿದ್ಯುತ್ ಕಂಬಗಳಿಗೆ ಹಾನಿಯಾಗಿದ್ದು, ವಿದ್ಯುತ್ ಸಂಪರ್ಕ ಕಡಿತಗೊಂಡಿದೆ.

ಗುಡ್ಡ ಕುಸಿಯುವ ಭೀತಿ: ಕಾಫಿನಾಡು ಚಿಕ್ಕಮಗಳೂರಿನಲ್ಲೂ ಮಳೆಯ ಆರ್ಭಟ ಜೋರಾಗಿದ್ದು, ಶುಕ್ರವಾರವು ರೆಡ್ ಅಲರ್ಟ್ ಮುಂದುವರಿದಿದೆ. ಸಾರ್ವಜನಿಕರಿಗೆ ಸಹ ಹಳ್ಳ, ನದಿ, ತಗ್ಗು ಪ್ರದೇಶಗಳ ಬಳಿ ಹೋಗದಂತೆ ಹಾಗೂ ಜಾನುವಾರು, ಬಟ್ಟೆ ತೊಳೆಯಲು ಹಳ್ಳ-ಕೆರೆಕಟ್ಟೆ ಬಳಿ ಹೋಗದಂತೆ ಸೂಚನೆ ನೀಡಿದೆ. ಧರೆ, ಗುಡ್ಡ ಕುಸಿಯುವ ಸಾಧ್ಯತೆಯಿದ್ದು ಜನ ಎಚ್ಚರಿಕೆಯಿಂದಿರುವಂತೆ ತಿಳಿಸಿದೆ

ರೋಣ ಸಂಪರ್ಕಿಸುವ ರಸ್ತೆಗಳು ಬಂದ್ : ಗದಗ ಜಿಲ್ಲೆಯ ರೋಣ ತಾಲೂಕಿನಲ್ಲಿ ಬುಧವಾರ ರಾತ್ರಿ ಭಾರೀ ಮಳೆ ಸುರಿದಿದೆ. ತಾಲೂಕಿನ ಹಲವು ಕಡೆ ಜನಜೀವನ ಅಸ್ತವ್ಯಸ್ತಗೊಂಡಿದ್ದು ತುಂಬಿ ಹರಿಯುತ್ತಿರುವ ಹಳ್ಳಗಳಿಂದಾಗಿ ರೋಣ ಸಂಪರ್ಕಿ ಸುವ ಕೆಲವು ರಸ್ತೆಗಳು ಬಂದ್ ಆಗಿವೆ. ತಾಲೂಕಿನ ಬಹುತೇಕ ಗ್ರಾಮಗಳ ಕೃಷಿ ಭೂಮಿ ಜಲಾವೃತ ವಾಗಿದ್ದು, ಬೆಳೆ ಹಾನಿಯಾಗಿದೆ. ತಾಲೂಕಿನ ರೈತರು ಮುಂಗಾರಿನ ಬೆಳೆಗಳಾದ ಹೆಸರು, ಮೆಕ್ಕೆಜೋಳ, ಈರುಳ್ಳಿ, ಕಬ್ಬು ಬೆಳೆಗೆ ಅಪಾರ ಹಾನಿ ಸಂಭವಿಸಿದೆ. ಹಳ್ಳದ ಪಕ್ಕದ ಜಮೀನುಗಳಲ್ಲಿ ಅಳವಡಿಸಿರುವ ರೈತರ ಕೊಳವೆಬಾವಿ ಮತ್ತು ಮೋಟಾರ್ ಗಳು ಸಹ ನೀರಿನಲ್ಲಿ ಕೊಚ್ಚಿ ಹೋಗಿದ್ದು, ರೈತರನ್ನು ಕಂಗಾಲಾಗಿಸಿದೆ.

ಕಲಬುರಗಿಯಲ್ಲಿ ಜನ ಜೀವನ ಅಸ್ತವ್ಯಸ್ತ: ಕಲಬುರಗಿ ಜಿಲ್ಲೆಯಲ್ಲೂ ಸುರಿದ ಬಾರಿ ಮಳೆಯಿಂದಾಗಿ ಜನಜೀವನ ಅಸ್ತವ್ಯಸ್ತಗೊಂಡು ಹೈರಾಣಗಿದ್ದಾರೆ. ಕಳೆದ 2 ದಿನಗಳಿಂದ ಕಲಬುರಗಿ ಜಿಲ್ಲೆಯಲ್ಲಿ ಮಳೆ ಆರ್ಭಟಿಸುತ್ತಿದ್ದು, ಮನೆಯಿಂದ ಹೊರಬರಲು ಜನ ಹಿಂದೇಟು ಹಾಕುತ್ತಿದ್ದಾರೆ. ಶಾಲಾ ಕಾಲೇಜಿಗೆ ತೆರಳಲು ವಿದ್ಯಾರ್ಥಿಗಳು ಪರದಾಡಿದರು. ಜೇವರ್ಗಿ ತಾಲೂಕಿನ ಗಂವ್ಹಾರ ಗ್ರಾಮದ ಹಳ್ಳದಲ್ಲಿ ಹೂಳು ತುಂಬಿಕೊಂಡಿರುವುದರಿಂದ ರಸ್ತೆ ಮೇಲೆ ಹಳ್ಳದ ನೀರು ಹರಿದು ಸಂಚಾರ ಅಸ್ತವ್ಯಸ್ತಗೊಂಡಿತು.

ಧಾರವಾಡ ಜಿಲ್ಲೆಯಲ್ಲಿ ಸುರಿದ ಭಾರೀ ಮಳೆಯಿಂದಾಗಿ, ಬೆಣ್ಣೆಹಳ್ಳ ತುಂಬಿ ಹರಿಯುತ್ತಿದೆ. ಇದೀಗ ಕುಟುಂಬವೊಂದು ಬೆಣ್ಣೆಹಳ್ಳದಲ್ಲಿ ಸಿಲುಕಿಕೊಂಡಿದೆ.

ಬೆಣ್ಣೆಹಳ್ಳದ ಪ್ರವಾಹದಿಂದ ಗುಳೇದಗುಡ್ಡಕ್ಕೆ ಸಂಪರ್ಕಿಸುವ ಸೇತುವೆ ಮುಳುಗಡೆ.

160 ವರ್ಷದ ಐತಿಹಾಸಿಕ ಕಟ್ಟಡ ಕುಸಿತ

ಧಾರಾಕಾರ ಮಳೆಗೆ ರಾಯಚೂರು ಜಿಲ್ಲೆಯ ಲಿಂಗಸುಗೂರು ಪಟ್ಟಣದಲ್ಲಿರುವ 160 ವರ್ಷದ ಐತಿಹಾಸಿಕ ಕಟ್ಟಡ ಭಾಗಶಃ ಕುಸಿದಿದೆ. 101 ಬಾಗಿಲುಗಳುಳ್ಳ ಬ್ರಿಟಿಷರ ಆಡಳಿತಾವಧಿಯಲ್ಲಿ ನಿರ್ಮಾಣವಾಗಿದ್ದ ಅಪರೂಪದ ಬಂಗಲೆ ಮಳೆಯಿಂದ ಕುಸಿದಿದೆ. ಈ ಹಿಂದೆ ತಹಸೀಲ್ದಾರ್ ಕಚೇರಿಯಾಗಿ ಈ ಕಟ್ಟಡ ಬಳಕೆಯಾಗಿತ್ತು. ಈಗಲು ಹಲವು ಇಲಾಖೆಗಳ ಕಚೇರಿಗಳು ಇಲ್ಲಿಯೇ ಕಾರ್ಯನಿರ್ವಹಿಸುತ್ತಿದ್ದವು.

ಹಳ್ಳದಲ್ಲಿ ಟ್ರ್ಯಾಕ್ಟರ್ ಪಲ್ಟಿ, ಒಬ್ಬ ಸಾವು

ಧಾರವಾಡ ಜಿಲ್ಲೆಯ ಕುಂದಗೋಳ ತಾಲೂಕಿನ ಹಂಚಿನಾಳ- ದೇವನೂರ ಮಧ್ಯದ ಹಂಚಿನಾಳ ಹಳ್ಳದಲ್ಲಿ ಬುಧವಾರ ತಡರಾತ್ರಿ ಟ್ರ್ಯಾಕ್ಟರ್ ಪಲ್ಟಿಯಾಗಿ ವ್ಯಕ್ತಿಯೋರ್ವ ಸಾವಿಗೀಡಾಗಿದ್ದಾರೆ, ಇಬ್ಬರು ಪಾರಾಗಿದ್ದಾರೆ. ಕುಂದಗೋಳದ ಶಿವಯ್ಯ ವಾಟ್ನಾಳಮಠ (29) ಮೃತಪಟ್ಟವರು. ವಾಸುದೇವ ಹೈಭತ್ತಿ, ಮಲ್ಲಿಕಾರ್ಜುನ ಪಾರಾಗಿದ್ದಾರೆ.

ಗುಳೇದಗುಡ್ಡ-ಪರ್ವತಿ ಸಂಪರ್ಕ ಕಡಿತ

ಬಾಗಲಕೋಟೆ ಜಿಲ್ಲೆಯಲ್ಲಿ ಸುರಿದ ಧಾರಾಕಾರ ಮಳೆಯಿಂದ ಬೆಣ್ಣೆಹಳ್ಳ ತುಂಬಿ ಹರಿಯುತ್ತಿದ್ದು, ಗುಳೇದಗುಡ್ಡ ಪಟ್ಟಣದಿಂದ ಪರ್ವತಿಗೆ ತೆರಳುವ ಸೇತುವೆ ಹಾಗೂ ಆಸಂಗಿ ಸಂಪರ್ಕಿಸುವ ಸೇತುವೆ ಜಲಾವೃತಗೊಂಡಿದೆ. ಪರ್ವತಿ ಹಾಗೂ ಆಸಂಗಿ ಕಟಗಿನಹಳ್ಳಿ ಗ್ರಾಮಗಳಿಂದ ಪಟ್ಟಣಕ್ಕೆ ಆಗಮಿಸುವ ರೈತರು, ಸಾರ್ವಜನಿಕರು ಹಾಗೂ ವಿದ್ಯಾರ್ಥಿಗಳು ಪರದಾಡಿದರು. ಗುಳೇದಗುಡ್ಡದ ಗುರುವಾರ ಸಂತೆಗೆ ತರಕಾರಿ ತರಲು ವ್ಯಾಪಾರಿಗಳು ಪರದಾಡಿದರು. ಮಳೆಯಿಂದ ಸಂತೆ ಅಸ್ತವ್ಯಸ್ತಗೊಂಡಿತು. ಗುಳೇದಗುಡ್ಡದಿಂದ ಆಸಂಗಿ, ಲಾಯದಗುಂದಿ ಗ್ರಾಮಗಳಿಗೆ ತೆರಳುವ ಸೇತುವೆ ಸಂಪೂರ್ಣ ಮಳೆ ನೀರಿನಿಂದ ಜಲಾವೃತಗೊಂಡ ನಿಮಿತ್ತ ಪುರಸಭೆ ಸೇತುವೆ ಮೇಲೆ ಯಾರೂ ತೆರಳದಂತೆ ಬ್ಯಾರಿಕೇಡ್ ಅಳವಡಿಸಲಾಗಿತ್ತು.

ಮಳೆಯಿಂದ ಹಚ್ಚಹಸಿರಾಗಿ ಕಂಗೊಳಿಸುತ್ತಿರುವ ಹಂಪಿ ಪರಿಸರ.

ಸಿಡಿಲು ಬಡಿದ ನಾಲ್ಕು ಹಸುಗಳು ಸಾವು

ದಾವಣಗೆರೆ ಜಿಲ್ಲೆಯಲ್ಲಿ ಗುಡುಗು ಸಹಿತ ಭಾರಿ ಮಳೆಯಾಗುತ್ತಿದ್ದು, ಸಿಡಿಲಿನ ಆರ್ಭಟಕ್ಕೆ ಹರಿಹರ ತಾಲೂಕಿನ ಕೊಮಾರನಹಳ್ಳಿಯಲ್ಲಿ ನಾಲ್ಕು ಹಸುಗಳು ಬಲಿಯಾಗಿವೆ. ಅಡಕೆ ತೋಟಗಳಲ್ಲಿ ನೀರು ನಿಂತಿದೆ. ಕೊಮಾರನಹಳ್ಳಿ ಗ್ರಾಮದ ನಾಗರಾಜಯ್ಯ ಎನ್ನುವರಿಗೆ ಆದಾಯ ನೀಡುತ್ತಿದ್ದ ನಾಲ್ಕು ಹಸುಗಳು ಸಾವನ್ನಪ್ಪಿವೆ. ಮನೆ ಹೊರಗಿನ ಕೊಟ್ಟಿಗೆಯಲ್ಲಿ ಹಸುಗಳನ್ನು ಕಟ್ಟಿಹಾಕಿದ್ದರು. ಈ ವೇಳೆ ಸಿಡಿಲು ಬಡಿದು ನಾಲ್ಕು ಹಸುಗಳು ಸಾವನಪ್ಪಿವೆ. ಸ್ಥಳಕ್ಕೆ ಆಧಿಕಾರಿಗಳು ಭೇಟಿ ನೀಡಿ, ಪರಿಹಾರ ನೀಡುವಂತೆ ಸ್ಥಳೀಯರು ಒತ್ತಾಯಿಸಿದ್ದಾರೆ. ಮಲೆಬೆನ್ನೂರು ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ.

ಚರಂಡಿ ನೀರಿನಲ್ಲಿ ಕೊಚ್ಚಿ ಹೋದ ವ್ಯಕ್ತಿ

ಹುಬ್ಬಳ್ಳಿಯಲ್ಲಿ ಧಾರಾಕಾರ ಮಳೆಯಾಗಿದ್ದು, ವ್ಯಕ್ತಿಯೊಬ್ಬರು ಆಯತಪ್ಪಿ ಚರಂಡಿಗೆ ಬಿದ್ದು ಕೊಚ್ಚಿ ಹೋಗಿರುವ ಘಟನೆ ಕಸಬಾಪೇಟೆ ಪೊಲೀಸ್ ಠಾಣೆ ವ್ಯಾಪ್ತಿಯ ಬೆಳಗಲಿ ರಸ್ತೆಯಲ್ಲಿ ನಡೆದಿದೆ.ಬೀರಬಂದ ಓಣಿಯ ಹುಸೇನ ಕಳಸ ಕೊಚ್ಚಿಕೊಂಡು ಹೋಗಿರುವ ವ್ಯಕ್ತಿ. ಹುಸೇನ ಅವರು ಬೆಳಗಲಿ ರಸ್ತೆ ಪಕ್ಕದಲ್ಲಿ ನಡೆದುಕೊಂಡು ಹೋಗುತ್ತಿದ್ದಾಗ, ಆಯತಪ್ಪಿ ಚರಂಡಿಗೆ ಬಿದ್ದಿದ್ದರು. ನೀರಿನಲ್ಲಿ ಕೊಚ್ಚಿ ಹೋದ ಹುಸೇನ ಅವರಿಗಾಗಿ ಪೊಲೀಸರು ಹುಡುಕಾಟ ನಡೆಸುತ್ತಿದ್ದು, ಇದುವರೆಗೆ ಪತ್ತೆಯಾಗಿಲ್ಲ.

ನವ ಬೃಂದಾವನ ವಿವಾದ | ಉಭಯ ಮಠದ ಭಕ್ತರಲ್ಲಿ ಸಂಭ್ರಮ

ರಾಯರ-ಉತ್ತರಾದಿ ಮಠದ ನಡುವೆ ರಾಜಿ ಸಂಧಾನ

ನಂಜನಗೂಡು ಮೋಹನ್, ಚೆನ್ನೈ

ಮಂತ್ರಾಲಯದ ರಾಘವೇಂದ್ರ ಸ್ವಾಮಿ ಮಠ ಮತ್ತು ಉತ್ತರಾಧಿ ಮಠದ ನಡುವೆ ಶತಮಾನಗಳಿಂದ ಇದ್ದ ವಿವಾದ ಸುಖ್ಯಾಂತ ಕಾಣುವ ಸಂಕಲ್ಪವನ್ನು ಉಭಯ ಮಠದ ಶ್ರೀಗಳು ಕೈಗೊಂಡಿದ್ದಾರೆ.

ಸುಪ್ರೀಂಕೋರ್ಟ್ ನಿರ್ದೇಶನದ ಮೇರೆಗೆ ನ್ಯಾಯಮೂರ್ತಿ ಸಂಜಯ್ ಕಿಶನ್ ಕೌಲ್ ಸಮ್ಮುಖದಲ್ಲಿ ಚೆನ್ನೈನಲ್ಲಿ ನಡೆದ ರಾಜಿ ಸಂಧಾನ ಸಭೆಯಲ್ಲಿ ರಾಯರ ಮಠದ ಪೀಠಾಧಿಪತಿ ಸುಬುಧೇಂದ್ರತೀರ್ಥರು ಹಾಗೂ ಉತ್ತರಾಧಿ ಮಠದ ಸತ್ಯಾತ್ಮ ತೀರ್ಥರು ವಿವಾದ ಬಗೆಹರಿಸಿಕೊಳ್ಳುವಲ್ಲಿ ಒಮ್ಮತದ ನಿರ್ಧಾರ ಮಾಡಿದ್ದಾರೆ.

ಹಂಪಿ ಸಮೀಪದ ನವಬೃಂದಾವನದಲ್ಲಿರುವ ಪದ್ಮನಾಭ ತೀರ್ಥರು, ಕವೀಂದ್ರರು, ವಾಗೀಶ ತೀರ್ಥರು, ನರಹರಿತೀರ್ಥರು ಮತ್ತು ಜಯತೀರ್ಥರ ಪೂಜೆ ಮತ್ತು ನವವೃಂದಾವನ ನಿವೇಶನದ ಹಕ್ಕಿನ ವ್ಯಾಜ್ಯ ಕುರಿತಂತೆ ಎಲ್ಲರನ್ನು ಪ್ರತ್ಯೇಕವಾಗಿ ಮಾತನಾಡಿಸಿ ಅಭಿಪ್ರಾಯ ಪಡೆಯಲಾಯಿತು. ಒಂದು ಹಂತಕ್ಕೆ ಮಾತುಕತೆ ಯಶಸ್ಸು ಕಾಣುವ ಸೂಚನೆ ಕಂಡು ಬಂದಿದೆ. ಜಯತೀರ್ಥರ ಪೂಜಾ ವಿವಾದ ಕುರಿತಂತೆ ಉತ್ತರಾಧಿ ಮಠದವರು ಸಮಯಾವಕಾಶ ಕೋರಿದ್ದಾರೆ ಎನ್ನಲಾಗಿದೆ.

ಉಭಯ ಶ್ರೀಗಳು ಮಾತುಕತೆಯ ನಂತರ ಪರಸ್ಪರ ಆಲಿಂಗಿಸಿ, ಹಸ್ತಲಾಘವ ನೀಡಿ ಮುಕ್ತವಾಗಿ ಮಾತನಾಡಿದರು. ಇವರಿಬ್ಬರ ಸಮಾಗಮ ನೆರೆದಿದ್ದ ನೂರಾರು ಭಕ್ತ ಸಮೂಹದಲ್ಲಿ ವಿವಾದ ಬಗೆಹರಿಯುವ ಭರವಸೆ ಮತ್ತು ಸಂಭ್ರಮ ತಂದಿತು.



ಪರಸ್ಪರ ಆಲಂಗಿಸಿದ ರಾಯರ ಮಠದ ಸುಬುಧೇಂದ್ರ ತೀರ್ಥರು ಹಾಗೂ ಉತ್ತರಾಧಿ ಮಠದ ಸತ್ಯಾತ್ಮ ತೀರ್ಥರು.

ರಾಘವೇಂದ್ರ ಸ್ವಾಮಿ ಮಠದ ಸುಪ್ರೀಂಕೋರ್ಟ್ ವಕೀಲರಾದ ಅಲ್ಜೋ ಜೋಸೆಫ್, ವಕೀಲರಾದ ಪಣಿರಾಜ್ ಕಶ್ಯಪ್, ಶ್ರೀನಿವಾಸ ಢಾಣಾಪುರ್, ವಿಜಯ್ ಢಾಣಾ ಪುರ್ ಮತ್ತು ಶ್ರೀ ಮಠದ ಪವರ್ ಆಫ್ ಅಟಾರ್ನಿ ರಾಜಾ ವಾಧೀಂದ್ರಾ ಚಾರ್ ಇದ್ದರು.

ಶ್ರೀ ಉತ್ತರಾಧಿ ಮಠದ ಪರ ವಕೀಲರಾದ ಸೌರಭ್ ಸಿನ್ಹಾ, ವಿದ್ಯಾಧೀಶಾಚಾರ್, ವಿದ್ಯಾಸಿಂಹಾ ಚಾರ್, ಸತ್ಯ ಧ್ಯಾನಾಚಾರ್ಯ ಕಟ್ಟಿ ಮತ್ತು ಶ್ರೀಮಠದ ಪವರ್ ಆಫ್ ಅಟಾರ್ನಿ ರವೀಂದ್ರನ್ ಇದ್ದರು.

> ಹರಿವಾಯು ಗುರುಗಳ ವಿಶೇಷ ಅನುಗ್ರಹದಿಂದ ಉತ್ತರಾಧಿ ಮಠ ಹಾಗೂ ರಾಯರ ಮಠದ ಉಭಯ ಪೀಠಾಧಿಪತಿಗಳು ಸೇರಿದ್ದೇವೆ. ಅನೇಕ ವರ್ಷಗಳ ವ್ಯಾಜ್ಯಕ್ಕೆ ಪರಿಷ್ಕಾರ ಪಡೆಯುವಂತಾಗಿ ಎಲ್ಲರೂ ಒಟ್ಟಾಗಿ, ಒಳ್ಳೆಯ ರೀತಿಯಿಂದ ಒಗ್ಗಟ್ಟಾಗಿರುವ ಕಾಲ ಬರಲಿದೆ. ನಾವಿಬ್ಬರೂ ಈ ದೆಸೆಯಲ್ಲಿ ಅತ್ಯಂತ ಪ್ರೀತಿಯಿಂದ, ವಿಶ್ವಾಸದಿಂದ ಪ್ರಯತ್ನವನ್ನು ಮಾಡುತ್ತಿದ್ದೇವೆ. ಪ್ರಾಮಾಣಿಕವಾದ ಪ್ರಯತ್ನಕ್ಕೆ ದೇವರು ಯಶಸ್ಸು ಕೊಡಲಿ ಎಂದು ಪ್ರಾರ್ಥಿಸುತ್ತೇವೆ.
>
> -ಸತ್ಯಾತ್ಮ ತೀರ್ಥರು

> ಇತಿಹಾಸದಲ್ಲಿ ಸೌಹಾರ್ದ ವಾತಾವರಣ ಏರ್ಪಟ್ಟಿದೆ. ಸುಪ್ರೀಂ ಕೋರ್ಟ್ ಆದೇಶದ ಮೇರೆಗೆ ನಮ್ಮ ಮಠಕ್ಕೂ, ಉತ್ತರಾಧಿ ಮಠದ ನಡುವಿನ ಸಾಮರಸ್ಯದ ಬಗ್ಗೆ ಇವತ್ತು ಮಾತುಕತೆ ನಡೆದಿದೆ. ಆದಷ್ಟು ಬೇಗ ಸಮಾಜಕ್ಕೆ ಶುಭ ಸಂದೇಶ ನೀಡಲಿ ಎಂದು ದೇವರಲ್ಲಿ ಪ್ರಾರ್ಥನೆ ಮಾಡುತ್ತೇವೆ.
>
> - ಸುಬುಧೇಂದ್ರ ತೀರ್ಥರು

ಸುರೇಶ್ ಜಿ. ಭಟ್ ನಿಧನ

ಬೆಂಗಳೂರು: ಭಾರತೀಯ ಜೀವ ವಿಮಾ ನಿಗಮ(ಎಲ್‌ಐಸಿ)ದ ನಿವೃತ್ತ ಹಿರಿಯ ಅಧಿಕಾರಿ ಮತ್ತು ವಿಶ್ವವಾಣಿ ಪತ್ರಿಕೆಯ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್ ಅವರ ಭಾವ (ಅಕ್ಕನ ಗಂಡ) ಸುರೇಶ್ ಜಿ. ಭಟ್ ಅವರು ಬುಧವಾರ ರಾತ್ರಿ ಹೃದಯ ಸಂಬಂಧಿ ಕಾಯಿಲೆಯಿಂದ ನಿಧನರಾಗಿದ್ದು, ಗುರುವಾರ ಅಂತ್ಯಕ್ರಿಯೆ ನೆರವೇರಿದೆ.

ಮೂಲತಃ ಉತ್ತರ ಕನ್ನಡ ಜಿಲ್ಲೆಯ ಕುಮಟಾದ ಮುರೂರಿನವರಾದ ಸುರೇಶ್ ಭಟ್ ಅವರಿಗೆ ಎಂಬತ್ತು ವರ್ಷ ವಯಸ್ಸಾಗಿತ್ತು. ಅವರು ಪತ್ನಿ ಯಶೋಧಾ, ಪುತ್ರರಾದ ಸಂತೋಷ ಭಟ್, ಕಿರಣ್ ಭಟ್ ಸೇರಿದಂತೆ ಅಪಾರ ಬಂಧು-ವರ್ಗದವರನ್ನು ಅಗಲಿದ್ದಾರೆ. ಭಟ್ ಅವರು ಶಿರಸಿ ಸಮೀಪದ ಗೋಳಿ ಹೈಸ್ಕೂಲಿನಲ್ಲಿ ಅಧ್ಯಾಪಕರಾಗಿ ವೃತ್ತಿ ಜೀವನ ಆರಂಭಿಸಿದ್ದರು. ನಂತರ ಅವರು ಎಲ್‌ಐಸಿ ಸೇರಿ ಡೆವಲಪ್‌ಮೆಂಟ್ ಆಫೀಸರ್ ಆದರು. ನಂತರ ಅವರು ವೃತ್ತಿಯಲ್ಲಿ ತೇರ್ಗಡೆ ಪಡೆದು ಅಖಿಲ ಭಾರತ ಮಟ್ಟದಲ್ಲಿ ಸೀನಿಯರ್ ಡಿವಿಜಿನಲ್ ಮ್ಯಾನೇಜರ್ ಸಹ ಆದರು. ಮೂಲತಃ ಕಾಯಕಜೀವಿಯಾಗಿದ್ದ ಭಟ್ ಅವರು, ಅತ್ಯಂತ ಸರಳ ಮತ್ತು ಪ್ರಾಮಾಣಿಕ ಜೀವನ ಸಾಗಿಸಿದ್ದರು. ಬುಧವಾರ ಸಂಜೆ ಭಟ್ ಅವರಿಗೆ ಹೃದಯಾಘಾತವಾಗಿದ್ದು, ಆಸ್ಪತ್ರೆಗೆ ದಾಖಲಿಸಿದರೂ ಚಿಕಿತ್ಸೆ ಫಲಕಾರಿಯಾಗದೇ ಕೊನೆಯುಸಿರು ಎಳೆದರು.

ಬೆಂಗಳೂರಿನಲ್ಲಿ ನವೀಕೃತಗೊಂಡ ವೆಂಕಟಪ್ಪ ಚಿತ್ರಶಾಲೆಗೆ ಡಿಸಿಎಂ ಡಿ.ಕೆ ಶಿವಕುಮಾರ್ ಉದ್ಘಾಟಿಸಿ, ವೀಕ್ಷಿಸಿದರು. ಸಚಿವ ಎಚ್ ಕೆ ಪಾಟೀಲ, ವಿಧಾನ ಪರಿಷತ್ ಮುಖ್ಯ ಸಚೇತಕ ಸಲೀಂ ಅಹ್ಮದ್, ಶಾಸಕ ರಿಜ್ವಾನ್ ಅರ್ಷದ್, ಬ್ರಿಗೇಡ್ ಸಮೂಹ ಸಂಸ್ಥೆ ಅಧ್ಯಕ್ಷ ಜೈಶಂಕರ್ ಮತ್ತಿತರರು ಉಪಸ್ಥಿತರಿದ್ದರು.

ಪ್ರಧಾನಿ ನರೇಂದ್ರ ಮೋದಿಗೆ ಪರ್ಯಾಯ ನಾಯಕ ಇಲ್ಲ

ಕಲಬುರಗಿ: ವಿಶ್ವದ ಎಲ್ಲಾ ರಾಷ್ಟ್ರಗಳು ಪ್ರಧಾನಿ ಮೋದಿ ಅವರನ್ನು ವಿಶ್ವನಾಯಕ ಎಂದು ಒಪ್ಪಿಕೊಂಡಿವೆ. ಮೋದಿ ಅವರಿಗೆ ಪರ್ಯಾಯ ನಾಯಕ ಬೇರೊಬ್ಬರಿಲ್ಲ ಎಂದು ಸಂಸದ ಜಗದೀಶ್ ಶೆಟ್ಟರ್ ಹೇಳಿದರು.

ನಗರದಲ್ಲಿ ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿ, ದೇಶದ ಜನರ ಮನಸ್ಸಿನಲ್ಲಿ ಮೋದಿ ಬೇರುರಿದ್ದಾರೆ. ಅಂತಾರಾಷ್ಟ್ರೀಯ ಮಟ್ಟದಲ್ಲಿಯೂ ಮೋದಿ ಅವರ ಬಗ್ಗೆ ಚರ್ಚೆ ನಡೆಯುತ್ತಿದೆ. ರಾಹುಲ್ ಗಾಂಧಿ ಯಾವುದೇ ವಿಶ್ವ ಮನ್ನಣೆ ಸಿಗುತ್ತಿಲ್ಲ. ಅವರು ಯಾವತ್ತು ಪ್ರಬಲ ನಾಯಕನಾಗಿ ಗುರುತಿಸಿಕೊಂಡಿಲ್ಲ. ಮೋದಿ ಅವರಾಗೆ ರಾಹುಲ್ ಗಾಂಧಿ ಜಗತ್ತಿನಲ್ಲಿ ಗುರುತಿಸಿಕೊಳ್ಳಲು ಸಾಧ್ಯವಾಗಲ್ಲ ಎಂದರು.

ಹಿಂದೇ ಭಾರತವನ್ನು ಭಿಕ್ಷುಕರ ದೇಶವೆಂದು ಕರೆಯುತ್ತಿದ್ದರು. ಕಾಂಗ್ರೆಸ್ ಕಾಲದಲ್ಲಿ ಆರ್ಥಿಕ ಮಂತ್ರಿಗಳು ವಿದೇಶಕ್ಕೆ ಹೋದರೆ, ಸಾಲ ಕೇಳಲು ಹೋಗುತ್ತಿದ್ದಾರೆ ಎಂದು ಆಡಿಕೊಳ್ಳುತ್ತಿದ್ದರು. 2014ರ ನಂತರ ನರೇಂದ್ರ ಮೋದಿ ಪ್ರಧಾನಿಯಾಗಿ ಅಧಿಕಾರ ವಹಿಸಿಕೊಂಡ ಬಳಿಕ ಭಾರತವನ್ನು ವಿದೇಶಿ ನಾಯಕರು ನೋಡುವ ದೃಷ್ಟಿಯೇ ಬೇರೆಯಾಗಿದೆ ಎಂದು ಹೇಳಿದರು.

ಆಂಧ್ರ ಪ್ರದೇಶ ಸಿಎಂಗೆ ಪತ್ರ ಬರೆದ ಸಿದ್ದರಾಮಯ್ಯ | ರಾಜ್ಯದ ರೈತರಿಗೆ ಈ ನಿರ್ಬಂಧದಿಂದ ತೀವ್ರ ಸಂಕಷ್ಟ

ಮಾವು ಖರೀದಿ ನಿರ್ಬಂಧ ತೆರವಿಗೆ ಸಿಎಂ ಪತ್ರ

ಬೆಂಗಳೂರು: ಕರ್ನಾಟಕದ ತೋತಾಪುರಿ ಮಾವು ತಳಿಗೆ ಆಂಧ್ರ ಪ್ರದೇಶ ವಿಧಿಸಿರುವ ನಿರ್ಬಂಧವನ್ನು ಕೂಡಲೇ ಹಿಂಪಡೆಯಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಆಂಧ್ರಪದೇಶ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಅವರಿಗೆ ಪತ್ರ ಬರೆದಿದ್ದಾರೆ.

ಗಡಿ ಜಿಲ್ಲೆ ಕೋಲಾರ ಹಾಗೂ ಸುತ್ತಮುತ್ತಲಿನ ಭಾಗದಲ್ಲಿ ಬೆಳೆಯುವ ತೋತಾಪುರಿ ಮಾವಿನ ಹಣ್ಣಿನ ಪ್ರಮುಖ ಮಾರುಕಟ್ಟೆ ಆಂಧ್ರಪ್ರದೇಶದ ಚಿತ್ತೂರು ಜಿಲ್ಲೆ. ಆದರೀಗ ಅಲ್ಲಿನ ರಾಜ್ಯದ ತೋತಾಪುರಿಗೆ ನಿರ್ಬಂಧ ವಿಧಿಸಿರುವುದರಿಂದ, ರೈತರು ಸಂಕಷ್ಟಕ್ಕೀಡಾಗಿದ್ದರು. ಈ ಸಂಬಂಧ ಕರ್ನಾಟಕ ಸರಕಾರದ ಮುಖ್ಯಕಾರ್ಯದರ್ಶಿ ಶಾಲಿನಿ ರಜನೀಶ್ ಈಗಾಗಲೇ ಆಂಧ್ರ ಸಿಎಸ್‌ಗೆ ಪತ್ರ ಬರೆದಿದ್ದರು. ಆದರೆ ಸಕಾರಾತ್ಮಕ ಪ್ರತಿಕ್ರಿಯೆ ಬಾರದಿರುವುದರಿಂದ ಇದೀಗ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿದ್ದಾರೆ.

ಪತ್ರದಲ್ಲಿ ಸಿಎಂ ಸಿದ್ದರಾಮಯ್ಯ, ಕರ್ನಾಟಕ ಸೇರಿ ಬೇರೆ ರಾಜ್ಯಗಳಿಂದ ಬರುವ ತೋತಾಪುರಿ ಮಾವು ಪ್ರವೇಶವನ್ನು ನಿಷೇಧಿಸಿ ಚಿತ್ತೂರು ಜಿಲ್ಲಾಧಿಕಾರಿ ಆದೇಶ ಹೊರಡಿಸಿರುವ ಬಗ್ಗೆ ತೀವ್ರ ಕಳವಳಗೊಂಡಿದ್ದೇನೆ. ಈ ಆದೇಶದ ಪಾಲನೆಗಾಗಿ ಕರ್ನಾಟಕ ಹಾಗೂ ತಮಿಳುನಾಡು ಅಂತಾರಾಜ್ಯ ಗಡಿಯ ಚೆಕ್ ಪೋಸ್ಟ್‌ಗಳಲ್ಲಿ ಆಂಧ್ರ ಪೊಲೀಸರು, ಅರಣ್ಯ ಇಲಾಖೆ ಅಧಿಕಾರಿಗಳು, ಕೃಷಿ ಮಾರುಕಟ್ಟೆ ಅಧಿಕಾರಿಗಳು, ಕಂದಾಯ ಅಧಿಕಾರಿಗಳನ್ನು ನಿಯೋಜಿಸಲಾಗಿದೆ ಎಂದು ವಿವರಿಸಿದ್ದಾರೆ.

ಈ ನಿಷೇಧದಿಂದ ಕರ್ನಾಟಕದ ಗಡಿ ಭಾಗದ ಮಾವು ಬೆಳೆಗಾರರಿಗೆ ಸಾಕಷ್ಟು ಸಂಕಷ್ಟ ಎದುರಾಗಿದೆ. ಗಡಿ ಭಾಗದ ರೈತರು ತಮ್ಮ ಮಾವು ಮಾರಾಟಕ್ಕೆ ಚಿತ್ತೂರನ್ನು ಬಹುವಾಗಿ ನೆಚ್ಚಿಕೊಂಡಿದ್ದಾರೆ. ಈ ನಿರ್ಬಂಧ ಆದೇಶದಿಂದ ಸರಬರಾಜು ಸರಪಳಿಗೆ ಅಡಚಣೆಯಾಗಿದ್ದು, ಭಾರೀ ಮಾವು ಬೆಳೆ ನಷ್ಟದ ಆತಂಕ ಸೃಷ್ಟಿಸಿದೆ. ಇದರಿಂದ ಸಾವಿರಾರು ರೈತರ ಜೀವನೋಪಾಯದ ಮೇಲೆ ಪ್ರತಿಕೂಲ ಪರಿಣಾಮ ಬೀರಿದೆ ಎಂದು ವಿವರಿಸಿದ್ದಾರೆ.

ಕೂಡಲೇ ಕ್ರಮ ಆಗ್ರಹ

ತಾವು ಈ ಬಗ್ಗೆ ಮಧ್ಯಪ್ರವೇಶಿಸಿ, ಚಿತ್ತೂರು ಜಿಲ್ಲಾಧಿಕಾರಿಗೆ ಅಗತ್ಯ ನಿರ್ದೇಶನಗಳನ್ನು ನೀಡಿ, ಕೂಡಲೇ ನಿರ್ಬಂಧವನ್ನು ರದ್ದುಗೊಳಿಸಲು ಸೂಚಿಸುವಂತೆ ಕೋರುತ್ತೇನೆ. ಈ ವಿಚಾರವನ್ನು ನೀವು ಅತ್ಯಂತ ಗಂಭೀರವಾಗಿ ಪರಿಗಣಿಸಿ, ರೈತರ ಹಿತದೃಷ್ಟಿಯಿಂದ ಕೃಷಿ ಉತ್ಪನ್ನಗಳ ಸರಾಗ ಸಾಗಾಟಕ್ಕೆ ಅನುವು ಮಾಡಲು ತುರ್ತು ಕ್ರಮ ಕೈಗೊಳ್ಳುತ್ತೀರಿ ಎಂಬ ನಂಬಿಕೆ ಇದೆ ಎಂದು ಪತ್ರದಲ್ಲಿ ಸಿಎಂ ಸಿದ್ದರಾಮಯ್ಯ ತಿಳಿಸಿದ್ದಾರೆ.

ನಾಗರೀಕ ವಿಮಾನಯಾನ ದುರಂತ ಸರಪಣಿ

ಅಹಮದಾಬಾದ್: ಗುಜರಾತ್ ರಾಜ್ಯದ ಅಹಮದಾ ಬಾದ್ ನಗರದ ಸರದಾರ್ ವಲ್ಲಭಭಾಯ್ ಪಟೇಲ್ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಲಂಡನ್‌ನತ್ತ ಗುರುವಾರ ಹಾರಾಟ ಆರಂಭಿಸಿದ ಏರ್ ಇಂಡಿಯ ಬೋಯಿಂಗ್ 787 ವಿಮಾನ, ಟೇಕಾಫ್ ಆದ ನಂತರದ 5 ನಿಮಿಷಗಳಲ್ಲಿಯೇ(ಮಧ್ಯಾಹ್ನ 1.38) ನಗರದಲ್ಲಿನ ಹಾಸ್ಟೆಲ್ ಕಟ್ಟಡವೊಂದರ ಮೇಲೆ ಪತನಗೊಂಡು ಸ್ಫೋಟಿಸಿದ ಘಟನೆ ದೇಶದಲ್ಲಿ ಈ ಹಿಂದೆ ಆಗಿಹೋದ ಹತ್ತಾರು ವಿಮಾನ ದುರಂತಗಳು-ಅವಘಡಗಳನ್ನು ನೆನಪಿಗೆ ತರುತ್ತಿದೆ.

- **2020: ಏರ್ ಇಂಡಿಯ ಎಕ್ಸ್‌ಪ್ರೆಸ್ ವಿಮಾನ 9-1344 ಅವಘಡ**

  2020ರ ಆಗಸ್ಟ್ 7ರಂದು ಕೇರಳದ ಕೋಯಿಕ್ಕೋಡ್‌ನಲ್ಲಿ ಏರ್ ಇಂಡಿಯ ಎಕ್ಸ್‌ಪ್ರೆಸ್ 9-1344 ವಿಮಾನ ಅವಘಡಕ್ಕೀಡಾಗಿದ್ದರಿಂದ 21 ಜನರು ಸಾವಿಗೀಡಾದರು, 100 ಮಂದಿ ಗಾಯಗೊಂಡರು. ವಂದೇಭಾರತ್ ಮಿಷನ್‌ನಡಿ ದುಬೈಗೆ ತೆರಳಿ ಬಳಿಕ ವಾಪಸಾಗುತ್ತಿದ್ದ ಎಐ ಎಕ್ಸ್‌ಪ್ರೆಸ್ ವಿಮಾನದಲ್ಲಿ ಪ್ರಯಾಣಿಕರು-ಸಿಬ್ಬಂದಿ ಸೇರಿದಂತೆ ಒಟ್ಟು 190 ಜನರಿದ್ದರು. ಮಳೆಯಾಗಿದ್ದ ಕಾರಣ ಕೋಯಿಕ್ಕೋಡ್ ವಿಮಾನ ನಿಲ್ದಾಣದ ರನ್‌ವೇ ಪೂರ್ಣ ತೇವಗೊಂಡಿತ್ತು. ಲ್ಯಾಂಡ್ ಆದ ಏರ್ ಇಂಡಿಯ ಎಕ್ಸ್‌ಪ್ರೆಸ್ 9-1344 ವಿಮಾನದ ಚಕ್ರಗಳು ರನ್‌ವೇನಲ್ಲಿ ಜಾರಿದ್ದರಿಂದ ವಿಮಾನ ತಕ್ಷಣ ನಿಲುಗಡೆಯಾಗಲಿಲ್ಲ. ಬದಲಾಗಿ ರನ್‌ವೇಗಿಂತಲೂ ಮುಂದೆ ಸಾಗಿ 30 ಅಡಿಗಳಷ್ಟು ಆಳದ ಕೊರಕಲಿಗೆ ಬಿದ್ದು ಎರಡು ತುಂಡಾಯಿತು.

- **1990: ಇಂಡಿಯನ್ ಏರ್‌ಲೈನ್ಸ್ ವಿಮಾನ-605**

  ಬೆಂಗಳೂರಿನಲ್ಲಿ 1990ರ ಫೆಬ್ರವರಿ 14ರಂದು(ಅಂತಾರಾಷ್ಟ್ರೀಯ ಪ್ರೇಮಿಗಳ ದಿನ) ಪೈಲಟ್ ಪ್ರಮಾದದ ಕಾರಣದಿಂದಾಗಿ ಇಂಡಿಯನ್ ಏರ್‌ಲೈನ್ಸ್ ವಿಮಾನ-605 ರನ್‌ವೇಯಲ್ಲಿ ನಿಗದಿತ ಸ್ಥಳಕ್ಕಿಂತಲೂ ಮುಂದೆ ಲ್ಯಾಂಡ್ ಆಗಿ ಅವಘಡಕ್ಕೀಡಾಯಿತು. ಏರ್‌ಬಸ್ ಎ320 ವಿಮಾನದಲ್ಲಿ ಸಿಬ್ಬಂದಿ-ಪ್ರಯಾಣಿಕರು ಸೇರಿ 146 ಜನರಿದ್ದರು. ಅವರಲ್ಲಿ 92 ಜನರು ಸಾವಿಗೀಡಾದರು. ಈ ಅಪಘಾತ ಪ್ರಸಂಗವು ಏರ್ ಬಸ್ 320ರ ಕಾಕ್‌ಪಿಟ್ ವಿನ್ಯಾಸ ಮತ್ತು ಪೈಲಟ್‌ಗಳ ಜಾಗೃತ ಕಾರ್ಯವೈಖರಿ ಬಗ್ಗೆ ಪ್ರಶ್ನೆಗಳನ್ನೆತ್ತಿತು. ಆ ಬಳಿಕ ಈ ಎರಡೂ ವಿಚಾರಗಳಲ್ಲಿ ಸುಧಾರಣೆ ಅಗತ್ಯ ಎಂಬ ಸಲಹೆಗಳೂ ಕೇಳಿಬಂದವು.

- **1982: ಏರ್ ಇಂಡಿಯ ವಿಮಾನ-403**

  ಅದು ಮುಂಗಾರು ಮಳೆಗಾಲದ ಸಮಯ. 1982ರ ಜೂನ್ 21ರಂದು ಪ್ರತಿಕೂಲ ಹವಾಮಾನದ ಕಾರಣದಿಂದಾಗಿ ಪೈಲಟ್‌ಗಳಿಗೆ ಮುಂದಿನ ಪ್ರದೇಶವೇ ಸುಲಭವಾಗಿ ಗೋಚರಿಸದಂತಹ ಸನ್ನಿವೇಶ. ಅಸ್ಪಷ್ಟ ಗೋಚರತೆ ಕಾರಣದಿಂದಾಗಿ ಏರ್ ಇಂಡಿಯ ವಿಮಾನ-403 ಮಹಾರಾಷ್ಟ್ರದ ಮುಂಬೈ ಬಳಿ ಅಪಘಾತಕ್ಕೀಡಾಯಿತು. ವಿಮಾನ ನಿಲ್ದಾಣವನ್ನು ತಲುಪುವುದಕ್ಕೂ ಮುನ್ನವೇ ವಿಮಾನ ನಾಗರಿಕ ವಸತಿ ಪ್ರದೇಶದ ಮೇಲೆಯೇ ಇಳಿಯಿತು. ವಿಮಾನದಲ್ಲಿ ಸಿಬ್ಬಂದಿ ಮತ್ತು ಪ್ರಯಾಣಿಕರು ಸೇರಿ 111 ಜನರಿದ್ದರು. ಈ ವಿಮಾನ ಅಪಘಾತ 17 ಜನರ ಜೀವಕ್ಕೆ ಕುತ್ತು ತಂದಿತು.

- **1998: ಅಲಯನ್ಸ್ ಏರ್ ವಿಮಾನ**

  ಅಲಯನ್ಸ್ ಏರ್ ವಿಮಾನ-7412 ಬಿಹಾರದ ಪಟನಾ ಬಳಿ 1998ರ ಜುಲೈ 17ರಂದು ಅಪಘಾತಕ್ಕೀಡಾಗಿ 60 ಜನರ ಸಾವಿಗೆ ಕಾರಣವಾಯಿತು. ನಿಲಾಣದಲ್ಲಿ ಜಾಗದ ಕೊರತೆ ಸೇರಿದಂತೆ ಕೆಲವು ಅನಿವಾರ್ಯ ಕಾರಣಗಳಿಂದಾಗಿ ಅಲಯನ್ಸ್ ಏರ್ ವಿಮಾನ ಪಟನಾ ವಿಮಾನ ನಿಲ್ದಾಣದಲ್ಲಿ ಲ್ಯಾಂಡ್ ಆಗುವುದಕ್ಕೂ ಮುನ್ನ ಆಕಾಶದಲ್ಲಿ ಕೆಲಕಾಲ ಗಿರಕಿ ಹೊಡೆಯಬೇಕಾಗಿ ಬಂದಿತ್ತು. ಆ ಸಂದರ್ಭದಲ್ಲೆ ನಿಯಂತ್ರಣ ಕಳೆದುಕೊಂಡ ವಿಮಾನ ನಾಗರಿಕ ವಸತಿ ಪ್ರದೇಶದಲ್ಲಿ ಪತನವಾಯಿತು. ಪರಿಣಾಮ ವಿಮಾನದಲ್ಲಿದ್ದ ಸಿಬ್ಬಂದಿ ಮತ್ತು ಪ್ರಯಾಣಿಕರು ಎಲ್ಲರೂ(55 ಮಂದಿ) ಹಾಗೂ ವಿಮಾನ ಅಪ್ಪಳಿಸಿದ ಕಟ್ಟಡದಲ್ಲಿದ್ದ ಐವರು ನಾಗರಿಕರು ಸೇರಿದಂತೆ 60 ಜನರು ಜೀವ ಕಳೆದುಕೊಂಡರು.

ಅಹಮದಾಬಾದ್ ದುರಂತ ಇದೇ ಮೊದಲಲ್ಲ

ಗುಜರಾತ್‌ನ ಅಹಮದಾಬಾದ್‌ನಲ್ಲಿ ನಾಗರಿಕ ವಿಮಾನ ಅಪಘಾತಕ್ಕೀಡಾಗಿರುವುದು ಇದೇ ಮೊದಲೇನಲ್ಲ. 1988ರಲ್ಲಿಯೂ ದೊಡ್ಡ ದುರಂತವಾಗಿತ್ತು. ಇಂಡಿಯನ್ ಏರ್‌ಲೈನ್ಸ್‌ನ ವಿಮಾನ ಐಸಿ-113 ಅಮಹದಾಬಾದ್ ವಿಮಾನ ನಿಲ್ದಾಣದ ರನ್‌ವೇನಲ್ಲಿ ಇಳಿಯುವುದಕ್ಕೂ ಸ್ವಲ್ಪವೇ ಮೊದಲು ಅಪಘಾತಕೀಡಾಯಿತು. ಪರಿಣಾಮ, ವಿಮಾನದಲ್ಲಿದ್ದ 130 ಜನರು ಮೃತಪಟ್ಟರು.

1978 ಅರಬ್ಬಿ ಸಮುದ್ರಕ್ಕೆ ಎಐ ವಿಮಾನ

1978 ಹೊಸ ವರ್ಷದ ಮೊದಲ ದಿನವೇ ಏರ್ ಇಂಡಿಯ ವಿಮಾನ ದುರಂತ ದಾಖಲಾಯಿತು. ಮುಂಬೈನ ಛತ್ರಪತಿ ಶಿವಾಜಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಿಂದ 1978ರ ಜನವರಿ 1ರಂದು ಆಗಷ್ಟೇ ಪ್ರಯಾಣ ಆರಂಭಿಸಿದ್ದ ಏರ್ ಇಂಡಿಯ ವಿಮಾನ-855 ನಂತರದ ಕೆಲವು ನಿಮಿಷಗಳಲ್ಲಿಯೇ ತಾಂತ್ರಿಕ ದೋಷ ಕಾಣಿಸಿಕೊಂಡಿದ್ದರಿಂದ ಅರಬ್ಬಿ ಸಮುದ್ರದಲ್ಲಿ ಪತನವಾಯಿತು. ಪರಿಣಾಮ ಸಿಬ್ಬಂದಿ ಮತ್ತು ಪ್ರಯಾಣಿಕರು ಸೇರಿದಂತೆ ವಿಮಾನದಲ್ಲಿದ್ದ 213 ಜನರೂ ಜಲಸಮಾಧಿಯಾದರು. ದುರಂತದಿಂದ ಎಚ್ಚೆತ್ತ ವಿಮಾನಯಾನ ಸಂಸ್ಥೆಗಳು ಪೈಲಟ್‌ಗಳಿಗೆ ಹೊಸಬಗೆಯ ತರಬೇತಿ ನೀಡುವುದನ್ನು ಆರಂಭಿಸಿದವು.



ಜತೆಗೆ ವಿಮಾನದ ಕಾಕ್‌ಪಿಟ್‌ನಲ್ಲಿನ ಯಂತ್ರಗಳು, ನಿಯಂತ್ರಕ ಘಟಕಗಳು ಸೇರಿದಂತೆ ಎಲ್ಲಾ ಪರಿಕರಗಳನ್ನೂ ವಿಮಾನ ಹಾರಾಟಕ್ಕೂ ಮುನ್ನ ಮತ್ತೆ ಮತ್ತೆ ಪರಿಶೀಲನೆ ಮಾಡುವುದನ್ನು ಕಡ್ಡಾಯಗೊಳಿಸಿದವು.

ಕನಿಷ್ಕ ವಿಮಾನಕ್ಕೆ ಬಾಂಬ್

ಭಾರತದ ವಿಮಾನಯಾನ ಕ್ಷೇತ್ರವನ್ನು ದುಃಸ್ವಪ್ನದಂತೆ ಕಾಡುವ ದುರಂತಗಳಲ್ಲಿ 1985ರ ಜೂನ್ 23ರಂದು ನಡೆದ ಕನಿಷ್ಕ ವಿಮಾನ ದುರಂತವೂ ಒಂದು. ಕೆನಡಾದಿಂದ ಹಾರಿಬರುತ್ತಿದ್ದ ಏರ್ ಇಂಡಿಯ ವಿಮಾನ-182ರಲ್ಲಿ ಸಿಬ್ಬಂದಿ-ಪ್ರಯಾಣಿಕರು ಸೇರಿದಂತೆ 329 ಮಂದಿ ಪ್ರಯಾಣಿಸುತ್ತಿದ್ದರು. ಮಾರ್ಗಮಧ್ಯೆ ಐರ್ಲೆಂಡ್ ಬಳಿ ಸಂಚರಿಸುತ್ತಿದ್ದಾಗ ಖಲಿಸ್ತಾನ್ ಉಗ್ರರು ವಿಮಾನದಲ್ಲಿ ಇರಿಸಿದ್ದ ಬಾಂಬ್ ಸ್ಫೋಟಗೊಂಡಿತು. ಪರಿಣಾಮ ವಿಮಾನದಲ್ಲಿದ್ದ 329 ಜನರೂ ದುರ್ಮರಣಕ್ಕೀಡಾದರು.

2010: ಮಂಗಳೂರು ಏರ್ ಇಂಡಿಯ ದುರಂತ

ದುಬೈನಿಂದ ಹಾರಿಬಂದ ಏರ್ ಇಂಡಿಯ ಎಕ್ಸ್‌ಪ್ರೆಸ್‌ನ 812ನೇ ಸಂಖ್ಯೆಯ ವಿಮಾನ ಮಂಗಳೂರು ನಗರದ ಹೊರವಲಯದಲ್ಲಿನ ಮಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ 2010ರ ಮೇ 22ರ ನಸುಕಿನಲ್ಲಿ ಅಪಘಾತಕ್ಕೀಡಾಗಿ ಭಸ್ಮವಾಯಿತು. ಬೋಯಿಂಗ್ 737-800 ವಿಮಾನದ ಪೈಲಟ್ ಮುಂಜಾನೆಯ ನಿದ್ರೆಯ ಮಂಪರಿನಲ್ಲಿ ವಿಮಾನ ನಿಲ್ದಾಣದಲ್ಲಿನ ಕಿರಿದಾದ 'ಟೇಬಲ್ ಟಾಪ್' ರನ್‌ವೇ ಮೇಲೆ ನಿಗದಿಪಡಿಸಿದ್ದಕ್ಕಿಂತಲೂ ತುಸು ದೂರದಲ್ಲಿ ವಿಮಾನದ ಲ್ಯಾಂಡಿಂಗ್‌ಗೆ ಪ್ರಯತ್ನಿಸಿದ್ದೇ ದುರಂತಕ್ಕೆ ಕಾರಣವಾಯಿತು. ರನ್‌ವೇ ಕೊನೆಗೊಂಡರೂ ವಿಮಾನ ನಿಲುಗಡೆಯಾಗದೇ ಮುಂದೆ ಸಾಗಿದ್ದರಿಂದ ಪ್ರಪಾತಕ್ಕೆ ಉರುಳಿಬಿದ್ದು ಹೊತ್ತಿ ಉರಿದು ಭಸ್ಮವಾಯಿತು. ಪ್ರಯಾಣಿಕರು, ಸಿಬ್ಬಂದಿ ಸೇರಿದಂತೆ ವಿಮಾನದಲ್ಲಿದ್ದ 166 ಜನರಲ್ಲಿ 158 ಮಂದಿ ಮೃತಪಟ್ಟರು. ಉಳಿದವರು ಸುಟ್ಟಗಾಯಗಳಿಗೆ ಚಿಕಿತ್ಸೆ ಪಡೆದು ಜೀವ ಉಳಿಸಿಕೊಂಡರು. ಲ್ಯಾಂಡಿಂಗ್ ಸಂದರ್ಭದಲ್ಲಿನ ವಿಮಾನ ಅವಘಡಗಳಲ್ಲಿ ಮಂಗಳೂರು ವಿಮಾನ ದುರಂತ ಭೀಕರ ನೆನಪುಗಳನ್ನು ಉಳಿಸಿಬಿಟ್ಟಿದೆ.

1996: ಹರಿಯಾಣ ಛರ್ಕಿ ದಾದ್ರಿ ಬಳಿ ದುರಂತ

ಹರಿಯಾಣ ರಾಜ್ಯದ ಛರ್ಕಿ ದಾದ್ರಿ ಬಳಿ ಎರಡು ವಿಮಾನಗಳು ಗಗನದಲ್ಲೇ ಡಿಕ್ಕಿಯಾಗಿದ್ದ ಘಟನೆ 1996ರ ನವೆಂಬರ್ 12ರಂದು ನಡೆದಿತ್ತು. ಸೌದಿ ಆರೇಬಿಯ ಏರ್‌ಲೈನ್ಸ್‌ನ ಬೋಯಿಂಗ್ 747 ವಿಮಾನ ಮತ್ತು ಕಝುಕಸ್ತಾನ ಏರ್‌ಲೈನ್ಸ್‌ನ ಇಲ್ಯೂಷಿನ್ ಐಎಲ್-76 ವಿಮಾನ ಆಕಾಶದಲ್ಲಿ ಸಂಚರಿಸುತ್ತಿರುವಾಗಲೇ ಒಂದೇ ಮಾರ್ಗದಲ್ಲಿ ಎದುರುಬದರಾಗಿದ್ದರಿಂದ ಅಪಘಾತಕ್ಕೀಡಾದವು. ಪರಿಣಾಮ ಎರಡೂ ವಿಮಾನ ಹೊತ್ತಿ ಉರಿದು ಭಸ್ಮವಾಗಿದ್ದು, ಎರಡೂ ವಿಮಾನಗಳಲ್ಲಿದ್ದ ಪ್ರಯಾಣಿಕರು, ಪೈಲಟ್‌ಗಳು, ವಿಮಾನದ ಪರಿಚಾರಕ ವರ್ಗದವರೂ ಸೇರಿದಂತೆ ಒಟ್ಟು 349 ಜನರು ಸಜೀವ ದಹನವಾಗಿದ್ದರು. ಇದು ವಿಶ್ವದಲ್ಲೇ ಅತ್ಯಂತ ಘೋರ 'ಮಿಡ್ ಏರ್ ಕೊಲ್ಯೂಷನ್'(ಆಕಾಶದಲ್ಲೇ ವಿಮಾನ ಅಪಘಾತ) ಎನಿಸಿಕೊಂಡಿದೆ. ಭಾರತದ ನಾಗರಿಕ ವಿಮಾನಯಾನ ಇತಿಹಾಸದಲ್ಲೂ ಭೀಕರ ದುರಂತವಾಗಿ ದಾಖಲಾಗಿದೆ. ಸಂಪರ್ಕ ಸಂವಹನ-ಸೂಚನೆಗಳ ರವಾನೆ ಪ್ರಕ್ರಿಯೆಯಲ್ಲಿನ ದೋಷವೇ ವಿಮಾನ ಅವಘಡಕ್ಕೆ ಕಾರಣ ಎಂದು ಗುರುತಿಸಲಾಗಿದೆ. ಖಝುಕ್ ಏರ್‌ಲೈನ್ಸ್ ವಿಮಾನ ತಪ್ಪು ಸಂದೇಶದ ಕಾರಣದಿಂದಾಗಿ ತನಗೆ ನಿಗದಿಯಾಗಿದ್ದ ವಾಯು ಮಾರ್ಗಕ್ಕಿಂತ ಕಡಿಮೆ ಎತ್ತರದಲ್ಲಿ ಸಾಗಲು ಮುಂದಾಗಿದ್ದರಿಂದ ಅದೇ ಮಾರ್ಗದಲ್ಲಿ ಬಂದ ಸೌದಿ ಏರ್‌ಲೈನ್ಸ್ ವಿಮಾನಕ್ಕೆ ಡಿಕ್ಕಿಯಾಗಲು ಕಾರಣವಾಯಿತು ಎಂಬುದು ತನಿಖೆಯಿಂದ ದೃಢಪಟ್ಟಿದೆ.

ತಾತ್ಕಾಲಿಕ ಅಧ್ಯಾಪಕರಿಂದ ತರಗತಿ | ಸರಕಾರ ತುಂಬುತ್ತಿಲ್ಲ ಖಾಲಿ ಹುದ್ದೆ
ಒಂಬತ್ತು ವರ್ಷಗಳಿಂದಲೂ ನಿರ್ಲಕ್ಷ್ಯ | ವಿವಿಗೆ ಕಾಯಂ ಕುಲಪತಿ ನೇಮಕವಿಲ್ಲ

ಕಾಯಂ ಮೇಷ್ಟ್ರುಗಳೇ ಇಲ್ಲದ ವಿವಿ

ಜಿಲ್ಲಾ ನೋಟ

ಮಾಳಿಂಗರಾಯ ಪೂಜಾರ, ಗದಗ

ಗ್ರಾಮೀಣಾಭಿವೃದ್ಧಿ - ಪಂಚಾಯತ್‌ರಾಜ್ ಕುರಿತ ಅಧ್ಯಯನಕ್ಕಾಗಿ ಇಡೀ ದೇಶದಲ್ಲಿ ಮಾತ್ರವಲ್ಲ. ನಮ್ಮ ರಾಜ್ಯದಲ್ಲಿ ಇರುವ ಏಕೈಕ ವಿಶ್ವವಿದ್ಯಾಲಯ ಇದು. ಆದರೆ ಈ ವಿವಿಗೆ ಕಾಯಂ ಪ್ರಾಧ್ಯಾಪಕರು, ಕಾಯಂ ಸಿಬ್ಬಂದಿ ಮಾತ್ರ ಇಲ್ಲ. ಅಗತ್ಯವಿದ್ದಷ್ಟು ತಾತ್ಕಾಲಿಕವಾಗಿ ಭರ್ತಿ ಮಾಡಿಕೊಂಡು ಸದ್ಯಕ್ಕೆ ಈ ವಿಶ್ವವಿದ್ಯಾಲಯವನ್ನು ಮುನ್ನಡೆಸಲಾಗುತ್ತಿದೆ..!

ಡಿಮ್ಯಾಂಡ್ ಕೋರ್ಸ್

ಕರ್ನಾಟಕ ಸರಕಾರ 2016ರಲ್ಲಿ ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ ಕಾಯ್ದೆಯಡಿ ಇದನ್ನು ಸ್ಥಾಪಿಸಿತು. ನಂತರ 2017-18ರಲ್ಲಿ ಸ್ಥಾಪಿತ ಈ ವಿಶ್ವವಿದ್ಯಾಲಯಕ್ಕೆ ಪ್ರತಿ ವರ್ಷ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚುತ್ತಾ ಹೋಗುತ್ತಿದೆ ಆದರೆ ಇಲ್ಲಿ ಖಾಲಿ ಹುದ್ದೆಗಳು ಮಾತ್ರ ಸರಕಾರ ತುಂಬಲು ಮುಂದಾಗುತ್ತಿಲ್ಲ. ಇದರಿಂದ ಶಿಕ್ಷಣದ ಮೇಲೆ ಪರಿಣಾಮ ಬೀರುತ್ತಿದೆ.

ಗಾಂಧೀಜಿ ಹೆಸರಿನ ವಿವಿ

ಗಾಂಧೀಜಿಯ ಗ್ರಾಮ ಸ್ವರಾಜ್ಯದ ಪರಿಕಲ್ಪನೆಯನ್ನು ಸಾಕಾರಗೊಳಿಸಲು ಈ ವಿಶ್ವವಿದ್ಯಾಲಯ ಸ್ಥಾಪಿಸಿದ್ದು 'ಮಹಾತ್ಮ ಗಾಂಧಿ ಗ್ರಾಮೀಣಾಭಿವೃದ್ಧಿ -ಪಂಚಾಯತ್ ರಾಜ್ ವಿಶ್ವವಿದ್ಯಾಲಯ' ಎಂದು ಮರು ನಾಮಕರಣ ಮಾಡಲಾಯಿತು. ಯಾವ ಉದ್ದೇಶಕ್ಕೆ ಈ ವಿಶ್ವವಿದ್ಯಾಲಯ ಸ್ಥಾಪನೆ ಮಾಡಲಾಗಿದೆಯೋ ಆ ಉದ್ದೇಶ ಈಡೇರಲು ಹಾಗೂ ಉತ್ತಮ ಗುಣಮಟ್ಟದ ಶಿಕ್ಷಣ ದೊರೆಯಲು ಕಾಯಂ ಪ್ರಾಧ್ಯಾಪಕರದೇ ಬಹುದೊಡ್ಡ ಕೊರತೆ.

ಕಪ್ಪತ್ತಗುಡ್ಡದ ತಪ್ಪಲಲ್ಲಿ ಕ್ಯಾಂಪಸ್

ಕಪ್ಪತ್ತಗುಡ್ಡದ ತಪ್ಪಲಿನ ಸುಂದರ ಹಸಿರು ನಿಸರ್ಗದ ಮಧ್ಯೆ ವಿಶ್ವವಿದ್ಯಾಲಯ ತೆರೆದಿದೆ. ಸುಸಜ್ಜಿತ ಕಟ್ಟಡವನ್ನೂ ನಿರ್ಮಿಸಲಾಗಿದೆ. ಮೂಲ ಸೌಕರ್ಯ, ಶಿಕ್ಷಣದ ಗುಣಮಟ್ಟ ಕಲಿಕೆಗೆ ಬೇಕಾದ ಸೌಲಭ್ಯಗಳಿವೆ. ಸರಕಾರ ಭೌತಿಕ ಅಭಿವೃದ್ಧಿಗೆ ಬೇಕಾದ ಅನುದಾನ ನೀಡುತ್ತಿದೆ. ಆದರೆ ಕಾಯಂ ಸಿಬ್ಬಂದಿ ನೇಮಕಾತಿಗೆ ಕ್ರಮ ವಹಿಸದೆ ಒಂಬತ್ತು ವರ್ಷಗಳಿಂದ ನಿರ್ಲಕ್ಷ್ಯ ಧೋರಣೆ ಅನುಸರಿಸುತ್ತಿದೆ. ವಿಶ್ವವಿದ್ಯಾಲಯ ಉನ್ನತ ಶಿಕ್ಷಣ ಸಂಸ್ಥೆಯಾಗಿದ್ದು, ವಿವಿಯು ಸ್ನಾತಕೋತ್ತರ ಪದವಿ ನೀಡುತ್ತದೆ. ಅಲ್ಲದೆ, ವಿವಿಧ ಅಧ್ಯಯನ ಕ್ಷೇತ್ರಗಳಲ್ಲಿ ಪದವಿಗಳನ್ನು ನೀಡುತ್ತದೆ. ಆದರೆ ಈ ವಿಶ್ವವಿದ್ಯಾಲಯದಲ್ಲಿ ಸ್ನಾತಕೋತ್ತರ ಪದವಿ ಪಡೆದು ಉದ್ಯಮದಲ್ಲಿ ಪರಿಣಾಮಕಾರಿ ಸಂಶೋಧನಾ ವೃತ್ತಿಜೀವನಕ್ಕೆ ಸಿದ್ಧಪಡಿಸುವ ಪಿ.ಎಚ್‌ಡಿಗಾಗಿ ರಾಜ್ಯದ ಇತರೆ ವಿಶ್ವವಿದ್ಯಾಲಯಗಳನ್ನು ಅವಲಂಬಿಸಬೇಕಿದೆ.

> ರಾಜ್ಯದ ಬೇರೆ ವಿಶ್ವವಿದ್ಯಾಲಯದಲ್ಲಿ ಕೂಡ ಹುದ್ದೆಗಳು ಖಾಲಿ ಇವೆ. ಒಳಮೀಸಲು ಜಾರಿಗೆ ಆಗುವರೆಗೂ ಯಾವುದೇ ಹುದ್ದೆ ಭರ್ತಿ ಮಾಡಬಾರದು ಎಂದು ಸರಕಾರ ನೋಟಿಫಿಕೇಶನ್ ಹೊರಡಿಸಿದೆ. ಈಗಾಗಲೇನಾವು ನಮ್ಮ ವಿವಿಗೆ ಖಾಲಿ ಇರುವ ಹುದ್ದೆಗಳನ್ನು ಗುತ್ತಿಗೆ, ಹೊರಗುತ್ತಿಗೆ ಮೇಲೆ ತುಂಬಿಕೊಳ್ಳಲಾಗಿದೆ. ಶೈಕ್ಷಣಿಕವಾಗಿ ಯಾವುದೇ ತೊಂದರೆ ಇಲ್ಲ. ನಮ್ಮ ವಿಶ್ವವಿದ್ಯಾಲಯದಲ್ಲಿ ಗುಣಮಟ್ಟದ ಶಿಕ್ಷಣದ ಜತೆ ತರಬೇತಿ ಕೂಡ ನೀಡಲಾಗುತ್ತಿದೆ.
>
> **-ಪ್ರೊ.ಡಾ.ಸುರೇಶ್ ವಿ. ನಾಡಗೌಡರ,** ಪ್ರಭಾರ ಕುಲಪತಿ

> ಸರಕಾರದ ನಿರ್ಲಕ್ಷ್ಯ ಧೋರಣೆ ಯಿಂದ ವಿಶ್ವವಿದ್ಯಾಲಯದ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲಾಗುತ್ತಿಲ್ಲ. ಹುದ್ದೆಗಳನ್ನು ಖಾಲಿ ಇಟ್ಟುಕೊಂಡು ವಿಶ್ವವಿದ್ಯಾಲಯವನ್ನು ಹೇಗೆ ನಡೆಸಲಾಗುತ್ತದೆ. ಕೂಡಲೇ ಸರಕಾರ ಹುದ್ದೆಗಳನ್ನು ಭರ್ತಿ ಮಾಡಬೇಕು.
>
> **-ಎಸ್.ವಿ ಸಂಕನೂರ,** ವಿಧಾನ ಪರಿಷತ್ ಸದಸ್ಯರು

ವಿವಿ ಉದ್ದೇಶಗಳು

ಇಲ್ಲಿ, ವಿದ್ಯಾರ್ಥಿಗಳು ವಿವಿಧ ಶೈಕ್ಷಣಿಕ ಕ್ಷೇತ್ರಗಳಲ್ಲಿ ತಮ್ಮ ಜ್ಞಾನವನ್ನು ವಿಸ್ತರಿಸಿಕೊಳ್ಳಲು ಮತ್ತು ಸಂಶೋಧನೆಗಳನ್ನು ಮಾಡಲು ಅವಕಾಶವಿರುತ್ತದೆ. ಗ್ರಾಮೀಣ ಜನಸಂಖ್ಯೆಯ ಜೀವನ ಗುಣಮಟ್ಟದಲ್ಲಿ ಸುಸ್ಥಿರ ಗ್ರಾಮೀಣ ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಭಾಗವಹಿಸುವ ಸಮರ್ಪಿತ, ಮಾನವ ಸಂಪನ್ಮೂಲವನ್ನು ರಚಿಸುವುದು ವಿಶ್ವವಿದ್ಯಾಲಯದ ದೃಷ್ಟಿಕೋನ. ಇಂಥ ಶಿಕ್ಷಣದ ಜತೆ ತರಬೇತಿ ನೀಡುವುದು ವಿಶ್ವವಿದ್ಯಾಲಯದ ಉದ್ದೇಶ.

ಹೊಸ ಕುಲಪತಿಯೇ ಇಲ್ಲ

ಆದರೆ ವಿಶ್ವವಿದ್ಯಾಲಯ ಕುಲಪತಿ ನಿವೃತ್ತರಾಗಿ ವರ್ಷ ಕಳೆದರೂ ಇನ್ನುವರೆಗೆ ಹೊಸ ಕುಲಪತಿಯ ನೇಮಕ ಆಗದೆ, ಹಾಲಿ ಇರುವ ಕುಲಸಚಿವರಿಗೆ ಪ್ರಭಾರ ಹುದ್ದೆ ವಹಿಸಲಾಗಿದೆ. ಕಾಯಂ ಪ್ರಾಧ್ಯಾಪಕರು, ಸಹ ಪ್ರಾಧ್ಯಾಪಕರು, ಸಹಾಯಕ ಪ್ರಾಧ್ಯಾಪಕರು ಕೂಡ ಇಲ್ಲ. ವಿಶ್ವವಿದ್ಯಾಲಯದ ಶೇ.99 ರಷ್ಟು ಹುದ್ದೆಗಳನ್ನು ಗುತ್ತಿಗೆ ಆಧಾರ ಮೇಲೆ ತುಂಬಿಕೊಳ್ಳತ್ತ ವಿವಿ ನಡೆಸಲಾಗುತ್ತಿದೆ. ಇಲ್ಲಿ ಸ್ನಾತಕ 6 ಕೋರ್ಸ್ ಹಾಗೂ 10 ಸ್ನಾತಕೋತ್ತರ ಪದವಿ ನಡೆಸಲಾಗುತ್ತಿದೆ.

ವಿವಿಗೆ ಸುಸಜ್ಜಿತ ಕಟ್ಟಡ

ವಿವಿಗೆ ಸುಸಜ್ಜಿತ ಕಟ್ಟಡವಿದೆ. ಕ್ರೀಡಾ ಚಟುವಟಿಕೆ ಹಾಗೂ ಮೈದಾನ ಗ್ರಂಥಾಲಯ, ಆಡಳಿತ ಕಚೇರಿ, ತರಬೇತಿ ಕೇಂದ್ರ, ವ್ಯಾಸಂಗದ ಕೊಠಡಿ ಸೇರಿದಂತೆ ಸುಸಜ್ಜಿತ ಕಟ್ಟಡ ನಿರ್ಮಾಣ ಮಾಡಲಾಗಿದೆ. ಈ ವಿಶ್ವವಿದ್ಯಾಲಯದ ಒಟ್ಟು 175 ಹುದ್ದೆಗಳು ಇದ್ದು ಅದರಲ್ಲಿ ಕುಲಪತಿಗಳು, ಕುಲಸಚಿವರು ಈ 2 ಹುದ್ದೆಗೆ ಒಬ್ಬರೇ ಇದ್ದು ಅಂದರೆ ಕುಲಸಚಿವರು ಕುಲಪತಿಗಳಾಗಿ ಪ್ರಭಾರವಿದ್ದು, ಒಬ್ಬರು ಎಂಜನಿಯರ್ ಹಾಗೂ ಒಬ್ಬರು ಹಣಕಾಸು ಅಧಿಕಾರಿಗಳು, ನಾಲ್ಕು ಜನ ಪಿಡಿಓ ಹಾಗ ಇನ್ನುಳಿದಂತೆ 56 ಜನ ಪ್ರಾಧ್ಯಾಪಕರು ಗುತ್ತಿಗೆ ಆಧಾರದಲ್ಲಿದ್ದಾರೆ. ಅವಶ್ಯಕತೆ ತಕ್ಕಂತೆ ಒಟ್ಟು 126 ಜನರನ್ನು ಗುತ್ತಿಗೆ ಹಾಗೂ ಹೊರಗುತ್ತಿಗೆ ಹಾಗೂ ದಿನದ ವೇತನ ಆಧಾರದ ಮೇಲೆ ತಾತ್ಕಾಲಿಕ ಹುದ್ದೆಗಳನ್ನು ತುಂಬಿಕೊಂಡು ವಿಶ್ವವಿದ್ಯಾಲಯವನ್ನು ನಡೆಸಲಾಗುತ್ತಿದೆ.

ದಾವಣಗೆರೆ-ಚಿತ್ರದುರ್ಗ-ತುಮಕೂರು ನೇರ ರೈಲು | ವೇಗ ಪಡೆದ ಹೊಸ ರೈಲು ಮಾರ್ಗದ ಕಾಮಗಾರಿ | ಅಂದಾಜು 2140 ಕೋಟಿ ರೂ. ವೆಚ್ಚದ ಯೋಜನೆ

2027ರ ವೇಳೆಗೆ ನೇರ ರೈಲು ಸಿದ್ಧ

ಜಿಲ್ಲಾ ನೋಟ

ಗಣೇಶ್ ಕಮ್ಮಾಪುರ, ದಾವಣಗೆರೆ

ರಾಜಧಾನಿ ಬೆಂಗಳೂರಿಗೆ ತಲುಪಬೇಕಾದ ಮಾರ್ಗದ ಅಂತರವನ್ನು ಕಡಿಮೆ ಮಾಡಿ, ಪ್ರಯಾಣಿಕರಿಗೆ ಅನುಕೂಲ ಕಲ್ಪಿಸುವಲ್ಲಿ ದಾವಣಗೆರೆ-ಚಿತ್ರದುರ್ಗ-ತುಮಕೂರು ನೇರ ರೈಲು ಮಾರ್ಗದ ಕಾಮಗಾರಿ ಡಿಸೆಂಬರ್ ವೇಳೆಗೆ ಬಹುತೇಕ ಮುಗಿಯಲಿದೆ.

ಎಲ್ಲವೂ ಅಂದುಕೊಂಡಂತೆ ನಡೆದರೆ 2027ರ ವೇಳೆಗೆ ನೇರ ರೈಲು ಮಾರ್ಗ ಕಾಮಗಾರಿ ಮುಗಿದು ಲೋಕಾರ್ಪಣೆಗೊಳ್ಳಲಿದ್ದು, ಇದರಿಂದ 260 ಕಿ.ಮೀ ಇದ್ದ ಪ್ರಯಾಣದ ದೂರ 191 ಕಿ.ಮೀ.ಗೆ ಇಳಿಕೆಯಾಗಲಿದೆ.

ಈಚೆಗೆ ಚಿತ್ರದುರ್ಗದಲ್ಲಿ ನಡೆದ ನೂತನ ರೈಲು ಮಾರ್ಗದ ಪ್ರಗತಿ ಪರಿಶೀಲನೆ ಸಭೆಯಲ್ಲಿ ಮಾತನಾಡಿದ ಕೇಂದ್ರ ರೇಲ್ವೆ ರಾಜ್ಯ ಖಾತೆ ಸಚಿವ ಸೋಮಣ್ಣ, ದಾವಣಗೆರೆ- ಚಿತ್ರದುರ್ಗ- ತುಮಕೂರು ನೇರ ರೈಲು ಯೋಜನೆಯನ್ನು 2027ರ ಡಿಸೆಂಬರ್‌ಗೆ ಲೋಕಾರ್ಪಣೆಗೊಳಿಸ ಲಾಗುವುದು ಎಂದಿದ್ದಾರೆ.

ಮತ್ತಷ್ಟು ಸನಿಹ ರಾಜಧಾನಿ

ಸುಮಾರು 2140 ಕೋಟಿ ರು. ವೆಚ್ಚದ ನೇರ ರೈಲು ಮಾರ್ಗದ ಕಾಮಗಾರಿ ಸದ್ಯ ದಾವಣಗೆರೆ ತಾಲೂಕಿನ ತೋಳಹುಣಿಸೆ ರೈಲ್ವೆ ನಿಲ್ದಾಣದಿಂದ ಭರಮಸಾಗರದವರೆಗೆ ನಡೆಯುತ್ತಿದೆ. ನೇರ ರೈಲು ಮಾರ್ಗದ ಉಳಿಕೆ ಭೂಮಿ ಸ್ವಾಧೀನ ಪ್ರಕ್ರಿಯೆಗೆ 45 ಕೋಟಿ ರೂ. ನೀಡಲು ಆರ್ಥಿಕ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಚಿತ್ರದುರ್ಗ ಜಿಲ್ಲಾ ವ್ಯಾಪ್ತಿಯ 37 ಎಕರೆ, ತುಮಕೂರು ಜಿಲ್ಲೆಯ ಭಾಗದಲ್ಲಿ 58.3 ಎಕರೆ ಭೂ ಸ್ವಾಧೀನ ಬಾಕಿ ಇದ್ದು, ಈ ಸಮಸ್ಯೆಗೆ ಮುಕ್ತಿ ಸಿಕ್ಕರೆ ಈ ಭಾಗದ ಜನರಿಗೆ ಬೆಂಗಳೂರು ಮತ್ತಷ್ಟು ಸನಿಹವಾಗಲಿದೆ.

ಜಿಲ್ಲೆಯ ರೈಲು ನಿಲ್ದಾಣ

ಈಗಾಗಲೇ ಜಿಲ್ಲೆಯ ಆನಗೋಡು, ಹೆಬ್ಬಾಳು ಗ್ರಾಮದಲ್ಲಿ ರೈಲ್ವೆ ನಿಲ್ದಾಣ ಪೂರ್ಣಗೊಂಡಿದೆ. ಈ ಮಾರ್ಗದ 20 ಕಿ.ಮೀ. ವ್ಯಾಪ್ತಿಯ ಕೆರೆಹಳ್ಳಿ, ಬುಳ್ಳಾಪುರ ಸೇರಿ 4 ಕಿ.ಮೀ. ಟ್ರ್ಯಾಕ್ ಹಾಕಿದ್ದು, ಹೆಬ್ಬಾಳು ಬಳಿ ಸ್ವಲ್ಪ ಟ್ರ್ಯಾಕ್ ನಿರ್ಸಲಾಗಿದೆ. ಡಿಸೆಂಬರ್ ವೇಳೆಗೆ ಅದು ಸಹ ಪೂರ್ಣಗೊಳ್ಳಲಿದೆ. ಜತೆಗೆ, ಮಾರ್ಗ ನಿರ್ಮಾಣ, ಬಾಕ್ಸ್ ಚರಂಡಿ, 50 ಮೇಲ್ಸೇತುವೆ ಸಹ ನಿರ್ಮಾಣ ಹಂತದಲ್ಲಿದೆ.

ಇನ್ನೆರಡು ವರ್ಷಕ್ಕೆ ಪೂರ್ಣ:

ತದನಂತರ ಭರಮಸಾಗರದಿಂದ ಚಿತ್ರದುರ್ಗದವರೆಗಿನ ಕಾಮಗಾರಿ ಇನ್ನೆರಡು ವರ್ಷದಲ್ಲಿ ಪೂರ್ಣಗೊಳ್ಳಲಿದೆ. ಇನ್ನು ತುಮಕೂರು ಭೀಮಸಮುದ್ರ ಮಾರ್ಗದಲ್ಲಿ 3 ಕಿ.ಮೀ.ಗೆ ಹಳಿ ಹಾಕಲಾಗಿದ್ದು, ಊರುಕೆರೆಗೆ 6 ಗ್ರಾಮ ಒಳಗೊಂಡಿದ್ದು ಈ ಭಾಗದಲ್ಲಿ 3 ಕಿ.ಮೀ.ಗೆ ಹಳಿ ನಿರ್ಸಲಾಗುತ್ತಿದೆ. ಮೇಲ್ಸೇತುವೆ ಮತ್ತು ಟ್ರ್ಯಾಕ್ ಕಾಮಗಾರಿ ಪ್ರಗತಿಯಲ್ಲಿದೆ. ಜೋಗಿಹಳ್ಳಿ, ಚಿಕ್ಕನಹಳ್ಳಿ, ಶಿರಾ, ತಾವರೆಕೆರೆ ಬಳಿ ರೈಲ್ವೆ ನಿಲ್ದಾಣ ನಿರ್ಮಾಣ ಪ್ರಾರಂಭಿಸಬೇಕಿದೆ. ಈ ಭಾಗದಲ್ಲಿ ಈಗಾಗಲೇ ಶೇ.90ರಷ್ಟು ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಂಡಿದೆ. ಉಳಿದ ಭೂಸ್ವಾಧೀನವೂ ಶೀಘ್ರ ಸುಖಾಂತ್ಯವಾಗಲಿದೆ.



> ಪ್ರಸ್ತುತ ದಾವಣಗೆರೆಯಿಂದ ಬೆಂಗಳೂರಿಗೆ ರೈಲಿನಲ್ಲಿ ಪ್ರಯಾಣ ಸುಮಾರು 5.30 ತಾಸು ಆಗಲಿದೆ. ಆದರೆ, ಹೊಸ ನೇರ ಮಾರ್ಗದಲ್ಲಿ ಕೇವಲ 3.30 ತಾಸಿನಲ್ಲಿ ಬೆಂಗಳೂರು ತಲುಪಬಹುದು. ಇದರಿಂದ ಪ್ರಯಾಣಿಕರಿಗೆ ಮತ್ತಷ್ಟು ಅನುಕೂಲವಾಗಲಿದೆ.
>
> **-ರೋಹಿತ್ ಎನ್. ಜೈನ್,** ನೈರುತ್ಯ ರೈಲ್ವೆ ಪ್ರಯಾಣಿಕರ ಸಂಘದ ಕಾರ್ಯದರ್ಶಿ.

ಒಟ್ಟು 16 ರೈಲು ನಿಲ್ದಾಣ

ನೇರ ರೈಲು ಮಾರ್ಗ ಯೋಜನೆಯಡಿ ದಾವಣಗೆರೆ- ಚಿತ್ರದುರ್ಗ- ತುಮಕೂರು ಜಿಲ್ಲೆಗಳ ಮಧ್ಯದಲ್ಲಿ ಬರುವ ಕೆಲವು ಹಳ್ಳಿ, ತಾಲೂಕು ಕೇಂದ್ರಗಳಲ್ಲೂ ರೈಲು ಓಡಾಡಲಿದ್ದು, ಈಗಾಗಲೇ ಒಟ್ಟು 16 ರೈಲು ನಿಲ್ದಾಣಗಳನ್ನು ನಿರ್ಮಿಸಲು ಸಿದ್ಧತೆ ನಡೆದಿದೆ. ಇದರಿಂದ ಅದೆಷ್ಟೋ ವರ್ಷಗಳ ಕಾಲ ಈ ಭಾಗದ ಹಳ್ಳಿಗರು ಪಟ್ಟಣಕ್ಕೆ ಬರಬೇಕಾಗಿದ್ದ ತೊಂದರೆ ತಪ್ಪಲಿದೆ.

ತಿರುವು ಇಲ್ಲದ ಮಾರ್ಗ

ಪ್ರಸ್ತುತ ಇರುವ ಹಳೇ ಮಾರ್ಗದಲ್ಲಿ ಪ್ರತಿ 10 ಕಿ.ಮೀ.ಗೆ ಎರಡೆರಡು ತಿರುವುಗಳು ಬರುತ್ತವೆ. ಇದರಿಂದಾಗಿ 110 ಕಿ.ಮೀ. ವೇಗದಲ್ಲಿ ಚಲಿಸುವ ರೈಲು 40 ಕಿ.ಮೀ. ವೇಗದಲ್ಲಿ ಚಲಿಸುತ್ತದೆ. ಹೊಸ ನೇರ ರೈಲು ಮಾರ್ಗದಲ್ಲಿ ತಿರುವುಗಳೇ ಇರುವುದಿಲ್ಲ. ಜತೆಗೆ, 130 ಕಿ.ಮೀ.ಗಳ ವೇಗದಲ್ಲಿ ರೈಲು ಚಲಿಸಲಿದೆ. ಇದರಿಂದ ಪ್ರಯಾಣ ಇನ್ನಷ್ಟು ಸುಲಭವಾಗಲಿದೆ. ವಂದೇ ಭಾರತ್ ರೈಲು ಕೇವಲ 3 ಗಂಟೆಯಲ್ಲಿ ಬೆಂಗಳೂರಿಗೆ ತಲುಪಲಿದೆ ಎನ್ನುತ್ತಾರೆ ಎಂಜಿನಿಯರ್‌ಗಳು.

ದ್ವಿಪಥ ರೈಲು ಮಾರ್ಗ

ಪ್ರಸ್ತುತ ದಾವಣಗೆರೆಯಿಂದ- ತುಮಕೂರು- ರಾಜಧಾನಿವರೆಗೆ ಏಕ ಪಥ ರೈಲು ಮಾರ್ಗವಿದೆ. ದಾವಣಗೆರೆ ಕೂಗಳತೆ ದೂರದಲ್ಲಿ ಮಾತ್ರ ದ್ವಿಪಥ ರೈಲು ಮಾರ್ಗ ಮಾಡಿದ್ದು, ಅದು ಸಹ ಪೂರ್ಣ ಆಗಿಲ್ಲ. ಈ ಯೋಜನೆ ಪೂರ್ಣಗೊಂಡ ಬಳಿಕ ಈ ದಾವಣಗೆರೆ-ತುಮಕೂರು ನೇರ ರೈಲು ಮಾರ್ಗವನ್ನು ದ್ವಿಪಥ ರೈಲು ಮಾರ್ಗವಾಗಿ ಮಾಡುತ್ತೇವೆ ಎಂದು ಕೇಂದ್ರ ರೇಲ್ವೆ ರಾಜ್ಯ ಸಚಿವರು ನೂತನ ರೈಲು ಮಾರ್ಗದ ಪ್ರಗತಿ ಪರಿಶೀಲನೆ ಸಭೆಯಲ್ಲಿ ಮಾಹಿತಿ ನೀಡಿದ್ದಾರೆ.

ದೊಡ್ಡ ರೈಲು ಟರ್ಮಿನಲ್

ದ್ವಿ- ಪಥ ರೈಲು ಮಾರ್ಗ ಮಾಡಿದರೆ ಜನರಿಗೆ ರೈಲು ಕ್ರಾಸಿಂಗ್ ತಲೆಬಿಸಿ ಕೂಡ ತಪ್ಪಲಿದೆ. ಪ್ರಸ್ತುತ ಹುಬ್ಬಳಿಯಲ್ಲಿರುವ ದೊಡ್ಡ ರೈಲು ಟರ್ಮಿನಲ್ ನಂತೆ ದಾವಣಗೆರೆಯಲ್ಲೂ ದೊಡ್ಡ ಮಟ್ಟದ ರೈಲು ಟರ್ಮಿನಲ್ ನಿರ್ಮಿಸಲು ರೇಲ್ವೆ ಇಲಾಖೆ ನಿರ್ಧಾರ ಮಾಡಿದೆ.

@vishwavaninews ವಿಶ್ವವಾಣಿ 13-06-2025 ಶುಕ್ರವಾರ

ಆರಾಮ

ವಿಶ್ವವಾಣಿ ಗ್ಲೋಬಲ್ ಪ್ರಶಸ್ತಿ

ಪರಿಶ್ರಮದ ದುಡಿಮೆ ಮತ್ತು ದೂರದೃಷ್ಟಿಯ ಯೋಚನೆಯ ಫಲವಾಗಿ ಉದ್ಯಮದಲ್ಲಿ ಯಶಸ್ಸನ್ನು ಪಡೆದ ರವಿ ಎಚ್. ಇವರು, 'ವಿಶ್ವವಾಣಿ ಗ್ಲೋಬಲ್ ಅಚೀವರ್ಸ್' ಪ್ರಶಸ್ತಿಗೆ ಭಾಜನರಾಗಿದ್ದು, ಒಮಾನ್ ದೇಶದ ರಾಜಧಾನಿ ಮಸ್ಕತ್‌ನಲ್ಲಿ ನಡೆದ ಅದ್ದೂರಿ ಸಮಾರಂಭದಲ್ಲಿ ಗಣ್ಯರ ಸಮ್ಮುಖದಲ್ಲಿ, ಇವರಿಗೆ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು.

ಬದುಕು ರೂಪಿಸಿದ ಸನ್ ಟ್ರಾವೆಲ್ ಲಿಂಕ್!

• ರವಿ. ಎಚ್.

ದೊಡ್ಡಬಳ್ಳಾಪುರ ತಾಲ್ಲೂಕಿನ ವಾಣಿಗರಹಳ್ಳಿ ಎಂಬ ಗ್ರಾಮದಲ್ಲಿ ಜನಿಸಿದ ನಾನು ಬಾಲ್ಯದ ದಿನಗಳನ್ನು ಅಲ್ಲಿಯೇ ಕಳೆದು ಸರ್ಕಾರಿ ಶಾಲೆಯಲ್ಲಿ ವ್ಯಾಸಂಗ ಮಾಡಿದೆ. ರಜಾದಿನಗಳಲ್ಲಿ ತೋಟಗಳಲ್ಲಿ ಕೆಲಸ ಮಾಡಿ, 20-30 ರೂಪಾಯಿಯನ್ನು ಪಡೆದು ಕೂಡಿಡುತ್ತಿದ್ದೆ. ಇದರಲ್ಲಿ 2001ನೇ ಇಸವಿಯಲ್ಲಿ ಬ್ಲಾಕ್ ಅಂಡ್ ವೈಟ್ ಟಿವಿ ತೆಗೆದುಕೊಂಡಿದ್ದೆ. ನನ್ನ ತಂದೆ ತಾಯಿ ಇಬ್ಬರೂ ಕೃಷಿಕರು. ಇವರುಗಳು ಕೂಲಿ ಮಾಡಿದ ಹಣದಿಂದ ಜೀವನ ಸಾಗಿಸುತ್ತಿದ್ದೆವು.

2004ನೇ ಇಸವಿಯಲ್ಲಿ ನನ್ನ ತಂದೆಗೆ ಚಿಕ್ಕ ಗಾಯದಿಂದ ಎಡಗಾಲನ್ನು ಪೂರ್ತಿಯಾಗಿ ತೆಗೆಯಬೇಕಾಯ್ತು. ಆಗ ನಾನು ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆಯುತ್ತಿದ್ದ ಸಮಯ. ಮುಂದಿನ ವಿದ್ಯಾಭ್ಯಾಸ, ಜೀವನ ಮತ್ತು ಬೆಳವಣಿಗೆ ಎಲ್ಲದರ ಕುರಿತು ಚಿಂತೆ ಹತ್ತಿತ್ತು. ಆದರೂ ಪಿಯುಸಿ ಮುಗಿಸಿ, ಪದವಿ ತರಗತಿ ಸೇರಿಕೊಂಡೆ. ಕಾಲೇಜು ದಿನಗಳಲ್ಲಿ ಟ್ರ್ಯಾಕ್ಟರ್‌ಗಳಿಗೆ ಮರಳು, ಮಣ್ಣು ತುಂಬಲು ಹೋಗುತ್ತಿದ್ದೆ. ದಿನಕ್ಕೆ 30 ರಿಂದ 100 ರೂಪಾಯಿಯವರೆಗೆ ಸಿಗುತ್ತಿತ್ತು. ಇದನ್ನು ಕಾಲೇಜಿನ ವಿದ್ಯಾಭ್ಯಾಸಕ್ಕಾಗಿ ಖರ್ಚು ಮಾಡಿದೆ.

ಒಂದು ದಿನ ನನ್ನ ಸ್ನೇಹಿತ ಹಬ್ಬಕ್ಕೆ ಊರಿಗೆ ಬಂದಿದ್ದ. ಆತ ಬೆಂಗಳೂರಿನಲ್ಲಿ ಡ್ರೈವರ್ ಕೆಲಸ ಮಾಡುತ್ತಿದ್ದ. ಬೆಂಗಳೂರಿಗೆ ಕೆಲಸಕ್ಕೆ ಬರುತ್ತೀಯಾ? ಎಂದು ಕೇಳಿದ. ಆಗ ನಾನು ಕಾಲೇಜಿಗೆ ಹೋಗಲು ಬಸ್‌ಗಾಗಿ ಕಾಯುತ್ತಿದ್ದ ಸಮಯ. ಈತ ಹೇಳಿದ ತಕ್ಷಣ ಸರಿ ಬರುತ್ತೇನೆ ಎಂದೆ. ತಂದೆ ತಾಯಿಗೆ ತಿಳಿಸಿ, ಸ್ನೇಹಿತನ ಜೊತೆ ಬೆಂಗಳೂರಿಗೆ ಬಂದೆ.

ಬೆಂಗಳೂರಿನಲ್ಲಿ ಬದುಕು

ಜನವರಿ 16ನೆಯ ತಾರೀಖು 2006 ಇಸವಿ; ಬೆಂಗಳೂರಿನ ಜಿಡಿ ಮರದ ಹತ್ತಿರ ಬಂದಾಗ, 580 ರೂಪಾಯಿ ಮತ್ತು ಎರಡು ಜೊತೆ ಬಟ್ಟೆ ಮಾತ್ರ ಇತ್ತು. ಅಲ್ಲಿಯ ಮಾಲೀಕರನ್ನು ಪರಿಚಯಿಸಿ ನನ್ನ ಸ್ನೇಹಿತ ಹೊರ ಟುಹೋದ. ಆ ಮಾಲೀಕರದ್ದು ಕಾರ್ ಸೀಟ್ ಕವರ್ ತಯಾರಿಸುವ ಅಂಗಡಿ ಮತ್ತು 4 ಕ್ವಾಲಿಸ್ ಕಾರುಗಳಿದ್ದವು. ಅಲ್ಲಿಂದ ಶುರುವಾಯಿತು ನನ್ನ ಕೆಲಸ. ಅದೇ ಅಂಗಡಿಯಲ್ಲೇ ಮಲಗುತ್ತಿದ್ದೆ. ಪ್ರತಿದಿನ 50 ರೂಪಾಯಿಗಳನ್ನು ತಿಂಡಿ ಊಟಕ್ಕೆ ಕೊಡುತ್ತಿದ್ದರು. ತಿಂಗಳಿಗೆ ರು.1400/-ಸಂಬಳ. ಊರಿಲ್ಲೇ ಇದಕ್ಕಿಂತ ಹೆಚ್ಚಾಗಿ ಸಂಪಾದಿಸಬಹುದಲ್ಲ ಎನಿಸಿತು. ಆಗ ನೀನು ಹೀಗೆ ಚೆನ್ನಾಗಿ ಕೆಲಸ ಮಾಡು ಮುಂದಿನ ದಿನಗಳಲ್ಲಿ ಜಾಸ್ತಿ ಮಾಡುತ್ತೇನೆ ಎಂದರು. ದಿನ ಕಳೆದಂತೆ ಕೆಲಸವನ್ನು ತುಂಬಾ ಇಷ್ಟಪಟ್ಟೆ, ಊರಿಗೆ ಹೋಗುವ ಬದಲು, ಬೆಂಗಳೂರಿನಲ್ಲೇ ಕೆಲಸ ಮಾಡಬೇಕೆಂದು ತೀರ್ಮಾನಿಸಿದೆ.

1400 ರೂಪಾಯಿಯಿಂದ ಶುರುವಾದ ಸಂಬಳ 2011ರ ಹೊತ್ತಿಗೆ 13,000 ಕ್ಕೆ ಏರಿತು. ಆಗ ನಮ್ಮ ಅಂಗಡಿ ಮಾಲಿಕರ ಹತ್ತಿರ 25 ರಿಂದ 30 ಕಾರ್‌ಗಳಿದ್ದವು. ಅಲ್ಲಿ ಕೆಲಸ ಬಿಟ್ಟು ಬೇರೊಂದು ಟ್ರಾವೆಲ್ಸ್ ಸಂಸ್ಥೆ ಸೇರಿಕೊಂಡೆ. 2013 ರವರೆಗೆ ಕೆಲಸ ಮಾಡಿದೆ. ಆ ಮಾಲೀಕರು ತುಂಬಾ ಚೆನ್ನಾಗಿ ನೋಡಿಕೊಳ್ಳುತ್ತಿದ್ದರು.

ಹಲವು ವಾಹನಗಳ ಖರೀದಿ

ಹಾಗೆಯೇ ಒಂದು ದಿನ ನಾನೇ ಸ್ವಂತ ಟ್ರಾವೆಲ್ಸ್ ಏಜೆನ್ಸಿ ಮಾಡಬೇಕೆನಿಸಿತು. 2014 ರಲ್ಲಿ ಆರ್.ಆರ್.ನಗರದಲ್ಲಿ 10 ಇಂಟು 20 ಜಾಗವನ್ನು ಬಾಡಿಗೆಗೆ ಪಡೆದು, 'ಸನ್ ಟ್ರಾವೆಲ್ ಲಿಂಕ್' ಟ್ರಾವೆಲ್ಸ್ ಶುರು ಮಾಡಿದೆ. ಆಗ ನನ್ನ ಹತ್ತಿರ ಎರಡು ಸೆಕೆಂಡ್ ಹ್ಯಾಂಡ್ ಕಾರ್‌ಗಳಿದ್ದವು. ಎಲ್ಲರ ಸಹಾಯದಿಂದ ಸಬ್ ಕಾಂಟ್ರಾಕ್ಟರ್ ಆಗಿ ಕೆಲಸ ಶುರು ಮಾಡಿದೆ. 6 ತಿಂಗಳಲ್ಲಿ ಸುಮಾರು 30 ಕಾರ್‌ಗಳನ್ನು ಬಾಡಿಗೆಗೆ ನೀಡುವ ವಹಿವಾಟನ್ನು ಮಾಡಿದೆ. ಒಂದು ವರ್ಷದ ಹೊತ್ತಿಗೆ ಸುಮಾರು 70 ಕಾರ್‌ಗಳ ವಹಿವಾಟನ್ನು ಮಾಡುತ್ತಿದ್ದೆ. 2015 ಡಿಸೆಂಬರ್‌ರಲ್ಲಿ ಐಟಿಪಿಎಲ್‌ನಲ್ಲಿ ಒಂದು ಕಾರ್ಪೋರೇಟ್ ಕಂಪನಿಯ ಕಾಂಟ್ರಾಕ್ಟ್ ಸಿಕ್ಕಿತು; 40 ಕಾರ್ ಮತ್ತು ಟಿಟಿಗಳನ್ನು ಸರಬರಾಜು ಮಾಡುವ ಕೆಲಸ. ಬ್ಯಾಂಕ್ ಸಾಲ ಪಡೆದು, ತಕ್ಕ ಸಿಬ್ಬಂದಿ ಮತ್ತು ವಾಹನಗಳನ್ನು ಖರೀದಿ ಮಾಡಿದೆ. ಆಗ ನಾನು ರಾಮೋಹಳ್ಳಿಯಲ್ಲಿ ಬಾಡಿಗೆ ಮನೆಯಲ್ಲಿದ್ದೆ. ಮನೆಯ ಮಾಲೀಕರು ಮನೆಯನ್ನು ಮಾರಾಟಕ್ಕಿಟ್ಟರು. ಹೇಗಾದರೂ ಮಾಡಿ ಈ ಮನೆಯನ್ನು ಖರೀದಿ ಮಾಡಲೇಬೇಕೆಂದು ಶೇ.5ರ ಬಡ್ಡಿಗೆ ಸಾಲವನ್ನು ಪಡೆದು, ಆ ಪುಟ್ಟ ಮನೆಯನ್ನು ಖರೀದಿಸಿದೆ.

ಕಂಪೆನಿಗಳಿಗೆ ವಾಹನ

ಟ್ರಾವೆಲ್ಸ್ ವಹಿವಾಟಿನತ್ತ ಗಮನ ಕೇಂದ್ರೀಕರಿಸಿ ಮತ್ತಷ್ಟು ಕಾರ್ಪೋರೇಟ್ ಕಂಪನಿಯ ಕಾಂಟ್ರಾಕ್ಟ್‌ಗಳನ್ನು ತೆಗೆದಕೊಳ್ಳಲು ಮುಂದಾದೆ. ಹಾಗೆಯೇ ಎಲ್ಲವೂ ಚೆನ್ನಾಗಿ ಕೂಡಿ ಬಂತು. ಕ್ರಮೇಣ 380ಕ್ಕೂ ಅಧಿಕ ವಾಹನಗಳನ್ನು ಬಾಡಿಗೆಗೆ ಒದಗಿಸುವ ಮೂಲಕ, ಉದ್ಯಮ ಬೆಳೆಯಿತು.

ಒಂದೇ ಬ್ಯುಸಿನೆಸ್ ನಂಬಿಕೊಂಡು ಹೇಗೆ ಬೆಳೆಯೋದು ಎಂದು 2019ರಲ್ಲಿ ಯೋಚಿಸಿ, ಖಚ್ಚಿಟ್ಟ್ಣು ಮಾಡಿದರೆ ಹೇಗೆ ಎಂದು ತಿಳಿದು ಅದಕ್ಕೆ ತಕ್ಕ ತಯಾರಿ ಮಾಡಲು ಶುರು ಮಾಡಿದೆ. 3 ತಿಂಗಳ ಕಾಲ ತಯಾರಿ, ಅಧ್ಯಯನ ನಡೆಯಿತು. ಆರ್‌ಆರ್ ನಗರದಲ್ಲಿ ಒಂದು ಮಳಿಗೆ ಬಾಡಿಗೆಗೆ ತೆಗೆದುಕೊಂಡು ಸ್ಟಾರ್ಟ್ ಮಾಡಿದೆ. ಅಷ್ಟೊತ್ತಿಗೆ ಕೊರೋನಾ ಬಂದು ಎಲ್ಲವನ್ನು ತಲೆಕೆಳಗಾಗಿಸಿತು. ಸುಮಾರು ಒಂದು ವರ್ಷ ನಷ್ಟದಲ್ಲೇ ನಡೆಯಿತು. ಹೇಗಾದರೂ ಮಾಡಿ ಇದನ್ನು ಸಕ್ಸಸ್ ಮಾಡಲು ಒಳ್ಳೆಯ ಟೀಂ ಕಟ್ಟಿದೆ. ನಿಧಾನವಾಗಿ ಲಾಭ ಬರಲು ಶುರುವಾಯಿತು. ಮತ್ತೊಂದು ಶಾಖೆಯನ್ನು ಮಾಡಲು ನಿರ್ಧರಿಸಿದೆ. ಮತ್ತು ನನ್ನ ಪತ್ನಿ ಮಮತರನ್ನು ನೋಡಿಕೊಳ್ಳಲು ಪರಿಚಯಿಸಿದೆ. ನಂತರ ಎಲ್ಲವನ್ನೂ ಚೆನ್ನಾಗಿ ನೋಡಿಕೊಂಡು ಬಂದಿದ್ದರಿಂದ ನನಗೆ ಮತ್ತೊಂದು ಶಾಖೆ ತೆರೆಯಲು ಸಾಧ್ಯವಾಯಿತು. ಈಗ 4 ಬ್ರಾಂಚ್‌ಗಳು ಇವೆ.

ಲಾಕ್‌ಡೌನ್ ಕಲಿಸಿದ ಪಾಠ

ಕರೋನಾ ಲಾಕ್‌ಡೌನ್‌ನಿಂದ ತುಂಬಾ ಕಲಿತೆ. ಒಂದನ್ನೇ ನಂಬಿಕೊಂಡು ಹೇಗೆ ಬೆಳೆಯೋದು ಕಷ್ಟ ಎನಿಸಿ, ಎಲ್ಲಾ ಸಮಯದಲ್ಲೂ ನಡೆಯುವ ಬ್ಯುಸಿನೆಸ್ ಮಾಡಬೇಕೆಂದು 6 ತಿಂಗಳ ಕಾಲ ಸುಮಾರು 4 ರಿಂದ 5 ರಾಜ್ಯಗಳನ್ನು ಸುತ್ತಿ ಒಂದು ಫ್ಯಾಕ್ಟರಿ ಮಾಡಲು ನಿರ್ಧರಿಸಿದೆ. ಅದರ ಕುರಿತು ತಿಳಿದುಕೊಂಡು, 2021 ನವೆಂಬರ್‌ನಲ್ಲಿ ತುಮಕೂರಿನಲ್ಲಿ ಕಾರ್ಟನ್ ಬಾಕ್ಸ್ ತಯಾರಿಸುವ ಕಾರ್ಖಾನೆಯನ್ನು ಶುರು ಮಾಡಿದೆ. ಒಂದು ವರ್ಷ ಕಠಿಣ ಪರಿಶ್ರಮದಿಂದ ಸುಮಾರು 50 ಜನ ಕೆಲಸಗಾರರಿರುವ ಫ್ಯಾಕ್ಟರಿ ಸುಗಮವಾಗಿ ನಡೆಯುತ್ತಿದ್ದು ಇದನ್ನು ಮತ್ತಷ್ಟು ಬೆಳೆಸಬೇಕು ಎಂದು ಪ್ರಯತ್ನಿಸುತ್ತಿದ್ದೇನೆ. ಮುಂದಿನ ದಿನಗಳಲ್ಲಿ ನನ್ನ ಎಲ್ಲಾ ಸಂಸ್ಥೆಗಳಿಂದ ಸುಮಾರು 5000 ಜನರಿಗೆ ಉದ್ಯೋಗ ಕೊಡಬೇಕೆಂದು ಗುರಿಯಿಟ್ಟುಕೊಂಡಿದ್ದೇನೆ. ಪರಿಶ್ರಮ ಹಾಕಿದರೆ, ನ್ಯಾಯ ಮಾರ್ಗದಲ್ಲಿ ನಡೆದರೆ, ಉದ್ಯಮದಲ್ಲಿ ಯಶಸ್ಸು ಗಳಿಸಬಹುದು ಎಂಬುದು ನನ್ನ ನಂಬಿಕೆ ಮತ್ತು ಅದನ್ನು ಪಾಲಿಸಿಕೊಂಡು ಬರುತ್ತಿದ್ದೇನೆ.

ಹಳ್ಳಿಯಿಂದ ಬೆಂಗಳೂರಿಗೆ ಬಂದು ಪುಟ್ಟ ಕೆಲಸಕ್ಕೆ ಸೇರಿ, ಟ್ರಾವೆಲ್ಸ್ ವ್ಯವಹಾರವನ್ನು ಕರಗತ ಮಾಡಿಕೊಂಡ ರವಿ ಎಚ್. ಅವರು, ಸನ್ ಟ್ರಾವೆಲ್ ಲಿಂಕ್ ಎಂಬ ಸಂಸ್ಥೆಯ ಮೂಲಕ ನೂರಾರು ವಾಹನಗಳನ್ನು ಬಾಡಿಗೆಗೆ ಒದಗಿಸುತ್ತಿದ್ದಾರೆ. ಜತೆಗೆ, ವಿವಿಧ ವ್ಯವಹಾರಕ್ಕೆ ಅಗತ್ಯವಾಗುವ ರಟ್ಟಿನ ಪೆಟ್ಟಿಗೆಗಳನ್ನು ತಯಾರಿಸುವ ಫ್ಯಾಕ್ಟರಿಯನ್ನೂ ಆರಂಭಿಸಿ, ಹಲವರಿಗೆ ಉದ್ಯೋಗಾವಕಾಶ ಒದಗಿಸಿದ್ದಾರೆ. ಇವರು 'ವಿಶ್ವವಾಣಿ ಗ್ಲೋಬಲ್ ಅಚೀವರ್ಸ್ ಪ್ರಶಸ್ತಿ'ಗೆ ಭಾಜನರಾಗಿದ್ದಾರೆ. ಶ್ರಮವಹಿಸಿ ದುಡಿದು, ವ್ಯವಹಾರವನ್ನು ಕಟ್ಟಿ ಬೆಳೆಸಿದ ತಮ್ಮ ಅನುಭವಕ್ಕೆ ರವಿ.ಎಚ್. ಅವರು ಇಲ್ಲಿ ತಾವೇ ಅಕ್ಷರ ರೂಪ ನೀಡಿದ್ದಾರೆ.

ಸನ್ ಟ್ರಾವೆಲ್ ಲಿಂಕ್

ರವಿಯವರು ಬಾಲ್ಯದಿಂದಲೂ ಉದ್ಯಮದ ಕನಸು ಕಾಣುತ್ತಿದ್ದರು. 2006ರಲ್ಲಿ ಅಟೊಮೊಬೈಲ್ ಬಿಡಿ ಭಾಗ ಮಾರುತ್ತಿದ್ದ ಮಳಿಗೆಯೊಂದರಲ್ಲಿ ಸಹಾಯಕರಾಗಿ ಕೆಲಸಕ್ಕೆ ಸೇರಿಕೊಂಡರು. ಅಲ್ಲೇ ಅನುಭವ ಗಳಿಸಿ, 2014ರಲ್ಲಿ ಸ್ವಂತ ಟ್ರಾವೆಲ್ ಬಿಸಿನೆಸ್ ಆರಂಭಿಸಿದರು. ಅದು ಈಗ 'ಸನ್ ಟ್ರಾವೆಲ್ ಲಿಂಕ್' ಸಂಸ್ಥೆಯಾಗಿ ಬೆಳೆದು ನಿಂತಿದೆ. ಒಂದು ಕಾರಿನಿಂದ ಆರಂಭವಾದ 'ಸನ್ ಟ್ರಾವೆಲ್ ಲಿಂಕ್' ಈಗ 380ಕ್ಕೂ ಅಧಿಕ ವಾಹನಗಳನ್ನು ಒಳಗೊಂಡಿದೆ ಮತ್ತು ಜನರಿಗೆ ಸೂಕ್ತ ಬೆಲೆಯಲ್ಲಿ ಸೇವೆಯನ್ನು ಕೊಡುತ್ತಿದೆ. 800 ಕ್ಕೂ ಹೆಚ್ಚು ಇತರ ವಾಹನಗಳು ಈ ಸಂಸ್ಥೆಯ ಹೊರಗುತ್ತಿಗೆಯ ನೆಟ್‌ವರ್ಕ್‌ನಲ್ಲಿ ಸೇವೆಗೆ ಲಭ್ಯವಿದೆ. ಜನರಿಗೆ ಉತ್ತಮ ಸೇವೆ ನೀಡುವುದೇ ತನ್ನ ಗುರಿ ಎನ್ನುತ್ತಾರೆ ರವಿ.

ಲೇಕ್ ವ್ಯೂನಲ್ಲಿ ಮನೆ!

• ಕೆ.ಎಸ್.ಸೋಮೇಶ್ವರ

ಬೆಂಗಳೂರಿನ ಹಲವು ಬಡಾವಣೆಗಳು ಮತ್ತು ವಸತಿ ಸಮುಚ್ಚಯಗಳು ಲೇಕ್ ಸಿಟಿ, ಲೇಕ್ ವ್ಯೂ, ಲೇಕ್ ರಿಟ್ರೀಟ್, ಹೀಗೆ 'ಲೇಕ್'ನ' ಗುಣವಾಚಕಗಳನ್ನು ಬಳಸಿ ನಾಮಕರಣ ಮಾಡಿಕೊಂಡಿವೆ. ಇದರ ಹಿನ್ನೆಲೆ ಏನು? ಕಾವೇರಿ ನೀರು ಬೆಂಗಳೂರಿಗೆ ಬರುವ ಮೊದಲು, ತಿಪ್ಪಗೊಂಡನಹಳ್ಳಿ ಜಲಾಶಯವೇ ನೀರುಣಿಸುತ್ತಿತ್ತು. ಕಾವೇರಿ ನೀರು ಬಂದ ಮೇಲೂ ಕೆಲವು ಭಾಗಗಳಿಗೆ ಹಲವು ವರ್ಷಗಳು ಕಾವೇರಿ ಭಾಗ್ಯ ಇರಲಿಲ್ಲ.

ಬೆಂಗಳೂರಿನ ಲೇಕ್‌ಗಳ ಇತಿಹಾಸ ಹಳೆಯದು. ಬೆಂಗಳೂರು ಕಲ್ಲು ಬಂಡೆಗಳ ಬುನಾದಿಯ ಮೇಲೆ ನಿಂತಿದೆ. ಇಲ್ಲಿನ ಅಂತರ್ಜಲ ವ್ಯವಸ್ಥೆಯೂ ಉತ್ತಮ. ಯಲಹಂಕದಿಂದ ಕೆರೆಗಳ ಜಾಡು ಹುಡುಕುತ್ತ ಹೊರಟರೆ, ಹೆಬ್ಬಾಳ ಕೆರೆ, ಸ್ಯಾಂಕಿ ಕೆರೆ, ಜಕ್ಕರಾಯನ ಕೆರೆ, ಧರ್ಮಾಂಬುಧಿ, ಕೆಂಪಾಂಬುಧಿ, ಸಂಪಂಗಿ ಕೊಳ, ಅಲಸೂರು ಕೆರೆ, ದಕ್ಷಿಣಕ್ಕೆ ಬಂದರೆ ಲಾಲ್ ಬಾಗ್ ಕೆರೆ, ಸಾರಕ್ಕಿ ಕೆರೆ, ಅರಕೆರೆ, ಹುಳಿಮಾವು, ಬೈರಸಂದ್ರ, ಮಡಿವಾಳ, ಅಗರ ಹೀಗೆ ಕೆರೆ ಕಟ್ಟೆಗಳ ಆಗರವೇ ನಮಗೆ ಸಿಗುತ್ತದೆ. ಅವು ಯಾವುವೂ ಮಳೆಗಾಲದಲ್ಲಿ ತುಂಬಿದರೂ, ತೊಂದರೆ ಕೊಡುತ್ತಿರಲಿಲ್ಲ; ಒಂದು ಕೆರೆ ತುಂಬಿದರೆ, ಹೆಚ್ಚಿನ ನೀರು ಮುಂದಿನ ಕೆರೆಗೆ ಕಾಲುವೆಯಲ್ಲಿ ಸಾಗುತ್ತಿತ್ತು. ಅಂದರೆ, ಅವುಗಳು ಒಂದಕ್ಕೊಂದು ಸಂಪರ್ಕ ಹೊಂದಿದ್ದವು. ಈ ರೀತಿಯ ಜೀವ ಜಲದ ಜಾಲವನ್ನು ನಿರ್ಮಿಸಿದ ಅಂದಿನ ಜಲ ತಜ್ಞರಿಗೆ ಧನ್ಯವಾದ ಹೇಳಲೇಬೇಕು.

ಇದು ಅಂದಿನ ಕಥೆ. 'ಬೆಳೆದಿದೆ ನೋಡ ಬೆಂಗಳೂರು ನಗರ' ಎಂಬ ಕವನವನ್ನು ಕವಿ ಸಿ.ವಿ.ಶಿವಶಂಕರ್‌ರವರು ಬರೆಯುವ ವೇಳೆಗಾಗಲೇ ಇಲ್ಲಿನ ವಿಶಾಲ ಜಲತಾಣ ಧರ್ಮಾಂಬುಧಿ ಕೆರೆ (ಇಂದು ಮೆಜೆಸ್ಟಿಕ್ ಬಸ್ ನಿಲ್ದಾಣ) ನಿರ್ಜಲವಾಗಿತ್ತು. ಹಲವು ವರ್ಷಗಳು ಇದು ಬರಡು ನೆಲವಾಗಿದ್ದು ಅನೇಕ ಸರ್ಕಸ್ ಕಂಪನಿಗಳು ನಾಟಕ ಕಂಪನಿಗಳು ಮತ್ತು ವಸ್ತು ಪ್ರದರ್ಶನಗಳಿಗೆ ನೆಲವಾಗಿದ್ದಿತು. ಈಗ ದೊಡ್ಡ ಬಸ್ ನಿಲ್ದಾಣ ಇದಾಗಿದೆ. ಅಷ್ಟೇ ಹೆಸರುವಾಸಿಯಾಗಿದ್ದ ಗವಿಪುರದ ಕೆಂಪಾಂಬುಧಿ ಕೆರೆ ಈಗ ಮಕ್ಕಳ ಸ್ನಾನದ ತೊಟ್ಟಿಯಂತಿದೆ. ನೀರು ಕೊಳೆತಿದೆ. ಇನ್ನು ಕೆರೆಯಾಗಿಯೇ ಉಳಿದುಕೊಂಡಿರುವವು, ಅಲಸೂರಿನದು, ಲಾಲ್ ಬಾಗ್ ಕೆರೆ, ಸ್ಯಾಂಕಿ ಟ್ಯಾಂಕ್, ಹೆಬ್ಬಾಳ ಕೆರೆ. ಇದೇ ರೀತಿಯಲ್ಲಿಅಲ್ಲಲ್ಲಿ ಕೆಲವು ಉಳಿದಿವೆ. ಕೆಲವೆಡೆ ಬೆಂಗಳೂರಿನ ಕೆರೆಗಳ ಪುನಶ್ಚೇತನದ ಬಗೆಗೆ ಆಗಾಗ್ಗ ಮಾತು ಕೇಳಿ ಬರುತ್ತದೆ. ವಾಸ್ತವದಲ್ಲಿ ಅದರಲ್ಲಿ ನೈಜ ಚೇತನವೇ ಇಲ್ಲ.

ಅಂದು ಹಸಿರು ಕಾಡು ಬೆಳೆಸಿದ ಈ ಕೆರೆ ಕಟ್ಟೆಗಳು ಇಂದಿನ ನಗರೀಕರಣದ ಆರ್ಭಟದಲ್ಲಿ ಕಾಂಕ್ರಿಟ್ ಕಾಡಿನಲ್ಲಿ ಮುಳುಗಿ ಹೋಗಿವೆ. ಇಂದಿನ ಜನರು, ಬಡಾವಣೆ ಅಥವಾ ಬಹುಮಹಡಿ ವಸತಿ ಸಮುಚ್ಚಯಗಳಿಗೆ ಅವುಗಳ ಹೆಸರು ಇರಿಸಿದ್ದೇವೆಂಬ ಒಣಜಂಭದಲ್ಲಿ ತಮ್ಮ ಬೆನ್ನನ್ನು ತಾವೇ ತಟ್ಟಿಕೊಳ್ಳುತ್ತಿದ್ದಾರೆ! ಇದರಲ್ಲಿನ ವಿಪರ್ಯಾಸವೆಂದರೆ, ನಾವು ಬದುಕಿದ್ದ ಅನನ್ಯ ವ್ಯಕ್ತಿಗಳಿಗೆ ಜೀವವಿಲ್ಲದಂತೆ ಮಾಡಿ, ಆನಂತರ ಅವರ ಅವರ ಚಿತ್ರ ಪಟ ತೂಗು ಹಾಕಿ ಹಾಡಿ ಹೊಗಳಿದಂತಿದೆ. ಅಲ್ಲವೆ!

ಅಮೃತಕ್ಕಾಗಿ ದೇವ ದಾನವರ ಹರಸಾಹಸ

ದಾಯಾದಿಗಳಾದ ದೇವ-ದಾನವರಿಗೆ ತಮ್ಮ ತಮ್ಮಲ್ಲೇ ವೈರವುಂಟಾಯಿತು. ಅದರಿಂದಾಗಿ ಎರಡೂ ಗುಂಪುಗಳ ನಡುವೆ ಆಗಾಗ ಯುದ್ಧವು ಸಂಭವಿಸುತ್ತಿತ್ತು. ದೈವ ವಿರೋಧಿಗಳಾದ ದಾನವರ ಕಿರುಕುಳ ದೇವತೆಗಳಿಗೆ ಹೆಚ್ಚಾಯಿತು. ಒಮ್ಮೆ ನಡೆದ ಭೀಕರ ಕಾಳಗದಲ್ಲಿ ದೇವತೆಗಳು ಅತಿಯಾದ ಸಾವು ನೋವುಗಳನ್ನು ಅನುಭವಿಸಿ ದಿಕ್ಕುಗಾಣದೆ ಬ್ರಹ್ಮನ ಬಳಿಗೆ ಹೋಗಿ ತಮ್ಮ ಅಳಲನ್ನು ಹೇಳಿಕೊಂಡರು. ಅವನ ಸಲಹೆಯಂತೆ ಎಲ್ಲ ದೇವತೆಗಳೂ ಭಗವಂತನಾದ ವಿಷ್ಣುವಿನ ಬಳಿ ಸಾರಿ ಅವನಿಗೆ ಶರಣಾಗಿ ಪ್ರಾರ್ಥಿಸ ತೊಡಗಿ ದರು. ಅವರ ಪ್ರಾರ್ಥನೆಯಂತೆ ಪ್ರಸನ್ನನಾದ ಭಗವಂತನು ದಾನವರ ರಾಜನಾದ ಬಲಿ ಚಕ್ರವರ್ತಿಯೊಂದಿಗೆ ಸಂಧಾನ ಮಾಡಿಕೊಂಡು ಸಮುದ್ರ ಮಂಥನ ಮಾಡಿದಲ್ಲಿ ಅಮೃತ ಲಭಿಸುವುದೆಂದೂ, ಅದನ್ನು ಸೇವಿಸುವುದರಿಂದ ಅಮರರಾಗಬಹುದೆಂದೂ ದೇವತೆಗಳಿಗೆ ತಿಳಿಸಿದನು.

ಭಗವಂತನ ಸಲಹೆಯಂತೆ ದೇವತೆಗಳು ದಾನವರ ರಾಜನಾದ ಬಲಿಯನ್ನು ಮುಖಂಡನೆಂದು ಒಪ್ಪಿಕೊಂಡು ಮಂದರ ಪರ್ವತವನ್ನು ಕಡೆಗೋಲನ್ನಾಗಿಯೂ, ವಾಸುಕಿ ಎಂಬ ಸರ್ಪವನ್ನು ಹಗ್ಗವನ್ನಾಗಿಯೂ ಬಳಸಿಕೊಂಡು ಅಮೃತಕ್ಕಾಗಿ ಸಮುದ್ರ ಮಂಥನ ಕಾರ್ಯವನ್ನು ಪ್ರಾರಂಭಿಸಿದರು. ಆದರೆ ಸಮುದ್ರವನ್ನು ಕಡೆಯುತ್ತಿದ್ದಂತೆ ಮಂದರ ಪರ್ವತವು ಆಳವರಿಯದ ಆ ಸಮುದ್ರದಲ್ಲಿ ಮುಳುಗತೊಡಗಿತು. ನಿರಾಶೆಗೊಂಡ ಎಲ್ಲರನ್ನು ಸಂತೈಸಿದ ಭಗವಂತನು ಆಮೆಯ ರೂಪವನ್ನು ಧರಿಸಿ ಸಮುದ್ರದ ಆಳಕ್ಕೆ ಹೋಗಿ ಮಂದರಾಚಲವನ್ನು ತನ್ನ ಬೆನ್ನಿನ ಮೇಲೆ ಎತ್ತಿ ಹಿಡಿದನು.

ಅನಂತರ ನಡೆದ ಸಮುದ್ರ ಮಂಥನದಲ್ಲಿ ಮೊದಲಿಗೆ ಸಮುದ್ರದಿಂದ ವಿಷ ಉಕ್ಕಿತು. ಸರ್ವರ ಒಳಿತಿಗಾಗಿ ಶಿವನು ಆ ವಿಷವನ್ನು ಸೇವಿಸಿ, ತನ್ನ ಗಂಟಲಿನಲ್ಲಿಯೇ ಉಳಿಸಿಕೊಂಡು ನೀಲಕಂಠನಾದನು. ಅನಂತರ ಬಂದದ್ದು ಸುರಭಿ ಎಂಬ ಹಸು. ಯಜ್ಞ ಕಾರ್ಯಗಳಿಗೆ ಅಗತ್ಯವಾದ ಸಕಲವನ್ನೂ ನೀಡುವ ಶಕ್ತಿ ಹೊಂದಿದ್ದ ಅದನ್ನು ಮಹರ್ಷಿಗಳ ವಶಕ್ಕೆ ನೀಡಲಾಯ್ತು. ಮುಂದುವರಿದ ಸಮುದ್ರಮಂಥನ ಕಾರ್ಯದಲ್ಲಿ ಸಾಗರದಾಳದಿಂದ ಉದ್ಭವಿಸಿದ ಚಂದ್ರನಷ್ಟು ಬೆಳ್ಳಗಿನ ಉಚ್ಚೈಶ್ರವಸ್ ಎಂಬ ಅಶ್ವವನ್ನು ಬಲಿ ಮಹಾರಾಜನೂ ಅನಂತರ ಲಭಿಸಿದ ಐರಾವತ ಹಾಗೂ ಇತರ ಎಂಟು ಆನೆಗಳನ್ನು ಇಂದ್ರನೂ ಪಡೆದರು. ಅವುಗಳ ಅನಂತರ ಲಭ್ಯವಾದ ಕೌಸ್ತುಭ ಎಂಬ ಮಣಿಯು ಮಹಾವಿಷ್ಣುವಿನ ವಕ್ಷಸ್ಥಳವನ್ನು ಅಲಂಕರಿಸಿತು. ಆದರೂ ಅವರು ನಿರೀಕ್ಷಿಸಿದ್ದಂತೆ ಅಮೃತ ಮಾತ್ರ ಇನ್ನೂ ಉದ್ಭವವಾಗಿರಲಿಲ್ಲ.

ದೇವ ದಾನವರ ಎರಡೂ ಗುಂಪುಗಳೂ ಸಮುದ್ರ ಮಂಥನದ ಈ ಕಾರ್ಯದಲ್ಲಿ ಬಹುವಾಗಿ ದಣಿದಿದ್ದರು. ಆಗ ಭಗವಂತನು ಸಹಸ್ರಬಾಹುವಾಗಿ ಸ್ವತಃ ಎರಡೂ ಕಡೆಯಿಂದ ಕಡೆಯಲು ಪ್ರಾರಂಭಿಸಿ ಸಮುದ್ರ ಮಂಥನ ಕಾರ್ಯಕ್ಕೆ ಸಹಕರಿಸಿದನು. ಆಗ ಬಂದದ್ದು ಪಾರಿಜಾತ ಪುಷ್ಪ ಮತ್ತು ಅಪ್ಸರೆಯರು. ಪಾರಿಜಾತ ಪುಷ್ಪವು ದೇವಲೋಕವನ್ನು ಅಲಂಕರಿಸಿದರೆ ಅದರೊಂದಿಗೆ ಬಂದ ಅಪ್ಸರೆಯರು ಸ್ವರ್ಗಲೋಕದ ನಿವಾಸಿಗಳಾದರು. ಅನಂತರ ಉದ್ಭವಿಸಿದ್ದು ರಮಾ ಅಥವಾ ಲಕ್ಷ್ಮಿ, ಅಮೃತ ಶಿಲೆಯ ಪರ್ವತವನ್ನು ಬೆಳಗುವ ಮಿಂಚನ್ನೂ ಮೀರಿಸುವ ವಿದ್ಯುತ್ತಿನಂತಿರುವ ಅವಳನ್ನು ಶ್ರೀಹರಿಯು ವರಿಸಿದನು. ಇದಾದ ಮೇಲೆ ಹೊರ ಬಂದದ್ದು ವಾರುಣಿ ಎಂಬ ಕಮಲಲೋಚನೆ. ಮದ್ಯಪಾನಿಗಳನ್ನು ನಿಯಂತ್ರಿಸುವ ಇವಳು ಬಲಿಮಹಾರಾಜನ ನೇತೃತ್ವದಲ್ಲಿ ದಾನವರ ವಶವಾದಳು. ಮಂಥನ ಮುಂದುವರೆದಾಗ ಮಹಾ ಘಟನೆಯೊಂದು ನಡೆಯಿತು. ಸಮುದ್ರ ಮಧ್ಯೆಯಿಂದೊಬ್ಬ ಮಹಾ ಪುರುಷನು ಮೇಲೆದ್ದನು. ಅವನೇ ಧನ್ವಂತರಿ. ಅವನ ಕೈಯಲ್ಲಿ ಅಮೃತ ಕಲಶವಿತ್ತು. ಅಲ್ಲಿಗೆ ಸಮುದ್ರ ಮಂಥನ ಕಾರ್ಯವು ಪೂರ್ಣಗೊಂಡಿತು.

ಹೀಗೆ ದೇವದಾನವರು ಅಮೃತಕ್ಕಾಗಿ ನಡೆಸಿದ ಸಮುದ್ರ ಮಂಥನದಂತಹ ಮಹಾ ಸಾಹಸದ ಕಾರ್ಯದುದ್ದಕ್ಕೂ ಕೂರ್ಮದ ರೂಪ ದಲ್ಲಿ ಮಂದರ ಪರ್ವತವನ್ನು ತನ್ನ ಬೆನ್ನಿನ ಮೇಲೆ ಹೊತ್ತು ಸಹಕರಿಸಿದ ಭಗವಂತನನ್ನು ಅಂದಿನಿಂದ ಮಹಾಕೂರ್ಮ ಎಂಬ ನಾಮಾಂಕಿತದಿಂದ ಸಕಲ ಭಕ್ತ ವರ್ಗವೂ ಸ್ತುತಿಸಿತು. ನೋಡಿದಿರಲ್ಲ ಸಮುದ್ರ ಮಂಥನ ದಲ್ಲಿ ಅಮೃತಕ್ಕಾಗಿ ಎಷ್ಟೆಲ್ಲಾ ಕಾಡು ಪಡಬೇಕಾ ಯಿತು. ಬದುಕಿನಲ್ಲಿಯೂ ಹಾಗೆ ನಾನಾ ರೀತಿಯ ಸವಾಲುಗಳು, ಸಂದರ್ಭಗಳು ನಮಗೆ ಎದುರಾಗುತ್ತಲೇ ಇರುತ್ತವೆ. ಕೆಲವು ನಮಗೆ ಒಳಿತನ್ನು ಮಾಡಿದರೆ ಮತ್ತೆ ಕೆಲವು ನಮ್ಮನ್ನು ಕಾಡಿ ಬಿಡುತ್ತವೆ. ಆದರೆ ಯಾವುದರಿಂದಲೂ ಧೃತಿಗೆಡದೆ ಬದುಕನ್ನ ಆತ್ಮ ವಿಶ್ವಾಸದಿಂದ ಎದುರಿಸುತ್ತಾ ಹೋದಾಗ ಜೀವನ ದಲ್ಲಿ ನಾವು ಬಯಸಿದ ಅಮೃತ ಫಳಿಗೆ ಖಂಡಿತ ನಮಗೆ ದಕ್ಕುತ್ತದೆ.

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ಒಂದೊಳ್ಳೆ ಮಾತು
Vishwavani TV Special
ಯೂಟ್ಯೂಬ್ ಚಾನೆಲ್‌ನಲ್ಲಿ

ಯತಿಗೂ ಇದೆ ಇಂದ್ರಿಯ ಚಪಲ!

ಶುಭೋದಯಕ್ಕೊಂದು ಕಗ್ಗ



ರವೀ ಚಿಕ್ಕನಾಯಕನಹಳ್ಳಿ

ಇಂದ್ರಿಯವ ಜಯಿಸಿದೆಯೊ? ಮಂದವೋ ನಿನ್ನಕ್ಷಿ?
ಸೌಂದರ್ಯ ಯಕ್ಷಿಣಿಯೆ ನಿನ್ನ ತೊರೆದಿಹಳೋ?
ಅಂಧನೆ ವಿರಕ್ತನ್; ಅಪ್ಸರೆಯ ಕಾಣದನೆ ಯತಿ?
ಕಂಡು ಕೆರಳದನಾರೊ! - ಮಂಕುತಿಮ್ಮ॥

ಮೋಹವನ್ನು ತರುವ ನಿನ್ನ ಇಂದ್ರಿಯಗಳನ್ನು ನೀನು ಜಯಿಸಿದೆಯೋ? ಅಥವಾ ನಿನ್ನ ಕಣ್ಣುಗಳೇನು ಮಂದವಾಗಿಹುದೋ? ಮನದಲ್ಲಡಗಿದ್ದು ಯಾವಾಗಲೂ ಸೌಂದರ್ಯವನ್ನು ಬಯಸುವಂತಹ ಯಕ್ಷಿಣಿಯೇನಾದರೂ ನಿನ್ನ ಮನವನ್ನು ತೊರೆದು ಹೋದಳೇ? ಕಣ್ಣುಗಳು ಏನನ್ನೂ ಕಾಣದಿದ್ದರೂ ನೀನು ಕುರುಡನೇ ಹೊರತು ನೀನು ವಿರಕ್ತನಲ್ಲ? ಎಲ್ಲವನ್ನೂ ಬಿಟ್ಟು ತಪಸ್ಸಿಗೆ ಕುಳಿತ ಯತಿಯೂ ಸಹ ಸೌಂದರ್ಯವತಿಯಾದ ಅಪ್ಸರೆಯು ಕಣ್ಣ ಮುಂದೆ ಬಂದು ನಿಂತಾಗ ಏನಾಗಿತ್ತು? ಅವಕಾಶ ಸಿಕ್ಕಿದರೆ ಮನದೊಳಗಣ ಆಸೆಗಳಿಗೆ ಕೆರಳಿ ಪೂರೈಸಲು ಹವಣಿಸದವರಾರು? ಎಂದು ಈ ಪದ್ಯದಲ್ಲಿ ಪ್ರಶ್ನೆ ಎತ್ತಿದ್ದಾರೆ.

ಮನದೊಳಗಣ ಆಸೆಗಳು ಸತ್ತಂತಿರಬಹುದಲ್ಲದೇ ಮನುಷ್ಯ ಸಾಯುವವರೆಗೂ ಸಹ ಅವುಗಳೂ ಸಹ ಎಂದಿಗೂ ಸಾಯುವುದಿಲ್ಲ. ಮನದಲ್ಲಿನ ಆಸೆಗಳು ನನಗೆ ಸತ್ತು ಹೋಗಿವೆ ಎಂದರೆ ಅದು ಸುಳ್ಳೇ ಸುಳ್ಳು. ಮಹಾ ಸಾಧಕರನ್ನು ಹೊರತು ಪಡಿಸಿದರೆ ಮಿಕ್ಕೆಲ್ಲವರ ಕಥೆಯೂ ಅಷ್ಟೇ. ಮನುಷ್ಯನಲ್ಲಿ ಅಡಕವಾಗಿರುವ ಇಂದ್ರಿಯಗಳಿಂದ ಅರಿಷಡ್ವರ್ಗಗಳಾದ ಕಾಮ, ಕ್ರೋಧ, ಮಧ, ಲೋಭ, ಮೋಹ, ಮಾತ್ಸರ್ಯಗಳನ್ನು ಗೆಲ್ಲುವುದೆಂದರದೇನು ಸುಮ್ಮನೆಯ ಮಾತಂಥೂ ಅಲ್ಲವೇ ಅಲ್ಲ. ನಾನು ನನ್ನ ಮನದಲ್ಲಿ ಅಡಗಿರುವ ಇಂದ್ರಿಯಗಳನ್ನು ಜಯಿಸಿದ್ದೇನೆ ಅಂದರೆ ಅದೊಂದು ಬೂಟಾಟಿಕೆಯ ಸುಳ್ಳೇ ಸುಳ್ಳಾಗುತ್ತದೆ. ಇಂದ್ರಿಯಗಳನ್ನು ಜಯಿಸುವುದೆಂದರೆ ಇಡೀ ಈ ಪ್ರಪಂಚವನ್ನೇ ಗೆದ್ದಂತೆಯೇ ಹೌದು. ಆದುದರಿಂದ ನರನಾಗಿ ಹುಟ್ಟಿದ ಮೇಲೆ ನಾವು ಇಂದ್ರಿಯಗಳನ್ನು ಜಯಿಸಿರುವೆ ಎನ್ನುವುದು ಹಸೀ ಸುಳ್ಳು. ಕಣ್ಣು ಮುಚ್ಚಿಕೊಂಡು ಕುಳಿತಾಕ್ಷಣ ಬಾಹ್ಯ ಜಗತ್ತಿನ ಸಂಬಂಧವೇ ಇಲ್ಲದಂತಾಗುತ್ತದೆಯೇ? ಕಾಣುವ ಕಣ್ಣುಗಳು ಮಂದವಾದರೆ ಮನದೊಳಗಿನ ಆಸೆಗಳು ಮಂದವಾಗುತ್ತವೆಯೇ? ಅದು ಎಂದಿಗೂ ಸಹ ಸಾಧ್ಯವೇ ಇಲ್ಲ. ಮನಸ್ಸಿಗೆ ಮುದ ಕೊಡುವ ಸೌಂದರ್ಯದ ಯಕ್ಷಿಣಿಯು ಮನವನ್ನು ಬಿಟ್ಟು ಹೋದಳೆಂದು ಹೇಳಿದರೆ ಇಲ್ಲಿ ನಂಬುವವರಾದರೂ ಯಾರು? ಘೋರ ತಪಸ್ಸಿಗೆ ಕುಳಿತಂಥಹ ಬ್ರಹ್ಮರ್ಷಿಯೂ, ತಪಸ್ವಿಯೂ ಆದಂತಹ ವಿಶ್ವಾಮಿತ್ರನ ಕಥೆಯಾದರೂ ಏನಾಯ್ತು? ಅಪ್ಸರೆಯಾದಂತಹ ಮೇನಕೆಯು ಆತನ ಮುಂದೆ ನಾಲ್ಕಾರು ಬಾರಿ ಓಡಾಡಿದ ನಂತರ ತಾನು ಮಾಡಲಿರುವ ತಪಸ್ಸನ್ನೇ ಬಿಟ್ಟು ಆತನು ಮೇನಕೆಯ ಹಿಂದೆ ಓಡಿ ತನ್ನ ತೃಷೆಯನ್ನು ತೀರಿಸಿಕೊಳ್ಳಲಿಲ್ಲವೇ ?? ಇದೇ ಸತ್ಯವಾದುದು. ಇದಕ್ಕೆ ಕಾರಣ ಮನದಲ್ಲಿ ಆಸೆಗಳು ಸತ್ತಂತೆ ಇರುತ್ತವೇಯೇ ಹೊರತು ಅವು ನಾವು ಸಾಯುವವರೆಗೂ ಸಾಯುವುದಿಲ್ಲ. ಮೇಲ್ನೋಟಕ್ಕೆ ಸತ್ತಂತೆ ಕಂಡರೂ ಬಯಕೆಗಳು ಹಾಗೆ ಮನದಲ್ಲಿ ಹಸಿರಾಗಿದ್ದು, ಬಂದೊದಗುವ ಉತ್ತಮ ಅವಕಾಶಕ್ಕಾಗಿ ಕಾದು ಕುಳಿತು, ಅವಕಾಶ ಬಂದೊದಗಿದಾಕ್ಷಣವೇ ಅವುಗಳು ಎದ್ದು ನಿಲ್ಲುತ್ತವೆ. ಆದುದರಿಂದ ಈ ಪದ್ಯದಲ್ಲಿ 'ಇಂದ್ರಿಯಗಳನ್ನು ಗೆದ್ದವರೂ ಇಲ್ಲ, ಅವುಗಳು ಅವಕಾಶಕ್ಕಾಗಿ ಕಾದು ಕುಳಿತಿರುತ್ತವೆ' ಎಂದು ಹೇಳಿದ್ದಾರೆ. ನಮ್ಮಗಳ ಜೀವನ ಹೇಗೆಂದರೆ 'ಮಾತಿನಲ್ಲಿ ಮಾತ್ರವೇ ನಮಗೆ ವೈರಾಗ್ಯವಷ್ಟೆ; ಅವಕಾಶ ಸಿಕ್ಕಿದರೆ ಕೆರಳುವ ಆಸೆಗಳ ದಾಸರಾಗಿ ನಾವು ಜೀವನ ಮಾಡುತ್ತಲಿದ್ದೇವೆ. ಮನದ ಆಸೆಗಳಿಗೆ ದಾಸನಾಗದ ವ್ಯಕ್ತಿಗಳು ಯಾರೂ ಇಲ್ಲ ಎಂಬ ನನ್ನ ಸತ್ಯವನ್ನು ಈ ಪದ್ಯದಲ್ಲಿ ಹೇಳಿದೆ.

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

ಪದಬಂಧ

• ಸಿ.ರವಿಶಂಕರ ಶಾಸ್ತ್ರಿ, ದಂಬೆ

1	■	2	3		■	4	■	5
6		■		■	7			
	■	8		9		■	■	
10			■		■	11		
■	■	12		■	13		■	■
14			■	15	■	16		17
	■	■	18		19		■	
20		21		■		■	22	
	■		■	23			■	

ಎಡದಿಂದ ಬಲಕ್ಕೆ

2. ಈಗಿನ ಸಮಯ, ವರ್ತಮಾನ ಕಾಲ (3)
6. ಇನ್ನೊಂದು ಹೋಮ (2)
7. ಮಾನ ಉಳಿಸಿದ ಆದಾಯ (4)
8. ಪ್ರಾಚೀನ ಕಾಲಕ್ಕೆ ಸಂಬಂಧಿಸಿದ (4)
10. ಎರಡು ಕಡೆಯಿಂದ ನೋಡಿದರೂ ಕಣ್ಣೇ (3)
11. ಕಾಯುವಿಕೆ ಅಥವಾ ಸೂರ್ಯ (3)
12. ಒರಳಿನಲ್ಲಿ ಹಾಕಿ ತಿರುವುದು (2)
13. ವಿಚಾರ ತಿಳಿಸಿದ ಸೇವಕ (2)
14. ನೇಮಕ ಅಥವಾ ಅಪ್ಪಣೆ (3)
16. ಗಹನವಾಗಿ ನೋಡಿದಾಗ ಕಂಡಿತು ಆಕಾಶ (3)
18. ಜೋಗದಲ್ಲಿನ ನದಿ (4)
20. ಪಕ್ಷದ ಹದಿಮೂರನೆಯ ದಿನ (4)
22. ಎರಡಕ್ಷರದ ಸಾಲ (2)
23. ಸಿಗು, ಲಭಿಸು (3)

ಮೇಲಿಂದ ಕೆಳಕ್ಕೆ

1. ಹುಟ್ಟುಗುಣ (4)
3. ಕೊನೆಯಲ್ಲಿ ದೀರ್ಘ ಹೊಡೆತ! (3)
4. ಇನ್ನೊಂದು ಬಾಗಿಲು (2)
5. ಉಪವಾಸಕ್ಕೆ ಮತ್ತೊಂದು ಹೆಸರು (4)
7. ಕಾಡು (2)
8. ಹೇಳಿದ್ದನ್ನೇ ಮತ್ತೆ ಹೇಳುವುದು (4)
9. ದೇಹ (2)
11. ಪಾಠ ಕೇಳುವ ಕಕ್ಷೆ (4)
14. ಆಮಂತ್ರಣ (4)
15. ನೂಲು ಕೊನೆಗೆ ದೀರ್ಘ (2)
17. ಕಾಡಿನ ಮಧ್ಯ (4)
18. ಚಂದ್ರ (2)
19. ಪಕ್ಷದ ಪರವಾಗಿ ಅಧಿಕೃತವಾಗಿ ಮಾತನಾಡುವವನು (3)
21. ನದಿಯ ತಟ (2)

ಸರಿಯುತ್ತರಗಳು

[illegible]

ನೀವೂ ಬರೆಯಬಹುದು
ನಮ್ಮ ವಿಳಾಸ
ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098
e-mail: vishwavanimagazine@gmail.com

ಸಮಾಚಾರ ಸಣ್ಣದಲ್ಲ

ಭಾಂಬ್ರಿ-ಗ್ಯಾಲೊವೆ ಜೋಡಿಗೆ ಸೋಲು

ಸ್ಟುಟ್‌ಗಾರ್ಟ್: ಭಾರತದ ಅಗ್ರ ಡಬಲ್ಸ್ ಆಟಗಾರ ಯುಕಿ ಭಾಂಬ್ರಿ ಮತ್ತು ಅವರ ಅಮೆರಿಕದ ಜೊತೆಗಾರ ರಾಬರ್ಟ್ ಗ್ಯಾಲೊವೆ ಅವರು ಬಾಸ್ ಓಪನ್ ಟೆನಿಸ್ ಟೂರ್ನಿಯ ಡಬಲ್ಸ್ ಪ್ರಿಕ್ವಾರ್ಟರ್ ಫೈನಲ್‌ನಲ್ಲಿ ಸೋಲುವ ಮೊದಲು ತೀವ್ರ ಪ್ರತಿರೋಧ ಪ್ರದರ್ಶಿಸಿದರು. ಮಂಗಳವಾರ ನಡೆದ ಪಂದ್ಯದಲ್ಲಿ ಇಂಡೊ-ಅಮೆರಿಕನ್ ಜೋಡಿ 6-7 (5), 6-7 (5) ರಿಂದ ಸ್ಯಾಂಟಿಯಾಗೊ ಗೊನ್ಸಾಲ್ವೆಝ್ (ಮೆಕ್ಸಿಕೊ)-ಆಸ್ಟಿನ್ ಕ್ರಾಯಿಚೆಕ್ ಜೋಡಿಗೆ ಮಣಿಯಿತು. ಪಂದ್ಯ 1 ಗಂಟೆ 34 ನಿಮಿಷ ನಡೆಯಿತು. ಅನುಭವಿ ರೋಹನ್ ಬೋಪಣ್ಣ ಸ್ಯಾಂಡರ್ಸ್ ಗಿಲ್ (ಬೆಲ್ಜಿಯಂ) ಜೋಡಿ, ಶ್ರೀರಾಮ್ ಬಾಲಾಜಿ- ಮಿಗೆಲ್ ರೆಯಿಸ್ ವರಲಾ (ಮೆಕ್ಸಿಕೊ) ಜೋಡಿ ಕೂಡ ಈ ಟೂರ್ನಿಯಲ್ಲಿ ಕಣಕ್ಕಿಳಿದಿದೆ.

ಬಿಸಿಸಿಐ ಸಭೆಯಲ್ಲಿ ಮಾರ್ಗಸೂಚಿ

ದೆಹಲಿ: ಐಪಿಎಲ್ ವಿಜಯೋತ್ಸವದ ವೇಳೆ ಅನುಸರಿಸ ಬೇಕಾದ ಮಾರ್ಗದರ್ಶಿ ಸೂತ್ರಗಳನ್ನು ರೂಪಿಸಲು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ ಮುಂದಾಗಿದೆ. ಇದೇ ಶನಿವಾರ ನಡೆಯಲಿರುವ ಅಪೆಕ್ಸ್ ಕೌನ್ಸಿಲ್ ಸಭೆಯ ಪ್ರಮುಖ ಕಾರ್ಯ ಸೂಚಿಗಳಲ್ಲಿ ಈ ವಿಷಯವೂ ಒಂದಾ ಗಿದೆ. ಜೂನ್ 4ರಂದು ಆರ್‌ಸಿಬಿಯ ಐಪಿಎಲ್ ಗೆಲುವಿನ ಸಂಭ್ರಮಾಚರಣೆ ವೇಳೆ ಚಿನ್ನಸ್ವಾಮಿ ಕ್ರೀಡಾಂಗಣದ ಆವರಣದಲ್ಲಿ ಅಭಿಮಾನಿಗಳು ಅಪಾರಸಂಖ್ಯೆಯಲ್ಲಿ ಸೇರಿ ಕಾಲ್ತುಳಿತ ಸಂಭವಿಸಿದ್ದರಿಂದ 11 ಮಂದಿ ಮೃತಪಟ್ಟಿದ್ದರು, 56 ಮಂದಿ ಗಾಯಾಳಾಗಿದ್ದರು. ಮುನ್ನೆಚ್ಚರಿಕೆ ವಹಿಸಿ ಈ ಕಾರ್ಯಕ್ರಮವನ್ನು ವ್ಯವಸ್ಥಿತ ವಾಗಿ ನಡೆಸಬೇಕಿತ್ತು ಎಂದು ಬಿಸಿಸಿಐ ಹೇಳಿತ್ತು. ಈಗ ವಿಜಯೋತ್ಸವಗಳಿಗೆ ಮಾರ್ಗಸೂಚಿ ಕುರಿತು ಸಭೆಯಲ್ಲಿ ಚರ್ಚೆ ಸಲಾಗುವುದು ಎಂದು ಮಂಡಳಿಯ ಮೂಲವೊಂದು ತಿಳಿಸಿದೆ.

ವಿರಾಮ
ಪ್ರತಿ ಭಾನುವಾರ

ಅಲ್ಪ ಮೊತ್ತಕ್ಕೆ ಕುಸಿದ ದ.ಆಫ್ರಿಕಾ | ಬೌಲರ್‌ಗಳ ಸ್ವರ್ಗವಾದ ಲಾರ್ಡ್ಸ್ ಮೈದಾನ

ಮುನ್ನಡೆ ಪಡೆದ ಆಸೀಸ್‌ಗೆ 2ನೇ ಇನ್ನಿಂಗ್ಸ್‌ನಲ್ಲಿ ಆಘಾತ

ಲಾರ್ಡ್ಸ್: ಆಸ್ಟ್ರೇಲಿಯಾ ನಾಯಕ ಪ್ಯಾಟ್ ಕಮಿನ್ಸ್ ದಾಳಿ ಎದುರು ನಿರುತ್ತರವಾದ ದಕ್ಷಿಣ ಆಫ್ರಿಕಾ ಕ್ರಿಕೆಟ್ ತಂಡವು ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್ ಟೂರ್ನಿಯ ಫೈನಲ್ ಪಂದ್ಯದ ಮೊದಲ ಇನಿಂಗ್ಸ್‌ನಲ್ಲಿ ಕೇವಲ 138 ರನ್ ಗಳಿಸಿ ಆಲೌಟ್ ಆಗಿದೆ. ಆದರೆ ಇನ್ನಿಂಗ್ಸ್ ಮುನ್ನಡೆ ಗಳಿಸಿದ್ದ ಆಸ್ಟ್ರೇಲಿಯಾ ತಂಡ ಎರಡನೇ ಇನ್ನಿಂಗ್ಸ್‌ನಲ್ಲಿ 73 ರನ್‌ಗೆ 7 ವಿಕೆಟ್ ಕಳೆದುಕೊಂಡಿದೆ.

ಮೊದಲು ಬ್ಯಾಟಿಂಗ್ ಮಾಡಿದ್ದ ಆಸ್ಟ್ರೇಲಿಯಾ ಕೇವಲ 212 ರನ್‌ಗೆ ಸರ್ವಪತನ ಕಂಡಿತ್ತು. ನಂತರ ಮೊದಲ ದಿನವೇ ಬ್ಯಾಟಿಂಗ್ ಶುರು ಮಾಡಿದ್ದ ಆಫ್ರಿಕನ್ನರು 4 ವಿಕೆಟ್ ಕಳೆದುಕೊಂಡು 43 ರನ್ ಗಳಿಸಿತ್ತು. ನಾಯಕ ತೆಂಬಾ ಬವುಮಾ ಹಾಗೂ ಡೇವಿಡ್ ಬೆಡ್ಡಿಂಗ್ಹ್ಯಾಮ್ ಎರಡನೇ ದಿನಕ್ಕೆ ಕ್ರೀಸ್ ಕಾಯ್ದುಕೊಂಡಿದ್ದರು. ಎರಡನೇ ದಿನದಾಟದ ಆರಂಭದಲ್ಲಿ ಅರ್ಧಶತಕದ ಜೊತೆಯಾಟವಾಡಿದ ಈ ಜೋಡಿ, ವಿಕೆಟ್ ಗಳಿಕೆಗೆ ತಡೆಯೊಡ್ಡಿತು.

5ನೇ ವಿಕೆಟ್ ಜತೆಯಾಟದಲ್ಲಿ 64 ರನ್ ಗಳಿಸಿದ್ದ ಈ ಜೋಡಿಯನ್ನು ಕಮಿನ್ಸ್ ಬೇರ್ಪಡಿಸಿದರು. 84 ಎಸೆತಗಳಲ್ಲಿ 36 ರನ್ ಗಳಿಸಿದ್ದ ಬವುಮಾ, ಲಾಬುಷೇನ್‌ಗೆ ಕ್ಯಾಚ್ ನೀಡಿದರು. ನಂತರ ಬಂದ ಕೈಲ್ ವೆರಿಯನ್ 13 ರನ್ ಗಳಿಸಿ ಔಟಾದರು. ಅದರೊಂದಿಗೆ ಹರಿಣಗಳ ತಂಡದ ಪೆವಿಲಿಯನ್ ಪರೇಡ್ ಆರಂಭವಾಯಿತು. 45 ರನ್ ಗಳಿಸಿದ್ದ ಬೆಡ್ಡಿಂಗಮ್, ಅರ್ಧಶತಕ ಹೊಸ್ತಿಲಲ್ಲಿ ಔಟಾದರು. ಬವುಮಾ ಪಡೆಯ ಕೊನೆಯ ಐದು ವಿಕೆಟ್‌ಗಳು ಕೇವಲ 12 ರನ್ ಅಂತರದಲ್ಲಿ ಪತನಗೊಂಡವು.

ಆಸಿಸ್ ಪರ ನಾಯಕ ಕಮಿನ್ಸ್ 28 ರನ್ ನೀಡಿ ಆರು ವಿಕೆಟ್‌ಗಳನ್ನು ಪಡೆದರು. ಮಿಚೈಲ್ ಸ್ಟಾರ್ಕ್ ಎರಡು ಮತ್ತು ಜೋಶ್ ಹೇಜಲ್‌ವುಡ್ ಒಂದು ವಿಕೆಟ್ ಕಿತ್ತರು.

ಕುಸಿತ ಕಂಡ ಆಸೀಸ್: 74 ರನ್ ಮುನ್ನಡೆಯೊಂದಿಗೆ ಎರಡನೇ ಇನಿಂಗ್ಸ್ ಆರಂಭಿಸಿರುವ ಆಸ್ಟ್ರೇಲಿಯಾಗೆ ಅಗ್ರ ಕ್ರಮಾಂಕದ ಬ್ಯಾಟರ್‌ಗಳು ಕೈಕೊಟ್ಟಿದ್ದಾರೆ. ತಂಡದ ಮೊತ್ತ 73 ರನ್ ಆಗುವಷ್ಟರಲ್ಲೇ ಏಳು ಮಂದಿ ಆಟಗಾರರು ಪೆವಿಲಿಯನ್ ಸೇರಿಕೊಂಡಿದ್ದಾರೆ. ಆರಂಭಿಕ ಮಾರ್ನ್ ಲಾಬುಷೇನ್ 22 ರನ್ ಗಳಿಸಿದರೆ, ಉಸ್ಮಾನ್ ಕವಾಜಾ ಕೇವಲ 6 ರನ್‌ಗೆ ಔಟಾಗಿದ್ದಾರೆ. ಸ್ಟೀವ್ ಸ್ಮಿತ್ 13 ರನ್‌ಗೆ ವಿಕೆಟ್ ಒಪ್ಪಿಸಿದರೆ, ಕ್ಯಾಮರೂನ್ ಗ್ರೀನ್ ಯಾವುದೇ ರನ್ ಗಳಿಸಲಿಲ್ಲ. ಮಧ್ಯಮ ಕ್ರಮಾಂಕದ ಬ್ಯೂ ವೆಬ್‌ಸ್ಟರ್ ಆಟ 9 ಕೇವಲ ರನ್‌ಗೆ ಕೊನೆಯಾಗಿದೆ.

ಪ್ರತೀ ಎಸೆತದಲ್ಲೂ ಹೋರಾಡುವಂತೆ ತಂಡದ ಆಟಗಾರರಿಗೆ ಮುಖ್ಯ ಕೋಚ್ ಕರೆ

ಇಂಗ್ಲೆಂಡ್ ಟೆಸ್ಟ್ ಸರಣಿ ಸ್ಮರಣೀಯವಾಗಿಸಿ: ಗಂಭೀರ್

ಬೆಕೆನ್‌ಹ್ಯಾಮ್ (ಇಂಗ್ಲೆಂಡ್): ಇಂಗ್ಲೆಂಡ್ ವಿರುದ್ಧದ ಟೆಸ್ಟ್ ಸರಣಿಯನ್ನು ಸ್ಮರಣೀಯವಾಗಿಸಲು ಅನುಕೂಲಕರ ವಲಯದಿಂದ ಹೊರ ಬಂದು, ಪ್ರತೀ ಎಸೆತದಲ್ಲೂ ಹೋರಾಡುವಂತೆ ಭಾರತ ಕ್ರಿಕೆಟ್ ತಂಡದ ಆಟಗಾರರಿಗೆ ತಂಡದ ಮುಖ್ಯ ಕೋಚ್ ಗೌತಮ್ ಗಂಭೀರ್ ಕರೆ ನೀಡಿದ್ದಾರೆ.

'ಈ ಪ್ರವಾಸವನ್ನು ಎರಡು ದೃಷ್ಟಿಕೋನಗಳಲ್ಲಿ ನೋಡಬಹುದು. ನಮ್ಮ ಮೂವರು ಅತ್ಯಂತ ಅನುಭವಿ ಆಟಗಾರರಿಲ್ಲದೆ ಈ ಸರಣಿ ಆರಂಭವಾಗುತ್ತಿದೆ, ಹಾಗಾಗಿ ದೇಶಕ್ಕಾಗಿ ಏನನ್ನಾದರೂ ಸಾಧಿಸಲು ಈ ಯುವ ತಂಡಕ್ಕೆ ಅದ್ಭುತ ಅವಕಾಶ ಸಿಕ್ಕಿದೆ ಎಂದು ಭಾವಿಸಬಹುದು' ಎಂಬುದಾಗಿ ಗಂಭೀರ್ ಹೇಳಿದ್ದಾರೆ.

'ಪ್ರತಿದಿನ, ಪ್ರತಿ ಸೆಷನ್, ಪ್ರತಿ ಗಂಟೆ ಮತ್ತು ಪ್ರತಿ ಎಸೆತದಲ್ಲಿಯೂ ಹೋರಾಡಲು ಪ್ರಾರಂಭಿಸಿದರೆ, ಈ ಸರಣಿಯು ನಮ್ಮ ಸ್ಮರಣೀಯ ಪ್ರವಾಸ ಆಗಬಹುದೆಂದು ಭಾವಿಸುತ್ತೇನೆ' ಎಂದಿದ್ದಾರೆ.

ತಂಡದ ಹೊಸ ಆಟಗಾರರಿಗೆ ಸ್ವಾಗತ ಕೋರಿದ ಗಂಭೀರ್, ವೈಟ್‌ಬಾಲ್ ಕ್ರಿಕೆಟ್‌ನಲ್ಲಿ ಛಾಪು ಮೂಡಿಸಿರುವ ಅರ್ಷದೀಪ್, ರೆಡ್ ಬಾಲ್ ಕ್ರಿಕೆಟ್‌ನಲ್ಲೂ ಪ್ರಭಾವಶಾಲಿಯಾಗಲಿದ್ದಾರೆ ಎಂಬ ವಿಶ್ವಾಸವನ್ನು ವ್ಯಕ್ತಪಡಿಸಿದ್ದಾರೆ. ಮೊದಲ ಬಾರಿಗೆ ಟೆಸ್ಟ್ ತಂಡದ ನಾಯಕರಾಗಿರುವ ಶುಭಮನ್ ಗಿಲ್ ಅವರಿಗೂ ಸ್ವಾಗತ ಕೋರಿದ ಗಂಭೀರ್, ದೇಶದ ಟೆಸ್ಟ್ ತಂಡವನ್ನು ಮುನ್ನಡೆಸುವುದಕ್ಕಿಂತ ಇನ್ನೊಂದು ಗೌರವ ಇಲ್ಲ ಎಂದಿದ್ದಾರೆ.

ಯುವಪಡೆಗೆ ಅಗ್ನಿಪರೀಕ್ಷೆ

ಟೆಸ್ಟ್ ಕ್ರಿಕೆಟ್‌ಗೆ ನಿವೃತ್ತಿ ಘೋಷಿಸಿರುವ ವಿರಾಟ್ ಕೊಹ್ಲಿ, ರೋಹಿತ್ ಶರ್ಮಾ ಮತ್ತು ಆರ್. ಅಶ್ವಿನ್ ಅವರ ಅನುಪಸ್ಥಿತಿಯಲ್ಲಿ ಜೂನ್ 20ರಂದು ನಡೆಯುವ ಮೊದಲ ಟೆಸ್ಟ್ ಮೂಲಕ ಐದು ಪಂದ್ಯಗಳ ಟೆಸ್ಟ್ ಸರಣಿ ಆರಂಭವಾಗಲಿದೆ. 2007ರಿಂದ ಭಾರತ ತಂಡವು ಇಂಗ್ಲೆಂಡ್‌ನಲ್ಲಿ ಟೆಸ್ಟ್ ಸರಣಿ ಗೆದ್ದಿಲ್ಲ. ಹಾಗಾಗಿ ಯುವ ಪಡೆಯ ಪ್ರದರ್ಶನದ ಮೇಲೆ ಎಲ್ಲರ ದೃಷ್ಟಿ ನೆಟ್ಟಿದೆ.

ಪದಕ ವಂಚಿತರಾದ ಭಾರತದ ಪ್ಯಾರಿಸ್ ಒಲಿಂಪಿಕ್ಸ್ ಶೂಟರ್

ಶೂಟಿಂಗ್: ಮನು ಭಾಕರ್‌ಗೆ 6ನೇ ಸ್ಥಾನ

ಮ್ಯೂನಿಕ್ (ಪಿಟಿಐ): ಪ್ಯಾರಿಸ್ ಒಲಿಂಪಿಕ್ಸ್ ಪದಕ ವಿಜೇತೆ ಮನು ಭಾಕರ್ ಮತ್ತು ಅನುಭವಿ ಶೂಟರ್ ಚೈನ್ ಸಿಂಗ್ ಅವರು ಇಲ್ಲಿ ನಡೆಯುತ್ತಿರುವ ಐಎಸ್‌ಎಸ್‌ಎಫ್ ವಿಶ್ವಕಪ್‌ನಲ್ಲಿ ಫೈನಲ್ ತಲುಪಿದರು, ಆದರೆ ಅವರಿಗೆ ಪದಕ ಜಯಿಸಲು ಸಾಧ್ಯವಾಗಲಿಲ್ಲ.

ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಎರಡು ಕಂಚಿನ ಪದಕ ಗೆದ್ದ ಭಾಕರ್ ಅವರು ಬುಧವಾರ ನಡೆದ ಮಹಿಳೆಯರ 25 ಮೀಟರ್ ಪಿಸ್ತೂಲ್ ಸ್ಪರ್ಧೆಯ ಫೈನಲ್‌ನಲ್ಲಿ ಆರನೇ ಸ್ಥಾನ ಗಳಿಸಿದರು. ಅರ್ಹತಾ ಸುತ್ತಿನಲ್ಲಿ 588 ಅಂಕ ಪಡೆದು ಐದನೇ ಸ್ಥಾನದೊಂದಿಗೆ ಫೈನಲ್ ತಲುಪಿದ್ದರು.

ಚೀನಾದ ಸನ್ ಯುಜಿ ಚಿನ್ನ ಗೆದ್ದರೆ, ದಕ್ಷಿಣ ಕೊರಿಯಾದ ಓಹ್ ಯೆಜಿನ್ ಮತ್ತು ಯಾಂಗ್ ಜಿಯಿನ್ ಕ್ರಮವಾಗಿ ಬೆಳ್ಳಿ ಮತ್ತು ಕಂಚಿನ ಪದಕ ಜಯಿಸಿದರು. ಭಾರತದ ಮತ್ತೊಬ್ಬ ಶೂಟರ್ ಇಶಾ ಸಿಂಗ್ ಅರ್ಹತಾ ಸುತ್ತಿನಲ್ಲಿ 11ನೇ ಸ್ಥಾನ ಪಡೆದರು.

ಪುರುಷರ 50 ಮೀಟರ್ ರೈಫಲ್ 3-ಪೊಸಿಷನ್ಸ್ ಸ್ಪರ್ಧೆಯ ಎಂಟು ಶೂಟರ್‌ಗಳ ಪದಕ ಸುತ್ತಿನಲ್ಲಿ ಚೈನ್ ಅವರು ಏಳನೇ ಸ್ಥಾನ ಪಡೆದರು. ಅವರು ಅರ್ಹತಾ ಸುತ್ತಿನಲ್ಲೂ ಏಳನೇ ಸ್ಥಾನ ಗಳಿಸಿದ್ದರು. ಪ್ಯಾರಿಸ್ ಒಲಿಂಪಿಕ್ಸ್ ಕಂಚಿನ ಪದಕ ವಿಜೇತ ಸ್ವಪ್ನಿಲ್ ಕುಸಾಲೆ ಮತ್ತು ಅಂಕುಶ್ ಜಾಧವ್ ಕ್ರಮವಾಗಿ 38ನೇ ಮತ್ತು 67ನೇ ಸ್ಥಾನ ಪಡೆದರು.

ನಾರ್ವೆಯ ಜಾನ್ ಹರ್ಮನ್ ಹೆಗ್ ಚಿನ್ನ ಗೆದ್ದರೆ, ರಷ್ಯಾದ ಇಲಿಯಾ ಮಾರ್ಸೊವ್ ಬೆಳ್ಳಿ ಮತ್ತು ಝೆಕ್ ರಿಪಬ್ಲಿಕ್‌ನ ಜಿರಿ ಪ್ರವಾಟಿ ಕಂಚಿನ ಪದಕ ಗೆದ್ದರು.

ಭಾವನಾತ್ಮಕ ಸಂದೇಶ ಹಂಚಿಕೊಂಡ ಎ.ಬಿ. ಡಿ ವಿಲಿಯರ್ಸ್

ದೆಹಲಿ: ಸತತ 18 ವರ್ಷಗಳ ಬಳಿಕ ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ತಂಡ ಚೊಚ್ಚಲ ಐಪಿಎಲ್ ಟ್ರೋಫಿ ಮುಡಿಗೇರಿಸಿಕೊಂಡ ಬಗ್ಗೆ ಆರ್‌ಸಿಬಿ ದಿಗ್ಗಜ ಎ.ಬಿ ಡಿ ವಿಲಿಯರ್ಸ್ ಅಭಿಮಾನಿಗಳೊಂದಿಗೆ ಭಾವನಾತ್ಮಕ ಸಂದೇಶವನ್ನು ಹಂಚಿಕೊಂಡಿದ್ದಾರೆ.

'ಪ್ರಿಯ ಆರ್‌ಸಿಬಿ ಕುಟುಂಬ, ಮಾತುಗಳು ಎಂದಿಗೂ ಸಂಪೂರ್ಣವಾಗಿ ನ್ಯಾಯ ಒದಗಿಸುವುದಿಲ್ಲ, ನಾನು ಅಹಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣಕ್ಕೆ ಕಾಲಿಡುತ್ತಿದ್ದಂತೆ, ಸೂರ್ಯ ಈಗಾಗಲೇ ಆಕಾಶದ ರೇಖೆಯಿಂದ ಕೆಳಗೆ ಇಳಿದಿದ್ದ, ಆದರೆ ಆರ್‌ಸಿಬಿಯ ಕೆಂಪು ಇನ್ನೂ ದಿಗಂತವನ್ನು ಬೆಳಗುತ್ತಿರುವಂತೆ ಭಾಸವಾಯಿತು. ತಟಸ್ಥ ಮೈದಾನವಾಗಿದ್ದರೂ, ಆರ್‌ಸಿಬಿಯ ಕೆಂಪು ಜೆರ್ಸಿ, ಫ್ಲ್ಯಾಗ್, ಮುಖಕ್ಕೆ ಕೆಂಪು-ಚಿನ್ನದ ಬಣ್ಣವನ್ನು ಬಳಿದಿರುವುದು ಎಲ್ಲೆಡೆ ಕಾಣುತ್ತಿತ್ತು. ಅದೆಲ್ಲವನ್ನೂ ನೋಡಿದಾಗ, ಅದು ಕೂಡ ಆರ್‌ಸಿಬಿಯ ತವರು ಅಂಗಣ ಎಂದು ನನಗೆ ಭಾಸವಾಗಿತ್ತು' ಎಂದು ಎಬಿ ಡಿವಿಲಿಯರ್ಸ್ ತಮ್ಮ ಎಕ್ಸ್ ಖಾತೆಯಲ್ಲಿ ಬರೆದುಕೊಂಡಿದ್ದಾರೆ.

'ನಾನು ಕೇವಲ ಕ್ರಿಕೆಟ್ ಪಂದ್ಯಕ್ಕೆ ಮಾತ್ರ ಸಾಕ್ಷಿಯಾಗಲಿಲ್ಲ, ಆರ್‌ಸಿಬಿ ನನಗೆ ಕುಟುಂಬವಿದ್ದಂತೆ, ಈ ಸಲದ ಐಪಿಎಲ್ ಟೂರ್ನಿಯ ಚಾಂಪಿಯನ್ಸ್ ಎಂದು ಹೇಳಲು ನನಗೆ ತುಂಬಾ ಖುಷಿಯಾಗುತ್ತದೆ' ಎಂದು ಹೇಳಿದ್ದಾರೆ.

ಇನ್ನೂ ಉತ್ತಮವಾಗಿ ಟೆಸ್ಟ್‌ಗೆ ವಿರಾಟ್ ವಿದಾಯ ಘೋಷಿಸಬಹುದಿತ್ತು ಎಂದ ಮಾಜಿ ಕೋಚ್

ಕೊಹ್ಲಿಯ ವಿದಾಯ ಸರಿ ಇಲ್ಲ

ದೆಹಲಿ: ಅಂತಾರಾಷ್ಟ್ರೀಯ ಟೆಸ್ಟ್ ಕ್ರಿಕೆಟ್‌ಗೆ ಹಠಾತ್ ವಿದಾಯ ಹೇಳಿದ ಭಾರತ ತಂಡದ ಮಾಜಿ ನಾಯಕ ವಿರಾಟ್ ಕೊಹ್ಲಿ ಬಗ್ಗೆ ಟೀಮ್ ಇಂಡಿಯಾ ಮಾಜಿ ಕೋಚ್ ರವಿ ಶಾಸ್ತ್ರಿ ಅಸಮಾಧಾನವನ್ನು ವ್ಯಕ್ತಪಡಿಸಿದ್ದಾರೆ. ವಿರಾಟ್ ಕೊಹ್ಲಿ ಟೆಸ್ಟ್ ಕ್ರಿಕೆಟ್‌ಗೆ ವಿದಾಯ ಹೇಳಿದ ಹಾದಿ ಸರಿಯಿಲ್ಲ ಎಂದು ಅವರು ಹೇಳಿದ್ದಾರೆ. ಆಸ್ಟ್ರೇಲಿಯಾ ವಿರುದ್ಧದ ಬಾರ್ಡರ್-ಗವಾಸ್ಕರ್ ಟ್ರೋಫಿ ಟೆಸ್ಟ್ ಸರಣಿಯ ಬಳಿಕ ವಿರಾಟ್ ಕೊಹ್ಲಿ ಟೆಸ್ಟ್ ಕ್ರಿಕೆಟ್‌ಗೆ ನಿವೃತ್ತಿ ಘೋಷಿಸಿದ್ದರು.

'ದೊಡ್ಡ ಆಟಗಾರನನ್ನು ಕಳೆದುಕೊಂಡಿದ್ದೇವೆಂದು ಜನರಿಗೆ ಮನವರಿಕೆಯಾಗುತ್ತದೆ. ಕೊಹ್ಲಿ ವಿದಾಯ ಹೇಳಿದ ರೀತಿಯಿಂದ ನನಗೂ ತುಂಬಾ ನಿರಾಶೆಯಾಗಿದೆ. ಅವರು ಇನ್ನೂ ಉತ್ತಮವಾಗಿ ಟೆಸ್ಟ್‌ಗೆ ವಿದಾಯ ಹೇಳಬಹುದಿತ್ತು, ಅದರ ಜೊತೆಗೆ ಇನ್ನಷ್ಟು ಸಂವಹನ ನಡೆಸಬೇಕಾಗಿತ್ತು. ಅವರಿಂದ ನಾನು ಏನನ್ನಾದರೂ ಬಯಸುತ್ತಿದ್ದರೆ, ಆಸ್ಟ್ರೇಲಿಯಾ ಪ್ರವಾಸದ ಬಳಿಕ ನಾನು ಅವರನ್ನು ನೇರವಾಗಿ ನಾಯಕನನ್ನಾಗಿ ನೇಮಿಸುತ್ತಿದ್ದೆ' ಎಂದು ಶಾಸ್ತ್ರಿ ತಿಳಿಸಿದ್ದಾರೆ.

ಮೇ ತಿಂಗಳ ಆರಂಭದಲ್ಲಿ ವಿರಾಟ್ ಕೊಹ್ಲಿ ತಮ್ಮ ಟೆಸ್ಟ್ ವೃತ್ತಿಜೀವನದ ಬಗ್ಗೆ ಪ್ರಮುಖ ನಿರ್ಧಾರ ತೆಗೆದುಕೊಳ್ಳುವ ಮೊದಲು ತಮ್ಮೊಂದಿಗೆ ಮಾತನಾಡಿದ್ದರು ಎಂದು ರವಿ ಶಾಸ್ತ್ರಿ ದೃಢಪಡಿಸಿದರು. ಕೊಹ್ಲಿ 130 ಪಂದ್ಯಗಳಿಂದ 9,230 ರನ್‌ಗಳೊಂದಿಗೆ ತಮ್ಮ ರೆಡ್ ಬಾಲ್ ಪ್ರಯಾಣಕ್ಕೆ ನಿವೃತ್ತಿ ಘೋಷಿಸುದ್ದರು.

ವಿಟಾಕೀಸ್

ಟೀಸರ್‌ನಲ್ಲಿ ಮೋಡಿ ಮಾಡಿದ ಮುತ್ತಾ

ಎಲ್ಟು ಮುತ್ತಾ ಹೀಗೊಂದು ವಿಭಿನ್ನ ಶೀರ್ಷಿಕೆಯ ಸಿನಿಮಾ ಸದ್ದಿಲ್ಲದೆ ಶೂಟಿಂಗ್ ಮುಗಿಸಿದ್ದು, ತೆರೆಗೆ ಬರಲು ಸಿದ್ಧವಾಗಿದೆ. ಸದ್ಯ ಟೀಸರ್‌ನಲ್ಲಿ ಭರ್ಜರಿ ಸದ್ದು ಮಾಡುತ್ತಿದೆ. ರಾ.ಸೂರ್ಯ ಕಥೆ ಬರೆದು ನಿರ್ದೇಶನ ಮಾಡಿದ್ದು ಎಲ್ಟು ಮುತ್ತಾ ಒಂದೊಳ್ಳೆಯ ಸಂದೇಶವನ್ನು ಹೊತ್ತು ಬಂದಿದೆ. ಕುಣಿಯುವ ನವಿಲು ಕೆರಳಿದರೆ ಹೇಗೆ ಸರ್ಪವನ್ನು ಕೊಲ್ಲುತ್ತದೆ ಎಂಬ ಸ್ಟೋರಿ ಈ ಚಿತ್ರದಲ್ಲಿದೆ.

ರಾ.ಸೂರ್ಯ ಕಥೆ ಬರೆದು ಈ ಚಿತ್ರವನ್ನು ನಿರ್ದೇಶಿಸುವ ಜತೆಗೆ ಪ್ರಮುಖ ಪಾತ್ರದಲ್ಲಿಯೂ ನಟಿಸಿದ್ದಾರೆ. ಇವರೊಂದಿಗೆ ಶೌರ್ಯ ಪ್ರತಾಪ್ ಮುಖ್ಯ ಪಾತ್ರ ನಿರ್ವಹಿಸಿದ್ದಾರೆ. ಇಲ್ಲಿ ನಾನು ಮುತ್ತಾ ಪಾತ್ರದಲ್ಲಿ ಕಾಣಿಸಿಕೊಂಡಿದ್ದೇನೆ. ನಟನೆಯ ಜತೆಗೆ ಸಹ ನಿರ್ದೇಶಕನಾಗಿಯೂ ಕಾರ್ಯನಿರ್ವಹಿಸಿದ್ದೇನೆ ಎಂದು ನಟ ಶೌರ್ಯ ಪ್ರತಾಪ್ ಹೇಳಿದರು. ಹೈ ಸ್ಟುಡಿಯೋಸ್ ಲಾಂಛನದಲ್ಲಿ ಸತ್ಯ ಶ್ರೀನಿವಾಸನ್ ಚಿತ್ರ ನಿರ್ಮಾಣಕ್ಕೆ ಬಂಡವಾಳ ಹೂಡಿದ್ದಾರೆ. ಚಿತ್ರದ ಹಾಡುಗಳಿಗೆ ಪ್ರಸನ್ನ ಕೇಶವ ಸಂಗೀತ ಸಂಯೋಜಿಸಿದ್ದಾರೆ.

> **ಎರಡು ಪಾತ್ರಗಳ ಸುತ್ತ ಚಿತ್ರದ ಕಥೆ ಸಾಗುತ್ತದೆ, ಇದೊಂದು ವಿಭಿನ್ನ ಕಥಾಹಂದರ ಹೊಂದಿರುವ ಸಿನಿಮಾ. ನವಿಲು ಹಾಗೂ ಸರ್ಪದ ನಡುವೆ ನಡೆಯುವ ಸಂಘರ್ಷದ ಕಥೆಯೂ ನಮ್ಮ ಚಿತ್ರದ ಕಥೆಗೆ ಸ್ಫೂರ್ತಿಯಾಗಿದೆ. ತನ್ನ ಕುಣಿತದಿಂದ ಎಲ್ಲರ ಗಮನ ಸೆಳೆಯುವ ಮುಗ್ಧ ಸ್ವಭಾವದ ನವಿಲು, ಕೆರಳಿದರೆ ಸರ್ಪವನ್ನು ಕೊಲ್ಲುತ್ತದೆ. ಇದನ್ನೇ ನಾವು ಪಾತ್ರಗಳ ಮೂಲಕ ಹೇಳಿದ್ದೇವೆ.**
> -ರಾ.ಸೂರ್ಯ ನಿರ್ದೇಶಕ

> **ನನಗೆ ಬಾಲ್ಯದಿಂದಲೂ ಸಿನಿಮಾ ನಿರ್ಮಾಣ ಮಾಡುವ ಆಸೆಯಿತ್ತು. ಅದು ಈ ಚಿತ್ರದ ಮೂಲಕ ಈಡೇರಿದೆ. ಚಿತ್ರೀಕರಣಕ್ಕೂ ಮುನ್ನ ನಾವು ಅನೇಕ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಂಡಿದ್ದೆವು. ಎಲ್ಲವೂ ಅಂದುಕೊಂಡಂತೆ ಸಿನಿಮಾದ ಶೂಟಿಂಗ್ ಮುಕ್ತಾವಾಗಿದ್ದು, ಪೋಸ್ಟ್ ಪ್ರೊಡಕ್ಷನ್ ಕೆಲಸಗಳು ಪೂರ್ಣಗೊಂಡಿದೆ. ಜುಲೈ ಅಂತ್ಯದಲ್ಲಿ ಚಿತ್ರ ತೆರೆಗೆ ಬರಲಿದೆ.**
> -ಸತ್ಯ ಶ್ರೀನಿವಾಸನ್ ನಿರ್ಮಾಪಕ

ಬುಲೆಟ್ ಏರಿ ಪ್ರೀತಿ ಅರಸಿದ ಧರ್ಮ

ಕನ್ನಡದಲ್ಲಿ ವಿಭಿನ್ನ ಶೀರ್ಷಿಕೆಯ ಸಿನಿಮಾಗಳು ಮುಡಿಬರುತ್ತಿವೆ. ಅವುಗಳಲ್ಲಿ ಬುಲೆಟ್ ಸಿನಿಮಾವೂ ಒಂದು, ಈ ಹಿಂದೆ ಹಲವು ಸಿನಿಮಾಗಳಲ್ಲಿ ನಟಿಸಿ ಮನಗೆದ್ದಿರುವ ಹಿರಿಯ ನಟ ಸತ್ಯಜಿತ್ ಶಬೀರ್ ಈ ಚಿತ್ರವನ್ನು ನಿರ್ದೇಶಿಸಿ ತೆರೆಗೆ ತರುತ್ತಿದ್ದಾರೆ. ಬುಲೆಟ್ ಚಿತ್ರದ ಕುರಿತಂತೆ ವಿ.ಸಿನಿಮಾಸ್‌ನೊಂದಿಗೆ ಮಾತನಾಡಿದ್ದಾರೆ.

ವಿ.ಸಿನಿಮಾಸ್ : ಬುಲೆಟ್ ಆ್ಯಕ್ಷನ್ ಚಿತ್ರವೇ ?

ಸತ್ಯಜಿತ್ ಶಬ್ಬೀರ್: ಹೌದು ಬುಲೆಟ್‌ನಲ್ಲಿ ಆ್ಯಕ್ಷನ್ ಇದೆ, ಥ್ರಿಲ್ಲರ್ ಕೂಡ ಬೆರೆತಿದೆ. ಅದಕ್ಕೂ ಮಿಗಿಲಾಗಿ ಇಲ್ಲಿ ಸೆಂಟಿಮೆಂಟ್ ಗಮನಸೆಳೆಯುತ್ತದೆ. ತಾಯಿ ಮಗನ, ತಂದೆ ಮಗನ ಬಾಂಧವ್ಯ ಇಲ್ಲಿ ಹೈಲೈಟ್ ಆಗಿದೆ. ಪ್ರೀತಿಯೇ ಪ್ರಭಲವಾದ ಅಸ್ತ್ರ. ಆ ಪ್ರೀತಿ ಬುಲೆಟ್‌ನಂತಿರಬೇಕು ಎನ್ನುತ್ತಾರೆ. ಯಾಕೆಂದರೆ ಪ್ರೀತಿಯಿಂದ ಎಲ್ಲವನ್ನೂ ಸೋಲಿಸಬಹುದು. ಬುಲೆಟ್ ಎಂಬ ಶೀರ್ಷಿಕೆ ಯಾಕೆ ಆಯುಕೊಂಡಿದ್ದೇವೆ ಅನ್ನುವುದಕ್ಕೆ ಚಿತ್ರದ ಕ್ಲೈಮ್ಯಾಕ್ಸ್‌ನಲ್ಲಿ ಉತ್ತರ ಸಿಗಲಿದೆ.

> **ಬುಲೆಟ್ ಮೊದಲು ಕನ್ನಡದಲ್ಲಿ ತೆರೆಗೆ ಬರಲಿದೆ. ಬಳಿಕ ಪ್ಯಾನ್ ಇಂಡಿಯಾ ಮಟ್ಟದಲ್ಲಿ ರಿಲೀಸ್ ಆಗಲಿದೆ. ಯಾಕೆಂದರೆ ನಾನು ಕನ್ನಡಿಗ ಹಾಗಾಗಿ ಕನ್ನಡಕ್ಕೆ ಮೊದಲ ಆದ್ಯತೆ.**

ವಿ.ಸಿ: ಈ ಚಿತ್ರಕ್ಕೆ ಧರ್ಮ ಕೀರ್ತಿರಾಜ್ ಅವರನ್ನು ಆಯುಕೊಳ್ಳಲು ಕಾರಣ?

ಶಬ್ಬೀರ್ : ನಾನು ಧರ್ಮ ಕೀರ್ತಿರಾಜ್ ಅಭಿನಯಿಸಿರುವ ಎಲ್ಲಾ ಸಿನಿಮಾಗಳನ್ನು ನೋಡಿದ್ದೇನೆ. ಕೆಲವು ಚಿತ್ರಗಳಲ್ಲಿ ಲವ್ ಸ್ಟೋರಿ ಇದ್ದರೆ ಮತ್ತೆ ಕೆಲವು ಚಿತ್ರಗಳಲ್ಲಿ ಆ್ಯಕ್ಷನ್‌ನಲ್ಲಿ ಮಿಂಚಿದ್ದಾರೆ. ಹಾಗಾಗಿ ಧರ್ಮ ಸೆಂಟಿಮೆಂಟ್‌ಗೆ ಹೊಂದಿಕೊಳ್ಳುತ್ತಾರೆ ಎಂಬುದು ಖಚಿತವಾಯಿತು. ಹಾಗಾಗಿ ಅವರನ್ನೇ ನಾಯಕನಾಗಿ ಆಯ್ದುಕೊಂಡೆ. ಧರ್ಮ ತಮ್ಮ ಪಾತ್ರವನ್ನು ಮೆಚ್ಚುವಂತೆ ನಿಭಾಯಿಸಿದ್ದಾರೆ. ಶ್ರೇಯಾ ಶುಕ್ಲ ನಾಯಕಿಯಾಗಿ ಬಣ್ಣಹಚ್ಚಿದ್ದಾರೆ. ಶೋಭರಾಜ್, ಭವ್ಯಾ ಸೇರಿದಂತೆ ಹಲವರು ಚಿತ್ರದಲ್ಲಿ ನಟಿಸಿದ್ದಾರೆ.

ವಿ.ಸಿ : ನಟನೆ ಮತ್ತು ನಿರ್ದೇಶನವನ್ನು ಹೇಗೆ ನಿಭಾಯಿಸಿದಿರಿ?

ಶಬ್ಬೀರ್ : ನಾನು ಕ್ಯಾಮೆರಾ ಹಿಂದೆ ಇದ್ದಾಗ ನಿರ್ದೇಶಕ ಕ್ಯಾಮೆರಾ ಮುಂದೆ ಬಂದಾಗ ನಟನಾಗಿ ನನ್ನ ಜವಾಬ್ದಾರಿ ನಿರ್ವಹಿಸುತ್ತೇನೆ. ನಿರ್ದೇಶಕನ ಸೀಟ್‌ನಲ್ಲಿ ಕುಳಿತಾಗ ಪ್ರತಿ ಸನ್ನಿವೇಶ ಹೇಗೆ ಬರಬೇಕು ಎಂಬ ಯೋಚನೆ ನನಗಿರುತ್ತದೆ. ನಟನೆ, ನಿರ್ದೇಶನ ಚಾಲೆಂಜಿಂಗ್ ಅನ್ನಿಸಿದರು ಸಿನಿಮಾ ಮೇಲಿನ ಪ್ರೀತಿಯಿಂದ ಅದನ್ನು ನಿಭಾಯಿಸಿದೆ.

ವಿ.ಸಿ : ಚಿತ್ರದ ಕಥೆ ಎಲ್ಲರಿಗೂ ಕನೆಕ್ಟ್ ಆಗಲಿದೆಯೆ ?

ಶಬ್ಬೀರ್: ಖಂಡಿತವಾಗಿಯೂ ಕನೆಕ್ಟ್ ಆಗಲಿದೆ. ಒಬ್ಬ ತಂದೆಗೆ ತನ್ನ ಮಗ ಹೇಗಿರಬೇಕು ಎಂಬುದನ್ನು ಅರಿತುಕೊಂಡರೆ, ಮಗನಿಗೆ ತಂದೆ ತಾಯಿಗಳ ಜತೆಗೆ ಹೇಗಿರಬೇಕು ಎಂಬುದು ಅರ್ಥೈಸುತ್ತದೆ.

ಕಾಂತಾರಕ್ಕೆ ಕಾಡುತ್ತಿದೆ ವಿಘ್ನ

ರಿಷಬ್ ಶೆಟ್ಟಿ ನಟಿಸಿ, ನಿರ್ದೇಶಿಸಿದ್ದ ಕಾಂತಾರ ಸೂಪರ್ ಹಿಟ್ ಆಗಿತ್ತು. ಆ ಯಶಸ್ಸಿನ ಖುಷಿಯಲ್ಲಿ ಕಾಂತಾರ ಚಾಪ್ಟರ್ 1 ಮೂಡಿಬರುತ್ತಿದೆ. ಈ ಚಿತ್ರದ ಚಿತ್ರೀಕರಣ ಭರದಿಂದ ಸಾಗುತ್ತಿದೆ. ಆದರೆ ಕಾಂತಾರ ಚಿತ್ರತಂಡಕ್ಕೆ ಸಾಲು ಸಾಲು ವಿಘ್ನಗಳು ಎದುರಾಗುತ್ತಲೇ ಇವೆ. ಈ ಹಿಂದೆ ಚಿತ್ರೀಕರಣ ಮುಗಿಸಿಕೊಂಡು ತೆರಳುತ್ತಿದ್ದ ಸಹ ಕಲಾವಿದರಿದ್ದ ಮಿನಿ ಬಸ್ ಅಪಘಾತಕ್ಕೀಡಾಗಿತ್ತು. ಪರಿಣಾಮ ಹಲವರು ಗಾಯಗೊಂಡಿದ್ದರು. ಆ ಬಳಿಕ ಸಹ ಕಲಾವಿದ ಕಪಿಲ್ ಎನ್ನುವವರು ನದಿಯಲ್ಲಿ ಈಜುವಾಗ ಅಸನೀಗಿದ್ದರು. ಆನಂತರ ಕಾಮಿಡಿ ಕಿಲಾಡಿಗಳು ಖ್ಯಾತಿಯ ರಾಕೇಶ್ ಪೂಜಾರಿ ಕಾಂತಾರ ಚಾಪ್ಟರ್ 1 ಚಿತ್ರದಲ್ಲಿ ನಟಿಸುತ್ತಿದ್ದರು. ಚಿತ್ರೀಕರಣ ಮುಗಿಸಿಬಂದು ವಿವಾಹ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ರಾಕೇಶ್ ಹೃದಯಾಘಾತದಿಂದ ನಿಧನರಾದರು.

ಈಗ ಕೇರಳ ಮೂಲದ ಸಹ ಕಲಾವಿದ ವಿಜು ವಿಕೆ ಎಂಬುವವರು ನಿಧನರಾಗಿದ್ದಾರೆ. ಕೇರಳದಿಂದ ಬಂದಿದ್ದ ವಿಜು ಕಾಂತಾರಾ ಚಾಪ್ಟರ್ 1 ಶೂಟಿಂಗ್‌ನಲ್ಲಿ ಪಾಲ್ಗೊಂಡಿದ್ದರು. ಆಗುಂಬೆ ಸಮೀಪದ ಹೋಂ ಸ್ಟೇಯಲ್ಲಿ ತಂಗಿದ್ದ ವಿಜುಗೆ ಹಠಾತ್ ಹೃದಯಾಘಾತವಾಗಿದೆ. ಹಾಗಾಗಿ ಕೂಡಲೇ ಅವರನ್ನು ಆಸ್ಪತ್ರೆಗೆ ಕರೆದೊಯ್ಯಲಾಯಿತಾದರೂ ಚಿಕಿತ್ಸೆ ಫಲಕಾರಿಯಾಗದೆ ನಿಧನರಾಗಿದ್ದಾರೆ. ಇದರಿಂದ ಕಾಂತಾರ ಚಿತ್ರತಂಡಕ್ಕೆ ಹಲವು ವಿಘ್ನಗಳು ಎದುರಾಗುತ್ತಿವೆ.

ಹೊಂಬಾಳೆ ಫಿಲಂಸ್ ಬ್ಯಾನರ್‌ನಲ್ಲಿ ನಿರ್ಮಾಣವಾಗುತ್ತಿರುವ ಕಾಂತಾರ ಚಾಪ್ಟರ್ 1 ಅದ್ದೂರಿಯಾಗಿ ಮೂಡಿಬರುತ್ತಿದೆ. ಚಿತ್ರಕ್ಕಾಗಿ ಕುಂದಾಪುರದಲ್ಲಿ ಅದ್ದೂರಿ ಸೆಟ್ ಹಾಕಿ ಚಿತ್ರೀಕರಣ ನಡೆಸಲಾಗುತ್ತಿದೆ.

ತೆರೆಗೆ ಸಿದ್ಧವಾದ ಪದ್ಮಗಂಧಿ

ಸುಚೇಂದ್ರ ಪ್ರಸಾದ್ ನಿರ್ದೇಶನದಲ್ಲಿ ಮೂಡಿಬಂದಿರುವ ಪದ್ಮಗಂಧಿ ಚಿತ್ರೀಕರಣ ಮುಗಿಸಿದ್ದು ತೆರೆಗೆ ಬರಲು ರೆಡಿಯಾಗಿದೆ. ಇದು ಪ್ರೊ.ಎಸ್.ಆರ್. ಲೀಲಾ ವಿರಚಿತ ಕಥೆಯಾಗಿದ್ದು, ಅಪರೂಪ ಪುಷ್ಪ ಒಂದರ ಸುತ್ತ ಚಿತ್ರದ ಕಥೆ ಸಾಗುತ್ತದೆ. ಈ ಕಥೆಯನ್ನು ಆಯ್ದುಕೊಂಡಿರುವ

ಸುಚೇಂದ್ರ ಪ್ರಸಾದ್ ಅದನ್ನು ಎಲ್ಲರ ಮನಕ್ಕೆ ಮುಟ್ಟುವಂತೆ ತೆರೆಯಲ್ಲಿ ನಿರೂಪಿಸಿದ್ದಾರೆ ಎಂದು ಕಥೆಗಾರ್ತಿ ಪ್ರೊ. ಲೀಲಾ ಶ್ಲಾಘಿಸಿದರು. ಶೂಟಿಂಗ್ ಮುಗಿಸಿ ಪೋಸ್ಟ್ ಪ್ರೊಡಕ್ಷನ್ ಕೆಲಸಗಳನ್ನು ಪೂರೈಸಿರುವ ಪದ್ಮಗಂಧಿ ಆಗಸ್ಟ್ ತಿಂಗಳಲ್ಲಿ ತೆರೆಗೆ ಬರಲಿದೆ. ಮಹಾಪದ್ಮ, ಮೃತ್ಯುಂಜಯ ಶಾಸ್ತ್ರಿ ಪರಿಪೂರ್ಣ, ಪಂಡಿತ ಪ್ರಸನ್ನ ವೈದ್ಯ, ದೀಪಕ್ ಪರಮಶಿವನ್, ಹೇಮಂತ ಕುಮಾರ್ ಮುಂತಾದವರು ತಾರಾಗಣದಲ್ಲಿದ್ದಾರೆ.

ಡಾ.ಎಸ್.ಆರ್ ಲೀಲಾ ಕಥೆ ಬರೆಯುವ ಜತೆಗೆ ಚಿತ್ರ ನಿರ್ಮಾಣಕ್ಕೂ ಬಂಡವಾಳ ಹೂಡಿದ್ದಾರೆ. ಸುಚೇಂದ್ರ ಪ್ರಸಾದ್ ಚಿತ್ರಕಥೆ, ಸಂಭಾಷಣೆ ಬರೆದು ನಿರ್ದೇಶನ ಮಾಡಿದ್ದಾರೆ. ದೀಪಕ್ ಪರಮಶಿವನ್ ಸಂಗೀತ ನಿರ್ದೇಶನ, ಎನ್.ನಾಗೇಶ್ ನಾರಾಯಣಪ್ಪ ಸಂಕಲನ, ಎಸ್. ಮನು ಯಾಪ್ಲಾರ್ ಮತ್ತು ನಾಗರಾಜ್ ಅದ್ವಾನಿ ಛಾಯಾಗ್ರಹಣ ಈ ಚಿತ್ರಕ್ಕಿದೆ. ಶೀಘ್ರದಲ್ಲಿಯೇ ಚಿತ್ರದ ಹಾಡುಗಳು ಬಿಡುಗಡೆಯಾಗಲಿವೆ.

ಬ್ರ್ಯಾಟ್ ಟೀಸರ್ ರಿಲೀಸ್

ಘೋಸ್ಟ್ ರ್ಯಾಂಕ್ ರಾಜು ಖ್ಯಾತಿಯ ನಿರ್ಮಾಪಕ ಮಂಜುನಾಥ್ ಕಂದಕೂರ್ ಚಿತ್ರ ನಿರ್ಮಾಣಕ್ಕೆ ಮರಳಿದ್ದು ಈ ಬಾರಿ ಹೊಸ ಜಾನರ್‌ನ ಕಥೆಯನ್ನು ಆಯ್ದುಕೊಂಡಿದ್ದಾರೆ. ಬ್ರ್ಯಾಟ್ ಶೀರ್ಷಿಕೆಯಲ್ಲಿ ಮೂಡಿಬರುತ್ತಿರುವ ಆ್ಯಕ್ಷನ್ ಬೆರೆತಿರುವ ಚಿತ್ರ ಇದಾಗಿದ್ದು ಅದ್ದೂರಿಯಾಗಿ ನಿರ್ಮಿಸುತ್ತಿದ್ದಾರೆ. ಶಶಾಂಕ್ ಈ ಸಿನಿಮಾವನ್ನು ನಿರ್ದೇಶನ ಮಾಡುತ್ತಿದ್ದು, ಡಾರ್ಲಿಂಗ್ ಕೃಷ್ಣ ನಾಯಕನಾಗಿ ನಟಿಸುತ್ತಿದ್ದಾರೆ. ಡಾರ್ಲಿಂಗ್ ಕೃಷ್ಣ ಹುಟ್ಟುಹಬ್ಬದ ಪ್ರಯುಕ್ತ ಬ್ರ್ಯಾಟ್ ಚಿತ್ರತಂಡ ಟೀಸರ್ ಬಿಡುಗಡೆ ಮಾಡಿದೆ. ಈ ಟೀಸರ್‌ನಲ್ಲಿ ಕೃಷ್ಣ ಹೊಸ ಅವತಾರದಲ್ಲಿ ಮಿಂಚಿದ್ದಾರೆ. ಟೀಸರ್ ನೋಡಿದರೆ ಬ್ರ್ಯಾಟ್ ಲವ್, ಆ್ಯಕ್ಷನ್ ಜತೆಗೆ ರಿವೇಂಜ್ ಸ್ಟೋರಿಯನ್ನು ಒಳಗೊಂಡಿದೆ ಎಂಬುದು ಸ್ಪಷ್ಟವಾಗುತ್ತದೆ. ಈ ಚಿತ್ರದ ಚಿತ್ರೀಕರಣ ಬಹುತೇಕ ಮುಕ್ತಾಯವಾಗಿದ್ದು ಹಾಡಿನ ಚಿತ್ರೀಕರಣ ಮಾತ್ರ ಬಾಕಿಯಿದೆ. ಡಾರ್ಲಿಂಗ್ ಕೃಷ್ಣಗೆ ನಾಯಕಿಯಾಗಿ ಮನಿಶಾ ಕಂದಕೂರ್ ಅಭಿನಯಿಸುತ್ತಿದ್ದಾರೆ. ರಮೇಶ್ ಇಂದಿರಾ, ಡ್ರ್ಯಾಗನ್ ಮಂಜು ಮುಂತಾದವರು ತಾರಾಬಳಗದಲ್ಲಿದ್ದಾರೆ. ಚಿತ್ರದ ಹಾಡುಗಳಿಗೆ ಅರ್ಜುನ್ ಜನ್ಯ ಸಂಗೀತ ಸಂಯೋಜಿಸಿದ್ದು, ಅಭಿಲಾಶ್ ಕಲ್ಲತ್ತಿ ಛಾಯಾಗ್ರಹಣದ ಜವಾಬ್ದಾರಿ ಹೊತ್ತಿದ್ದಾರೆ. ಎಲ್ಲವೂ ಅಂದುಕೊಂಡಂತೆ ಆದರೆ ಬ್ರ್ಯಾಟ್ ಅಕ್ಟೋಬರ್ ವೇಳೆಗೆ ತೆರೆಗೆ ಬರಲಿದೆ.